ಬೆಂಗಳೂರು ವಿಶ್ವವಿದ್ಯಾಲಯ

☎ 080-23157900, 22961557, 22961681
(M)094480 07630, 70222 29110
Email:nagabhushana.c@gmail.com

**ಡಾ.ಸಿ.ನಾಗಭೂಷಣ**
**ನಿರ್ದೇಶಕರು**
**ಕನ್ನಡ ಅಧ್ಯಯನ ಕೇಂದ್ರ**
**ಬೆಂಗಳೂರು ವಿಶ್ವವಿದ್ಯಾಲಯ**
**ಬೆಂಗಳೂರು-560056**

**Dr.C.Nagabhushana**
**Director**
**Centre For Kannada Studies**
**Bangalore University**
**Bangalore-560056**

ದಿನಾಂಕ: 17–12–2021

ಇವರಿಗೆ.

ಎಲ್ಲಾ ಕನ್ನಡ ಅಧ್ಯಾಪಕರುಗಳು

ಬೆಂಗಳೂರು ವಿಶ್ವವಿದ್ಯಾಲಯ ವ್ಯಾಪ್ತಿಯ ಪದವಿಕಾಲೇಜುಗಳು

ಬೆಂಗಳೂರು ವಿಶ್ವವಿದ್ಯಾಲಯ

ಈ ಮೂಲಕ ಬೆಂಗಳೂರು ವಿಶ್ವವಿದ್ಯಾಲಯ ವ್ಯಾಪ್ತಿಯ ಪದವಿಕಾಲೇಜುಗಳ ಎಲ್ಲಾ ಕನ್ನಡ ಅಧ್ಯಾಪಕರುಗಳ ಗಮನಕ್ಕೆ ತರ ಬಯಸುವುದೇನೆಂದರೆ , ಈಗಾಗಲೇ ತಮಗೆ ತಿಳಿದಿರುವ ಹಾಗೆ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದ ಹಿನ್ನೆಲೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಸೂಚನೆಯ ಮೇರೆಗೆ ನೂತನ ಪದವಿ ಭಾಷಾ ಪಠ್ಯಗಳ ಸಿದ್ಧಪಡಿಸುವಿಕೆಗನುಗುಣವಾಗಿ, ಕನ್ನಡ ಭಾಷಾಪಠ್ಯಗಳು, ಐಚ್ಚಿಕ ಕನ್ನಡ ಪಠ್ಯ, ಮುಕ್ತ ಆಯ್ಕೆ ಕನ್ನಡ ಮತ್ತು ಕನ್ನಡ ಕಲಿಕೆ ಪಠ್ಯಗಳನ್ನು ಸಂಪಾದಕ ಮಂಡಳಿಯವರು ಈಗಾಗಲೇ ತಮಗೆ ವಹಿಸಿರುವ ಪಠ್ಯಗಳನ್ನು ಸಂಪಾದಿಸಿ ಪರಿಶೀಲಕರಿಂದ ಪರಿಶೀಲಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ (ಕೆಲವು ವಿಷಯಗಳ ಪಠ್ಯಗಳು ಮಾತ್ರ ಸಲ್ಲಿಸ ಬೇಕಾಗಿರುತ್ತದೆ). ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಪಠ್ಯಗಳನ್ನು ಪ್ರಸಾರಾಂಗದ ವತಿಯಿಂದ ಪ್ರಕಟಿಸಲು ಶೀಘ್ರವಾಗಿ ಕ್ರಮ ಕೈಗೊಳ್ಳ ಲಾಗುವುದು. ಪುಸ್ತಕಗಳ ಲೇ–ಔಟ್ ಕಾರ್ಯ ನಡೆಯುತ್ತಿದೆ. ಈಗಾಗಲೇ ಕಳುಹಿಸಿದ್ದ ಪದವಿ ಪಠ್ಯದ ಪ್ರತೀ ಘಟಕದ ಮೊದಲ ಪಠ್ಯಗಳ ಬೋಧನೆ ಪೂರ್ಣಗೊಂಡಿರುವುದಾಗಿ ತಿಳಿದು ಬಂದಿರುವುದರ ಹಿನ್ನೆಲೆಯಲ್ಲಿ ಅಲ್ಲಿಯವರೆಗೂ ಪದವಿ ತರಗತಿಗಳಲ್ಲಿ ಪಠ್ಯ ಬೋಧನೆಗೆ ಯಾವುದೇ ರೀತಿಯ ತೊಂದರೆ ಆಗದ ಹಿನ್ನೆಲೆಯಲ್ಲಿ ಕನ್ನಡ ಸ್ನಾತಕ ಅಧ್ಯಯನ ಮಂಡಳಿಯ ಅಧ್ಯಕ್ಷರು ಹಾಗೂ ಸದಸ್ಯರ ಒಮ್ಮತದಿಂದ ಪ್ರತೀ ಪದವಿಯ ಭಾಷಾ ಪಠ್ಯಗಳು ಐಚ್ಚಿಕ ಕನ್ನಡ ಪಠ್ಯ, ಮುಕ್ತ ಆಯ್ಕೆ ಕನ್ನಡ ಮತ್ತು ಕನ್ನಡ ಕಲಿಕೆ ಪಠ್ಯಗಳ ಪರಿವಿಡಿ ಹಾಗೂ ಪ್ರತಿ ಘಟಕದ ಎರಡನೇ ಅಧ್ಯಾಯದ ಪಠ್ಯಗಳನ್ನು ಪಿಡಿಎಫ್ ರೂಪದಲ್ಲಿ ತಮಗೆ ಕಳುಹಿಸಿ ಕೊಡಲಾಗುತ್ತಿದೆ. ಪದವಿ ಭಾಷಾ ಪಠ್ಯಗಳು ವಿಶ್ವವಿದ್ಯಾಲಯದ

ಪ್ರಸಾರಾಂಗದಿಂದ ಪ್ರಕಟಗೊಂಡು ಮುಕ್ತವಾಗಿ ದೊರೆಯುವವರೆಗೂ ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ಪಿಡಿಎಫ್ ರೂಪದಲ್ಲಿ ತಮಗೆ ಕಳುಹಿಸಿರುವ ಪ್ರತಿ ಘಟಕದ ಎರಡನೇ ಅಧ್ಯಾಯದ ಪಠ್ಯಗಳನ್ನು ತರಗತಿಗಳಲ್ಲಿ ಬೋಧಿಸಲು ಬಳಸಿಕೊಳ್ಳಲು ಸೂಚಿಸಿದೆ. ತ್ವರಿತವಾಗಿ ಪಠ್ಯಗಳನ್ನು ಪ್ರಸಾರಾಂಗದಿಂದ ಪ್ರಕಟಿಸಲು ಸಂಪಾದಕ ಮಂಡಳಿಯವರು ಅಂತಿಮವಾಗಿ ಪರಿಶೀಲಿಸಿ ಕೊಟ್ಟ ನಂತರ ಕ್ರಮಕೈಗೊಳ್ಳಲಾಗುವುದು.

ಅಧ್ಯಕ್ಷರು

ಕನ್ನಡ ಸ್ನಾತಕ ಅಧ್ಯಯನ ಮಂಡಳಿ

ಕನ್ನಡ ಅಧ್ಯಯನ ಕೇಂದ್ರ

ಬೆಂಗಳೂರು ವಿಶ್ವವಿದ್ಯಾಲಯ

**ವಾಣಿಜ್ಯ ಕನ್ನಡ**
(ಬಿ.ಕಾಂ. ಪ್ರಥಮ ಸೆಮಿಸ್ಟರ್ ಕನ್ನಡ ಪಠ್ಯ)

**ಪ್ರಧಾನ ಸಂಪಾದಕರು**
ಡಾ. ಸಿ. ನಾಗಭೂಷಣ ರ್ಮ

**ಸಂಪಾದಕರು**
ಡಾ. ರಾಮಲಿಂಗಪ್ಪ ಟಿ. ಬೇಗೂರು
ಡಾ. ಎ. ವಿ. ಲಕ್ಷ್ಮೀನಾರಾಯಣ
ಡಾ. ಸವಿತಾ ರವಿಶಂಕರ್
ಡಾ. ಟಿ. ಸಿ. ಶಿವಕುಮಾರ್

**ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು**

**ಪರಿವಿಡಿ**

**ಘಟಕ–೧ ನಾಡು–ನುಡಿ**

೧.೧. ಕನ್ನಡ: ಈ ಶತಮಾನದ ಹೊಸ ಸವಾಲುಗಳು –ಕೆ.ವಿ. ನಾರಾಯಣ
ಪೂರಕ: ಸೊಗಸಾದ ಕನ್ನಡ –ಕೆ.ವಿ. ತಿರುಮಲೇಶ್
೧.೨. ಕಾಣಿಕೆ –ಬಿ.ಎಂ. ಶ್ರೀಕಂಠಯ್ಯ
ಪೂರಕ: ಅರುಣೋದಯ –ಬೆಟಗೇರಿ ಕೃಷ್ಣಶರ್ಮ
೧.೩. ಅನ್ಯಭಾಷಾ ವ್ಯಾಮೋಹ –ಸುಜನಾ
ಪೂರಕ: ನುಡಿಯ ಗುಟ್ಟು –ಶಂ.ಬಾ. ಜೋಶಿ

**ಘಟಕ : ೦೨: ಸಂಸ್ಕೃತಿ**

೨.೧. ಪ್ರಿಯ ಪ್ರತಿಮೆಗಳೆ ಪ್ರೀತಿ ಕಲಿಸಿ –ಬರಗೂರು ರಾಮಚಂದ್ರಪ್ಪ
ಪೂರಕ: ಮಹೂವಾ –ಬಂಜಗೆರೆ ಜಯಪ್ರಕಾಶ
೨.೨. ರಾಷ್ಟ್ರೀಯತೆ: ಟ್ಯಾಗೋರ್ ಗಾಂಧೀ ಸಂವಾದ –ಡಿ. ಎಸ್. ನಾಗಭೂಷಣ
ಪೂರಕ: ಹಳ್ಳಿಗಳ ಕಣ್ಮರೆ –ಡಿ.ಆರ್.ನಾಗರಾಜ
೨.೩. ಧ್ಯಾನದಲ್ಲಿ ಕಂಡ ಜೇಡರ ಹುಳು –ಓ.ಎಲ್. ನಾಗಭೂಷಣಸ್ವಾಮಿ
ಪೂರಕ: ನಂಬಿಕೆ –ಅನು; ಮೈ.ಶ್ರೀ. ನಟರಾಜ.

**ಘಟಕ : ೦೩: ಜಾಗತೀಕರಣ**

೩.೧. ಜಾಗತೀಕರಣ ಮತ್ತು ದೇಸಿ ಶಿಕ್ಷಣ –ಡಾ. ರಾಜೇಂದ್ರ ಚೆನ್ನಿ
ಪೂರಕ: ಹಣವನ್ನು ತಿನ್ನಲಾಗುವುದಿಲ್ಲ –ಡಾ. ಯು. ಆರ್. ಅನಂತಮೂರ್ತಿ
೩.೨. ಸಮಕಾಲೀನ ಸವಾಲುಗಳು –ಪೂರ್ಣಚಂದ್ರ ತೇಜಸ್ವಿ
ಪೂರಕ: ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು –ಡಾ. ಬೆಸಗರಹಳ್ಳಿ ರಾಮಣ್ಣ
೩.೩. ಮನಸ್ಸಿಗೇ ಮೂಗುದಾರ –ಡಾ. ಜೆ. ಬಾಲಕೃಷ್ಣ
ಪೂರಕ: ಅರಣ್ಯ ಮತ್ತು ಆದಿಮ ಸಂಸ್ಕೃತಿಗಳು –ಎಚ್. ಎ. ಪುರುಷೋತ್ತಮರಾವ್

**ಘಟಕ : ೦೪: ವಾಣಿಜ್ಯ**

೪.೧. ಕಡಿಮೆ ಬಂಡವಾಳದ ಹತ್ತು ರೀಟೇಲ್ ಬಿಸಿನೆಸ್‌ಗಳು –ಸಿದ್ದು ತೋರವಟ್
ಪೂರಕ: ರಿಟೇಲ್ ಮಾರುಕಟ್ಟೆ ಕುಸಿತ –ಶ್ರೀನಿವಾಸರಾವ್
೪.೨. ಸ್ವಸಹಾಯ ಗುಂಪುಗಳು –ಕರ್ನಾಟಕ ಮೌಲ್ಯ ಮಾಪನ ಪ್ರಾಧಿಕಾರ
ಪೂರಕ: ಮೈಕ್ರೋ ಫೈನಾನ್ಸ್: ಮ್ಯಾಕ್ರೋ ಪ್ರಾಫಿಟ್ –ಶಿವ ಸುಂದರ್

೪.೩. ಮಾರುಕಟ್ಟೆ ಅಭಿವೃದ್ಧಿ ಮತ್ತು ಪ್ರಜಾಪ್ರಭುತ್ವ –ಎಂ. ಚಂದ್ರಪೂಜಾರಿ
ಪೂರಕ: ವ್ಯಾಪಾರಿಯ ಕನಸಿನ ಕತೆ –ನಾಗಾರ್ಜುನ, ಡಾ.ಎಸ್. ನಟರಾಜ ಬೂದಾಳು

**ಅಧ್ಯಾಯ ೧.೨.**

**ಕಾಣಿಕೆ**

**ಬಿ.ಎಂ.ಶ್ರೀಕಂಠಯ್ಯ**

**ಪ್ರವೇಶಿಕೆ:**

ಕನ್ನಡ ಭಾಷೆಯು ಎರಡು ಸಾವಿರ ವರ್ಷಕ್ಕಿಂತಲೂ ಹೆಚ್ಚಿನ ಇತಿಹಾಸವನ್ನು ಹೊಂದಿದೆ. ಸಮೃದ್ಧವೂ, ಪ್ರಬುದ್ಧವೂ ಆದ ಕನ್ನಡ ಭಾಷೆಯು ತನ್ನ ಭಾಷಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಅನನ್ಯತೆಯಿಂದ ಜಾಗತಿಕ ಮಟ್ಟದಲ್ಲಿ ಇಂದು ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಹೀಗೆ ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಅನ್ಯ ಭಾಷೆಗಳ ಪ್ರಭಾವ ಮತ್ತು ಪರಿಣಾಮಗಳಿರುವುದನ್ನು ಕಡೆಗಣಿಸಲಾಗದು. ಅದರಲ್ಲೂ ಸಂಸ್ಕೃತ, ಪ್ರಾಕೃತ ಮುಂತಾದ ಭಾಷೆಗಳ ಕಾಣಿಕೆಯನ್ನು ಸ್ಮರಿಸಲೇಬೇಕು. ಕನ್ನಡ ಸಾಹಿತ್ಯದಲ್ಲಿ ಹೊಸ ಅಲೆ ಉಂಟು ಮಾಡಿದ ಇಂಗ್ಲಿಷ್ ಭಾಷೆಯ ಪ್ರಭಾವ ಕೂಡ ವಿಶೇಷವಾದುದು. ಒಟ್ಟಾರೆಯಾಗಿ ಕನ್ನಡ ಭಾಷೆಯು ತನ್ನ 'ದೇಸಿ'ತನವನ್ನು ಉಳಿಸಿಕೊಂಡೆ ದಶದಿಕ್ಕುಗಳಿಂದ ಬಂದ ಪ್ರಭಾವಗಳನ್ನು ಸ್ವೀಕರಿಸಿದೆ. ಇಂತಹ ಪ್ರಭಾವಗಳಲ್ಲಿ ವಸಾಹತುಶಾಹಿ ಕಾಲದ ಸಾಹಿತ್ಯ ಪ್ರಕಾರಗಳನ್ನು ಕನ್ನಡಕ್ಕೆ ತಂದುಕೊಂಡದ್ದೂ ಒಂದು. ಇಂತಹ ಪ್ರಭಾವಗಳ ಕಥನವನ್ನು ಒಳಗೊಂಡಿರುವ ಬಿ.ಎಂ.ಶ್ರೀ ಅವರ ಒಂದು ಪದ್ಯವನ್ನೂ ಮತ್ತು ಅದಕ್ಕೆ ಸಂವಾದಿಯಾಗಿ ಆನಂದಕಂದರ ಇನ್ನೊಂದು ಪದ್ಯವನ್ನೂ ಇಲ್ಲಿ ನೀಡಲಾಗಿದೆ.

ಮೊದಲು ತಾಯ ಹಾಲ ಕುಡಿದು,
ಲಲ್ಲೆಯಿಂದ ತೊದಲಿ ನುಡಿದು,
ಕೆಳೆಯರೊಡನೆ ಬೆಳೆದು ಬಂದ
ಮಾತದಾವುದು–
ನಲ್ಲೆಯೊಲವ ತೆರೆದು ತಂದ
ಮಾತದಾವುದು–

ಸವಿಯ ಹಾಡ, ಕಥೆಯ ಕಟ್ಟಿ,
ಕಿವಿಯಲೆರೆದು ಕರುಳ ತಟ್ಟಿ,
ನಮ್ಮ ಜನರು, ನಮ್ಮ ನಾಡು,
ಎನಿಸಿತಾವುದು–
ನಮ್ಮ ಕವಿಗಳೆಂಬ ಕೋಡು
ತಲೆಗದಾವುದು–

ಕನ್ನಡ ನುಡಿ, ನಮ್ಮ ಹೆಣ್ಣು,
ನಮ್ಮ ತೋಟದಿನಿಯ ಹಣ್ಣು ;
ಬಳಿಕ, ಬೇರೆ ಬೆಳೆದ ಹೆಣ್ಣು
ಬಳಿಗೆ ಸುಳಿದಳು ;
ಹೊಸದು ರಸದ ಬಳ್ಳಿ ಹಣ್ಣು
ಒಳಗೆ ಸುಳಿದಳು,

ಪಡುವ ಕಡಲ ಹೊನ್ನ ಹೆಣ್ಣು,
ನನ್ನ ಜೀವದುಸಿರು, ಕಣ್ಣು,
ನಲಿಸಿ, ಕಲಿಸಿ, ಮನವನೊಲಿಸಿ
ಕುಣಿಸುತಿರುವಳು;
ಒಮ್ಮೆ ಇವಳು, ಒಮ್ಮೆ ಅವಳು,
ಕುಣಿಸುತಿರುವಳು,

ಹೀಗೆ ನನಗೆ ಹಬ್ಬವಾಗಿ,
ಇನಿಯರಿಬ್ಬರನ್ನು ತೂಗಿ,
ಇವಳ ಸೊಬಗನವಳು ತೊಟ್ಟು,
ನೋಡ ಬಯಸಿದೆ ;
ಅವಳ ತೊಡಿಗೆ ಇವಳಿಗಿಟ್ಟು
ಹಾಡ ಬಯಸಿದೆ.

ಬಲ್ಲವರಿಗೆ ಬೆರಗೆ ಇಲ್ಲ?
ಅರಿಯದವರು ನಾಲ್ವರಲ್ಲಿ
ಕಳೆಯ ಬೆಳಕು ಹೊಳೆಯಲಂದು
ದಣಿದು ಹೋದನು.
ಬಡವನಳಿಲು ಸೇವೆಯೆಂದು
ಧನ್ಯನಾದೆನು.

ಆಕರ: ಕನ್ನಡದ ಬಾವುಟ ಸಂ: ಬಿ.ಎಂ.ಶ್ರೀಕಂಠಯ್ಯ, ಕನ್ನಡ ಸಾಹಿತ್ಯ ಪರಿಷತ್ತು.

**ಪೂರಕ ಪಠ್ಯ**

**ಅರುಣೋದಯ**

### ಆನಂದಕಂದ

ಕನ್ನಡ ನಾಡಿನ ಮುಂಬಾನೊಳು ಚೆಂ
ಬಣ್ಣದ ಬೆಳಕು ಇದೇತರದು?
ಹೊನ್ನಗದಿರ ಬರಲಿಹನೆಂದೊರೆಯಲು
ಮುನ್ನವೆ ಬಂದರುಣನದೆ ಇದು?
        ನನ್ನಿಯು! ಅರುಣನದೆ ಇದು!

ಭಲೆ ಭಲೆ ! ನಮ್ಮಯ ಬಳಿಯಿಹ ಬಾನೊಳೆ
ತೊಳಗುವನೇಸರು ಮೂಡುವನು,
ಹೊಳೆಯುವ ಕೈಗಳನೆಳೆದೆಲ್ಲೆಡೆಯಲಿ
ಬೆಳಕು ಬೆಳಕನೇ ಮಾಡುವನು ;
        ಹೊಳಪನು ಎಲ್ಲಕೆ ನೀಡುವನು.

ಬೆಳಕನು ಮಾಡಲು ಕಳೆದುಹೋಗದೆಯೆ
ಉಳಿಯುವುದೇ ಕೊಳೆಗತ್ತಲೆಯು?
ಮಲಗಿದ ಕನ್ನಡದೆಳೆಯರು ಏಳುತೆ
ಸುಳಿದಾಡುವ ! ಎತ್ತೆತ್ತಲೆಯು ;
        ನಲಿದಾಡುವ ! ಎತ್ತೆತ್ತಲೆಯು.

ಮಿರುಗುವ ಕಿರಣವ ಹರಡುತೆ ನೇಸರು
ನಡುಬಾನಿಗೆ ತಾನೇರುವನು,
ಬಿರಿಮುಗುಳೆಲ್ಲವನರಳಿಸಿ ಹುರುಳನು
ಹವೆಯೊಳಗೆಲ್ಲಿಯು ತೂರುವನು,
        ಅವನಿಗೆ ಕಂಪನು ಬೀರುವನು.

ಕನ್ನಡ ನಾಡಿನ ಗುಡಿಗಳಸಕೆ ಹೊಸ–
ಬಣ್ಣವನೀತನು ಹಾಕುವನು,
ಹೊನ್ನಿನ ಕಿರಣದ ಹಂದರ ಬಿಗಿಯುತೆ
ಕನ್ನಡಿಗರನಲ್ಲಿರಿಸುವನು,
        ಎಲ್ಲರ ಎದೆಗಳ ಬೆರೆಸುವನು.

ಭಯವೇತರದಾವಾಗ ನಮಗೆ? ನಿ–
ರ್ಭಯರು ! ನೆರೆದು ಕುಣಿಕುಣಿದಾಡಿ,
'ಜಯ ಜಯ ಜಯ ಕರ್ನಾಟಕ' ಎನ್ನುತೆ
ಹಾಡುವ ನಾವೆಲ್ಲರು ಕೂಡಿ.
        ಕೂಗುವ ನಾವೆಲ್ಲರು ಕೂಡಿ.

ಕನಸಿನೊಳಗೆ ಕಣ್ಣುಚ್ಚಿಯೆ ನೋಡಿದ
ಇನಿನೋಟದ ಪಟಗಳ ಬರೆದು,
ನನಸಿನಲಿಯು ಕಾಣುವ ತೆರೆಮಾಡುತೆ
ಜನಕಚ್ಚರಿ ತೋರುವ ! ನೆರೆದು
        ಬೆರೆಗನುಗೊಳಿಸುವ ನಾವ್ ಬೆರೆದು.

ಕೇಳಿರಿ ಕೇಳಿರಿ ಕೋಳಿಯ ಕೂಗನು
ಕೇಳಿಸುವುದೆ ಬೆಳಗಿನ ಕಾಳಿ?
'ಏಳೈ ಕನ್ನಡ ಭಾಗ್ಯ ವಿಧಾತನೆ?'
ಎನುತೆ ಹಾಡುತಿಹ ವೈತಾಳಿ ;
        ಸುಳಿಯುತಿಹುದು ನಸುಕಿನ ಗಾಳಿ ;
ಅಲಸಿಕೆಯುಳಿದೆಲ್ಲರು ಏಳಿ !

**ಆಕರ:** ಕನ್ನಡದ ಬಾವುಟ ಸಂ: ಬಿ.ಎಂ.ಶ್ರೀಕಂಠಯ್ಯ, ಕನ್ನಡ ಸಾಹಿತ್ಯ ಪರಿಷತ್ತು. ?

**ಲೇಖಕರ ಪರಿಚಯ**

**ಬಿ.ಎಂ.ಶ್ರೀ (೧೮೮೪–೧೯೪೬):** 'ಶ್ರೀ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಬಿ.ಎಂ.ಶ್ರೀ ಅವರ ಪೂರ್ಣ ಹೆಸರು ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯ. ೧೯೧೧ರಲ್ಲಿ ಧಾರವಾಡದಲ್ಲಿ ಅವರು ನೀಡಿದ 'ಕನ್ನಡ ಮಾತು ತಲೆಯೆತ್ತುವ ಬಗೆ' ಎನ್ನುವ ಉಪನ್ಯಾಸ ಕನ್ನಡ ನಾಡು ನುಡಿಗಳ ಮಾರ್ಗಸೂಚಿಯಾಯಿತು. ಇವರು ಅನುವಾದಿಸಿದ 'ಇಂಗ್ಲಿಷ್ ಗೀತೆಗಳು' ಎಂಬ ಕೃತಿಯು ಹೊಸಗನ್ನಡ ಕವಿತೆ ಕಣ್ಣು ತೆರೆಯುವಂತೆ ಮಾಡಿತು. ಹಾಗೆಯೇ ಪಾರಸಿಕರು, ಅಶ್ವತ್ಥಾಮನ್, ಗದಾಯುದ್ಧ ನಾಟಕಂ ಮುಂತಾದ ಮಹತ್ವದ ಕೃತಿಗಳನ್ನು ಇವರು ಬರೆದಿದ್ದಾರೆ. ಕನ್ನಡ ನಾಡು–ನುಡಿಗೆ ಇವರು ಸಲ್ಲಿಸಿರುವ ಸೇವೆಯನ್ನು ಗುರತಿಸಿ ೧೯೨೮ರಲ್ಲಿ ಗುಲ್ಬರ್ಗಾದಲ್ಲಿ ನಡೆದ ೧೪ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಲಾಯಿತು. ಆಗಿನ ಮೈಸೂರು ರಾಜರು 'ರಾಜಸೇವಾಸಕ್ತ' ಎಂಬ ಬಿರುದನ್ನು ನೀಡಿ ಗೌರವಿಸಿದ್ದಾರೆ. ಬಿಂ.ಎಂ.ಶ್ರೀ ಅವರ ಶಿಷ್ಯರು ಹಾಗೂ ಮಿತ್ರರು 'ಸಂಭಾವನೆ' ಎಂಬ ಅಭಿನಂದನಾ ಗ್ರಂಥವನ್ನು ಇವರಿಗೆ ಅರ್ಪಿಸಿದ್ದಾರೆ. ಇದು ಕನ್ನಡದ ಮೊದಲ ಅಭಿನಂದನಾ ಗ್ರಂಥ.

**ಆನಂದಕಂದ (ಬೇಟಗೇರಿ ಕೃಷ್ಣಶರ್ಮ ೧೯೦೦–೧೯೮೨):** ಗೋಕಾಕ್ ತಾಲ್ಲೂಕು ಬೆಟಗೇರಿಯಲ್ಲಿ ಹುಟ್ಟಿದ ಕೃಷ್ಣಶರ್ಮ ಅವರು 'ಆನಂದ ಕಂದ' ಎಂಬ ಅಂಕಿತನಾಮದಿಂದ ಸಾಹಿತ್ಯ ರಚನೆ ಮಾಡಿದ್ದಾರೆ. ಬೆಟಗೇರಿಯವರು ಕಳ್ಳರ ಗುರು ಮತ್ತು ಇತರ ಕಥೆಗಳು, ಸಂಸಾರ ಚಿತ್ರಗಳು ಎಂಬ ಕಥಾಸಂಕಲನಗಳನ್ನು

ರಾಜಯೋಗ, ಅಶಾಂತಪರ್ವ, ಮಗಳ ಮದುವೆ ಮುಂತಾದ ಕಾದಂಬರಿಗಳನ್ನು ಮುದ್ದನ ಮಾತು, ಒಡನಾಡಿ, ನಲ್ವಾಡುಗಳು ಮುಂತಾದ ಕವನ ಸಂಕಲನಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. ಇವರ ಸಾಹಿತ್ಯ ಸೇವೆಯನ್ನು ಗುರುತಿಸಿ ೧೯೩೭ರಲ್ಲಿ ಜಮಖಂಡಿಯಲ್ಲಿ ನಡೆದ ೨೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಾಹಿತ್ಯಗೋಷ್ಠಿಯ ಅಧ್ಯಕ್ಷತೆ ಹಾಗೂ ೧೯೭೧ರಲ್ಲಿ ನಾಗಮಂಗಲದಲ್ಲಿ ನಡೆದ ೩ನೇ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷತೆ ನೀಡಿ ಗೌರವಿಸಲಾಗಿದೆ. ಕರ್ನಾಟಕ ವಿಶ್ವವಿದ್ಯಾಲಯ ಇವರಿಗೆ ಗೌರವ ಡಿ.ಲಿಟ್ ಪದವಿ ನೀಡಿ ಅಭಿನಂದಿಸಿದೆ.

**ಪದ ಕೋಶ:**

ಇನಿಯ= ರುಚಿಯಾದ, ಕೆಳೆಯ= ಗೆಳೆಯ, ಕೋಡು= ಕೊಂಬು, ಪಡುವ= ಪಡುವಣ, ಪಶ್ಚಿಮ, ಬೆರಗು= ಆಶ್ಚರ್ಯ, ಕಳೆ= ಕಾಂತಿ, ಕಡಲ= ಕಡಲು, ಸಮುದ್ರ, ಹೊನ್ನ= ಹೊನ್ನು, ಹಣ, ಸಂಪತ್ತು, ಸೊಬಗು= ಸೌಂದರ್ಯ

**ಸಂಭಾವ್ಯ ಪ್ರಶ್ನೆಗಳು:**

1. ನಮ್ಮ ತೋಟದಿನಿಯ ಹಣ್ಣು ಯಾವುದು?
2. ಹುಟ್ಟಿನಿಂದಲೇ ಬೆಳೆದು ಬಂದು ಭಾಷೆಯ ಸೊಗಸು ಎಂತಹುದು?
3. ಕನ್ನಡ ಭಾಷೆಯ ಬೆಳವಣಿಗೆಗೆ ಬೇರೆ ಭಾಷೆಯ ಕಾಣಿಕೆ ಹೇಗಿರಬೇಕು ಎಂದು ಕವಿ ಬಯಸುತ್ತಾರೆ?
4. ಕನ್ನಡ ನಾಡು–ನುಡಿಯ ಅಂತರ್ ಸಂಬಂಧವನ್ನು ಕವಿ ಹೇಗೆ ನಿರೂಪಿಸಿದ್ದಾರೆ?
5. ಭಾಷೆಗಳ ನಡುವಿನ ಬಾಂಧವ್ಯವನ್ನು **"ಕಾಣಿಕೆ"** ಪದ್ಯದ ಹಿನ್ನೆಲೆಯಲ್ಲಿ ವಿವರಿಸಿ.
6. ಅವಳ ತೊಡುಗೆ ಇವಳಿಗಿಟ್ಟು ಹಾಡಬಯಸಿದೆ ಎಂದರೇನು? ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

**ಚಟುವಟಿಕೆ:**

1. ಜನವಾಣಿ ಬೇರು – ಕವಿವಾಣಿ ಹೂವು ಇದರ ಬಗ್ಗೆ ಒಂದು ಪ್ರಬಂಧ ರಚಿಸಿ.
2. ಕನ್ನಡ ಭಾಷೆಯ ಮೇಲೆ ಸಂಸ್ಕೃತದ ಪ್ರಭಾವವನ್ನು ಕುರಿತು ತರಗತಿಯಲ್ಲಿ ಚರ್ಚಿಸಿ.
3. ಬಿ.ಎಂ.ಶ್ರೀ ಅವರ 'ಇಂಗ್ಲಿಷ್ ಗೀತಗಳು' ಕೃತಿಯ ಮಹತ್ವವನ್ನು ಬರೆಯಿರಿ.
4. ಶುದ್ಧ ಕನ್ನಡದಲ್ಲಿ ಮಾತಾಡುವುದನ್ನು ತರಗತಿಯಲ್ಲಿ ಸ್ಪರ್ಧೆಯಾಗಿ ನಡೆಸಿ.
5. ಕೊಳೆಗತ್ತಲೆ, ಇನಿಯ ಹಣ್ಣು ಈ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ.

**ಹೆಚ್ಚಿನ ಪರಾಮರ್ಶನಕ್ಕಾಗಿ**

1. **https://tulasivana.com/339/**
2. https://www.poemhunter.com/b-m-srikantaiah/biography/

**ಅಧ್ಯಾಯ ೨.೨**

**ಪಠ್ಯ**

**ರಾಷ್ಟ್ರೀಯತೆ: ಟ್ಯಾಗೋರ್–ಗಾಂಧಿ ಸಂವಾದ**

**ಡಾ. ಡಿ. ಎಸ್. ನಾಗಭೂಷಣ**

ಪ್ರವೇಶಿಕೆ

ಇಂಗ್ಲಿಷ್ ಶಿಕ್ಷಣವಿಲ್ಲದಿದ್ದರೆ ಸ್ವಾತಂತ್ರ್ಯದ ಪರಿಕಲ್ಪನೆ, ವಿಚಾರ ಶಿಸ್ತು, ನಿಖರ ಚಿಂತನೆಗಳು ಸಾಧ್ಯವಿಲ್ಲ ಎಂಬುದು ಮೌಢ್ಯಗಳಲ್ಲೇ ಅತ್ಯಂತ ಕೆಟ್ಟ ಮೌಢ್ಯವಾಗಿ ಅದು ಭಾರತೀಯರ ಮನಸ್ಸು ಮತ್ತು ದೇಹಗಳೆರಡನ್ನೂ ಕುಗ್ಗಿಸಿದೆ ಎಂದು ಗಾಂಧಿ ಒಮ್ಮೆ ಬರೆದಿದ್ದರು. ಆ ವಿಚಾರದ ಬಗ್ಗೆ, ಅವರ ಅಸಹಕಾರ ಚಳುವಳಿ, ವಸ್ತ್ರದಹನ, ಗ್ರಾಮ ಭಾರತದ ಕಲ್ಪನೆಯ ಬಗ್ಗೆ ಅಸಮಾಧಾನ ಹೊಂದಿದ್ದ ರವೀಂದ್ರನಾಥ್ ಟ್ಯಾಗೋರ್‌ರ ಕವಿ ಮನಸ್ಸನ್ನು ಶ್ಲಾಘಿಸಿ ಅವರಿಗೆ ದೇಶೀಯತೆಯ ಮಹತ್ವವನ್ನು ಗಾಂಧಿ ಮನವರಿಕೆ ಮಾಡಿಕೊಡುತ್ತಾರೆ. ಭಾರತ ತನ್ನ ಬಿಡುಗಡೆಗಾಗಿ ಪಶ್ಚಿಮದತ್ತ ನೋಡಬೇಕೆಂಬ ಟ್ಯಾಗೋರ್‌ರ ನಿಲುವಿಗೆ ಗಾಂಧಿ ಸೂಕ್ತವಾಗಿ ಪ್ರತಿಕ್ರಿಯಿಸುತ್ತಾರೆ. ಸ್ವಾತಂತ್ರ್ಯ ಬೇಕೆಂಬ ಇಬ್ಬರ ಗುರಿ ಒಂದೆಯಾದರು ಚಿಂತನೆಗಳಲ್ಲಿದ್ದ ವ್ಯತ್ಯಯಗಳ ಕಡೆಗೆ ಈ ಲೇಖನ ಬೆಳಕು ಚೆಲ್ಲುತ್ತದೆ. ಚರಿತ್ರೆಯ ಗ್ರಹಿಕೆಯ ಎರಡು ಭಿನ್ನ ನಂಬಿಕೆ, ಆಲೋಚನೆಗಳನ್ನು ತೌಲನಿಕವಾಗಿ ಮಂಡಿಸುವುದು ಇಲ್ಲಿನ ಉದ್ದೇಶವಾಗಿದೆ.

ಶಾಂತಿನಿಕೇತನದ ಅಭಿವೃದ್ಧಿಗಾಗಿ ದೇಣಿಗೆ ಸಂಗ್ರಹಿಸಲು ಅಮೇರಿಕಾಗೆ ಹೋಗಿದ್ದ ರಬೀಂದ್ರನಾಥ ಟ್ಯಾಗೋರರು ಮರಳಿ ಭಾರತಕ್ಕೆ ವಾಪಸು ಬಂದಾಗ; ಅವರು ಸ್ವತಃ ತಮ್ಮ ಶಾಂತಿನಿಕೇತನದ ಜನ ಅಸಹಕಾರ ಚಳುವಳಿಯ ವಿವಿಧ ಕಾರ್ಯಕ್ರಮಗಳ ಬಗ್ಗೆ ಉತ್ಸಾಹ–ಸಂಭ್ರಮಗಳಿಂದ ಮಾತಾಡುತ್ತಿದ್ದುದನ್ನು ಕಂಡು ದಿಗ್ಭ್ರಾಂತರಾಗುತ್ತಾರೆ. ಆದರೆ ಇದಕ್ಕೆ ಬಹು ಮುನ್ನವೇ ಅವರಿಗೆ ಅಸಹಕಾರದ ಸ್ವರೂಪದ ಪರಿಚಯವಾಗಿ ಅದರ ಬಗ್ಗೆ ತಮ್ಮ ಅಸಮಾಧಾನ ವ್ಯಕ್ತಪಡಿಸಿರುತ್ತಾರೆ. ಉದಾಹರಣೆಗೆ, ಗಾಂಧಿ ದೇಶೀ ಶಿಕ್ಷಣ ಕಾರ್ಯಕ್ರಮದ ಪ್ರಚಾರದ ಭಾಗವಾಗಿ ಬರೆದಿದ್ದ; 'ಇಂಗ್ಲಿಷ್ ಶಿಕ್ಷಣ ಮಾಧ್ಯಮ' ಕುರಿತು ೧೯೨೧ರ ಏಪ್ರಿಲ್ ೨೭ರ 'ಯಂಗ್ ಇಂಡಿಯಾ ಪತ್ರಿಕೆ'ಯಲ್ಲಿ ಬರೆದ ಒಂದು ಲೇಖನವನ್ನು ಓದಿದ್ದರು. ಅದರಲ್ಲಿ ಗಾಂಧಿ ರಾಜಾರಾಂ ಮೋಹನರಾಯ್ ಮತ್ತು ತಿಲಕರಂಥವರು ಇಂಗ್ಲಿಷ್ ಭಾಷೆಯಲ್ಲಿ ಚಿಂತಿಸಿ ತಮ್ಮ ವಿಚಾರಗಳನ್ನು ಮಂಡಿಸುವ ಸಮಸ್ಯೆಗೆ ಒಳಗಾಗಿರದಿದ್ದರೆ ಅವರು ಇನ್ನೂ ದೊಡ್ಡ ವಿದ್ವಾಂಸರಾಗಿರುತ್ತಿದ್ದರು ಮತ್ತು ಇಂಗ್ಲಿಷ್ ಶಿಕ್ಷಣವಿಲ್ಲದಿದ್ದರೆ ಸ್ವಾಂತಂತ್ರ್ಯದ ಪರಿಕಲ್ಪನೆ, ವಿಚಾರ ಶಿಸ್ತು, ನಿಖರ ಚಿಂತನೆಗಳು ಸಾಧ್ಯವಿಲ್ಲ ಎಂಬುದು ಮೌಢ್ಯಗಳಲ್ಲೇ ಅತ್ಯಂತ ಕೆಟ್ಟ ಮೌಢ್ಯವಾಗಿ, ಅದು ಭಾರತೀಯರ ಮನಸ್ಸು ಮತ್ತು ದೇಹಗಳೆರಡನ್ನೂ ಕುಗ್ಗಿಸಿದೆ ಎಂದು ಬರೆದಿದ್ದರು.

ಇದನ್ನು ಟ್ಯಾಗೋರರ ಗಮನಕ್ಕೆ ತಂದಿದ್ದವರು ಗಾಂಧಿಯವರ ಅಸಹಕಾರ ಚಳುವಳಿಯ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದ್ದ ಸಿ.ಎಫ್. ಆ್ಯಂಡ್ರ್ಯೂಸ್ ಅವರು. ಅವರ ಪ್ರಕಾರ ವಿದೇಶೀ ವಸ್ತುಗಳ ಬಹಿಷ್ಕಾರ ಜನಾಂಗದ್ವೇಷಕ್ಕೆ ಕಾರಣವಾಗುವುದು. ಆದರೆ ಗಾಂಧಿ, ಅವರಿಗೆ ಉತ್ತರ ಬರೆದು, ತಮ್ಮ ಬಹಿಷ್ಕಾರ ನಮ್ಮ ಜನರ ಕೈಯಿಂದ ಕೆಲಸ ಕದ್ದು ಅವರನ್ನು ದರಿದ್ರಾವಸ್ಥೆಗೆ ತಳ್ಳಿರುವ ಬಟ್ಟೆ ಉದ್ಯಮಕ್ಕೆ ಮಾತ್ರ ಸಂಬಂಧಿಸಿದ್ದಾದ್ದರಿಂದ ಇದು ಜನಾಂಗದ್ವೇಷಕ್ಕೆ ಕಾರಣವಾಗುವುದಿಲ್ಲ ಎಂದು ವಿವರಿಸಿದ್ದರು. ಆದರೆ ತೃಪ್ತರಾಗದ ಆ್ಯಂಡ್ರ್ಯೂಸ್ ತಮ್ಮ ಅಳಲನ್ನು ಗಾಂಧಿಯವರ ಈ ಲೇಖನವನ್ನು ಟ್ಯಾಗೋರರೊಂದಿಗೆ ಹಂಚಿಕೊಳ್ಳುವ ಮೂಲಕ ಅವರಿಗೆ ಮುಟ್ಟಿಸಿದ್ದರು.

ಗಾಂಧಿಯವರ ಈ ವಿಚಾರವನ್ನು ಒಪ್ಪದ ಟ್ಯಾಗೋರರು 'ರಾಜಾರಾಂ ಮೋಹನರಾಯ್ ಪೂರ್ವದ ವಿವೇಕದ ಪರಿಪೂರ್ಣ ಅಭ್ಯಾಸ ಮಾಡಿದ ನಂತರ ಪಶ್ಚಿಮದ ಭಾಷೆಗಳಿಗೆ, ವಿಚಾರಗಳಿಗೆ ತೆರೆದುಕೊಂಡು, ಅದರ ಪರಿಣಾಮವಾಗಿ ಭಾರತ ತನ್ನ ಬಿಡುಗಡೆಗಾಗಿ ಪಶ್ಚಿಮದತ್ತ ನೋಡಬೇಕೆಂದುದು ಸರಿಯಾಗಿಯೇ ಇರುವುದರಿಂದ, ರಾಯ್‌ರಂತಹ ಆಧುನಿಕ ಚಿಂತಕರನ್ನು ಟೀಕಿಸುವುದು ಸಂಕುಚಿತ ರಾಷ್ಟ್ರೀಯತೆಯ ಫಲ ಮಾತ್ರವಾಗಿದೆ ಎಂದು ಪ್ರತಿಕ್ರಿಯಿಸಿದರು. ಅಲ್ಲದೆ ಗಾಂಧಿ ತಮ್ಮ ವಿಚಾರಗಳಿಂದ ತಾವೇ ಮೋಹಿತರಾಗಿ ಕುರುಡಾಗಿದ್ದಾರೆ; ಹಾಗಾಗಿಯೇ ಅವರ ಅಸಹಕಾರ ಎಂಬ ಚಳುವಳಿಯ ಹೆಸರಿನಲ್ಲಿಯೇ ನೇತ್ಯಾತ್ಮಕತೆ ಇದೆ ಎಂದೂ ಅವರು ಆ್ಯಂಡ್ರ್ಯೂಸ್‌ಗೆ ಬರೆದರು. ಇದನ್ನು ಅವರು ಪತ್ರಿಕೆಗಳಲ್ಲಿ ಪ್ರಕಟಿಸಿಯೂ ಬಿಟ್ಟರು.

ಇದಕ್ಕೆ ಅದೇ ಪತ್ರಿಕೆಯಲ್ಲಿ ಉತ್ತರ ನೀಡಿದ ಗಾಂಧಿ, ಟ್ಯಾಗೋರರ ಈ ಬರಹ ಕವಿಯೊಬ್ಬ ತನ್ನ ಕವಿತ್ವದ ಕಲ್ಪನಾಶೀಲತೆಯಿಂದ ಲೋಕವಾಸ್ತವಕ್ಕೆ ಎಚ್ಚರಾಗುವ ಶ್ಲಾಘನೀಯ ಪ್ರಯತ್ನ ಎಂದು ಬಣ್ಣಿಸುತ್ತಾ; ತಮ್ಮದು ಪ್ರತ್ಯೇಕವಾದಿ, ಆಕ್ರಾಮಕ ಅಥವಾ ವಿನಾಶಕಾರಿಯಾದ ರಾಷ್ಟ್ರೀಯತೆ ಅಲ್ಲ ಎಂದು ಸ್ಪಷ್ಟಪಡಿಸಿದರು. ಭಾರತ, ಜಗತ್ತನ್ನು ಅರ್ಥ ಮಾಡಿಕೊಳ್ಳುವ ಮೊದಲು ತನ್ನನ್ನು ತಾನು ಅರ್ಥ ಮಾಡಿಕೊಳ್ಳಲು ತನ್ನೊಳಗನ್ನೊಮ್ಮೆ ಅವಲೋಕಿಸಬೇಕಿದ್ದು, ಅದರ ಪ್ರಯತ್ನ ಈಗ ನಡೆದಿದೆ ಎಂದು ವಿವರಿಸಿದರು. ಬೆಕ್ಕಿನ ಹಲ್ಲುಗಳ ನಡುವೆ ಸಿಕ್ಕಿಕೊಂಡಿರುವ ಇಲಿ ಹುತಾತ್ಮನಾಗಬೇಕೆಂದು ಬಯಸುವಂತಿದೆ ಎಂದ ಟ್ಯಾಗೋರರ ಮಾತುಗಳಿಗೆ ಗಾಂಧಿಯವರು ಪ್ರತಿಕ್ರಿಯಿಸಿ, ಭಾರತೀಯರು ಮಾನವತೆಗಾಗಿ ಪ್ರಾಣಕೊಡಲು ತಾವು ಮೊದಲು ಪ್ರಾಣ ರಕ್ಷಿಸಿಕೊಳ್ಳಬೇಕಿದೆ ಎಂದು ಬರೆದರು; ಕವಿ ಮುಂಜಾವಿನಲ್ಲಿ ಹಕ್ಕಿಗಳು ರೆಕ್ಕೆ ಬಡಿಯುತ್ತಾ ಹರ್ಷದಿಂದ ದಿನದ ಬದುಕಿಗೆ ಹಾರುವುದನ್ನು ಕಂಡು ರೋಮಾಂಚನಗೊಳ್ಳುವುದು ಸಹಜವಾದರೂ, ಅದು ಆ ಹಕ್ಕಿಗಳೆಲ್ಲ ಹಿಂದಿನ ರಾತ್ರಿ ಮಲಗುವ ಮುನ್ನ ಹೊಟ್ಟೆ ತುಂಬ ಉಂಡು ಸುಖವಾಗಿ ನಿದ್ರಿಸಿ ಈಗ ಹೊಸ ಹುರುಪಿನಿಂದ ಹಾರುತ್ತಿವೆ ಎಂಬ ನಂಬಿಕೆಯನ್ನು ಆಧರಿಸಿದೆ ಎಂದೂ ಬರೆದರು. ಆದರೆ ನಾನು ನೋಡುತ್ತಿರುವುದು ಊಟವಿಲ್ಲದೆ ರಾತ್ರಿ ಕಳೆಯುತ್ತಿರುವ ಹಕ್ಕಿಗಳನ್ನು, ಅನ್ನವಿಲ್ಲದವನಿಗೆ ಅನ್ನವೇ ದೇವರು. ಆ ದೇವರನ್ನು ಕಾಣದ ಜನ ಬದುಕಿಕೊಳ್ಳಲು ಕಳ್ಳರಾಗುತ್ತಾರೆ. ಹಾಗೆ ಭಾರತವಿಂದು ಕಳ್ಳರ ಒಂದು ದೊಡ್ಡ ಬಂದೀಖಾನೆಯಾಗಿದೆ. ಅವರನ್ನು ಅದರಿಂದ ಬಿಡುಗಡೆಗೊಳಿಸುವ ಏಕೈಕ ಮಾರ್ಗ, ಅವರ ಕೈಗೆ ಕೆಲಸ ಕೊಟ್ಟು ಅವರಿಗೆ ಅವರ ಘನತೆಯನ್ನು ಮರಳಿ ಕೊಡಿಸುವುದು. ಅವರನ್ನು ಮತ್ತೆ ಗುಲಾಮಗಿರಿಯ ಸೆರೆಮನೆಗೆ ತಳ್ಳುವ ಉಪಾಯವಾದ ವಿದೇಶೀ ಬಟ್ಟೆಯನ್ನು ಅವರಿಗೆ ನೀಡುವುದು ಈ ಘನತೆಗೆ ಕುಂದುಂಟು ಮಾಡುವ ಕೆಲಸ. ತನ್ನ ಅನ್ನ ಬಟ್ಟೆಗಳಂತಹ ಅವಶ್ಯಕತೆಗಳನ್ನು ಬೆವರಿಳಿಸಿ ಸಂಪಾದಿಸಿಕೊಳ್ಳುವ ದುಡಿಮೆಯ ತತ್ವವೂ ಇದರಲ್ಲಡಗಿದೆ. ವಸ್ತ್ರ ದಹನವು ವಿದೇಶೀಯರ ಮೇಲಿನ ಸಿಟ್ಟನ್ನು ಅವರ ಉತ್ಪನ್ನಗಳ ಕಡೆ ತಿರುಗಿಸುವ ಪ್ರಯತ್ನವೂ ಹೌದು. ತಮಗೆ ಬ್ರಿಟಿಷ್ ಜನರ ಮೇಲೆ ದ್ವೇಷವಿಲ್ಲ ಎಂಬುದಕ್ಕೆ ಕೆಲವು ತಿಂಗಳುಗಳ ಹಿಂದೆಷ್ಟೇ ತಾವು ದೆಹಲಿಯಲ್ಲಿ ಹಕೀಂ ಅಜ್ಮಲ್ ಖಾನ್ ಅವರು ಸ್ಥಾಪಿಸಿದ್ದ ರಾಷ್ಟ್ರೀಯ ವೈದ್ಯಕೀಯ ವಿದ್ಯಾಲಯದಲ್ಲಿ, ಸಜ್ಜನ ದಂಪತಿಗಳಾದ ಹಾರ್ಡಿಂಜ್ ಮತ್ತು ಶ್ರೀಮತಿ ಹಾರ್ಡಿಂಜರ ಭಾವ ಚಿತ್ರಗಳ ಅನಾವರಣ ಮಾಡಿರುವುದೇ ಸಾಕ್ಷಿ ಎಂದೂ ಗಾಂಧಿ ಹೇಳಿದರು.

**ಆಕರ:** ಗಾಂಧಿ ಕಥನ –ಡಿ.ಎಸ್. ನಾಗಭೂಷಣ, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು, ೨೦೧೯.

**ಪೂರಕ ಪಠ್ಯ**

## ಹಳ್ಳಿಯ ಕಣ್ಮರೆ

### ಡಿ. ಆರ್. ನಾಗರಾಜ

ಈ ಘಟ್ಟದಲ್ಲಿ ಗಾಂಧಿ ದೃಷ್ಟಿಕೋನದ ಹಳ್ಳಿಯನ್ನು ಕುರಿತ ಸಣ್ಣ ಚರ್ಚೆ, ನಗರೀಕರಣದ ಸ್ವರೂಪ ಮತ್ತು ಗ್ರಾಮೀಣ ಬಡವರ ಮೇಲೆ, ನಿರ್ದಿಷ್ಟವಾಗಿ ದಲಿತರ ಮೇಲೆ ಬೀರುವ ಪರಿಣಾಮಗಳನ್ನು ಕುರಿತಂತೆ ದಲಿತ ಚಳವಳಿಯ ನಿಲುವುಗಳ ಮೇಲೆ ಬೆಳಕು ಚೆಲ್ಲುತ್ತದೆ. ಗಾಂಧಿಯವರ ಕಲ್ಪನೆಯ ಹಳ್ಳಿ ವಾಸ್ತವವೂ ಹೌದು, ಆದರ್ಶೀಕೃತವೂ ಹೌದು. ಆರ್ಥಿಕ ವ್ಯವಸ್ಥೆ ಹಾಗೂ ತಂತ್ರಜ್ಞಾನದ ಮಟ್ಟದಲ್ಲಿ ಭಾರತದ ಹಿಂದಿನ ಹಾಗೂ ಇಂದಿನ ಅಂಗವಿಕಲತೆಗಳು ನಿಜ. ಅದರ ಯುಟೋಪಿಯನ್ ಅಂಶವೆಂದರೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಚರಣೆಗಳಿಗೆ ಸಂಬಂಧಪಟ್ಟದ್ದು. ಇವುಗಳಲ್ಲಿ ಇತ್ಯಾತ್ಮಕವಾದದ್ದೇನೋ ಇದೆ ಎಂದು ಗಾಂಧೀಜಿ ನಂಬಿದ್ದರು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಗಾಂಧಿ ಹೇಳುತ್ತಿದ್ದ ಹಳ್ಳಿ ಎಂದೂ ಅಸ್ತಿತ್ವದಲ್ಲಿ ಇರಲೇ ಇಲ್ಲ. ವಾಸ್ತವವಾದಿಯಾಗಿ ಅಂಬೇಡ್ಕರ್ ಇಂತಹ ಸುಂದರ ಹಳ್ಳಿಯ ಅಸಾಧ್ಯತೆಯನ್ನು ಅರ್ಥ ಮಾಡಿಕೊಂಡಿದ್ದರು. ಕ್ರೂರ ತಾರ್ಕಿಕತೆಯ ಅಂತಾರಾಷ್ಟ್ರೀಯ ಬಂಡವಾಳ ಹಾಗೂ ಆಧುನೀಕರಣ ಹಳ್ಳಿಗಳನ್ನು ನಾಶಗೊಳಿಸಿ ಕಟ್ಟಲು ಹೊರಟ ಪಟ್ಟಣ ಹಾಗೂ ನಗರಗಳ ಹಿನ್ನೆಲೆಯಲ್ಲಿ ಗಾಂಧಿಗೆ ಹಳ್ಳಿಗಳು ಮಹತ್ವ ಪೂರ್ಣವಾಗಿ ಕಂಡವು. ಹಳ್ಳಿ ಗಾಂಧಿಗೆ ಮುಖ್ಯವೆನಿಸಲು ಕಾರಣ ಅವರು ಇತಿಹಾಸವನ್ನು ಒಂದು ರೀತಿಯ ಭವಿತವ್ಯತೆಯ ದೃಷ್ಟಿಯಿಂದ ನೋಡುವುದು. ಆದರೆ ಅದನ್ನು ಆದರ್ಶೀಕರಣದ ಬೀಳುಗಳಿಂದ ತಪ್ಪಿಸಲು ಅವರು ಇತಿಹಾಸದ ಭೂತ ವರ್ತಮಾನಗಳ ಮುಸುಕಿನಲ್ಲಿ ಇಟ್ಟರು. ಇದು ಇಲ್ಲಿನ ವ್ಯಂಗ್ಯ ಅಸಹಾಯಕತೆ ಯುಟೋಪಿಯನ್ ಯೋಜನೆಗಳ ಈ ಅಧಿಕಾರವಂಚನೆಯಿಂದ ಹಳ್ಳಿಗಳನ್ನು ಪಾರುಮಾಡಲು ದಾರಿಯೊಂದಿತ್ತು.ಇತಿಹಾಸದ ಕತ್ತಲೆಯಿಂದ ಹಳ್ಳಿಗಳನ್ನು ಪಾರುಮಾಡುವ ಜೀವನ ಕ್ರಮವನ್ನು ಅವರಿಗೆ ನೀಡುವ ಮೂಲಕ ಇದನ್ನು ಸಾಧಿಸಬಹುದೆಂದು ಅವರು ಯೋಚಿಸಿದರು. ಇದು ಹಳ್ಳಿಯನ್ನು ಮುಖ್ಯ ವಿಗ್ರಹವಾಗಿ ನೋಡಿದ ದೀಕ್ಷಾಬದ್ಧ ಗುಂಪೊಂದರ ಮಾತಿನ ಸಂಭ್ರಮ ಮಾತ್ರವಾಗಿರಲಿಲ್ಲ. ಅವರ ಸಾಧನೆಯ ಮಹತ್ವ ಇರುವುದು ಬಹುತೇಕ ಖಚಿತವಾಗಿದ್ದ ಐತಿಹಾಸಿಕ ಸೋಲೊಂದನ್ನು ಸಂಭವನೀಯ ವಿಜಯವಾಗಿ ಪರಿವರ್ತಿಸುವುದರಲ್ಲಿ.

ಅಂಬೇಡ್ಕರ್ ಹಳ್ಳಿ ಎನ್ನುವ ಬದುಕಿನ ಒಂದು ಕ್ರಮವನ್ನು ಅವರ ಭೂತಕಾಲದ ದೃಷ್ಟಿಯಿಂದ ನೋಡಿ ಅದು ಪೂರ್ತಿಯಾಗಿ ನಾಶವಾಗಿದೆ ಅದರ ಪುನಶ್ಚೇತನ ಅಸಾಧ್ಯ ಎನ್ನುವ ತೀರ್ಮಾನಕ್ಕೆ ಬಂದರು.ಇತಿಹಾಸವನ್ನು ಕುರಿತ ಅವರ ಮೊದಲಿನ ಸರಳರೇಖೆಯ ಪ್ರಗತಿ ದೃಷ್ಟಿಕೋನಕ್ಕೆ ಮಹಾನಗರಗಳು, ಉಪನಗರಗಳು ಸಹಜ ಅಭಿವ್ಯಕ್ತಿಗಳಾಗಿ ಕಾಣುತ್ತಿದ್ದುದರಿಂದ ಅದು ಗ್ರಾಮೀಣ ಬದುಕನ್ನು ಅವರು ತೀವ್ರ ಸಂಶಯದಿಂದ ನೋಡುವಂತೆ ಮಾಡಿತು. ಅಂಬೇಡ್ಕರ್ ನಿಸ್ಸಂದೇಹವಾಗಿ ಒಬ್ಬ ವಸ್ತುನಿಷ್ಠ ಆಧುನಿಕವಾದಿಯಾಗಿದ್ದರು. ಆಧುನಿಕತೆಯ ತೀವ್ರ ಆರಾಧಕರಾಗಿದ್ದ ಅವರನ್ನು ಅದರ ವಸ್ತುನಿಷ್ಠ ಬೆಂಬಲಿಗನಾಗಿ ಮಾಡಿದ್ದು ಬೌದ್ಧ ಧರ್ಮ. ಅವರಿಗೆ ತತ್‌ಕ್ಷಣದ ಮತ್ತು ಘನ ಅನುಭವಗಳು ಮಾತ್ರ ಮುಖ್ಯವಾಗಿದ್ದುವು. ಗಾಂಧೀಜಿಯ ದೃಷ್ಟಿಯಲ್ಲಿ ಭೂತ ಮತ್ತು ವರ್ತಮಾನದ ಅರ್ಥವನ್ನು ಭವಿಷ್ಯವು ರೂಪಿಸಿದರೆ, ಅಂಬೇಡ್ಕರರಿಗೆ ವರ್ತಮಾನ– ಭೂತ ಹಾಗೂ ಭವಿಷ್ಯವನ್ನು ವ್ಯಾಖ್ಯಾನಿಸುತ್ತಿತ್ತು. ಭಿನ್ನ ದೃಷ್ಟಿಕೋನಗಳು ಅವರ ಹಳ್ಳಿಯನ್ನು ಕುರಿತ ಚಿತ್ರವನ್ನು ಬರೆದವು. ಈ ವಿಷಯದಲ್ಲಿ ಅಂಬೇಡ್ಕರ್ ನೆಹರೂಗೆ ಹತ್ತಿರ. ಅಂಬೇಡ್ಕರ್ ಮತ್ತೆ ಮತ್ತೆ ದಲಿತರ ರಾಜಕೀಯ ಸಮಸ್ಯೆಗಳ ಬಗ್ಗೆ ಮಾತನಾಡಿದರೂ, ಗಾಂಧೀಜಿಯ ಜೊತೆಗಿನ ಮುಖಾಮುಖಿ ಅವರನ್ನು ಸಮಸ್ಯೆಯ ಸಾಂಸ್ಕೃತಿಕ ದೃಷ್ಟಿಕೋನಕ್ಕೆ ಗಟ್ಟಿಯಾಗಿ ಅಂಟಿಕೊಳ್ಳುವಂತೆ ಮಾಡಿತು. ಕಮ್ಯುನಿಷ್ಟರೊಂದಿಗಿನ ಅವರ ತೀವ್ರ ಭಿನ್ನಾಭಿಪ್ರಾಯವನ್ನೂ ಇದರೊಂದಿಗೆ ಗುರುತಿಸಬಹುದು. ಹಳ್ಳಿಯನ್ನು ಕುರಿತ ಅಂಬೇಡ್ಕರರ ಅಪನಂಬಿಕೆ ಮಹಾರಾಷ್ಟ್ರದ ಮಹಾರ್ ಜನಾಂಗದವರು ಮುಖ್ಯವಾಹಿನಿ ಹಿಂದೂಗಳ ಜೊತೆಯಲ್ಲಿ ಸೇರಿಕೊಂಡ ಐತಿಹಾಸಿಕ ಅನುಭವದಿಂದ ಹುಟ್ಟಿದ್ದು ಎಂದು ನನಗನ್ನಿಸುತ್ತದೆ. ಭಕ್ತಿ ಚಳವಳಿ ಕೂಡ ಈ ಮಿಲನ ಪ್ರಕ್ರಿಯೆಗೆ ಗೋಚರ ಹಾಗೂ ಅಗೋಚರ ರೂಪದಲ್ಲಿ ಕೊಡುಗೆ ನೀಡಿರುವುದು ತುಂಬ ಆಶ್ಚರ್ಯಕರವಾದದ್ದೇನಲ್ಲ. ಹಳ್ಳಿಯೊಂದಿಗಿನ ಅಂಬೇಡ್ಕರರ ಸಮಸ್ಯಾತ್ಮಕ ಸಂಬಂಧ ಆಳವಾದದ್ದು ಹಾಗೂ ಅನೇಕ ಸಂಕೀರ್ಣ ಆಯಾಮಗಳ ಸ್ವರೂಪದ್ದು. ಉದಾಹರಣೆಗೆ, ಹೋರಾಟದ ಒಂದು ಪ್ರಕಾರವಾಗಿ ಸತ್ಯಾಗ್ರಹ ಪರಿಕಲ್ಪನೆಯೊಂದಿಗೂ ಅಂಬೇಡ್ಕರರ ಸಂಬಂಧ ಸುಲಲಿತವಾದದ್ದಾಗಿರಲಿಲ್ಲ ಎನ್ನುವ ಅಂಶ ನಿಗೂಢ ಸ್ವರೂಪದ್ದಾದರು ಮೇಲಿನ ವಿಷಯಕ್ಕೆ ಸಂಬಂಧಪಟ್ಟದ್ದು. ಭಾರತೀಯ ಹಳ್ಳಿಯಲ್ಲಿ ವಿಧೇಯತೆ ಯಾವಾಗಲೂ ಒಂದು ಗುಣ ಹಾಗೂ ಸಂಪ್ರದಾಯ ಒಪ್ಪುವ ಪ್ರತಿಭಟನೆಯ ಅಧಿಕೃತ ಮಾದರಿಯೆಂದರೆ, ಅಧೀನತೆಯ ಮೂಲಕವೇ ಪ್ರತಿಭಟಿಸುವುದು. ಭಕ್ತಿ ಚಳವಳಿ ಕೂಡ ಇದೇ ಮಾದರಿಯನ್ನು ಪ್ರತಿಪಾದಿಸುತ್ತದೆ. ಭಕ್ತ 'ನಾನು' ಎನ್ನುವುದನ್ನು ತ್ಯಜಿಸಿ ದೇವರಿಗೆ ಸಂಪೂರ್ಣವಾಗಿ ಒಪ್ಪಿಸಿಕೊಳ್ಳುತ್ತಾನೆ. ಹೀಗೆ ಶೂನ್ಯ ಸ್ಥಿತಿಗೆ ತಂದುಕೊಳ್ಳುವ ಮೂಲಕವೇ ಅವನ/ಅವಳ ಸ್ವಾತಂತ್ರ್ಯದ ಅಂತಿಮ ಸ್ಥಿತಿಯನ್ನು ಪಡೆಯುತ್ತಾರೆ. ಅನುಭಾವದ ದೃಷ್ಟಿಯಿಂದ ಇದೊಂದು ಸಂಪೂರ್ಣವಾಗಿ ಭಿನ್ನ ದೃಷ್ಟಿಕೋನದ ಪ್ರತಿಭಟನೆ ಹಾಗೂ ಬಂಡಾಯ. ಗಾಂಧಿಯವರ ಆದರ್ಶದ ದೃಷ್ಟಿಕೋನದ ಪ್ರತಿಭಟನೆ ಹಾಗೂ ಬಂಡಾಯ. ಗಾಂಧಿಯವರ ಆದರ್ಶದ ಭಂಗಿಯ ಕಲ್ಪನೆ ಕೂಡ ಈ ಕಮ್ಮಟದಲ್ಲೇ ಬಡಿದು ತಯಾರಾದದ್ದು. ಸಮಾಜವಾದ ಸಮಕಾಲೀನ ವಿಚಾರಗಳಿಂದ ರೂಪುಗೊಂಡ ಆಧುನಿಕ ಮನಸ್ಸಿಗೆ ಇದನ್ನು ಒಪ್ಪಲು ಅನೇಕ ಸಮಸ್ಯೆಗಳು ಎದುರಾಗುತ್ತವೆ. ಅಂಬೇಡ್ಕರರ ಮಟ್ಟಿಗೆ ಇದು ಬಹುಪಾಲು ತಿರಸ್ಕಾರಾರ್ಹ. ಸತ್ಯಾಗ್ರಹ ಕೂಡ ಈ ಮೂಲ ವಿಚಾರದ ಕಲ್ಪನೆಯ ಭಟ್ಟಿಯಾಗಿದೆ.

ವಿರೋಧಿಗಳಿಗೆ ಸತ್ಯವನ್ನು ಗ್ರಹಿಸಲು ನಿರಂತರವಾಗಿ ಒತ್ತಾಯಿಸುವುದು ಕೂಡ ಈ ವಿಧಾನದ ಮೂಲ ಅಂಗ. ಶತ್ರು ಹೊರಗಿನವನಲ್ಲ, ಬೇರೆಯಲ್ಲ, ತನ್ನದೇ ವಿರೂಪಗೊಂಡ ವ್ಯಕ್ತಿತ್ವ ಎನ್ನುವ ವಿಭಜಿತ ಮನುಷ್ಯ ಪರಿಕಲ್ಪನೆ ಇದರ ಮೂಲ. ಈ ಅಂಶ ದಲಿತರ ಮೇಲೆ ನಡೆಯುತ್ತಿರುವ ಹಲ್ಲೆಗಳನ್ನು ನಿಭಾಯಿಸುವ ತಕ್ಷಣದ ಹಾಗೂ ದೂರಗಾಮಿ ವಿಧಾನಗಳ ಪ್ರಶ್ನೆಯೆಡೆಗೆ ನಮ್ಮನ್ನು ತರುತ್ತದೆ. ಈ ಸಮಸ್ಯೆಯನ್ನು ಎದುರಿಸುವ ಅಂಬೇಡ್ಕರ್ ಮಾದರಿ ವಿದ್ಯಾಭ್ಯಾಸ, ಸಂಘಟನೆ ಹಾಗೂ ಚಳವಳಿಗೆ ಹೆಚ್ಚು ಒತ್ತು ನೀಡಿತು. ಮತ್ತು ಇದು ದಲಿತ ಚಳವಳಿಯ ದೃಷ್ಟಿಯಿಂದ ಪವಾಡಗಳನ್ನೇ ಮಾಡಿತು. ಸಮಾಜದ ದುರ್ಬಲ ವರ್ಗಗಳ ಮೇಲೆ ನಡೆಯುವ ಹಲ್ಲೆಗಳನ್ನು ತಡೆಗಟ್ಟುವಲ್ಲಿ ಇದು ಮಹತ್ವದ ಪಾತ್ರ ವಹಿಸಿತು. ದಲಿತ ಸಮಾಜದ ಮೇಲೆ ಈ ಮಾದರಿಯ ಪ್ರಭಾವದ ಸೂಕ್ಷ್ಮ ವಿಶ್ಲೇಷಣೆಯನ್ನು ಈಗ ಮಾಡಬಹುದು.

ಆಕರ: The flaming feet -Dr. D.R.Nagaraj, ಉರಿ ಚಮ್ಮಾಳಿಗೆ –ಅನು: ಡಾ.ಎಂ.ಎಸ್.ಆಶಾದೇವಿ.

**ಲೇಖಕರ ಪರಿಚಯ**

**ಡಾ. ಡಿ.ಎಸ್. ನಾಗಭೂಷಣ (೧೯೫೨–):** ಬೆಂಗಳೂರಿನ ದಾಬಸ್‌ಪೇಟೆಯ ಹತ್ತಿರದ ತಿಮ್ಮಸಂದ್ರದಲ್ಲಿ ಜನನ. ಇಂದಿಗೆ ಬೇಕಾದ ಗಾಂಧಿ, ಲೋಹಿಯಾ ಜೊತೆಯಲ್ಲಿ, ರೂಪರೂಪಗಳನು ದಾಟಿ, ಗಾಂಧಿ ಕಥನ, ಕಾಲಕ್ರಮ, ನಮ್ಮ ಶಾಮಣ್ಣ, ಸಮಾಜವಾದದ ಸಾಲುದೀಪ, ಕುವೆಂಪು ಸಾಹಿತ್ಯ ದರ್ಶನ, ಕನ್ನಡದ ಮನಸ್ಸು ಮೊದಲಾದುವು ಇವರ ಕೃತಿಗಳು.

**ಡಿ.ಆರ್. ನಾಗರಾಜ (೧೯೫೪–೧೯೯೮):** ಕನ್ನಡ, ಸಂಸ್ಕೃತ, ಇಂಗ್ಲಿಶ್ ಮೂರೂ ಭಾಷೆಗಳನ್ನು ತಿಳಿದಿದ್ದ ಇವರೊಬ್ಬ ಪ್ರಖರ ವಸಾಹತೋತ್ತರ ಚಿಂತಕ ಮತ್ತು ವಾಗ್ಮಿಯಾಗಿದ್ದವರು. ಬೆಂಗಳೂರು ವಿವಿಯ ಕನ್ನಡ ಅಧ್ಯಯನ ಕೇಂದ್ರದಲ್ಲಿ ಅಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಬಂಡಾಯ ಸಾಹಿತ್ಯ ಸಂಘಟನೆ, ಸಮುದಾಯ ಸಂಘಟನೆಗಳ ಜೊತೆ ಇದ್ದವರು. ಅಮೃತ ಮತ್ತು ಗರುಡ, ಶಕ್ತಿಶಾರದೆಯ ಮೇಳ, ನಾಗಾರ್ಜುನ, ಸಾಹಿತ್ಯ ಕಥನ, ಸಂಸ್ಕೃತಿ ಕಥನ, ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ, ದಾ.ರ. ಶಿಖೊ, ದಾರು ಪ್ರತಿಮಾ ನಾ ಪೂಜಿವೆ ಇವರ ವಿಮರ್ಶಾ ಕೃತಿಗಳು. ದಿ ಫ್ಲೇಮಿಂಗ್ ಫ್ಲೀಟ್, ರಿಕ್ರಿಯೇಟಿಂಗ್ ಈಚ್ ಅದರ್, ಶಿವಾಸ್ ಫ್ಲೈಟ್ ಇವರ ಇಂಗ್ಲಿಶ್ ಕೃತಿಗಳು. ಇಮೇಜಸ್ ಆಫ್ ಇಂಡಿಯ, ವೈಭವ, ಉರ್ದು ಸಾಹಿತ್ಯ ಇವರ ಸಂಪಾದಿತ ಕೃತಿಗಳು. ವಸಂತಸ್ಮೃತಿ: ಸೂಫಿ ಪ್ರೇಮಕಾವ್ಯ ಇವರ ಅನುವಾದಿತ ಕೃತಿ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ ಹಾಗೂ ಆರ್ಯಭಟ ಪ್ರಶಸ್ತಿಗಳಿಗೆ ಇವರು ಭಾಜನರಾಗಿದ್ದಾರೆ.

**ಎಂ. ಎಸ್. ಆಶಾದೇವಿ (೧೯೬೬–):** ಸ್ತ್ರೀವಾದಿ ಚಿಂತಕಿ, ಅಂಕಣಕಾರ್ತಿ ಮತ್ತು ವಿಮರ್ಶಕಿಯಾದ ಇವರು ಸದ್ಯ ಮಹಾರಾಣಿ ಕ್ಲಸ್ಟರ್ ವಿವಿಯಲ್ಲಿ ಕನ್ನಡ ಸಹಪ್ರಾಧ್ಯಾಪಕಿಯಾಗಿದ್ದಾರೆ. ಸ್ತ್ರೀಮತವನುತ್ತರಿಸಲಾಗದೆ, ವಚನ ಪ್ರವೇಶ, ನಡುವೆ ಸುಳಿವಾತ್ಮ, ಬೆಳಕಿಗಿಂತ ಬೆಳ್ಳಗೆ ಇವರ ಕೃತಿಗಳು. ಹುದುಗಲಾರದ ದುಃಖ, ಭಾರತದ ಬಂಗಾರ ಪಿ.ಟಿ. ಉಷಾ, ಉರಿ ಚಮ್ಮಾಳಿಗೆ ಇವರ ಅನುವಾದಿತ ಕೃತಿಗಳು. ಇವರಿಗೆ ಎಂ. ಕೆ. ಇಂದಿರಾ ಪ್ರಶಸ್ತಿ, ಇನ್ಫೋಸಿಸ್ ಪ್ರಶಸ್ತಿ, ಸಾಹಿತ್ಯಶ್ರೀ ಪ್ರಶಸ್ತಿ, ಬಿ.ಸರೋಜಾದೇವಿ ಪ್ರಶಸ್ತಿ, ವಿ.ಎಂ. ಇನಾಂದಾರ್ ವಿಮರ್ಶಾ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಜಿ. ಎಸ್. ಎಸ್. ಸಾಹಿತ್ಯ ಪ್ರಶಸ್ತಿಗಳು ಸಂದಿವೆ.

**ಟಿಪ್ಪಣಿ/ಪದಕೋಶ**

**ನಗರೀಕರಣ=** ವಿಫುಲ ಅವಕಾಶಗಳು ಉಳ್ಳ ನಗರಗಳು ಹೆಚ್ಚಾಗುವ ಪ್ರಕ್ರಿಯೆ. **ಯುಟೋಪಿಯನ್=** ಆದರ್ಶ ರಾಜ್ಯ ಅಥವಾ ರಾಮರಾಜ್ಯ ಎನ್ನುವ ಕಲ್ಪನೆ. ಸರ್ ಥಾಮಸ್ ಮೋರ್ ಎಂಬುವವರು ೧೫೧೬ ರಲ್ಲಿ ಯುಟೋಪಿಯಾ ಎಂಬ ಪುಸ್ತಕವನ್ನು ಬರೆದಿದ್ದಾರೆ. ಉತ್ತಮ ನಡವಳಿಕೆಯುಳ್ಳ ಸಮುದಾಯಗಳು ಇರುವಂತಹ ಪ್ರದೇಶ. ಸುಶಿಕ್ಷಿತ ನಾಗರಿಕ ಸಮಾಜ ಎಂಬ ಕಲ್ಪನೆ. **ಸಮಾಜವಾದ=** ಒಂದು ರಾಜಕೀಯ ಸಿದ್ಧಾಂತ. ಜನರ ಹಿತಕ್ಕಾಗಿ ಕಾರ್ಮಿಕರೆ ಉತ್ಪಾದನೆ ಮತ್ತು ವಿತರಣೆ ಮಾಡುವ ವ್ಯವಸ್ಥೆ. ಸಮಸಮಾಜದ ನಿರ್ಮಾಣ ಇದರ ಉದ್ದೇಶ. ಜರ್ಮನಿಯ ಕಾರ್ಲ್‌ಮಾರ್ಕ್ಸ್ ಇದರ ಪ್ರತಿಪಾದಕರು. **ಸಮಕಾಲೀನ=** ಪ್ರಸಕ್ತ ಕಾಲ. ವರ್ತಮಾನಕ್ಕೆ ಸಂಬಂಧಿಸಿದ. **ಸತ್ಯಾಗ್ರಹ=** ಸತ್ಯಕ್ಕಾಗಿ ಚಳುವಳಿಯ ಮೂಲಕ ಆಗ್ರಹಿಸುವುದು. ಅನ್ನ ನೀರು ಸ್ವೀಕರಿಸದ ಉಪವಾಸವನ್ನು ತೀವ್ರತರವಾದ ಮೌನವನ್ನು ಸತ್ಯಾಗ್ರಹ ಎಂದು ಗುರುತಿಸುತ್ತಾರೆ. ಧರಣಿ ಮುಷ್ಕರವನ್ನು ಆಧುನಿಕ ರೂಪದಲ್ಲಿ ಸತ್ಯಾಗ್ರಹ ಎಂದು ಕರೆಯಬಹುದು.

**ಶಾಂತಿನಿಕೇತನ=** ಪಶ್ಚಿಮ ಬಂಗಾಳದ ಬರ್ಭಮ್ ಜಿಲ್ಲೆಯ ಕೊಲ್ಲತ್ತಾ ನಗರದಲ್ಲಿ ರವೀಂದ್ರನಾಥ ಟ್ಯಾಗೋರ್ ಅವರು ೫೮ ಕಿ.ಮೀ ವಿಸ್ತೀರ್ಣದಲ್ಲಿ ಕಟ್ಟಿದ ಶಾಲೆ. **ಅಸಹಕಾರ= ಸರ್ಕಾರದ** ನಿಯಮ ನಿಲುವುಗಳನ್ನು ಅಹಿಂಸಾತ್ಮಕವಾಗಿ ಎದುರಿಸುವ ಚಲನೆ. **ಮೌಢ್ಯ=** ಮೂಢನಂಬಿಕೆ. **ನೇತ್ಯಾತ್ಮಕತೆ=** ವಿರುದ್ಧವಾದ ಆಲೋಚನೆ. **ಜನಾಂಗದ್ವೇಷ=** ನಿರ್ದಿಷ್ಟ ಕಾರಣಗಳಿಂದ ಮನುಷ್ಯ ಕುಲವನ್ನು ದ್ವೇಷಿಸುವುದು. ಉದಾ; ಹಿಟ್ಲರ್ ಯಹೂದಿಗಳನ್ನು ದ್ವೇಷಿಸಿದ್ದು. **ಹುತಾತ್ಮ=** ನಾಡಿನ, ಸಮಾಜದ ಹಿತಕ್ಕಾಗಿ ಬಲಿದಾನ. **ವಸ್ತ್ರ ದಹನ=** ವಿದೇಶಿ ವಸ್ತ್ರಗಳನ್ನು ಅಸಕಾರ ಚಳುವಳಿಯ ಭಾಗವಾಗಿ ಸುಟ್ಟು ಹಾಕುವುದು.

**ಅಭ್ಯಾಸ ಪ್ರಶ್ನೆಗಳು**

1. ಗಾಂಧೀಜಿಯವರ ರಾಷ್ಟ್ರೀಯತೆಯ ಕಲ್ಪನೆ ಬ್ರಿಟೀಷರನ್ನು ದ್ವೇಷಿಸುವುದೇ ಆಗಿತ್ತೆ ಎಂಬುದನ್ನು ವಿವರಿಸಿ?

2. ಗಾಂಧೀಜಿಯವರ ವಸ್ತ್ರದಹನ ಹಾಗೂ ಅಸಹಕಾರ ಚಳುವಳಿಯ ಹಿಂದಿನ ಉದ್ದೇಶವೇನು?
3. ಟ್ಯಾಗೋರ್ ಅವರು ಗಾಂಧೀಜಿಯವರ ಅಸಹಕಾರ ಹಾಗೂ ವಸ್ತ್ರದಹನ ಚಳವಳಿಯನ್ನು ವಿರೋಧಿಸಲು ಕಾರಣಗಳೇನು? ಆ ಬಗ್ಗೆ ನಿಮ್ಮ ನಿಲುವೇನು? ವಿವರಿಸಿ.
4. ಕವಿ ಹೃದಯವನ್ನು ಚಳುವಳಿಗಾರನ ಹೃದಯವನ್ನಾಗಿ ಪರಿವರ್ತಿಸಲು ಗಾಂಧೀಜಿಯವರು ಮಾಡಿದ ಪ್ರಯತ್ನವೇನು? ವಿವರಿಸಿ.
5. ದೇಶದ ಜನತೆಯ ಕೈಗೆ ಕೆಲಸ ಹಾಗೂ ಹೊಟ್ಟೆಗೆ ಅನ್ನ ನೀಡಲು ಏನು ಮಾಡಬೇಕೆಂದು ಗಾಂಧಿ ಬಯಸಿದ್ದರು? ಆ ಬಗ್ಗೆ ನಿಮ್ಮ ಅಭಿಪ್ರಾಯವೇನು?

**ಭಾಷಾಭ್ಯಾಸ/ಚಟುವಟಿಕೆಗಳು**

1. ಮೈಸೂರು ವಿಶ್ವವಿದ್ಯಾಲಯದ ಮಾನಸಗಂಗೋತ್ರಿ ಆವರಣದಲ್ಲಿರುವ ಸಾಬರಮತಿ ಆಶ್ರಮದ ಸ್ವರೂಪದಲ್ಲಿರುವ ಗಾಂಧೀ ಅಧ್ಯಯನ ಕೇಂದ್ರಕ್ಕೆ ವಿದ್ಯಾರ್ಥಿಗಳೊಂದಿಗೆ ಭೇಟಿ ನೀಡುವುದು. ಸಮೀಪದ ಗಾಂಧಿ ಅಧ್ಯಯನ ಕೇಂದ್ರಗಳಿಗೂ ಭೇಟಿ ನೀಡಿ ವರದಿ ಸಲ್ಲಿಸುವುದು.
2. ಗಾಂಧಿ ಕುರಿತ ರೇಡಿಯೋ ಹಾಗೂ ವೀಡಿಯೋ ಕಾರ್ಯಕ್ರಮಗಳನ್ನು ತರಗತಿಯಲ್ಲಿ ಪ್ರಸ್ತುತಪಡಿಸುವುದು. ಸಾಕ್ಷ್ಯಚಿತ್ರ ಪ್ರದರ್ಶನ ಏರ್ಪಡಿಸುವುದು.
3. ಗಾಂಧಿ ಕುರಿತು ಬಂದಿರುವ ಲೇಖನಗಳು, ಕವಿತೆಗಳನ್ನು ಕುರಿತು ತರಗತಿಯಲ್ಲಿ ಚರ್ಚಿಸಿ ಸಂವಾದ ನಡೆಸಲು ಅವಕಾಶ ಕಲ್ಪಿಸುವುದು.
4. ಹವ್ಯಾಸಿ ಕಲಾತಂಡಗಳ ಗಾಂಧೀ ಕುರಿತ ನಾಟಕ ಪ್ರದರ್ಶಗಳನ್ನು ನೋಡಲು ಪ್ರೋತ್ಸಾಹಿಸುವುದು.
5. ಗಾಂಧಿ ಕುರಿತು ಸಣ್ಣ ಸ್ಕಿಟ್‌ಗಳನ್ನು ತಾವೇ ಸಿದ್ಧಪಡಿಸಿ ಪ್ರದರ್ಶಿಸಲು ಪ್ರೋತ್ಸಾಹಿಸುವುದು.

**ಹೆಚ್ಚಿನ ಪರಾಮರ್ಶನಕ್ಕಾಗಿ**


1. ಗಾಂಧಿ ಕಥನ (ಜೀವನ ಚರಿತ್ರೆ): ಡಿ.ಎಸ್. ನಾಗಭೂಷಣ್, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು.
2. ಮೋ.ಕ ಗಾಂಧೀ ಆತ್ಮ ಕಥೆ ಅಥವಾ ನನ್ನ ಸತ್ಯಾನ್ವೇಷಣೆ, ಭಾಷಾಂತರ: ಗೊರೂರು ರಾಮಸ್ವಾಮಿ ಅಯ್ಯಂಗಾರ್, ನವಜೀವನ ಪ್ರಕಾಶನ ಮಂದಿರ, ಅಹಮದಾಬಾದ್.
3. ಗಾಂಧಿ ಬಂದ: ಎಚ್. ನಾಗವೇಣಿ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ.
4. ರವೀಂದ್ರನಾಥ ಟ್ಯಾಗೋರ್ ಅವರ ಸಾಧನೆ –ಅನು: ಮಹಿಪಾಲ ದೇಸಾಯಿ, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.


## ಅಧ್ಯಾಯ 3.2

**ಪಠ್ಯ** **ಸಮಕಾಲೀನ ಸವಾಲುಗಳು**

**ಕೆ.ಪಿ. ಪೂರ್ಣಚಂದ್ರ ತೇಜಸ್ವಿ**

**ಪ್ರವೇಶಿಕೆ**

ನಮ್ಮ ಸಾಂಪ್ರದಾಯಿಕ ಸಮಾಜದಲ್ಲಿ ಹಲವು ಬಗೆಯ ಅಸಮಾನತೆಗಳು ಇವೆ. ಆದರೆ ಸಾಂಪ್ರದಾಯಿಕ ಅಸಮಾನತೆಗಳಿಂದ ಬಿಡುಗಡೆ ನೀಡುವ ಸಾಧ್ಯತೆಗಳಾಗಿ ಮೆಲ್ನೋಟಕ್ಕೆ ಕಾಣುವ ಮುಕ್ತ ಮಾರುಕಟ್ಟೆ, ಖಾಸಗೀಕರಣ, ಉದಾರೀಕರಣ ಇವು ನಮ್ಮ ಸಮಾಜವನ್ನು ಇನ್ನಷ್ಟು ಆರ್ಥಿಕ ಅಸಮಾನತೆಗೆ ದೂಡುತ್ತಿವೆ. ಇವುಗಳಿಗೆ ಪರೋಕ್ಷವಾಗಿ ಸಮಾಜ ಹೊಂದಿಕೊಳ್ಳುವ ಒತ್ತಡ ಕೂಡ ನಿರಂತರ ನಮ್ಮ ಮೇಲೆ ಹೆಚ್ಚಾಗುತ್ತಲೆ ಇದೆ. ನಮ್ಮ ಸಮಾಜದ ಮಧ್ಯಮ ಮತ್ತು ಕೆಳಮಧ್ಯಮ ಹಾಗೂ ಬಡವರ್ಗದ ಜನರ ಸಂಕಷ್ಟಗಳು ಹೆಚ್ಚಾಗುತ್ತಲೆ ಇವೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳನ್ನು ಚಿಂತನೆಗೆ ಹಚ್ಚುವ ಮತ್ತು ನಮ್ಮ ಸಮಾಜವನ್ನು ಸಮಾನ ನೆಲೆಗೆ ಒಯ್ಯುವಲ್ಲಿ ನಮ್ಮ ಪಾತ್ರವೇನು ಎಂದು ಅವರು ಕಾರ್ಯಪ್ರವೃತ್ತಗೊಳಿಸುವ ದೃಷ್ಟಿಯಲ್ಲಿ ಈ ಪಠ್ಯವನ್ನು ಓದಿಗೆ ಇರಿಸಲಾಗಿದೆ. ಭಾಷಾ ಕೌಶಲ ಮತ್ತು ಸಾಮರ್ಥ್ಯಗಳ ಜೊತೆಗೆ ಚಿಂತನಶೀಲತೆಯನ್ನು ಒದಗಿಸುವುದು ಕೂಡ ಇಲ್ಲಿನ ಉದ್ದೇಶ.

ಪ್ರಾದೇಶಿಕತೆ ಮತ್ತು ಜಾಗತಿಕತೆಗಳು ಎಲ್ಲ ನಾಗರಿಕತೆಗಳ ಒಳಗೂ ಅಂತರ್ಗತ ಮತ್ತು ಆನುಷಂಗಿಕ ಎಂದೇ ಅನ್ನಿಸುತ್ತದೆ. ಜಾಗತೀಕರಣ ಎನ್ನುವುದು ಯುರೋಪಿನ ಬಿಳಿಯ ಜನಾಂಗದ ಕುತಂತ್ರದ ಸೃಷ್ಟಿ ಎನ್ನುವ ವಾದವು ಭಾರತದಲ್ಲಿ ಸಂಭವಿಸುವ ಪ್ರತಿಯೊಂದು ದುರ್ಘಟನೆಗಳಿಗು ಮುಸ್ಲಿಮರು, ಐ.ಎಸ್.ಐ. ಮತ್ತು ಪಾಕೀಸ್ಥಾನ ಕಾರಣ ಎಂದು ದೂರುವ ಹಿಂದೂ ಮೂಲಭೂತವಾದಿಗಳ ಧೋರಣೆಯನ್ನೇ ಹೋಲುತ್ತದೆ. ಜಾಗತೀಕರಣದ ಸಂದರ್ಭವನ್ನು ಸ್ವಾಭಾವಿಕವಾಗಿಯೇ ಮುಂದುವರಿದ ರಾಷ್ಟ್ರಗಳು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳಲು ಯತ್ನಿಸುತ್ತಿವೆ. ಒಂದು ಕಾಲಕ್ಕೆ ಆಗ್ನೇಯ ಏಷ್ಯಾ,

ಫಿಲಿಪೀನ್ಸ್, ಬಾಲಿ ದ್ವೀಪದವರೆಗೆ ವಿಸ್ತರಿಸಿದ್ದ ಭಾರತೀಯ ನಾಗರೀಕತೆ, ಇಡೀ ಯುರೋಪ್‌ವರೆಗೆ ವಿಸ್ತರಿಸಿದ್ದ ಗೀಕ್ರ್ ಮತ್ತು ರೋಮನ್ ನಾಗರೀಕತೆ, ದಕ್ಷಿಣ ಅಮೆರಿಕದ ಪೆರು, ಚಿಲಿ, ಬೊಲಿವಿಯಾವರೆಗೆ ವಿಸ್ತರಿಸಿದ್ದ ಈಜಿಪ್ಸಿಯನ್ ನಾಗರೀಕತೆ ಇತ್ಯಾದಿ ಚಾರಿತ್ರಿಕ ವಾಸ್ತವಗಳನ್ನು ಗಮನಿಸಿದಾಗ ಜಾಗತೀಕರಣ ಎಲ್ಲ ನಾಗರೀಕತೆಗಳಲ್ಲೂ ಇದ್ದದ್ದೆ ಎನ್ನುವುದನ್ನು ಅಲ್ಲಗಳೆಯುವುದು ಕಷ್ಟ.

ಸಮಕಾಲೀನ ಬೆಳವಣಿಗೆಗಳಾದ ಆರ್ಥಿಕ ಉದಾರೀಕರಣ, ಮುಕ್ತ ಮಾರುಕಟ್ಟೆ, ಖಾಸಗೀಕರಣಗಳು ನಮ್ಮ ಜೀವನ ಮೌಲ್ಯಗಳ ಮೇಲೆ ಪರಿಣಾಮ ಬೀರಿಯೆ ಬೀರುತ್ತವೆ. ಈ ಚಾರಿತ್ರಿಕ ತಿರುವಿಗೂ ಸೋವಿಯತ್ ಸಾಮ್ರಾಜ್ಯದ ಪತನವೇ ನಾಂದಿ ಎನ್ನಬಹುದು. ಸ್ವಾತಂತ್ರ್ಯಾನಂತರ ನಾವು ಆರಾಧಿಸಿಕೊಂಡು ಬಂದ ಅನೇಕ ಸಮಾಜವಾದಿ ಮೌಲ್ಯಗಳು ಸಮರ್ಪಕವಾದುವಲ್ಲ ಎಂದು ಚರಿತ್ರೆ ತೋರಿಸಿಕೊಟ್ಟಿದೆ. ಬಡತನ ಹೆಚ್ಚಿದಂತೆ ತಮ್ಮ ಸಮಾನ ಸಂಕಷ್ಟಗಳಿಂದಾಗಿ ಶೋಷಿತರೆಲ್ಲಾ ಒಟ್ಟಾಗುತ್ತಾ ಜಗತ್ತು ಜಾಗತಿಕ ಕ್ರಾಂತಿಯತ್ತ ನಡೆಯುತ್ತದೆ ಎನ್ನುವ ಸಮತಾವಾದದ ಬುನಾದಿಯೆ ಆಂತರಿಕವಾಗಿ ಮತ್ತು ಅಂತರ್ರಾಷ್ಟ್ರೀಯವಾಗಿ ಸುಳ್ಳಾಯ್ತು. ಬಡತನ ಹೆಚ್ಚಿದಂತೆ ಬಡವರು ಹೆಚ್ಚಿನ ದುರಾಸೆಯವರೂ ತಮ್ಮ ಸಹೋದ್ಯೋಗಿಗಳಿಗೆ ದ್ರೋಹ ಬಗೆಯುವವರೂ ಆದರೇ ಹೊರತು ಜಾಗತಿಕ ಕ್ರಾಂತಿಗಾಗಿ ಒಟ್ಟಾಗುವವರಂತೂ ಆಗಲಿಲ್ಲ ಎನ್ನುವದು ಭಾರತದಲ್ಲಿ ತಲೆ ಎತ್ತಿದ ನೂರಾರು ಕಾರ್ಮಿಕ ಸಂಘಟನೆಗಳ ವರ್ತನೆಯಿಂದ ವೇದ್ಯವಾಗುತ್ತದೆ. ಅಂತರಾಷ್ಟ್ರೀಯ ಮಟ್ಟದಲ್ಲೂ ಇದೇ ದುಃಸ್ಥಿತಿಯನ್ನು ನಾವು ನೋಡಬಹುದು. ಮುಂದುವರಿದ ರಾಷ್ಟ್ರಗಳು ಕಾಮನ್ ಮಾರ್ಕೆಟ್‌ಗಳನ್ನೂ ಯೂರೋಡಾಲರ್‌ಗಳನ್ನೂ ಸೃಷ್ಟಿಸುತ್ತಾ ಒಟ್ಟಾಗುತ್ತಿದ್ದರೆ ಬಡ ರಾಷ್ಟ್ರಗಳೆಲ್ಲಾ ಧರ್ಮದ ಹೆಸರಿನಲ್ಲಿ, ಇಲ್ಲವೇ ಜನಾಂಗಗಳ ಹೆಸರಿನಲ್ಲಿ ಪರಸ್ಪರ ಯುದ್ಧ ಮಾಡುತ್ತಾ ಮುಂದುವರಿದ ರಾಷ್ಟ್ರಗಳ ಆಯುಧ ತಯಾರಕರಿಗೆ ಖಾಯಂ ಗಿರಾಕಿಗಳಾಗಿದ್ದಾರೆ.

ಆರ್ಥಿಕ ಉದಾರೀಕರಣದ ಸನ್ನಿವೇಶದಲ್ಲಿ ಸಂಭವಿಸುತ್ತಿರುವ ಮಹತ್ವದ ಬದಲಾವಣೆ ಎಂದರೆ ಹಣ, ಲಾಭ ಮತ್ತು ಶ್ರೀಮಂತಿಕೆಯ ಬಗ್ಗೆ ನಮಗಿದ್ದ ಪೂರ್ವಗ್ರಹಗಳು ಬದಲಾಗುತ್ತಾ ಇರುವುದು. ಸಮಾಜವಾದಿ ಪರಿಸರದಲ್ಲಿ ರೂಪುಗೊಂಡ ಮನಸ್ಸುಗಳು ಹಣ ಮತ್ತು ಲಾಭ ಎಂದೊಡನೆ, ದುರಾಸೆ, ಶೋಷಣೆ, ಅಮಾನವೀಯತೆ ಮೊದಲಾದುವುಗಳನ್ನು ಆರೋಪಿಸುತ್ತಿದ್ದುವು. ಆದರೆ ಈಗ ಮುಕ್ತಮಾರುಕಟ್ಟೆಯ ಪರಿಸರ ಹಣದ ಬಗ್ಗೆಯ ಧೋರಣೆಯನ್ನು ಸಾಮಾಜಿಕವಾಗಿ ಬದಲಿಸುತ್ತಿದೆ. ಹಣ ಮತ್ತು ಲಾಭ ಇತ್ಯಾದಿಗಳು ಬುದ್ದಿವಂತಿಕೆಯ, ಕಷ್ಟಪಟ್ಟ ಶ್ರಮದ ದುಡಿಮೆಯ, ಕಾರ್ಯಕ್ಷಮತೆಯ, ಸಮಯ ಪ್ರಜ್ಞೆಯ ಸಂಕೇತವಾಗುತ್ತಿವೆ. ಮೊದಲೆಲ್ಲಾ ದುಂದುವೆಚ್ಚವೆಂದು ತಿರಸ್ಕರಿಸುತ್ತಿದ್ದ ಗ್ರಾಹಕ ಸಂಸ್ಕೃತಿಯನ್ನು ಇಂದು ಸರ್ಕಾರ ಸಹ ಪ್ರೋತ್ಸಾಹಿಸುತ್ತಿದೆ. ತರುಣ ಪೀಳಿಗೆಯ ಲಕ್ಷಾಂತರ ಮಂದಿಗೆ ಉದ್ಯೋಗ ಕಲ್ಪಿಸಲು, ಆರ್ಥಿಕ ಬೆಳವಣಿಗೆಯನ್ನು ಮುನ್ನಡೆಸಲು ಒಂದು ಕಾಲದ ಐಷಾರಾಮದ ಭೋಗವಸ್ತುಗಳೆಂದು ಪರಿಗಣಿಸಿದ್ದ ಫೋನು, ಸ್ಕೂಟರು, ಫ್ರಿಜ್, ಫ್ಯಾನು, ಇವೆಲ್ಲ ಇಂದು ಅತ್ಯಗತ್ಯ ಜೀವನಾವಶ್ಯಕ ವಸ್ತುಗಳಾಗಿ ರೂಪುಗೊಳ್ಳುತ್ತಿವೆ.

ಇವನ್ನೆಲ್ಲ ನಾನು ಸ್ವಾಗತಿಸುತ್ತಲೂ ಇಲ್ಲ. ತಿರಸ್ಕರಿಸುತ್ತಲೂ ಇಲ್ಲ. ನನ್ನ ಕಣ್ಣೆದುರು ರೂಪುಗೊಳ್ಳುತ್ತಿರುವ ಹೊಸ ಭಾರತವನ್ನು ವಸ್ತುನಿಷ್ಠವಾಗಿ ನೋಡಲು ಪ್ರಯತ್ನಿಸುತ್ತಿದ್ದೇನೆ. ಬದಲಾಗುತ್ತಿರುವ ಮೌಲ್ಯಗಳ ಸ್ವರೂಪ ವಿವೇಚನೆ ಮಾಡುತ್ತಿದ್ದೇನಷ್ಟೆ.

ಮುಕ್ತ ಮಾರುಕಟ್ಟೆ ಹೊಸ ಶತಮಾನದ ಸಮಾಜದ ಮೇಲೆ ಪ್ರಭಾವ ಬೀರಿದಂತೆಯೆ ಮೀಸಲಾತಿಯ ಮೇಲೂ ತನ್ನ ಪ್ರಭಾವ ವಿಸ್ತರಿಸುತ್ತಿರುವುದು ಮತ್ತೊಂದು ಮಹತ್ವದ ಅಂಶ. ಜಾತೀಯ ಕಾರಣಗಳಿಂದಲೇ ಹಿಂದುಳಿದಿದ್ದ ಹಿಂದುಳಿದ ವರ್ಗಗಳಿಗೆ, ಪರಿಶಿಷ್ಟ ಜಾತಿ ಪಂಗಡಗಳಿಗೆ ಅಂಬೇಡ್ಕರ್ ಸಂವಿಧಾನದತ್ತವಾಗಿಯೇ ಕೊಡಮಾಡಿದ್ದ ಮೀಸಲಾತಿ ನಿಧಾನವಾಗಿ ಶಿಥಿಲವಾಗುತ್ತಿದೆ. ನಮ್ಮ ರಾಜಕಾರಣಿಗಳೂ, ಬುದ್ಧಿಜೀವಿಗಳೂ ಮುಂಬರಲಿರುವ ಪರಿವರ್ತನೆಗಳ ವಾಸ್ತವಾಂಶವನ್ನು ನಿಷ್ಠೂರ ಪ್ರಾಮಾಣಿಕತೆಯಿಂದ ಹೇಳದೆ ದಲಿತರ, ಶೂದ್ರರ ಕಿವಿಗೆ ಆಪ್ಯಾಯಮಾನವಾಗುವಂತೆ ಪೂಸಿ ಹೊಡೆಯಲು ಮೀಸಲಾತಿ ಶಾಶ್ವತ ಎನ್ನುವ ಭ್ರಮೆ ಮೂಡಿಸುತ್ತಿದ್ದಾರೆ. ಪ್ರತಿ ಸರ್ಕಾರವೂ ಈ ವರ್ಗದವರ ಓಟು ಗಿಟ್ಟಿಸುವ ಸಲುವಾಗಿ ಮೀಸಲಾತಿಯನ್ನು ಇನ್ನಷ್ಟು ವರ್ಷ ಮುಂದುವರಿಸುತ್ತೇವೆಂದು ಆಶ್ವಾಸನೆ ಕೊಡುತ್ತಿವೆ.

ಗ್ಯಾಟ್ ಒಪ್ಪಂದಕ್ಕೆ ಭಾರತ ಸಹಿ ಹಾಕಿದಾಗ ಅದು ಹಿಂದುಳಿದ ರಾಷ್ಟ್ರಗಳಲ್ಲಿ ಖಾಸಗೀಕರಣವನ್ನು ಅನಿವಾರ್ಯಗೊಳಿಸುತ್ತದೆ ಎಂದು ಬಹಳಷ್ಟು ಜನಕ್ಕೆ ಗೊತ್ತಿರಲಿಲ್ಲ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಮಾನತೆಯ ಆಧಾರದ ಮೇಲೆ ಸ್ಪರ್ಧಿಸಲು ಹಿಂದುಳಿದ ರಾಷ್ಟ್ರಗಳು ಒಪ್ಪಿಕೊಂಡಾಗ, ಯಾರು ಬೇಕಾದರೂ ತಮ್ಮ ಸರಕನ್ನು ಎಲ್ಲಿಗೆ ಬೇಕಾದರೂ ರಫ್ತು ಮಾಡಿ ಮಾರಬಹುದೆಂದು ಮುಕ್ತ ಮಾರುಕಟ್ಟೆಯ ಬಾಗಿಲನ್ನು ತೆರೆಯಬೇಕಾದಾಗ, ಅದರಿಂದ ಒದಗಬಹುದಾದ ಅನುಕೂಲಗಳ ಜೊತೆಯೇ ಅನೇಕ ಅನಾನುಕೂಲಗಳನ್ನೂ ನಾವು ಎದುರಿಸಬೇಕಾಗಿದೆ. ಇದರಿಂದ ಮೊದಲು ತೊಂದರೆಗೊಳಗಾಗಿದ್ದು ಗೊಬ್ಬರ, ಕ್ರಿಮಿನಾಶಕ ಔಷಧಿಗಳು, ಬ್ಯಾಂಕ್ ಸಾಲ ಇತ್ಯಾದಿಗಳಲ್ಲೆಲ್ಲಾ ಸಬ್ಸಿಡಿ ಪಡೆಯುತ್ತಿದ್ದ ರೈತ ಮತ್ತು ಮೀಸಲಾತಿ ಸವಲತ್ತುಗಳನ್ನು ಅನುಭವಿಸುತ್ತಿದ್ದ ಹಿಂದುಳಿದ ಮತ್ತು

ಪರಿಶಿಷ್ಟ ವರ್ಗ. ಕೃಷಿರಂಗದ ಪರಿಣಾಮಗಳನ್ನು ವಿವೇಚಿಸುವುದು ಇಲ್ಲಿ ಪ್ರಸ್ತುತವಲ್ಲದ್ದರಿಂದ ಅದನ್ನು ಈಗ ಪ್ರಸ್ತಾಪಿಸುವುದಿಲ್ಲ.

ಮೀಸಲಾತಿಗೂ ಜಾಗತೀಕರಣಕ್ಕೂ ಇರುವ ಸಂಬಂಧ ತುಂಬ ಪರೋಕ್ಷವಾದದ್ದು. ಭಾರತದ ಬಹುಪಾಲು ಸರ್ಕಾರಿ ಉದ್ದಿಮೆಗಳೆಲ್ಲಾ ಭ್ರಷ್ಟಾಚಾರ ಅದಕ್ಷತೆಗಳ ದೆಸೆಯಿಂದ ನಿರಂತರವಾಗಿ ನಷ್ಟದಲ್ಲಿ ನಡೆಯುತ್ತಾ ಇವೆ. ಇವು ಅಂತರರಾಷ್ಟ್ರೀಯ ಮಾರುಕಟ್ಟೆ ಇರಲಿ ಆಂತರಿಕ ಮಾರುಕಟ್ಟೆಯಲ್ಲಿ ಸಹ ಖಾಸಗಿ ಉದ್ದಿಮೆಗಳೊಂದಿಗೆ ಸ್ಪರ್ಧಿಸಲಾರದ ಸ್ಥಿತಿಯಲ್ಲಿದ್ದುವು. ಬದಲಾಗುತ್ತಿರುವ ಜಾಗತಿಕ ಪರಿಸರದಲ್ಲಿ ಭಾರತ ಸಮರ್ಪಕವಾಗಿ ಸ್ಪರ್ಧಿಸಬೇಕೆಂದಾದರೆ ಇವನ್ನೆಲ್ಲಾ ಖಾಸಗೀಕರಣ ಮಾಡದೆ ಅನ್ಯ ಮಾರ್ಗವೇ ಇಲ್ಲದ ಅನಿವಾರ್ಯತೆ ಉದ್ಭವವಾಯ್ತು. ನಿಧಾನವಾಗಿ ಸರ್ಕಾರ ನಿರಂತರ ನಷ್ಟದಲ್ಲಿ ನಡೆಯುತ್ತಾ ಇರುವ ಸರ್ಕಾರಿ ಉದ್ದಿಮೆಗಳನ್ನೆಲ್ಲಾ ಖಾಸಗಿ ವಲಯಕ್ಕೆ ಹಸ್ತಾಂತರಿಸಲಾರಂಭಿಸಿತು. ಸರ್ಕಾರಿ ವಲಯದಲ್ಲಿ ಕೆಲಸಗಳು ಸೃಷ್ಟಿಯಾಗುವುದು ಕಡಿಮೆಯಾಗುತ್ತಾ ಬಂತು. ಮೀಸಲಾತಿಯನ್ನು ಸರ್ಕಾರ ಈಗ ಐದು ವರ್ಷಕ್ಕೆ ವಿಸ್ತರಿಸಿದರೂ ಒಂದೇ ಐವತ್ತು ವರ್ಷಕ್ಕೆ ವಿಸ್ತರಿಸಿದರೂ ಒಂದೇ. ಸರ್ಕಾರಿ ವಲಯದಲ್ಲಿ ಅವಕಾಶಗಳೇ ಕಡಿಮೆಯಾಗತೊಡಗಿವೆ.

ಸರ್ಕಾರ ಬಂಡವಾಳ ಹೂಡಲು ಆಹ್ವಾನಿಸಿದ ಬಹುರಾಷ್ಟ್ರೀಯ ಕಂಪೆನಿಗಳು ಹಾಗೂ ಅನಿವಾಸಿ ಭಾರತೀಯರು ಭಾರತ ಸರ್ಕಾರದ ಕಾರ್ಮಿಕ ನಿಬಂಧನೆಗಳನ್ನೂ ಒಳಗೊಂಡಂತೆ ಅನೇಕ ಕಾನೂನುಗಳು ಉತ್ಪಾದನೆ ಹೆಚ್ಚಿಸಲು, ಗುಣಮಟ್ಟ ಕಾಪಾಡಿಕೊಳ್ಳಲು ಬಹು ದೊಡ್ಡ ತೊಡಕುಗಳಾಗಿವೆ. ಈ ಸಮಾಜವಾದೀ ನಿಬಂಧನೆಗಳನ್ನು ಕಿತ್ತೊಗೆಯದಿದ್ದರೆ ನಾವು ಭಾರತದಲ್ಲಿ ಬಂಡವಾಳ ಹೂಡಲು ಸಾಧ್ಯವೇ ಇಲ್ಲ ಎಂದು ಅವರೆಲ್ಲ ನಿರ್ದಾಕ್ಷಿಣ್ಯ ಕರಾರುಗಳನ್ನು ಮುಂದಿಟ್ಟಿದ್ದಾರೆ. ವಸ್ತುಸ್ಥಿತಿ ಹೀಗಿರಬೇಕಾದರೆ ಇನ್ನು ಮೀಸಲಾತಿಯನ್ನು ಖಾಸಗಿ ರಂಗಕ್ಕೂ ಅನ್ವಯಿಸಬೇಕೆಂಬ ಬೇಡಿಕೆಯನ್ನು ಖಾಸಗಿ ವಲಯ ಒಪ್ಪಲು ಸಾಧ್ಯವೆ! ಜಾಗತಿಕ ಮುಕ್ತ ಮಾರುಕಟ್ಟೆಯಲ್ಲಿ ತಮಗಿದ್ದ ವಿಶೇಷ ಸವಲತ್ತುಗಳನ್ನು ಕೈಬಿಡಬೇಕಾದ ಹಿಂದುಳಿದ ರಾಷ್ಟ್ರಗಳು ಅವನ್ನು ಆಂತರಿಕವಾಗಿಯೂ ಕೈಬಿಡಬೇಕಾದ ಸ್ಥಿತಿ ತಲುಪಿವೆ ಎನ್ನುವುದು ಇಂದಿನ ನಿಷ್ಠುರ ಸತ್ಯ. ದಲಿತರೂ, ಪರಿಶಿಷ್ಟರೂ, ಶೂದ್ರರೂ ಮೀಸಲಾತಿಯ ಶ್ರೀರಕ್ಷೆ ತಮಗೆ ನಿರಂತರವಾಗಿ ದೊರೆಯುತ್ತದೆಂಬ ರಾಜಕಾರಣಿಗಳು ಸೃಷ್ಟಿಸಿರುವ ಭ್ರಾಂತಿಯಿಂದ ಇನ್ನಾದರೂ ಹೊರಬರದಿದ್ದರೆ ಕಮ್ಯುನಿಸ್ಟ್ ದೇಶಗಳು ಮಾಡಿದ ತಪ್ಪನ್ನೇ ನಾವು ಮತ್ತೊಮ್ಮೆ ಪುನರಾವರ್ತನೆ ಮಾಡಿದಂತಾಗುತ್ತದೆ.

ಮೀಸಲಾತಿ ಅನ್ವಯವಾಗುವ ಕ್ಷೇತ್ರಗಳೇ ಕುಗ್ಗುತ್ತಿವೆ ಎನ್ನುವ ಕಾರಣಕ್ಕಾಗಿ ಶೂದ್ರರೂ ದಲಿತರೂ ತಲೆ ಮೇಲೆ ಕೈ ಹೊತ್ತು ಕೂರಬೇಕಾದ ಪ್ರಮೇಯವೇನೂ ನನಗೆ ಕಾಣಿಸುತ್ತಿಲ್ಲ. ಮೀಸಲಾತಿಯಿಂದ ಪ್ರಯೋಜನವಾಗಿಲ್ಲ ಎಂದು ನಾನು ಹೇಳುತ್ತಿಲ್ಲ. ಆದರೆ ಮೀಸಲಾತಿ ಇಲ್ಲದಿದ್ದರೆ ನಾವು ಮುಂದುವರಿಯುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ಯಾವ ಮೀಸಲಾತಿಯ ನೆರವೂ ಇಲ್ಲದೆ ಕೇರಳದ ದಲಿತರಾದ ನಾರಾಯಣ್ ಭಾರತದ ರಾಷ್ಟ್ರಪತಿಯಾಗಿ ಅತ್ಯುನ್ನತ ಹುದ್ದೆಗೇರಲು ಸಾಧ್ಯವಾದರೆ, ಮಲೆನಾಡಿನ ಕುಗ್ರಾಮವೊಂದರಲ್ಲಿ ಹುಟ್ಟಿದ ಶೂದ್ರ ಕುವೆಂಪು ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು, ರಾಮಾಯಣ ದರ್ಶನಂನಂಥ ಸರ್ವಶ್ರೇಷ್ಠ ಕೃತಿಗಳನ್ನು ರಚಿಸಲು ಸಾಧ್ಯವಾಗುವುದಾದರೆ ಶೂದ್ರರೂ ದಲಿತರೂ ಮುಂದುವರಿಯಲು ಮೀಸಲಾತಿಯ ಊರುಗೋಲು ಇಲ್ಲದೆ ಸಾಧ್ಯವಿಲ್ಲ ಎಂದು ನಾವು ತಿಳಿಯುವುದು ನಾಚಿಕೆಗೇಡು. ಪ್ರತಿಭೆಯಲ್ಲಾಗಲೀ ಕಾರ್ಯಶೀಲತೆಯಲ್ಲಾಗಲೀ ಮೇಲುಜಾತಿಯವರಿಗಿಂತ ಶೂದ್ರರೂ ದಲಿತರೂ ಅಕ್ಷರಶಃ ಒಂದು ತೃಣವೂ ಕೀಳಾದವರಲ್ಲವೆಂಬುದು ವಾಸ್ತವ ಮತ್ತು ಸತ್ಯ. ಪಿತೂರಿ, ಕುತಂತ್ರ, ಸ್ವಜಾತಿ ಪಕ್ಷಪಾತಗಳಿಲ್ಲದ ಯಾವುದೇ ಸ್ಪರ್ಧೆಯಲ್ಲೂ ನಾವು ಹಿಂದುಳಿಯುತ್ತೇವೆಂದು ನನಗೆ ಅನ್ನಿಸುತ್ತಿಲ್ಲ. ದೈಹಿಕ ಶ್ರಮ, ಕೈಚಳಕ, ಜೀವನಾನುಭವ ಮುಂತಾದ ಕೆಲವು ವಿಚಾರಗಳಲ್ಲಂತು ಮೇಲ್ವರ್ಗದವರಿಗಿಂತ ಇವರು ಹೆಚ್ಚೇ ಎಂದು ಹೇಳಬಹುದು. ಶೂದ್ರರಿಗೂ ದಲಿತರಿಗೂ ಇರುವ ನಿಜವಾದ ಕೊರತೆ ಎಂದರೆ ಆತ್ಮಗೌರವ ಮತ್ತು ಆತ್ಮವಿಶ್ವಾಸ.

**ಆಕರ :** ವಿಮರ್ಶೆಯ ವಿಮರ್ಶೆ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ. ಪುಸ್ತಕ ಪ್ರಕಾಶನ, 2009.

**ಪೂರಕ ಪಠ್ಯ**

### ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು

**ಡಾ. ಬೆಸಗರಹಳ್ಳಿ ರಾಮಣ್ಣ**

ಪೊಲೀಸ್ ಠಾಣೆಯ ಮುಂದೆ ಜನ ಘೇರಾಯಿಸಿರುವುದನ್ನು ಕಂಡು ಇನ್‌ಸ್ಪೆಕ್ಟರ್‌ಗೆ ತುಂಬ ದಿಗಿಲಾಗಿ ಹೋಯಿತು. ಗಡಿಯಾರ ನೋಡಿಕೊಂಡ. ಸಂಜೆ ಐದೂವರೆ ಆಗಲು ಇನ್ನೂ ಹಲವಾರು ಕ್ಷಣಗಳಿದ್ದುವು. ಇಷ್ಟೊತ್ತಿನಲ್ಲಿ ಹೋಟೆಲ್ ರೈಡ್ ಮಾಡಿದರೆ ಸೂಳೆಯರು ಮತ್ತು ಗಿರಾಕಿಗಳು ಸಿಗುವುದು ಅಪರೂಪ! ಆದರೆ ಈ ಜನ ಏಕೆ? ಯಾವನಾನ ಲಾಕಪ್ಪಿನಲ್ಲಿದ್ದವನು ಪೊಲೀಸಿನವರ ಒದೆಗೆ ನೆಲಕ್ಕೆ ಒರಗಿದನೋ! ಮುಂತಾದ ಅನಿಷ್ಟ ವಿಷಯಗಳನ್ನ ತಲೆಯಲ್ಲಿ ತುಂಬಿಕೊಂಡು ಠಾಣೆಯ ಬಳಿಗೆ ಬಂದಾಗ ಜನ 'ಗುಸ ಗುಸ' ಎನ್ನುತ್ತ ದಾರಿ ಮಾಡಿಕೊಟ್ಟಿತು.

ಒಬ್ಬ ಪಿ.ಸಿ. ಬಂದು ಮಾಮೂಲು ಸೆಲ್ಯೂಟ್ ಹೊಡೆದು ಸೈಕಲ್ ತೆಗೆದುಕೊಂಡ, ಇನ್‌ಸ್ಪೆಕ್ಟರ್: ಯಾಕಷ್ಟು ಜನ" ಎಂದುದಕ್ಕೆ; ಪಿಸಿ, "ಅದೇ ಸಾರ್! ಆ ಕೋತಿ ಆಡಿಸೋನ ನಮ್ಮ ದಫೆದಾರಣ್ಣ ಇಡಕೊಂಡು ಬಂದವನೆ, ಆವನಿಂದ ಆಟ ನೋಡ್ತಾ ಇದ್ದ ಜನವೆಲ್ಲ ಬಂದವೆ, ಇವಕ್ಕೇನು ಕೆಲ್ಸ ಹೇಳಿ ಮಂತೆ?" ಎಂದವನೆ ಒಳ ನಡೆದ.

ಇನ್‌ಸ್ಪೆಕ್ಟರ್‌ಗೆ ತುಂಬ ಆಶ್ಚರವಾಯಿತು. ಈಗ ದೇಶದಲ್ಲಿ ತುರ್ತುಪರಿಸ್ಥಿತಿ ಜಾರಿಯಲ್ಲಿದೆ. ಇಂಥ ಸಮಯದಲ್ಲಿ ಹಗಲು ಕಾಲದಲ್ಲಿ ಜನರ್‍ನೇ ಆರೆಸ್ಟು ಮಾಡುವ ಪರಿಪಾಠಕ್ಕೆ ಬೆಲೆಯಿಲ್ಲ, ಏನಿದ್ದರೂ ಮಧ್ಯ ರಾತ್ರಿಯ ಮೇಲಿನ ಕೆಲಸ ಆದು! ಇಂಥ ಸಮಯದಲ್ಲಿ ಈ ಕೋತಿ ಆಡಿಸುವವನನ್ನು ಈ ದಫೇದಾರ ಏಕಿಡಿದ? ಏನೊ ಸಕಾರಣವಿರಬೇಕು ಎಂದುಕೊಂಡು ವೇಗವಾಗಿ ತಮ್ಮ ಆಫೀಸಿನ ಕಡೆ ನುಗ್ಗಿ, ಕನ್ನಡಿಯ ಮುಂದೆ ನಿಂತು ಮುಖ ಒರಸಿ, ತಲೆ ಬಾಚಿಕೊಂಡು, ಕುರ್ಚಿಯ ಮೇಲೆ ಕುಳಿತಿದುದೇ ತಡ, ದಫೇದಾರ ಮಹಾಶಯ ಕಾಣಿಸಿಕೊಂಡವನೆ ಹಲ್ಲು ಗಿಂಜಿ ಹೇಳಿದ: "ಸಾ! ಒಂದು ಸ್ಪೆಷಲ್ ಕೇಸು ಸಾರು! ನೋಡಿ, ಒಬ್ಬ ಕೋತಿ ಆಡಿಸೋನು..."

"ಹೂಂ! ಅದೇನ್ ಬೊಗಳು, ರಾಗ ಎಳೀಬೇಡ"

"ನೆಹರೂ ಸರ್ಕಲ್ ತಾವು ಸಾರ್! ತಾನು ಇರೋದು ತುರ್ತುಪರಿಸ್ಥಿತಿ ಅನ್ನೋದನ್ನ ತಿಳೀದೆ ಅಲ್ಕಾ ನನ್ನ ಮಗ ಏನು ಮಾಡ್ತಾಯಿದ್ದ ಸಾ... ಅದ ನೋಡೋಕೆ ಅದೇನ್ ಜನಸಾ...

"ಅದೇನು ಬೊಗಳೂ ಅಂದ್ರೆ..."

"ಮಹಾತ್ಮಗಾಂಧಿ ನಡೆಯೋದು ಹೆಂಗೆ; ಪೋಲೀಸನೋರು ಜನಕ್ಕೆ ಹೊಡೆಯೋದು ಹೆಂಗೆ... ಆಮ್ಯಾಲೆ "

"ಅದ್ಕೆ ಅವ್ನ ಒದ್ದು ಎಳ್ಕೊಂಡು ಬಂದಬುಟ್ಟ; ಕಳ್ಳ ನನ್ನ ಮಗನೆ!"

ಅಷ್ಟೆ ಅಲ್ಲ ಸಾರ್! ನಮ್ಮ ನೆಚ್ಚಿನ ಪ್ರಧಾನಮಂತ್ರಿ ಇಂದಿರಾ ಗಾಂಧಿಯವರು ಭಾಷಣ ಮಾಡೊದೆಂಗೆ ಅಂತ ಅಕಿಣಿಸ್ತಾ ಇದ್ದ, ನೋಡ್ತಾ ಇದ್ದೋನು ನಾನು, ಹಿಂದಲಿಂದ ಕತ್ತಿನ ಪಟ್ಟಿ ಹಿಡಿದು ಎಳ್ಕೊಂಡು ಬಂದು ಅವನ್ನ ಒದ್ದು, ಆ ಕೋತಿಗಳ್ ಸಮೇತ ಇಡಿದು ಎಸದಿವ್ನಿ? ಈ ಸೂಳೇ ಮಗನ್ನ ಮೀಸಾ ಪ್ರಕಾರ ಬುಕ್ ಮಾಡಬೇಕು ಸಾರು!" ಎಂದು ಗೋಗರೆಯುವಂತೆ ರಾಗ ಎಳೆದ.

ಇನ್‌ಸ್ಪೆಕ್ಟರ್ ಕೋತಿಗಳನ್ನೂ ಎಳೆದುಕೊಂಡು ಬಂದಿರುವುದನ್ನು ಕೇಳಿ ಕೇಸು ಒಳ್ಳೆಯ 'ಇಂಟ್ರಸ್ಟಿಂಗ್' ಆಗದೆ ಎಂದುಕೊಂಡು: "ಅವನ್ನ ಕರಕೊಂಡು ಬಾ" ಎಂದರು, ಕೋತಿ ಆಡಿಸುವವನು ಬಂದ. ಅವನ ಹಿಂದೆಯೇ ಮೂರು ಕೋತಿಗಳೂ ಬಂದವು. ಕೋತಿ ಆಡಿಸುವವನಿಗೆ ಸುಮಾರು ಇಪ್ಪತ್ತೈದರ ಪ್ರಾಯ. ಕೋತಿಗಳಲ್ಲಿ ಎರಡು ಗಂಡು ಒಂದು ಹೆಣ್ಣು, ಎರಡು ಗಂಡುಗಳ ಪೈಕಿ ಒಂದು ಚಿಕ್ಕದು. ಯಾವ ಕೋತಿಗೂ ನಡುವಿಗೆ ಹಗ್ಗ ಹಾಕಿಲ್ಲ. ಹೆಣ್ಣು ಕೋತಿಯ ನಡುವಿಗೆ ಮಾತ್ರ ಗೆಜ್ಜೆ ಸರ ಕಟ್ಟಿದ್ದಾನೆ.

ಇನ್‌ಸ್ಪೆಕ್ಟರ್ "ನಿನ್ನ ಹೆಸರೇನೋ" ಎಂದರು.

"ಮಂಚ ಸ್ವಾಮಿ"

"ಯಾವೂರು ನಿಂದು? ಏನಿದೆಲ್ಲ?"

"ನಾನು ಇದೇ ಊರೋನು ಸ್ವಾಮಿ, ಎಸ್.ಎಸ್.ಎಲ್.ಸಿ. ಗಂಟ ಓದಿವ್ನಿ, ಹುಡುಕ್ದೆ ಕೆಲ್ಸ ಸಿಗಲಿಲ್ಲ. ಆಮ್ಯಾಲೆ ಈ ಕೋತಿ ಆಡ್ಸೋ ಕಸ್ಬು ಕಲ್ತುಕೊಂಡೆ."

"ಮೈ ಮುರ್ದು ದುಡ್ದು ಅನ್ನ ತಿನ್ನದೇ ಈ ಚಂಗೂಲಿ ಆಟಕ್ಕೆ ನಿಂತಿದ್ದೀ ಏನೋ; ನಿನ್ನ ಕಂಕಳೇಲಿ ಇರೋ ಚೀಲದೇಲಿ ಏನು ಮಡಗಿದ್ದೀ ತಗಿ" ಎಂದು ಮಂಚ ಚೀಲ ತೆಗೆದುಕೊಡುವುದಕ್ಕೆ ಮುಂಚೆಯೇ ಚೀಲ ಕಿತ್ತುಕೊಂಡು ಪಿ.ಸಿ. ಸಾಹೇಬ ಇನ್‌ಸ್ಪೆಕ್ಟರಿಗೆ ಕೊಟ್ಟ, ಇನ್‌ಸ್ಪೆಕ್ಟರ್ ಸಾಹೇಬರು ಚೀಲದ ಅಂತರಾಳದಲ್ಲಿರುವ ಅಪೂರ್ವ ವಸ್ತುಗಳ ಶೋಧನೆ ಪ್ರಾರಂಭಿಸುತ್ತಿದ್ದಂತೆಯೇ ಮೂರು ಕೋತಿಗಳು ಚಂಗನೆ ಮೇಲಕ್ಕೆ ನೆಗೆದು ಟೇಬಲ್ಲಿನ ಮೇಲೆ ಸಾಲಾಗಿ, ಗಂಭೀರವಾಗಿ ಕುಳಿತುಕೊಂಡವು. ಕೋತಿಗಳು ಚಂಗನೆ ನೆಗೆದು ಕುಳಿತುಕೊಂಡಿದ್ದನ್ನು ಕಂಡು ಇನ್‌ಸ್ಪೆಕ್ಟರಿಗೆ ತುಂಬ ಗಾಬರಿ ಆದರೂ, ಅವು ಕುಳಿತ ರೀತಿ ಮಾತ್ರ ತೀರ ಆಶ್ಚರ್ಯವನ್ನು ಉಂಟುಮಾಡಿತು. ಹೆಣ್ಣು ಕೋತಿ ಕಣ್ಣುಮುಚ್ಚಿಕೊಂಡಿದೆ, ಎರಡು ಗಂಡುಗಳ ಪೈಕಿ ಒಂದು ಬಾಯಿ ಮುಚ್ಚಿಕೊಂಡಿದೆ; ಇನ್ನೊಂದು ಮರಿ, ಕಿವಿ ಮುಚ್ಚಿಕೊಂಡಿದೆ! ಇನ್‌ಸ್ಪೆಕ್ಟರಿಗೆ ಸಣ್ಣದಾಗಿ ಮೈಯನ್ನು ಒಂದು ಬಗೆಯ ನೈತಿಕ ಹೆದರಿಕೆ ನಡುಗಿಸಿತು. ಕೋತಿಗಳು ಏನನ್ನೊ ಮೇಲಕ್ಕೆ ನೋಡುತ್ತಿವೆ. ತಾವು ಕುಳಿತುಕೊಳ್ಳುವ ಕುರ್ಚಿಯ ಮೇಲೆ ಮಹಾತ್ಮಗಾಂಧಿ, ರಾಜೇಂದ್ರ ಪ್ರಸಾದ್, ನೆಹರು, ಪಟೇಲ್, ಸುಭಾಷ್ ಮುಂತಾದ ರಾಷ್ಟ್ರ ನಾಯಕರ ಭಾವಚಿತ್ರಗಳು ಧೂಳಿಡಿದು ಕುಳಿತಿವೆ. ಆ ಕಡೆಯೇ ಈ ಮೂರು ಕೋತಿಗಳು ದೃಷ್ಟಿ ಚೆಲ್ಲಿ ಕುಳಿತಿವೆ. ಇನ್‌ಸ್ಪೆಕ್ಟರ್ ಇನ್ನೂ ಸೂಕ್ಷ್ಮವಾಗಿ ಗಮನಿಸಿ ನೋಡಿದರು. ಮೂರರ ದೃಷ್ಟಿಯೂ ಮಹಾತ್ಮ ಗಾಂಧಿಯವರ ಭಾವಚಿತ್ರದ ಮೇಲೆಯೇ ಕೇಂದ್ರೀಕೃತವಾಗಿದೆ. ದಫೇದಾರನನ್ನು ಕರೆದು ಕೇಳಿದರು: "ಈ ಕೋತಿಗಳನ್ನು ನೋಡಿ ಇವಕ್ಕೂ ಮಹಾತ್ಮ ಗಾಂಧಿಯವರಿಗೂ ಏನಾದ್ರು ಸಂಬಂಧ ಇದೆ ಏನ್ರಿ."

"ಮಹಾತ್ಮ ಗಾಂಧಿಯೋರೇ ಏನು! ಇಡೀ ಮನ್ಸರಿಗೂ ಈ ಕೋತಿಗಳ್ಗೂ ತಾತ ಮುತ್ತಾತನ ಸಂಬಂಧ ಅಲ್ವೆ ಸಾ!"

"ಹೋಗಿ ಮಣ್ಣು ತಿನ್ನು! ನನ್ಮಗನೆ ಮಹಾತ್ಮ ಗಾಂಧಿಯವರ ತಾವು ಮೂರು ಕೋತಿಗಳ ಬೊಂಬೆ ಇದ್ದೋ! ನೋಡು; ಇವು ಮೂರು ಕುಳತವಲ್ಲ ಆ ತರ. ಮೊದಲನೇದು ಬಾಯಿ ಮುಚ್ಚಿಕೊಂಡಿದೆ ಯಾಕೆ ಗೊತ್ತೆ? ಕೆಟ್ಟದ್ದನ್ನು ನುಡಿಯಬೇಡ ಎಂದು. ಎರಡನೇದು ಕಣ್ಣು ಮುಚ್ಚಿಕೊಂಡದೆ; ಕೆಟ್ಟದ್ದನ್ನು ನೋಡಬಾರದು ಅಂತ; ಮರಿ ಮೂರನೇದು ಕಿವಿ ಮುಚ್ಚಿಕೊಂಡಿದೆ; ಕೆಟ್ಟದನ್ನು ಕೇಳಬಾರದು ಅಂತ. ಅದಿರಲಿ ಇವು ತಕ್ಷಣ ಈ ರೀತಿ ಕೂತ್ಕಬೇಕಾದ್ರೆ ಇವ್ಕೆ ಮಹಾತ್ಮ ಗಾಂಧಿಯವರ ಫೋಟೋ ಗುರುತಿಸೊದ್ಕೂ ಈ ಬಡ್ಡಿಮಗ ಕಲಿಸುಕೊಟ್ಟವನೆ ಅಂದಂತಾಯ್ತು" ಎಂದು ಅವನ ಚೀಲದ ಸಾಮಾನುಗಳನ್ನೆಲ್ಲ ಟೇಬಲ್ಲಿನ ಮೇಲೆ ಸುರಿದರು. ಒಂದು ಸಣ್ಣದಾದ ಸುಮಾರು ಎರಡು ಅಡಿ ಎತ್ತರದ ಕೋಲು. ಒಂದು ಸಣ್ಣ ಕೋಲಿಗೆ ಬಟ್ಟೆ ಸುತ್ತಿ ಕೆಳಕ್ಕೆ ನಿಲ್ಲಿಸಲು ವೃತ್ತಾಕಾರದ ಮರದ ಸಾಧನಕ್ಕೆ ಸಿಕ್ಕಿಸಿರುವ ಅಂದರೆ ಮೈಕ್ ಮತ್ತು ಅದರ ಸ್ಟಾಂಡನ್ನು ಹೋಲುವ ಒಂದು ವಸ್ತು. ಹೆಣ್ಣು ಕೋತಿಗೆ ಲಂಗ, ಸೀರೆ, ಒಂದು ಪುಟಾಣಿ ಕಪ್ಪು ಕನ್ನಡಕ, ಒಂದು ಅಂಗೈ ಅಗಲದ ಮಹಾತ್ಮ ಗಾಂಧಿಯವರ ಪೋಟೋ...

"ಅಷ್ಟೇ ಸ್ವಾಮೀ ಇನ್ನೇನು ನಾನು ಚೀಲ್ದಲಿ ಚಿನ್ನದ ಗಟ್ಟಿ ಮಡ್ಗುಕೊಂಡಿದ್ದೀನಾ?"

"ಚಿನ್ನದ ಗಟ್ಟಿ ಮನೆ ಹಾಳಾಗಲೀ ! ಲೋ! ಹಲ್ಕಾ ನನ್ನ ಮಗ್ನೆ ಬಂದಿರೋದು ಕೆಟ್ಟ ಕಾಲ, ತಗ್ಗಿ ಬಗ್ಗಿ ನಡೀಬೇಕು ಕಣೋ"

"ನಾನೇನು ಮಾಡಿವ್ನಿ ಸಾ; ಅಂಥ ಅಪರಾಧ?"

"ನಿನ್ನ ಮಿಸಾ ಪ್ರಕಾರ ನಂ ಧಫೇದಾರ ಹಿಡದವ್ನೆ, ಮೀಸಾ ಅಂದ್ರೆ ಮುಂಡೇದೆ ಮೈಂಟನೆನ್ಸ್ ಆಫ್ ಇಂಟರ್ನಲ್ ಸೆಕ್ಯೂರಿಟಿ ಆಕ್ಟ್ ಆಂದ್ರೆ; ಭಾರತ ಸರ್ಕಾರದ ಆಂತರಿಕ ಭದ್ರತಾ ಶಾಸನ..."

"ಗೊತ್ತು ಸಾ! ಮೀಸಾ ಅನ್ನು ಹೆಸರು ಕೇಳ್ತಾ ಇದ್ದಂಗೇ ಜನ ನಡುಗೋದ, ದಿವ್ಸ ನಾನು ನೋಡ್ತಾ ಇವ್ನಿ"

"ಆಂಗಾದ್ರೆ ನಿಂಗೆ ಮೀಸಾ ಗೊತ್ತದೆ! ಗೊತ್ತಿದ್ದೂ ನೀನು ಈ ಅಪರಾಧಗಳನ್ನೆಲ್ಲ ಮಾಡ್ತ ಇದ್ದೀಯ ದೇಶದ್ರೋಹಿ ನನ್ನ ಮಗನೆ"

"ನಾನ್ಯಾವ ಅಂಥ ದ್ರೋಹದ ಕೆಲ್ಸ, ಅದೂ ದೇಶದ್ರೋಹದ ಕೆಲ್ಸ ಮಾಡಿವ್ನಿ ಸಾರ್? ಖೋಟಾನೋಟು ಮಾಡಿ ಆರು ಅಂತಸ್ತಿನ ಮನೆ, ಎಂಟು ಬಸ್ಸು, ಹನ್ನೊಂದು ಲಾರಿ, ಒಂದೈದು ಲಕ್ಷ ರೂಪಾಯಿ ಕಾರು ತಕ್ಕೊಂಡಿವ್ನಾ? ಕಂಟ್ರಾಕ್ಟ್ ತಕ್ಕೊಂಡು ಕಟ್ಟಿದ ಒಂದು ವರ್ಷಕ್ಕೆ ಕುಸ್ಕೋವಂತ ಸೇತ್ವೆ, ಮನೆ ಕಟ್ಟೀವ್ನಾ? ಕಳ್ಳಭಟ್ಟಿ ಷರಾಬ್ ಮಾಡೀವ್ನಾ? ಏನು ಹೇಳಿ ನಾನು ದೇಶದ್ರೋಹದ ಕೆಲ್ಸ ಮಾಡಿರೋದು?"

"ಬಡ್ಡಿಮಗ್ನೆ! ಲೋ! ನಾಲ್ಗೆ ಬಲು ಉದ್ದ ಆಯ್ತು ನಿಂಗೆ" ಎಂದವನೇ ದಫೇದಾರ ದಿಢೀರನೆ ಮಂಚನಿಗೆ ಕತ್ತಿನ ಮೇಲೆ ಬಲವಾಗಿ ಒಂದು ಗುದ್ದು ಕೊಟ್ಟ, ಮಂಚ 'ಹುಂ' ಎಂದವನೆ ಮುಗ್ಗರಿಸಿ, ಇನ್‌ಸ್ಪೆಕ್ಟರ್ ಸಾಹೇಬರ ಟೇಬಲ್ಲು ಹಿಡಿದುಕೊಂಡ, ಗಲಾಟೆ ಆದುದನ್ನು ಕೇಳಿ ಕೋತಿಗಳು "ಗುರ್' ಎಂದು ಗಕ್ಕನೆ ತಿರುಗಿ, ದಫೇದಾರನ ಕಡೆ ಚಂಗನೆ ಹಾರಿದುವು. ದಫೇದಾರ ತನ್ನ ಕೈಯಲ್ಲಿನ ಲಾಠಿಯಿಂದ "ಉಡೀ ಉಡೀ ಹಾಳಾಗೋದೋ" ಎಂದು ಅರಚಲು ಪ್ರಾರಂಭಿಸಿದಂತೆಯೇ! ಮಂಚ ಕೂಗಿಕೊಂಡ: "ರಾಮ, ಸೀತೆ, ಅಭಿಮನ್ಯು! ಗಾಂಧಿ ತಾತ ಏನು ಹೇಳಿದ್ರು" ಎಂದದ್ದೇ ತಡ: ಒಂದು ಗಂಡು ಕೋತಿ ಇನ್ನೊಂದು ಗಂಡು ಕೋತಿಗೆ ಬಲವಾಗಿ ಕೆನ್ನೆಗೆ ಬಾರಿಸಿತು. ಹೊಡೆಸಿಕೊಂಡದ್ದು, ಹೊಡೆದ ಕೋತಿಗೆ ಪ್ರತೀಕಾರಮಾಡುವ ಬದಲು ತನ್ನ ಎಡ ಕೆನ್ನೆಯನ್ನು ತೋರಿಸಿತು. ಅದಕ್ಕೂ ಏಟು ಬಿತ್ತು. ಏಟಿನ ಮೇಲೆ ಏಟು ಬಿದ್ದರೂ ಪ್ರತೀಕಾರ ಎಸಗಲಿಲ್ಲ. ಬದಲು ಗಂಭೀರವಾಗಿ ಮಹಾತ್ಮಾಗಾಂಧಿಯವರು ಬೋಧಿಸಿದ ಸತ್ಯಾಗ್ರಹವನ್ನು ಪ್ರತಿಪಾದನೆ ಮಾಡುವ ರೀತಿಯಲ್ಲಿ ಕುಳಿತುಬಿಟ್ಟಿತು. ಅದರ ಪಕ್ಕದಲ್ಲಿಯೇ ಹೆಣ್ಣು ಕೋತಿ ಸತ್ಯಾಗ್ರಹ ಭಂಗಿಯಲ್ಲಿ ಕುಳಿತುಬಿಟ್ಟಿತು! ಇನ್‌ಸ್ಪೆಕ್ಟರಿಗೆ ಆದ ಆಶ್ಚರ್ಯ ಅಷ್ಟಿಷ್ಟಲ್ಲ. ಸತ್ಯಾಗ್ರಹ! ಅದೂ ಕೋತಿಗಳಿಂದ!! ಮನುಷ್ಯ ಮನುಷ್ಯನ ಮೇಲೆ ದೌರ್ಜನ್ಯ ಮಾಡಿದ್ದಕ್ಕಾಗಿ ಕೋತಿಗಳಿಂದ ಮಹಾತ್ಮನ ತತ್ವ ಪ್ರತಿಪಾದನೆ! "ಠ್ರಣ್ ಠ್ರಣ್" ಟೆಲಿಫೋನಿನ ಗಂಟೆ ಬಾರಿಸಿದುದರಿಂದ ಇನ್ಸ್‌ಪೆಕ್ಟರ್ ಅಲೋಚನೆಯ ಲಹರಿ ಕಡಿದುಹೋಯ್ತು. ಫೋನ್ ಎತ್ತಿಕೊಂಡರು. ಮಾತನಾಡುತ್ತಿರುವವರು ಸೂಪರಡೆಂಟ್ ಸಾಹೇಬರು. ಅವರಿಗೂ ಕೋತಿಗಳ ವಿಷಯ ಸ್ಟೇಷನ್ನಿನ ಮುಂದೆ ಜನ ಘೇರಾಯಿಸಿರುವುದು ತಲೆ ಕೆಡಿಸಿತ್ತು. ಇನ್‌ಸ್ಪೆಕ್ಟರ್ ಸವಿಸ್ತಾರವಾಗಿ ಕೋತಿಗಳ ವಿಚಿತ್ರ ನಡವಳಿಕೆಗಳನ್ನು ತಿಳಿಸಿ; "ಸಾರ್! ಈ ಕೋತಿ ಆಡಿಸುವ ಮಂಚ, ಈ ಕೋತಿಗಳ ಮುಖಾಂತರ ಮಹಾತ್ಮಗಾಂಧಿಯವರು ಅಹಿಂಸೆಯ ಬಗ್ಗೆ ಜನರಿಗೆ ಬೋಧಿಸಿದ ತತ್ವಗಳನ್ನು ಅದ್ಭುತವಾಗಿ ಪ್ರಚಾರ ಮಾಡುತ್ತಿದ್ದಾನೆ. ನನಗಂತೂ ಇವನು ಜನರನ್ನು ಶಾಂತಿ ಶಿಸ್ತುಗಳ ಕಡೆಗೆ ಕೊಂಡೊಯ್ಯುತ್ತಿರೋ ಒಳ್ಳೆಯ ದೇಶಪ್ರೇಮಿ ಅನಿಸ್ತು ಸಾರ್." ಎಂದರು.

"ಆದ್ರೆ ಅವ್ನು ಇನ್ನೂ ಒಂದು ತಪ್ಪು ಮಾಡಿದ್ದಾನಲ್ರಿ"

"ಆದ್ರೂ ಮೀಸಾ ಇವನ್ಗೆ ಅನ್ವಯಿಸಬಾರದೂ ಸಾರ್."

"ಹಾಗಾದ್ರೆ ಒಂದು ಕೆಲ್ಸ ಮಾಡಿ, ತಕ್ಷಣವೇ ನಮ್ಮ ಫೋಟೋಗ್ರಾಫರ್ ಕರ್ಸಿ ಕೋತಿಗಳು ಮತ್ತು ಆಡಿಸೋನ ಫೋಟೋ ತೆಗ್ಸಿ ಹಾಗೇ ಪತ್ರಿಕೆಗಳವರನ್ನ ಕರ್ಸಿ. ನಾನು ತಕ್ಷಣ ಬರ್ತೀನಿ, ಪ್ರಾಣಿಗಳ ಸ್ವಾತಂತ್ರ್ಯಹರಣವಾದ ಬಗ್ಗೆ ಮತ್ತು ಚಿತ್ರಹಿಂಸೆ ನೀಡಿದ ಬಗ್ಗೆ ಆ ಕೋತಿ ಆಡಿಸುವವನ ಮೇಲೆ ಕಾನೂನಿನ ಕ್ರಮ ಜರುಗಿಸೋಣ. ಕೋತಿಗಳನ್ನ ಬಿಡುಗಡೆ ಮಾಡೋಣ, ನೋಡ್ರಿ ಇದು ಇಡೀ ಭಾರತದಲ್ಲೇ ಒಂದು ವಿಚಿತ್ರವಾದ ವಿಚಾರಣೆ ಆಗ್ತದೆ ಗೊತ್ತಾ ನೋಡಿ! ಈ ಕೂಡಲೇ ಆಕಾಶವಾಣಿಗೆ ಈ ವಿಷಯವನ್ನು ಫ್ಲಾಷ್ ಮಾಡ್ಬಿಡಿ, ದೇಶದಲ್ಲಿ ಸ್ವಾತಂತ್ರ್ಯ ಅಂದ್ರೆ ಮೈ ಡಿಯರ್ ಇನ್‌ಸ್ಪೆಕ್ಟರ್ ಬರೀ ಮನುಷ್ಯರಿಗೆ ಮಾತ್ರವಲ್ಲ; ಪ್ರಾಣಿಗಳಿಗೂ ಇರಬೇಕ್ರೀ ಎಸ್. ಹರಿಅಪ್. ಪ್ರೆಸ್‌ನೋರ್ನ ಬೇಗ ಕರ್ಸಿ ನಾನು ಈಗಲೇ ಬಂದೆ"

"ಎಸ್ ಸಾರ್, ಆಗಲಿ ಸಾರ್"

ಮಾರನೆಯ ದಿನಪತ್ರಿಕೆಯಲ್ಲಿ ಮಂಚ ಮತ್ತು ಅವನ ಮೂರು ಕೋತಿಗಳಾದ ರಾಮ, ಸೀತೆ ಅಭಿಮನ್ಯುರವರ ಭಾವಚಿತ್ರ ಪ್ರಮುಖವಾಗಿ ಮುಂದಿನ ಪುಟಗಳಲ್ಲಿ ಕಾಣಿಸಿಕೊಂಡಿತು. ಮಂಚನ ಮೇಲೆ ಕೊತಿಗಳನ್ನು ಹಿಡಿದು ಹಿಂಸಿಸಿದುದಕ್ಕಾಗಿ ಕಾನೂನಿನ ಕ್ರಮ ಜರುಗಿಸುತ್ತಿರುವುದಾಗಿ ಸ್ಪಷ್ಟಪಡಿಸಲಾಗಿತ್ತು, ಜೊತೆಗೆ ಆಕಾಶವಾಣಿ ಓರ್ವ ಕೋತಿ ಆಡಿಸುವವನನ್ನು ಬಂಧಿಸಲಾಗಿದೆ ಎಂದೂ, ಜೊತೆಗೆ ಅವನು ಪ್ರಾಣಿಗಳನ್ನು ಹಿಂಸೆಪಡಿಸಿ, ಅವುಗಳನ್ನು ಬಂಧಿಸಿ ಅವುಗಳ ಸ್ವಾತಂತ್ರ್ಯ ಅಪಹರಣ ಮಾಡಿದುದಕ್ಕಾಗಿ ಕಾನೂನಿನ ಕ್ರಮ ಜರುಗಿಸಲಾಗುತ್ತಿದೆ ಎಂದೂ, ಈ ಮೂಲಕ ಭಾರತದಲ್ಲಿ ಪ್ರಾಣಿಗಳ ಮೂಲಭೂತ ಹಕ್ಕುಗಳಿಗೆ ಇನ್ನು ಮುಂದೆ ಚ್ಯುತಿ ಬಾರದಂತೆ ನೋಡಿಕೊಳ್ಳಲಾಗುವುದೆಂದೂ ತಿಳಿಸುತ್ತ; ಇನ್ನೂ ಮುಂದುವರಿದು ಕೋತಿಗಳನ್ನು ಕಂಡರೆ ರಾಷ್ಟ್ರಪಿತ ಮಹಾತ್ಮಾಗಾಂಧಿಯವರಿಗೆ ತುಂಬ ಪ್ರೀತಿ ಹಾಗೂ ಗೌರವಭಾವವಿತ್ತೆಂದೂ ಆದ್ದರಿಂದ ಕೋತಿಗಳಿಗೆ ಆಗುವ ಹಿಂಸೆಯನ್ನು ಮಹಾತ್ಮಗಾಂಧಿಯವರಿಗೇ ಆದ ಹಿಂಸೆ ಎಂದು ಪರಿಗಣಿಸಲಾಗಿದೆ ಎಂದೂ ತಿಳಿಸಿತು.

* * *

ಪತ್ರಿಕೆಗಳು ಮತ್ತು ಆಕಾಶವಾಣಿ ಬಿತ್ತರಿಸಿದ ಸುದ್ದಿಯಂತೆ ಕೋತಿ ಆಡಿಸುವ ಮಂಚನಿಗೆ 6 ತಿಂಗಳುಗಳ ಕಾಲ ಕಠಿಣ ಕಾರಾಗೃಹವಾಸವನ್ನು ನ್ಯಾಯಾಲಯ ವಿಧಿಸಿತು. ಅಲ್ಲದೆ ಕೂಡಲೇ ಮೂರು ಕೋತಿಗಳಾದ ರಾಮ, ಸೀತೆ, ಅಭಿಮನ್ಯುವನ್ನು ಬಿಡುಗಡೆ ಮಾಡುವಂತೆ ಆಜ್ಞೆ ಮಾಡಿತು. ಅದರಂತೆ ಅವುಗಳ ಬಿಡುಗಡೆಯೂ ಆಯಿತು. ಮಂಚನನ್ನು ಸೆಂಟ್ರಲ್ ಜೈಲಿಗೆ ಹಾಕಿದರು.

* * *

ಇಪ್ಪತ್ತು ದಿನಗಳುರುಳಿದವು: ಮಾರನೆಯ ಬೆಳಿಗ್ಗೆ ಸುಮಾರು ಎಂಟು ಗಂಟೆಯ ಸಮಯದಲ್ಲಿ ಸೆಂಟ್ರಲ್ ಜೈಲಿನ ಮುಂಭಾಗದಲ್ಲಿ ಮೂರು ಕೋತಿಗಳು ಮಲಗಿದ್ದವು. ಸೆಂಟ್ರೆ ದೂರದಿಂದಲೇ ಕಲ್ಲು ಎಸೆದ. ಜಗ್ಗಲಿಲ್ಲ. ಆಶ್ಚರ್ಯವಾಯಿತು. ಹತ್ತಿರಕ್ಕೆ ಬಂದ. ಅವನ ಹಿಂದೆಯೇ ಜೈಲಿನಲ್ಲಿರುವ ತಮ್ಮ ಬಂಧುಗಳನ್ನು ನೋಡುಲು ಬಂದಿದ್ದ ಜನರೂ ಬಂದರು. ನೋಡುತ್ತಾರೆ! ಒಂದು ಕೋತಿ ಬಾಯಿ ಮುಚ್ಚಿಕೊಂಡಿದೆ. ಇನ್ನೊಂದು ಕಣ್ಣು ಮುಚ್ಚಿಕೊಂಡಿದೆ. ಮತ್ತೊಂದು ಕಿವಿ ಮುಚ್ಚಿಕೊಂಡಿದೆ. ಸದ್ದು ಮಾಡಿದರೂ ಏಳಲಿಲ್ಲ. ಸೆಂಟ್ರೆ ಒಂದೊಂದನ್ನೂ ಮೈಹಿಡಿದು ಅಲುಗಿಸಿದ. ಜಗ್ಗಲಿಲ್ಲ. ಕಾಕಿಬಟ್ಟೆ ತೊಟ್ಟಿರುವ ಬಂದೂಕ ಹೊತ್ತಿರುವ ಅವನ ದೇಹದಲ್ಲಿರುವ ತಲೆ ಎಂಬ ಅಂಗದಲ್ಲಿರುವ ಎರಡು ಕಣ್ಣುಗಳಿಂದಲೂ ನೀರು 'ಚಿಲ್' ಎಂದಿತು.

"ಅಂತೂ ಮುಂಡೇವ್ಕೆ ಕೊನೆಗೂ ಸ್ವಾತಂತ್ರ್ಯ ಸಿಕ್ತು, ರಾಮರಾಮ" ಎಂದು ಆಕಾಶದ ಕಡೆ ನೋಡಿದ. ಅವನ ಸುತ್ತಿನ ಜನ 'ಅಯ್ಯೋ' ಎಂದಿತು.

ಆದರೆ; ಈ ಕೋತಿಗಳಿಗೆ ಸ್ವಾತಂತ್ರ್ಯ ದೊರೆತ ಮೇಲೆ ದಕ್ಕಿದ 'ಸ್ವರ್ಗ'ದ ಸುದ್ದಿಯನ್ನು ಪತ್ರಿಕೆಯೂ ಬರೆಯಲಿಲ್ಲ.

**ಆಕರ** : ಕಣಜ, ರಾಮಣ್ಣನವರ ಸಮಗ್ರ ಕಥೆಗಳು, ಲೋಹಿಯಾ ಪ್ರಕಾಶನ, ಬಳ್ಳಾರಿ, 2011.

**ಲೇಖಕರ ಪರಿಚಯ**

**ಪೂರ್ಣಚಂದ್ರ ತೇಜಸ್ವಿ** (1938–2007): ಇವರೊಬ್ಬ ಬಹುಮುಖ ಪ್ರತಿಭೆಯ ಸಾಹಿತಿ. ಅಬಚೂರಿನ ಪೋಸ್ಟಾಫೀಸು ಇವರ ಮುಖ್ಯ ಕಥಾಸಂಕಲ. ನಿಗೂಢ ಮನುಷ್ಯರು, ಕಿರುಗೂರಿನ ಗಯ್ಯಾಳಿಗಳು ಅವರ ಕಿರು ಕಾದಂಬರಿಗಳು. ಕರ್ವಾಲೋ, ಚಿದಂಬರ ರಹಸ್ಯ, ಜುಗಾರಿಕ್ರಾಸ್, ಮಾಯಾಲೋಕ ಮೊದಲಾದ ಕಾದಂಬರಿಗಳ ಜೊತೆ ಪರಿಸರ ಕತೆ, ಕಾಡಿನ ಕತೆ ಇನ್ನೂ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಏಳು ಬಾರಿ ಕರ್ನಾಟಕಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಸಂದಿವೆ. ಕಿರುಗೂರಿನ ಗಯ್ಯಾಳಿಗಳು, ಕುಬಿ ಮತ್ತು ಇಯಾಲ, ತಬರನ ಕಥೆ ಮೊದಲಾದವು ಇವರ ಕಥೆಗಳನ್ನು ಆಧರಿಸಿದ ಸಿನೆಮಾಗಳು. ಅತ್ಯುತ್ತಮ ಸಂಭಾಷಣೆ ಮತ್ತು ಕಥೆಗಾಗಿ ಇವರ ಕೃತಿಗಳು ಚಲನಚಿತ್ರ ರಾಜ್ಯ ಪ್ರಶಸ್ತಿಗಳನ್ನು ಪಡೆದಿವೆ.

**ಡಾ. ಬೆಸಗರಹಳ್ಳಿ ರಾಮಣ್ಣ (1936):** ಎಂಬಿಬಿಎಸ್ ಪದವಿ ಪಡೆದು ಗ್ರಾಮೀಣ ಪ್ರದೇಶದಲ್ಲಿ ಸುಮಾರು 20 ವರ್ಷಗಳ ಕಾಲ ವೈದ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಸಮಾಜವಾದಿ ಯುವಜನ ಸಭಾ, ಬಂಡಾಯ ಸಾಹಿತ್ಯ ಸಂಘಟನೆ, ದಲಿತ ಸಂಘರ್ಷ ಸಮಿತಿ ಮುಂತಾದ ಅನೇಕ ಪ್ರಗತಿಪರ ಸಂಘಟನೆಗಳೊಡನೆ ಗುರುತಿಸಿಕೊಂಡಿದ್ದರು. ಗ್ರಾಮಾಂತರ ಬದುಕಿನ ನೋವು ನಲಿವುಗಳನ್ನು, ಊಳಿಗಮಾನ್ಯ ಪದ್ಧತಿಯನ್ನು ವಿರೋಧಿಸುವಂತಹ ವಿಭಿನ್ನ ನೆಲೆಗಳಲ್ಲಿ ಹಲವಾರು ಕತೆಗಳನ್ನು ರಚಿಸಿದ್ದಾರೆ.

'ನೆಲದ ಒಡಲು', 'ಗರ್ಜನೆ', 'ಹರಕೆಯ ಹಣ', 'ಒಂದು ಹುಡುಗನಿಗೆ ಬಿದ್ದ ಕನಸು', 'ನೆಲದ ಸಿರಿ' ಇವರ ಕೆಲವು ಕಥಾಸಂಕಲನಗಳು. ಕಣಜ ಇವರ ಸಮಗ್ರ ಕಥಾಸಂಕಲನ. 'ರಕ್ತಕಣ್ಣೀರು' ಮತ್ತು 'ತೋಳಗಳ ನಡುವೆ' ಇವರು ಬರೆದ ಎರಡು ಕಾದಂಬರಿಗಳು. 'ಶೋಕಚಕ್ರ' ಇವರ ಕವನ ಸಂಕಲನ. ಕಾಡುಗಿಣಿ ಇವರಿಗೆ ಅರ್ಪಿಸಿದ ಅಭಿನಂದನಾ ಗ್ರಂಥ. ವರ್ಧಮಾನ ಉದಯೋನ್ಮುಖ ಪ್ರಶಸ್ತಿ, ಎರಡು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಮೊದಲಾದ ಪ್ರಶಸ್ತಿಗಳು ಇವರಿಗೆ ಸಂದಿವೆ.ಇವರ ನಾನು ಗಾಂಧಿ ಕಥೆ ಚಲನಚಿತ್ರವಾಗಿ ರಾಜ್ಯಪ್ರಶಸ್ತಿ ಗಳಿಸಿದೆ.

**ಪದಕೋಶ/ಟಿಪ್ಪಣಿಗಳು**

ಉದಾರೀಕರಣ= ವ್ಯಾಪಾರ ಮತ್ತು ವಾಣಿಜ್ಯಗಳಿಗೆ ಸಂಬಂಧಿಸಿದಂತೆ ಆಯಾ ರಾಷ್ಟ್ರಗಳು ನಿರ್ಮಿಸಿಕೊಂಡಿರುವ ನಿರ್ಬಂಧನೆಯ ರಕ್ಷಣೆಯ ಗೋಡೆಗಳನ್ನು ಕೆಡವಿ ಮುಕ್ತ ವ್ಯಾಪಾರಕ್ಕೆ ಅವಕಾಶ ಮಾಡಿಕೊಡುವುದು.

ಖಾಸಗೀಕರಣ= ಆರ್ಥಿಕ ಕ್ಷೇತ್ರದಲ್ಲಿ ಖಾಸಗೀ ಕ್ಷೇತ್ರವನ್ನು ಬೆಂಬಲಿಸಿ ಬಲಪಡಿಸುವುದೇ ಖಾಸಗೀಕರಣ. ಸರ್ಕಾರಿ ವ್ಯವಸ್ಥೆಯನ್ನು ಇಲ್ಲವಾಗಿಸಿ ಖಾಸಗಿಯವರಿಗೆ ಎಲ್ಲ ಅಧಿಕಾರಗಳನ್ನು ನೀಡುವುದು ಖಾಸಗೀರಕಣ.

ಜಾಗತೀಕರಣ= ನಿಯಂತ್ರಿತ ಮಾರುಕಟ್ಟೆಗಳನ್ನು ಜಾಗತಿಕ ಪೈಪೋಟಿಗೆ ಮುಕ್ತಗೊಳಿಸುವುದೇ ಜಾಗತಿಕರಣ. ಜಗತ್ತಿನ ಬೇರೆ ಬೇರೆ ರಾಷ್ಟ್ರಗಳ ನಡುವಣ ಆರ್ಥಿಕತೆಗಳು, ಸಂಸ್ಕೃತಿಗಳು, ಜನಸಮುದಾಯಗಳ ನಡುವಣ ಪರಸ್ಪರ ಸಂಕರಕ್ಕೆ ಕಾರಣವಾಗುವ ಬದಲಾವಣೆಯ ಪ್ರಕ್ರಿಯೆಯನ್ನು ಜಾಗತೀಕರಣ ಎನ್ನುತ್ತೇವೆ. ಇದು ದೇಶ ದೇಶಗಳ ನಡುವೆ ಅವಲಂಬಿತ ಸ್ಥಿತಿಯನ್ನೂ ಯಜಮಾನ ಅಧೀನ ಸ್ಥಿತಿಯನ್ನೂ ಉಂಟುಮಾಡುವ ಶಕ್ತಿಯಾಗಿದೆ. ಸರಕು ಸೇವೆಗಳ ವ್ಯಾಪಾರ, ಜ್ಞಾನ – ತಂತ್ರಜ್ಞಾನ, ಮಾಹಿತಿ ಇತ್ಯಾದಿಗಳ ಗಡಿಮೀರಿದ ಹರಿವನ್ನು ಇದು ಒಳಗೊಂಡ ವಿದ್ಯಮಾನವಾಗಿದೆ. ಅನ್ಯವನ್ನು ಎದುರಿಸಿ ಜೀರ್ಣಿಸಿಕೊಂಡು ಅನನ್ಯತೆಗಳಲ್ಲಿ ಬದುಕಬೇಕಾದ ಅನಿವಾರ್ಯತೆಯನ್ನು ಇದು ಅಧೀನತೆಗಳಿಗೆ ಒಡ್ಡಿದೆ.

GATT= General agreement on tariff and trade. ವ್ಯಾಪಾರ ಮತ್ತು ಸುಂಕದ ಮೇಲಿನ ಸಾಮಾನ್ಯ ಒಪ್ಪಂದ.

ಐ.ಎಸ್.ಐ.= ಇಂಟರ್ ಸರ್ವೀಸ್ ಇಂಟಲಿಜೆನ್ಸ್; ಇಂಡಿಯನ್ ಸ್ಟಾಂಡರ್ಡ್ಸ್ ಇನ್‌ಸ್ಟಿಟ್ಯೂಶನ್; ಇಂಡಿಯನ್ಸ್ ಸ್ಟಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್,...

**ಸಂಭಾವ್ಯ ಪ್ರಶ್ನೆಗಳು**

1. ಐ.ಎಸ್.ಐ. ಎಂದರೇನು?
2. ಜಾಗತೀಕರಣ ಎಂದರೇನು?
3. ಜಾಗತೀಕರಣ ಎನ್ನುವುದು ಯುರೋಪಿನ ಬಿಳಿಯ ಜನಾಂಗದ ಕುತಂತ್ರವೆ? ಚರ್ಚಿಸಿ.
4. ಮೀಸಲಾತಿ ಎಂದರೇನು? ಇದರ ಮುಂದುವರಿಕೆ ಸರಿಯೇ? ಚರ್ಚಿಸಿ.
5. 'ಸರ್ಕಾರಿ ಉದ್ದಿಮೆಗಳೆಲ್ಲಾ ಭ್ರಷ್ಟಾಚಾರ, ಅದಕ್ಷತೆಯಿಂದ ನಿರಂತರವಾಗಿ ನಷ್ಟದಲ್ಲಿ ನಡೆಯುತ್ತಾ ಇವೆ' ಎಂಬ ಹೇಳಿಕೆಯ ಬಗ್ಗೆ ನಿಮ್ಮ ಅಭಿಪ್ರಾಯ ಏನು? ವಿವರಿಸಿ.
6. 'ಶೂದ್ರರಿಗೂ ದಲಿತರಿಗೂ ಇರುವ ನಿಜವಾದ ಕೊರತೆ ಎಂದರೆ ಆತ್ಮಗೌರವ ಮತ್ತು ಆತ್ಮವಿಶ್ವಾಸ' ಈ ಹೇಳಿಕೆಯ ಬಗ್ಗೆ ನಿಮ್ಮ ನಿಲುವೇನು? ವಿವರಿಸಿ.

**ಭಾಷಾಭ್ಯಾಸ/ಚಟುವಟಿಕೆಗಳು**

1. ಭಾರತದಲ್ಲಿ ನಡೆಯುವ ಪ್ರತಿಯೊಂದು ದುರ್ಘಟನೆಗಳಿಗೂ ಮುಸ್ಲಿಮರತ್ತ ಬೆರಳು ತೋರಿಸುವ ಹಿಂದೂ ಮೂಲವಾದಿಗಳ ಆರೋಪ ಸರಿಯೇ? ಈ ಬಗ್ಗೆ ತರಗತಿಯಲ್ಲಿ ಚರ್ಚಿಸಿ.
2. ಆರ್ಥಿಕ ಉದಾರೀಕರಣ, ಮುಕ್ತ ಮಾರುಕಟ್ಟೆ, ಖಾಸಗೀಕರಣ ಇವುಗಳ ಕುರಿತಂತೆ ಪ್ರಬಂಧ ಬರೆಯಿರಿ.
3. ಜಾಗತೀಕರಣದ ಕುರಿತ ವ್ಯಾಖ್ಯೆಗಳನ್ನು ಸಂಗ್ರಹಿಸಿ; ವ್ಯಾಖ್ಯೆಗಳ ಬಗ್ಗೆ ನಿಮ್ಮ ಕಾಮೆಂಟುಗಳನ್ನು ಟಿಪ್ಪಣಿ ರೂಪದಲ್ಲಿ ಬರೆಯಿರಿ.
4. ಗ್ಯಾಟ್ ಒಪ್ಪಂದದಿಂದ ಭಾರತದ ಜನಜೀವನದ ಮೇಲೆ ಆಗಿರುವ ಅನುಕೂಲ ಹಾಗೂ ಅನಾನುಕೂಲಗಳ ಬಗ್ಗೆ ಒಂದು ಸಮೀಕ್ಷೆ ನಡೆಸಿ, ಪ್ರಾಜೆಕ್ಟ್ ಸಲ್ಲಿಸಿ.
5. ಮೀಸಲಾತಿಯ ಮುಂದೂಡಿಕೆ ಓಟಿನ ರಾಜಕಾರಣವೇ? ಸೆಮಿನಾರಿನಲ್ಲಿ ಚರ್ಚಿಸಿ.

**ಹೆಚ್ಚಿನ ಪರಾಮರ್ಶನಕ್ಕಾಗಿ**


1. ಆಫ್ರಿಕಾ ಸಾಹಿತ್ಯ ವಾಚಿಕೆ –ಸಂ. ನಟರಾಜ್ ಹುಳಿಯಾರ್ ಮತ್ತಿತರರು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. 2017.

2. https://janashakthimedia.com/author/rajendra-chenni/
3. https://www.varthabharati.in/article/vishesha-varadigalu/218769
4. https://www.pmindia.gov.in/kn/news_updates/%E0%B2%B8%E0%B2%BE%E0%B2%B0%E0%B3%8D%E0%B2%B5%E0%B2%9C%E0%B2%A8%E0%B2%BF%E0%B2%95-%E0%B2%89%E0%B2%A6%E0%B3%8D%E0%B2%AF%E0%B2%AE%E0%B2%97%E0%B2%B3-%E0%B2%96%E0%B2%BE%E0%B2%B8%E0%B2%97%E0%B3%80%E0%B2%95/


**ಅಧ್ಯಾಯ ೪.೨.**

**ಪಠ್ಯ**

## ಸ್ವಸಹಾಯ ಗುಂಪುಗಳು

**ಪ್ರವೇಶಿಕೆ**

ಮಹಿಳಾ ಸಬಲೀಕರಣವನ್ನು ಉದ್ದೇಶವಾಗಿ ಇಟ್ಟುಕೊಂಡು ಕರ್ನಾಟಕ ಸರ್ಕಾರವು ೨೦೦೦–೦೧ರಲ್ಲಿ ಶ್ರೀಶಕ್ತಿ ಯೋಜನೆಯನ್ನು ಪ್ರಾರಂಭಿಸಿದೆ. ಇದರ ಅಂಗವಾಗಿ ಹಲವಾರು ಸ್ವಸಹಾಯ ಗುಂಪುಗಳು, ಒಕ್ಕೂಟಗಳು, ಕ್ಲಸ್ಟರುಗಳು ರಚನೆಯಾಗಿ ಕಿರು ಬಂಡವಾಳ ಸಂಸ್ಥೆಗಳ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಕರ್ನಟಕಮೌಲ್ಯಮಾಪನ ಪ್ರಾಧಿಕಾರದ ಮೂಲಕ ನಬಾರ್ಡ್ ಸಲಹಾ ಸೇವಾ ಸಂಸ್ಥೆಗೆ ಹೊರಗುತ್ತಿಗೆ ನೀಡಿ ಈ ಯೋಜನೆಯ ಮೌಲ್ಯಮಾಪನವನ್ನು ನಡೆಸಿರುತ್ತದೆ. ೨೦೦೯ರಿಂದ ೨೦೧೪ರವರೆಗಿನ ಅವಧಿಯನ್ನು ಪರಿಗಣಿಸಿ ಈ ಮೌಲ್ಯಮಾಪನ ಅಧ್ಯಯನವನ್ನು ನಡೆಸಲಾಗಿದೆ. ೨೦೧೮ರಲ್ಲಿ ಪ್ರಕಟವಾಗಿರುವ ಈ ಮೌಲ್ಯಮಾಪನ ವರದಿಯ ಆಯ್ದ ಭಾಗಗಳನ್ನು ಇಲ್ಲಿ ನೀಡಲಾಗಿದೆ. ಇದಕ್ಕೆ ಪೂರಕ ಪಠ್ಯವಾಗಿ ಶಿವಸುಂದರ್ ಅವರು ಬರೆದಿರುವ ವಿಮರ್ಶಾತ್ಮಕ ಬರಹವನ್ನು ಆಯ್ದು ನೀಡಲಾಗಿದೆ. ಆರ್ಥಿಕವಾಗಿ ದುರ್ಬಲರಾಗಿರುವ ಮತ್ತು ಆರ್ಥಿಕ ಸಾಕ್ಷರತೆ ಅಷ್ಟಾಗಿ ಇಲ್ಲದ ಜನತೆಯ ವ್ಯವಹಾರ ಕೌಶಲ್ಯಗಳ ಸಾಧ್ಯತೆಗಳನ್ನು ಪರಿಶೀಲಿಸುವುದು ಮತ್ತು ಆರ್ಥಿಕ ಸಾಕ್ಷರತೆಯ ಬಗ್ಗೆ ಅರಿವು ಮೂಡಿಸುವುದು ಈ ಪಠ್ಯದ ಓದಿನ ಉದ್ದೇಶವಾಗಿದೆ.

ಸ್ತ್ರೀಶಕ್ತಿ ಯೋಜನೆಯನ್ನು ಬಲಪಡಿಸಲು ಮತ್ತು ಸರಳೀಕರಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಕ್ಲಸ್ಟರ್ ಮಟ್ಟದಲ್ಲಿ ಗುಂಪುಗಳನ್ನು ಮತ್ತು ತಾಲ್ಲೂಕು ಮಟ್ಟದಲ್ಲಿ ಒಕ್ಕೂಟಗಳನ್ನು ಪ್ರಾರಂಭಿಸಿದೆ. ೧೦ ರಿಂದ ೧೨ ಗುಂಪುಗಳ ಪ್ರತಿನಿಧಿಗಳು ಸೇರಿ ಕ್ಲಸ್ಟರ್ ಮಾಡಿ; ೧೦ ರಿಂದ ೧೨ ಕ್ಲಸ್ಟರ್ ಪ್ರತಿನಿಧಿಗಳು ಸೇರಿ ಕ್ಷೇತ್ರ ಮಟ್ಟದಲ್ಲಿ ಸಂಘಗಳನ್ನು ಕಟ್ಟಿದ್ದಾರೆ. ಇವುಗಳು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ–೧೯೬೦ ಪ್ರಕಾರ ನೊಂದಣಿಯಾಗಿರುತ್ತವೆ. ತಾಲ್ಲೂಕು ಮಟ್ಟದ ಒಕ್ಕೂಟಗಳನ್ನು ಪ್ರಾರಂಭಿಸಿದ ಮುಖ್ಯ ಉದ್ದೇಶಗಳೆಂದರೆ; ಇಲಾಖೆಗಳ ಮತ್ತು ಸ್ತ್ರೀಶಕ್ತಿ ಗುಂಪುಗಳ ಮಧ್ಯೆ ಕೊಂಡಿಯಂತೆ ಕೆಲಸ ಮಾಡುವುದು, ತರಬೇತಿ ನೀಡುವುದು, ಬ್ಯಾಂಕ್ ಜೋಡಣೆಗೆ ಸಹಾಯ ಮಾಡುವುದು, ಸ್ತ್ರೀಶಕ್ತಿ ಗುಂಪುಗಳ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸುವುದು, ವಸ್ತು ಪ್ರದರ್ಶನ/ಮೇಳಗಳನ್ನು ಏರ್ಪಡಿಸುವುದು ಇತ್ಯಾದಿಗಳಾಗಿರುತ್ತವೆ. ಒಕ್ಕೂಟಗಳನ್ನು ಪ್ರಾರಂಭ ಮಾಡಲು ಸೂಕ್ತವಾದ ಮಾದರಿ ಬೈಲಾಗಳನ್ನು ಇಲಾಖೆಯು ನೀಡ್ತಿದೆ. ಇಲಾಖಾ ಮಾಹಿತಿಯ ಪ್ರಕಾರ ಇದುವರೆಗೆ ಕರ್ನಾಟಕದಲ್ಲಿ ೧೭೫ ಕ್ಷೇತ್ರ ಮಟ್ಟದ ಒಕ್ಕೂಟಗಳು ನೊಂದಣಿ ಅಧಿನಿಯಮದ ಪ್ರಕಾರ ನೋಂದಣಿಯಾಗಿರುತ್ತವೆ.

ಒಕ್ಕೂಟಗಳ ಮೂಲ ಉದ್ದೇಶವನ್ನು ಮುಂದುವರೆಸಲು ೧೮ ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನ ಸದಸ್ಯರನ್ನು ಸ್ತ್ರೀಶಕ್ತಿ ಗುಂಪುಗಳಿಂದ ಆರಿಸಿಕೊಳ್ಳಬಹುದು. ಇವುಗಳ ಅಜೀವ ಸದಸ್ಯತ್ವ ಪಡೆಯಲು ರೂ. ೧೦೦೦, ವಾರ್ಷಿಕ ಸದಸ್ಯತ್ವ ರೂ. ೨೫೦, ಮಾಸಿಕ ಸದಸ್ಯತ್ವ ರೂ. ೨೫ ಆಗಿರುತ್ತದೆ. ಕಾರ್ಯಕಾರಿ ಸಮಿತಿಯು ಪ್ರತಿವರ್ಷ ಸಾಮಾನ್ಯ ಸಭೆಯಲ್ಲಿ ಆಯ್ಕೆಯಾಗಬೇಕು. ೧೦ ರಿಂದ ೧೨ ಸ್ತ್ರೀಶಕ್ತಿ ಗುಂಪುಗಳು ಕ್ಲಸ್ಟರ್ ಮಾಡಿಕೊಂಡು ಮತ್ತು ಒಂದು ಕ್ಲಸ್ಟರ್ ಪರವಾಗಿ ಒಬ್ಬ ಸದಸ್ಯರಂತೆ ಕಾರ್ಯಕಾರಿ ಸಮಿತಿಗೆ ಚುನಾಯಿತರಾಗುತ್ತಾರೆ. ಈ ಕಾರ್ಯಕಾರಿ ಸಮಿತಿಯು ೧೧ ಸದಸ್ಯರನ್ನು ಹೊಂದಿದ್ದು ಇದರಲ್ಲಿ ೧೦ ಸದಸ್ಯರು ಸಾಮಾನ್ಯ ಸಭೆಯಲ್ಲಿ ಚುನಾಯಿತರಾಗಿದ್ದು ಇನ್ನು ಒಬ್ಬ ಸದಸ್ಯನನ್ನು ಇಲಾಖೆಯು ನಾಮನಿರ್ದೇಶನ ಮಾಡುತ್ತದೆ. ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿಯು ಒಕ್ಕೂಟದ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಮಾದರಿ ೩೦ ಒಕ್ಕೂಟಗಳ ಪೈಕಿ ಕೇವಲ ೫ರಲ್ಲಿ ಮಾತ್ರ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಯು ಕಾರ್ಯದರ್ಶಿಗಳಾಗಿರುತ್ತಾರೆ. ಇನ್ನುಳಿದ ಒಕ್ಕೂಟಗಳಲ್ಲಿ ಮೇಲ್ವಿಚಾರಕರು ಕಾರ್ಯದರ್ಶಿಗಳಾಗಿ ನಾಮನಿರ್ದೇಶನ ಆಗಿದ್ದಾರೆ.

ಕಾರ್ಯಕಾರಿ ಸಮಿತಿಯ ಸಭೆಯು ಪ್ರತಿ ತಿಂಗಳಿಗೊಮ್ಮೆ ನಡೆಸಬೇಕು. ೩೦ರ ಪೈಕಿ ೨೭ ಮಾದರಿ ಒಕ್ಕೂಟಗಳಲ್ಲಿ ತಿಂಗಳಿಗೊಮ್ಮೆ ಸಭೆ ನಡೆಸಲಾಗುತ್ತಿದೆ. ಬಳ್ಳಾರಿಯಲ್ಲಿನ ಒಂದು ಒಕ್ಕೂಟವು ಮಾತ್ರ ತ್ರೈಮಾಸಿಕ ಸಭೆ ನಡೆಸುತ್ತಿದೆ, ಹಾವೇರಿ ಜಿಲ್ಲೆಯ ಒಕ್ಕೂಟವು ಎರಡು ತಿಂಗಳಿಗೊಮ್ಮೆ ಮತ್ತು ಕೋಲಾರ ಮತ್ತು ಕೊಪ್ಪಳ

ಒಕ್ಕೂಟಗಳು ಅನಿಯಮಿತ ಅವಧಿಗಳಲ್ಲಿ ಸಭೆ ನಡೆಸುತ್ತಿವೆ. ಕಾರ್ಯದರ್ಶಿಗಳು ಎಲ್ಲಾ ಲೆಕ್ಕ ಪುಸ್ತಕಗಳನ್ನು ನಿರ್ವಹಿಸುತ್ತಾರೆ ಒಕ್ಕೂಟಗಳಲ್ಲಿ ೨೫ ಒಕ್ಕೂಟಗಳು ತಮ್ಮ ಲೆಕ್ಕ ಪುಸ್ತಕಗಳನ್ನು ಪರಿಶೋಧನೆಗೆ ಒಳಪಡಿಸಿರುತ್ತವೆ. ಲೆಕ್ಕ ಪುಸ್ತಕಗಳ ಪರಿಶೋಧನೆಯನ್ನು ಚಾರ್ಟರ್ಡ್ ಅಕೌಂಟೆಂಟ್‌ಗಳು ಕೈಗೊಳ್ಳುತ್ತಾರೆ. ಒಕ್ಕೂಟಗಳ ಮೂಲಧನವು ಸದಸ್ಯರ ಶುಲ್ಕ, ಅನುದಾನ ಮತ್ತು ದೇಣಿಗೆ ಪಡೆದಿರುವುದು, ನಿಶ್ಚಿತ ಠೇವಣಿ ಮೇಲಿನ ಬಡ್ಡಿ ಮತ್ತಿತರೆ ಆಗಿರುತ್ತದೆ. ಎಲ್ಲಾ ಒಕ್ಕೂಟಗಳು ಸದಸ್ಯತ್ವ ಶುಲ್ಕವನ್ನು ವಸೂಲಿ ಮಾಡಿದ್ದು ಮತ್ತು ಇಲಾಖೆಯಿಂದ ವಾರ್ಷಿಕ ನಿರ್ವಹಣಾ ಹಣವನ್ನು ಕೂಡ ಪಡೆಯುತ್ತಲಿವೆ.

ಇಲಾಖೆಯಿಂದ ವಾರ್ಷಿಕ ನಿರ್ವಹಣೆಗೋಸ್ಕರ ಪ್ರತಿ ಒಕ್ಕೂಟಕ್ಕೆ ರೂ. ೩೦,೦೦೦ ನೀಡಲಾಗುತ್ತದೆ. ಇದರಲ್ಲಿ ರೂ. ೧೫,೦೦೦ ಗಳನ್ನು ಸ್ತ್ರೀಶಕ್ತಿ ಗುಂಪುಗಳ ಸದಸ್ಯರಿಗೆ ಒಂದು ದಿನದ ಅರಿವು ಕಾರ್ಯಕ್ರಮವನ್ನು ನಡೆಸಲು ಉಪಯೋಗಿಸಬಹುದಾಗಿದೆ. ಅನೇಕ ಒಕ್ಕೂಟಗಳು, ಅವುಗಳ ಸದಸ್ಯತ್ವ ತುಂಬಾ ಹೆಚ್ಚಾಗಿರುವುದರಿಂದ ಅರಿವಿನ ಕಾರ್ಯಕ್ರಮವನ್ನು ಎರಡು ತಂಡಗಳಲ್ಲಿ ನಡೆಸುತ್ತಿವೆ. ಅನೇಕ ಒಕ್ಕೂಟಗಳು ಆರೋಗ್ಯ, ನೈರ್ಮಲೀಕರಣ ಕಾರ್ಯಕ್ರಮದ ಅರಿವು ಮತ್ತು ಕೆಲವು ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯಿತಿಯೊಂದಿಗೆ ಜಂಟಿಯಾಗಿ ನಡೆಸುತ್ತಿವೆ. ಕೆಲವು ಒಕ್ಕೂಟಗಳು ಸಾಮಾಜಿಕ ಅಂಶಗಳಾದ ಬಾಲ್ಯ ವಿವಾಹ, ವರದಕ್ಷಿಣೆ ವಿರೋಧಿ, ಮದ್ಯಪಾನ ನಿರ್ಮೂಲನೆ, ಮಹಿಳಾ ಹಕ್ಕುಗಳ ಬಗ್ಗೆ ಕಾನೂನಿನ ಅಂಶಗಳು, ಮುಂತಾದವುಗಳ ಬಗ್ಗೆ ಅರಿವು ಕಾರ್ಯಕ್ರಮಗಳನ್ನು ನಡೆಸುತ್ತಿವೆ. ಕೇವಲ ಕೆಲವು ಒಕ್ಕೂಟಗಳು ಹೊಲಿಗೆ, ಪ್ಯಾಕೇಜಿಂಗ್, ಮುಂತಾದ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ತರಬೇತಿ ಏರ್ಪಡಿಸಿರುತ್ತವೆ.

ತರಬೇತಿ ಕಾರ್ಯಕ್ರಮಗಳನ್ನು ನಡೆಸುವ ವೆಚ್ಚದಲ್ಲಿ ಹೆಚ್ಚಳವಾಗಿರುವುದರಿಂದ ಇಲಾಖೆಯ ಹಣವು ಇವುಗಳಿಗೆ ಸಾಕಾಗುತ್ತಿಲ್ಲ. ಕಾರ್ಯಕ್ರಮಗಳಿಗೆ ಹೆಚ್ಚು ಸದಸ್ಯರು ಭಾಗವಹಿಸುವುದರಿಂದ ಒಂದು ದಿನದ ಅರಿವು ಮೂಡಿಸುವ ಕಾರ್ಯಕ್ರಮವು ಉಪಯೋಗವಿಲ್ಲ ಎಂಬ ಸಾಮಾನ್ಯ ಅಭಿಪ್ರಾಯವಿದೆ. ಇದು ಮೇಳದಂತಿದ್ದು ಪರಿಣಾಮಕಾರಿ ಆಂತರಿಕ ಚರ್ಚೆಗೆ ಆಸ್ಪದವಿರುವುದಿಲ್ಲ. ಸದಸ್ಯರ ಬೇಡಿಕೆಗೆ ಅನುಗುಣವಾಗಿ, ಚಟುವಟಿಕೆಯ ಪ್ರಕಾರ ಮತ್ತು ಭೌಗೋಳಿಕವಾಗಿ ಬೇಕಾಗಿರುವ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ೨೫ ರಿಂದ ೩೦ ಸದಸ್ಯರನ್ನು ಮಾತ್ರ ಸೇರಿಸಿ ಹೆಚ್ಚಿನ ಅವಧಿಯಲ್ಲಿ ತರಬೇತಿ ನೀಡಬೇಕು. ಒಕ್ಕೂಟದ ಕಾರ್ಯಕಾರಿ ಸದಸ್ಯರಿಗೆ ನಾಯಕತ್ವ ಅಭಿವೃದ್ಧಿ, ಹಣಕಾಸಿನ ನಿರ್ವಹಣೆ ಮುಂತಾದವುಗಳ ಬಗ್ಗೆ ಪ್ರತ್ಯೇಕ ತರಬೇತಿ ಕಾರ್ಯಕ್ರಮಗಳನ್ನು ನಡೆಸಬೇಕು. ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಒಕ್ಕೂಟಗಳಿಗೆ ಭೇಟಿ ನೀಡುವಂತಹ ಕಾರ್ಯಕ್ರಮಗಳನ್ನು ಸಂಘಟಿಸಬೇಕು. ಹಣದ ನಿರ್ವಹಣೆಯ ಬಗ್ಗೆ ಸೂಕ್ತವಾದ ಮಾರ್ಗಸೂಚಿಗಳನ್ನು ಇಲಾಖೆಯು ನೀಡಬೇಕು.

ದಾವಣಗೆರೆ, ಹಾಸನ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಒಕ್ಕೂಟಗಳು ತಮ್ಮ ಸದಸ್ಯರಿಗೆ ಸಾಲಗಳನ್ನು ನೀಡಿದ್ದು ವಸೂಲಾತಿ ಪ್ರಮಾಣವು ೯೦ ಪ್ರತಿಶತಕ್ಕಿಂತ ಹೆಚ್ಚಿರುತ್ತದೆ. ಹಾಸನ ಒಕ್ಕೂಟವು ಪ್ರಾರಂಭದಲ್ಲಿ ಸದಸ್ಯರಿಗೆ ಸಾಲ ನೀಡಿದ್ದು ಇತ್ತೀಚಿನ ವರ್ಷಗಳಲ್ಲಿ ಯಾವುದೇ ಸಾಲವನ್ನು ನೀಡಿರುವುದಿಲ್ಲ. ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಒಕ್ಕೂಟಗಳು ಸ್ತ್ರೀಶಕ್ತಿ ಗುಂಪುಗಳಿಗೆ ಸಣ್ಣ ಪ್ರಮಾಣದ ಸಾಲವನ್ನು ನೀಡುತ್ತಿವೆ. ೨೧ ಒಕ್ಕೂಟಗಳು ಸ್ವಂತ ಕಟ್ಟಡವನ್ನು ಹೊಂದಿದ್ದು ಇದರಲ್ಲಿಯೇ ಸಭೆ, ತರಬೇತಿ, ವಸ್ತು ಪ್ರದರ್ಶನ, ಇತ್ಯಾದಿಗಳನ್ನು ನಡೆಸುತ್ತಿವೆ. ಉಳಿದ ೯ ಒಕ್ಕೂಟಗಳು ಇನ್ನೂ ಸ್ವಂತ ಆವರಣ, ಕಟ್ಟಡವನ್ನು ಹೊಂದಬೇಕಾಗಿದೆ. ತುಮಕೂರು ಮತ್ತು ಮೈಸೂರಿನ ಒಕ್ಕೂಟಗಳಿಗೆ ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯಲ್ಲಿಯೇ ಒಂದು ಕೊಠಡಿಯನ್ನು ನೀಡಿದ್ದು ಇದರಲ್ಲಿಯೇ ಕಾರ್ಯನಿರ್ವಹಿಸುತ್ತಿವೆ.

ಕ್ಲಸ್ಟರ್‌ಗಳ ಪಾತ್ರ ಮತ್ತು ಜವಾಬ್ದಾರಿಗಳು ಸದ್ಯಕ್ಕೆ ಕೇವಲ ಕಾಗದದ ಮೇಲಿವೆಯೇ ಹೊರತು ಇವುಗಳಿಗೆ ಯಾವುದೇ ನಿರ್ದಿಷ್ಟವಾದ ಜವಾಬ್ದಾರಿಗಳಿರುವುದಿಲ್ಲ. ಇಲಾಖೆಯ ಅಧಿಕಾರಿಗಳೂ ಸಹ ಕ್ಲಸ್ಟರ್‌ಗಳು ಯಾವ ರೀತಿಯಲ್ಲೂ ಪರಿಣಾಮಕಾರಿಯಾಗಿಲ್ಲ ಆದ್ದರಿಂದ ಇವುಗಳನ್ನು ರದ್ದು ಮಾಡುವುದು ಒಳ್ಳೆಯದು ಎಂದು ಸೂಚಿಸಿದ್ದಾರೆ. ಅನೇಕ ಸದಸ್ಯರು, ಅವರುಗಳಿಗೆ ಆಹಾರ ಸಂಸ್ಕರಣೆ ಮತ್ತು ಪ್ಯಾಕೇಜಿಂಗ್ ಬಗ್ಗೆ ಹಾಗೂ ಮಾರಾಟ ತಂತ್ರಗಳ ಬಗ್ಗೆಯೂ ತರಬೇತಿಯ ಅವಶ್ಯಕತೆ ಇದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅವರಲ್ಲಿ ಅನೇಕರು ಆಹಾರ ಸಂಸ್ಕರಣೆ ಮತ್ತು ಕಾಂಡಿಮೆಂಟ್ಸ್‌ಗಳ ತಯಾರಿಕೆಯಲ್ಲಿ ತೊಡಗಿದ್ದು ಆಕರ್ಷಣೀಯ ಪ್ಯಾಕೇಜ್ ಮಾಡದ ಕಾರಣ ಅವರ ಉತ್ಪನ್ನಗಳನ್ನು ಮಾರಾಟ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರವು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಒಕ್ಕೂಟಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮೊದಲ ಹೆಜ್ಜೆ ಇಟ್ಟಿರುವುದು ಶ್ಲಾಘನೀಯ. ಸ್ತ್ರೀಶಕ್ತಿ ಭವನಗಳು ಸ್ತ್ರೀಶಕ್ತಿ ಗುಂಪುಗಳ ಸದಸ್ಯರಿಗೆ ತರಬೇತಿ ನೀಡಲು ಸಹಾಯವಾಗಿದ್ದು ಇವರಿಗೆ ಸಭೆ ನಡೆಸಲು, ವಿಚಾರಗೋಷ್ಠಿ, ಆರೋಗ್ಯ ಶಿಬಿರ ಇತ್ಯಾದಿ ನಡೆಸಲು ಸಹ ಸ್ಥಳಾವಕಾಶ ನೀಡಿರುತ್ತವೆ. ಸ್ವಂತ ಜಾಗವನ್ನು ಹೊಂದಿರುವುದು ಒಕ್ಕೂಟಗಳ ಚಿತ್ರಣ ಮತ್ತು ಸ್ಥಾನಮಾನವನ್ನು ಸಹ ಹೆಚ್ಚಿಸಿದೆ. ಅನೇಕ ಒಕ್ಕೂಟಗಳ ಆದಾಯವೂ ಸಹ ಬಾಡಿಗೆಗಳಿಂದ ಹೆಚ್ಚಾಗಿರುತ್ತದೆ. ಅನೇಕ ಸಮಯದಲ್ಲಿ ಕಟ್ಟಡ ನಿರ್ಮಿಸಲು ಅವಶ್ಯಕವಾದ ಜಾಗವನ್ನು ಸರಿಯಾಗಿ ಗುರುತಿಸಿರುವುದಿಲ್ಲ. ಅನೇಕ ಸ್ತ್ರೀಶಕ್ತಿ ಭವನಗಳು ನಗರದ ಹೊರವಲಯದಲ್ಲಿ ನಿರ್ಮಿಸಿರುವುದರಿಂದ ಮಹಿಳಾ ಸದಸ್ಯರು ಇಲ್ಲಿಗೆ ಭೇಟಿ ನೀಡಲು ತುಂಬಾ ತೊಂದರೆ ಪಡುತ್ತಿದ್ದಾರೆ. ಕೆಲವು ಭವನಗಳು ಸ್ತ್ರೀಶಕ್ತಿ ಸದಸ್ಯರುಗಳಿಗೆ ಅಂಗಡಿ

ಮಳಿಗೆಗಳನ್ನು ನಿರ್ಮಿಸಿದ್ದರೂ ಕೂಡ ಈ ಸ್ಥಳವು ವಾಣಿಜ್ಯ ಚಟುವಟಿಕೆಗಳಿಗೆ ಸೂಕ್ತವಾಗಿರುವುದಿಲ್ಲ.

ಬೀದರ್ ಮತ್ತು ಹಾಸನದಲ್ಲಿ ಜಿಲ್ಲಾ ಸ್ತ್ರೀಶಕ್ತಿ ಭವನಗಳನ್ನು ನೆಲ ಅಂತಸ್ತಿನಲ್ಲಿ ನಿರ್ಮಿಸಿದ್ದು ಇದೇ ಕಟ್ಟಡದ ಮೊದಲ ಅಂತಸ್ತಿನಲ್ಲಿ ತಾಲ್ಲೂಕು ಸ್ತ್ರೀಶಕ್ತಿ ಭವನಗಳನ್ನು ಕಟ್ಟಲಾಗಿದೆ. ಈ ಭವನಗಳನ್ನು ನಗರದ ಹೊರವಲಯಗಳಲ್ಲಿ ನಿರ್ಮಿಸಲಾಗಿದೆ. ಇವುಗಳ ನಿರ್ಮಾಣ ಮತ್ತು ಖರ್ಚು ವೆಚ್ಚದಿಂದ ಒಕ್ಕೂಟಕ್ಕೆ ಮತ್ತು ಸದಸ್ಯರಿಗೆ ಯಾವುದೇ ಸಹಾಯವಾಗಿರುವುದಿಲ್ಲ. ಇದರಿಂದ ಯೋಜನೆಯ ಮೂಲ ಉದ್ದೇಶ ವಿಫಲವಾದಂತಾಗಿದೆ. ಸ್ವಸಹಾಯ ಗುಂಪುಗಳಿಗೆ ಸೇರಿದ ಜನರು ಸಾಮಾಜಿಕ ಮತ್ತು ಆರ್ಥಿಕ ದೃಷ್ಟಿಯಿಂದ ಉತ್ತಮ ಮಟ್ಟವನ್ನು ಕಂಡುಕೊಂಡಿದ್ದಾರೆ ಎಂದು ಗೊತ್ತಾಗುತ್ತದೆ. ಸ್ವಸಹಾಯ ಗುಂಪುಗಳನ್ನು ಸೇರುವ ಮೊದಲು ಪ್ರತಿ ಕುಟುಂಬದ ಆಸ್ತಿಗಳ ಸರಾಸರಿ (ಗೃಹೋಪಯೋಗಿ ಮತ್ತು ಜಾನುವಾರು ಸೇರಿ) ರೂ. 6843 ಆಗಿದ್ದು, ಇದು ಗುಂಪು ಸೇರಿದ ನಂತರದ ಅವಧಿಯಲ್ಲಿ 72.3 ಪ್ರತಿಶತದಷ್ಟು ಏರಿಕೆಯಾಗಿರುವುದು ಕಂಡುಬಂದಿದೆ. ಕೇವಲ 23 ಪ್ರತಿಶತದಷ್ಟು ಸದಸ್ಯರು ಪೂರ್ವ ಅವಧಿಯಲ್ಲಿ ಸ್ವಲ್ಪವೇ ಉಳಿತಾಯ ಹೊಂದಿದ್ದು, ಗುಂಪು ಸೇರಿದ ನಂತರ ಸಂದರ್ಶಿಸಿದ ಎಲ್ಲಾ ಸದಸ್ಯರು ಉಳಿತಾಯ ಮಾಡಿರುವುದು ಕಂಡುಬಂದಿದೆ.

ಗುಂಪು ಸೇರುವುದಕ್ಕೆ ಮುಂಚೆ ಒಂದು ಕುಟುಂಬದಿಂದ 320 ದಿನಕೂಲಿಯಿಂದ ನಂತರ 375ಕ್ಕೆ ಏರಿಕೆಯಾಗಿದೆ. ಸಾಮಾಜಿಕ ಅಂಶಗಳಿಗೆ ಸಂಬಂಧಿಸಿದಂತೆ ಸ್ವಸಹಾಯ ಗುಂಪು ಸದಸ್ಯರಾದವರು ಅದರ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಅಂಥ ಮಹಿಳೆಯರ ಆತ್ಮವಿಶ್ವಾಸ ಸುಧಾರಣೆ ಆಗಿರುವುದು ಕಂಡುಬಂದಿದೆ. ಉದ್ಯೋಗದ ಕಾರ್ಯಕ್ಷಮತೆಯು ಹೆಚ್ಚಾಗಿದೆ. ಈ ವಿಚಾರದಲ್ಲಿ ತಮ್ಮ ಅಸ್ತಿತ್ವ ಮತ್ತು ಮೌಲ್ಯದ ಅರಿವು ಹೆಚ್ಚಾಗಿದೆ ಎಂದು ಸ್ವತ: ಮಹಿಳೆಯರೇ ಒಪ್ಪಿಕೊಂಡಿದ್ದಾರೆ. ಅವರು ತಮ್ಮ ದೈನಂದಿನ ಜೀವನದಲ್ಲಿ ಅವರು ಎದುರಿಸುತ್ತಿರುವ ವಿವಿಧ ಸಾಮಾಜಿಕ ಕಷ್ಟ ಮತ್ತು ಸಮಸ್ಯೆಗಳನ್ನು ಎದುರಿಸುವಲ್ಲಿ ಸಾಕಷ್ಟು ಸಮರ್ಥರಾಗಿದ್ದಾರೆ.

2002ರಲ್ಲಿ ಮೈರಾಡ ಸಂಸ್ಥೆಯು ದಕ್ಷಿಣದ ರಾಜ್ಯಗಳಲ್ಲಿ ಸ್ವಸಹಾಯ ಗುಂಪಿನ ಸದಸ್ಯರ ಮಹಿಳಾ ಸಬಲೀಕರಣದ ಬಗ್ಗೆ ಅಧ್ಯಯನ ಪ್ರಾರಂಭಿಸಿ ಒಟ್ಟಾರೆ 13 ಸ್ವ ಸಹಾಯ ಗುಂಪುಗಳನ್ನು ಸಮೀಕ್ಷೆ ಮಾಡಿದೆ. ಕುಟುಂಬದ ಆರ್ಥಿಕ ಸಂಪನ್ಮೂಲಗಳ ಮೇಲೆ ಅವರ ಪ್ರಭಾವದ ನೆಲೆಯಲ್ಲಿ ಮತ್ತು ಆರ್ಥಿಕ ನಿರ್ಣಯ ತೆಗೆದುಕೊಳ್ಳುವಲ್ಲಿ ಸ್ವಸಹಾಯ ಗುಂಪಿನ ಸದಸ್ಯರ ಸಬಲೀಕರಣವನ್ನು ಈ ಸಮೀಕ್ಷೆಯು ಸಾಬೀತುಪಡಿಸಿದೆ. ಇದರ ಜೊತೆಗೆ ಆಕೆಯು ತನ್ನ ವೈಯಕ್ತಿಕ ಅಭಿವೃದ್ಧಿ ಮೇಲೆ, ಸ್ಥಳೀಯ ರಾಜಕೀಯದ ಮೇಲೆ, ಅಧಿಕಾರ ಮತ್ತು ಸಾಮಾಜಿಕ ರಾಜಕೀಯ ನಿರ್ಣಯ ಮಾಡುವಿಕೆ ಮತ್ತು ತನ್ನ ಕುಟುಂಬ ಕಲ್ಯಾಣಕ್ಕೆ ಸಂಬಂಧಿಸಿದ ಇತರ ನಿರ್ಧಾರಗಳ ಮೇಲೆ ಅವಳು ಪ್ರಭಾವ ಬೀರುತ್ತಾಳೆ ಎಂಬುದನ್ನು ಕೂಡ ಸಮೀಕ್ಷೆಯಲ್ಲಿ ಗಮನಿಸಲಾಗಿದೆ.

ಗುಂಪು ರಚನೆಯಲ್ಲಿ ಹೆಚ್ಚು ಅಗತ್ಯ ಇರುವ ಮಹಿಳೆಯರಿಗೆ ಆದ್ಯತೆ ನೀಡಬೇಕಿರುವುದರಿಂದ, ಹಳ್ಳಿಯ ಕುಟುಂಬದ ಬಡವರಲ್ಲಿ ಅತಿ ಬಡ ಸದಸ್ಯರನ್ನು ಆಯ್ಕೆ ಮಾಡಬೇಕು; ಮತ್ತು ಗಮನಿಸಬೇಕಾದ ಅಂಶವೇನೆಂದರೆ ಗುಂಪು ರಚನೆಯಲ್ಲಿ ಸ್ಥಿರತೆ ಕಾಪಾಡಬೇಕು. ವಲಸೆಯ ಕಾರಣದಿಂದಾಗಿ, ಅದರಲ್ಲೂ ಮದುವೆ ಆಗದ ಹೆಣ್ಣು ಮಕ್ಕಳು ಮದುವೆಯ ನಂತರ ಬೇರೆ ಹಳ್ಳಿಗಳಿಗೆ ಹೋಗುವುದರಿಂದ, ಆದಷ್ಟು ಗುಂಪು ರಚನೆಯ ಸಮಯದಲ್ಲಿ ಗುಂಪಿನ ಮುಖಂಡರು ಮದುವೆ ಆದ ಮಹಿಳೆಯರ ಮೇಲೆ ಕೇಂದ್ರೀಕರಿಸಬೇಕೆಂದು ವರದಿಯಲ್ಲಿ ಸೂಚಿಸಲಾಗಿದೆ.

ಭಾರತ ಮತ್ತು ಇತರೆ ದೇಶಗಳಲ್ಲಿ ಇತ್ತೀಚಿನ ಕಿರು ಬಂಡವಾಳ ಸಂಸ್ಥೆಗಳ ಮಾದರಿಯ ಬಗ್ಗೆ 2006ರಲ್ಲಿ ಪ್ರಭುಗೇಟ್ ನಡೆಸಿದ ಅಧ್ಯಯನವು ಹಲವು ಫಲಿತಾಂಶಗಳನ್ನು ಪ್ರಮುಖವಾಗಿ ವಿವರಿಸಿದೆ. 1996–2005ರ ಅವಧಿಯಲ್ಲಿ ಭಾರತದಲ್ಲಿ ಕಿರುಬಂಡವಾಳ ಕ್ಷೇತ್ರವು ಅಭೂತಪೂರ್ವವಾಗಿ ಹೆಚ್ಚಳವಾದುದರ ನಿಮಿತ್ತ ಮತ್ತು ಈ ಸಾಧನೆಯ ಸಾಧಕ ಭಾದಕಗಳನ್ನು ಇತರೆ ಸಂಸ್ಥೆಗಳು (ಸರ್ಕಾರ, ಸರ್ಕಾರೇತರ ಸಂಸ್ಥೆಗಳು, ಹಣಕಾಸು ಸಂಸ್ಥೆಗಳು ಇತರೆ) ತೋರಿಸಿರುವ ಉತ್ಸುಕತೆಯನ್ನು ತಿಳಿದುಕೊಳ್ಳುವುದಕ್ಕೆ ಈ ವರದಿಯು ಉಪಯುಕ್ತವಾಗಿದೆ. ಈ ಆದ್ಯಯನವು ಇತ್ತೀಚಿನ 3 ಅಧ್ಯಯನಗಳನ್ನು ವಿಶ್ಲೇಷಿಸಿದೆ. ಅವು ಪ್ರಕಾಶ್ ಮತ್ತು ಇತರರು (2005), ಅಪ್‌ಮಾಸ್ (2005) ಮತ್ತು ಇಡಿಎ ಗ್ರಾಮೀಣ ಪದ್ದತಿ ಮತ್ತು ಅಪ್‌ಮಾಸ್ 2006, ಈ ಎಲ್ಲಾ ಅಧ್ಯಯನಗಳು ಸ್ವಸಹಾಯ ಗುಂಪುಗಳ ಬ್ಯಾಂಕ್ ಜೋಡಣೆಯ ಕ್ರಮವನ್ನು ಸಮರ್ಥಿಸಲು ಕಿರು ಬಂಡವಾಳ ಸಂಸ್ಥೆಗಳು ತಮ್ಮ ಸಾಮರ್ಥ್ಯಕ್ಕಿಂತ ಹೆಚ್ಚಿನ ರೀತಿಯಲ್ಲಿ ಬೆಳೆಯುತ್ತಿವೆ ಎಂಬುದನ್ನು ಸಾಬೀತುಪಡಿಸಿವೆ.

ಸರ್ಕಾರಿ ಸಂಸ್ಥೆಗಳು ರಚಿಸಿದ ಗುಂಪುಗಳು ದುರ್ಬಲವಾಗಿದ್ದು, ಸರ್ಕಾರೇತರ ಸಂಸ್ಥೆಗಳು ರಚಿಸಿದ ಗುಂಪುಗಳಿಗಿಂತ ಪ್ರಮಾಣದಲ್ಲಿ ಕಡಿಮೆಯಾಗುತ್ತಲಿವೆ ಮತ್ತು ಬ್ಯಾಂಕುಗಳೂ ಸಹ ಒಟ್ಟಾರೆ ಕಾರ್ಯಕ್ರಮದ ಗುಣಮಟ್ಟವನ್ನು ಹೆಚ್ಚಿಸಬೇಕೆಂದು ಅಧ್ಯಯನದ ಟಿಪ್ಪಣಿಗಳು ತಿಳಿಸಿವೆ. ಈ ಅಧ್ಯಯನವು ಗುಂಪಿನ ನ್ಯಾಯನೀತಿ, ದೀರ್ಘಾವಧಿ ಮತ್ತು ಮಧ್ಯೆ ಬಿಡುವ ಸದಸ್ಯರನ್ನು ತಡೆಗಟ್ಟಲು ಗುಂಪಿನ ಪುಸ್ತಕಗಳ ನಿರ್ವಹಣೆಯನ್ನು ವೃದ್ಧಿಸುವುದು, ಕ್ಲಸ್ಟರ್‌ಗಳನ್ನು ರಚಿಸುವುದು ಮತ್ತು ಒಕ್ಕೂಟಗಳ ರಚನೆಯು ಬೀಗದ ಕೈಯಾಗಿರುತ್ತದೆ ಎಂದು ವರದಿ ಮಾಡಿದೆ. ಮುಂದೆ, ಇದು ಬ್ಯಾಂಕುಗಳು ಸಾಲದ ಖಾತೆಯನ್ನು ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡುವುದಕ್ಕೆ ಸಹಕಾರಿಯಾಗುತ್ತದೆ ಮತ್ತೆ ಸಾಲ ಮರುಪಾವತಿ ಪ್ರಮಾಣವು ಅದರ ಮೇಲೆ ಅವಲಂಬಿತವಾಗಿರುತ್ತದೆ ಎಂದೂ ತಿಳಿಸಿದೆ.

ಸ್ವಸಹಾಯ ಗುಂಪುಗಳು ಉಳಿತಾಯ, ಸಾಲ, ಮತ್ತು ಮರುಪಾವತಿಯನ್ನು ಖಾತರಿಪಡಿಸುವ ದೃಷ್ಟಿಯಿಂದ ಹಣಕಾಸಿನ ಸೇವೆಗಳ ಪೂರೈಕೆದಾರರಂತೆ ಮಾತ್ರವಲ್ಲದೆ ಜಾಗೃತಿ ಸೃಷ್ಟಿ ಮತ್ತು ಸಬಲೀಕರಣದ ವಿಷಯದಲ್ಲಿಯೂ ಸಹ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದು ವಿಶ್ಲೇಷಣೆಯ ಫಲಿತಾಂಶಗಳು ಸೂಚಿಸುತ್ತವೆ. ಇವುಗಳಲ್ಲದೇ ಮಾನವ ಸಂಪನ್ಮೂಲಗಳು ಮತ್ತು ನಿರ್ವಹಣಾ ಕೌಶಲ್ಯಗಳು, ನಾಯಕತ್ವ ಮತ್ತು ಪ್ರೇರಣೆಗಳ ಬೆಳವಣಿಗೆಗೆ ಕಾರಣವಾಗಿವೆ ಎಂದೂ; 2006ರಲ್ಲಿ ಗುಂಪಿನ ಪ್ರತಿ ಸದಸ್ಯರ ಸರಾಸರಿ ವಾರ್ಷಿಕ ಉಳಿತಾಯ ರೂ. 1177 ಎಂದೂ ಅಧ್ಯಯನವು ತಿಳಿಸಿದೆ. ಉಳಿತಾಯದಲ್ಲಿ ವಾರ್ಷಿಕ ಸರಾಸರಿ 14.20 ಪ್ರತಿಶತದಷ್ಟು ಏರಿಕೆಯಾಗಿದೆ. 90 ಪ್ರತಿಶತ ಸ್ವಸಹಾಯ ಗುಂಪುಗಳು ಬ್ಯಾಂಕುಗಳಿಂದ ಸಾಲದ ಹಣವನ್ನು ಪಡೆದಿರುತ್ತವೆ ಎಂದೂ ಈ ಅಧ್ಯಯನವು ಕಂಡುಹಿಡಿದಿದೆ.

ಮೊದಲಿಗೆ 2006ರಲ್ಲಿ ಸ್ವಸಹಾಯ ಗುಂಪುಗಳು ಸದಸ್ಯರಿಗೆ ವರ್ಷದಲ್ಲಿ ಹೆಚ್ಚಿನ ಸಾಲಗಳನ್ನು ಮಂಜೂರು ಮಾಡುವ ಸಾಮರ್ಥ್ಯ ಹೊಂದಿದ್ದು ಗುಂಪುಗಳು ಹೆಚ್ಚಿನ ಮೊತ್ತದ ಸಾಲ ನೀಡುತ್ತಿವೆ. ಎರಡನೇಯದಾಗಿ, 2006ರಲ್ಲಿ ಗುಂಪುಗಳು ಹೆಚ್ಚಿನ ಪ್ರಮಾಣದ ಸಾಲವನ್ನು ಆದಾಯ ಉತ್ಪನ್ನ ಚಟುವಟಿಕೆಗಳಿಗೆ ಉಪಯೋಗಿಸಿವೆ. ಸುಮಾರು 60.2 ಪ್ರತಿಶತ ಸ್ವಸಹಾಯ ಗುಂಪುಗಳು 100 ಪ್ರತಿಶತ ಸಾಲ ವಸೂಲಾತಿ ದಾಖಲೆ ಹೊಂದಿವೆ.

ಸ್ವಸಹಾಯ ಗುಂಪುಗಳು ಆರ್ಥಿಕ, ಮತ್ತು ಸಬಲೀಕರಣ ಅಂಶಗಳೆರಡರಲ್ಲೂ ಉತ್ತಮ ಕಾರ್ಯಕ್ಷಮತೆಯನ್ನು ವರದಿ ಮಾಡಿವೆ. ಅವರ ಕೌಟುಂಬಿಕ ನಿವ್ವಳ ಆದಾಯವು ವಾರ್ಷಿಕ 6.1 ಪ್ರತಿಶತದಷ್ಟು ಹೆಚ್ಚಳವಾಗಿದೆ. ಸ್ವಸಹಾಯ ಗುಂಪುಗಳ ಸದಸ್ಯರ 60 ಪ್ರತಿಶತ ಕುಟುಂಬಗಳ ಉತ್ಪಾದಕ ಸ್ವತ್ತುಗಳ ಮಾಲಿಕತ್ವವು ಗುಂಪು ಸೇರಿದ ನಂತರದಲ್ಲಿ ಹೆಚ್ಚಾಗಿದೆ. ಅಧ್ಯಯನವು ಅವರ ಗುಂಪುಗಳಿಗೆ ಸೇರುವ ಮುಂಚಿನ ಪರಿಸ್ಥಿತಿಗನುಗುಣವಾಗಿ ಕ್ರಮವಾಗಿ ಆಹಾರ ಮತ್ತು ಆಹಾರೇತರ ವಸ್ತುಗಳ ಬಳಕೆ ವಾರ್ಷಿಕ ವೆಚ್ಚದಲ್ಲಿ 5.1 ಪ್ರತಿಶತ ಮತ್ತು 5.4 ಪ್ರತಿಶತ ಬದಲಾವಣೆ ಕಂಡುಕೊಂಡಿದೆ.

ಸಾಮಾಜಿಕ ಸಬಲೀಕರಣದ ಕುರಿತಾದ ಅವಿಷ್ಕಾರಗಳಲ್ಲಿ ಸ್ವ ಸಹಾಯ ಗುಂಪುಗಳು ಚಳುವಳಿಯಲ್ಲಿ ಸೇರ್ಪಡೆಗೊಂಡಾಗಿನಿಂದಲೂ ಮಹಿಳೆಯರ ಸಾಮಾಜಿಕ ಸಬಲೀಕರಣವು ಹೆಚ್ಚಾಗಿದೆಯೆಂದು ಬ್ಯಾಂಕ್ ಸಂಬಂಧಿತ ಗುಂಪುಗಳಲ್ಲಿ 90 ಪ್ರತಿಶತಕ್ಕಿಂತ ಹೆಚ್ಚಿನ ಕುಟುಂಬಗಳು ವರದಿ ಮಾಡಿವೆ. ಸಾಮಾಜಿಕ ಹಕ್ಕುಗಳನ್ನು ಸಾಧಿಸಲು ಬ್ಯಾಂಕ್ ಜೋಡಣೆ ಕಾರ್ಯಕ್ರಮವು ಗ್ರಾಮೀಣ ಬಡವರಿಗೆ, ವಿಶೇಷವಾಗಿ ಮಹಿಳೆಯರಿಗೆ, ಸಹಾಯ ಮಾಡಿದೆ ಎಂದು ಇದು ಸೂಚಿಸುತ್ತದೆ.

ಸ್ತ್ರೀಶಕ್ತಿ ಗುಂಪುಗಳು ಸಾಮಾಜಿಕ ಚಟುವಟಿಕೆಗಳಾದ ಅಂಗನವಾಡಿ/ಶಾಲಾ ಆವರಣ ಸ್ವಚ್ಚಗೊಳಿಸುವುದು, ಸಸಿ ನೆಡುವುದು, ಪಲ್ಸ್ ಪೋಲಿಯೋ, ಚಾರಿಟಬಲ್ ಕೆಲಸಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳತ್ತಲಿವೆ. ಸುಮಾರು 40 ಪ್ರತಿಶತದಷ್ಟು ಸದಸ್ಯರು ಸಾಮಾಜಿಕವಾಗಿ ಸಕ್ರಿಯರಾಗಿದ್ದಾರೆ. ಇವರು ಮದ್ಯಪಾನ, ವರದಕ್ಷಿಣೆ, ಬಾಲಕಾರ್ಮಿಕತೆ, ಇತ್ಯಾದಿಗಳನ್ನು ನಿರ್ಮೂಲನೆ ಮಾಡಲು ತೊಡಗಿದ್ದಾರೆ. ಮಾದರಿಯಲ್ಲಿನ 130 ಗುಂಪುಗಳು ಗ್ರಾಮ ಪಂಚಾಯಿತಿಗಳಿಗೆ ಚುನಾಯಿತರಾದ ಸದಸ್ಯರನ್ನು ಹೊಂದಿರುತ್ತವೆ. ಮೌಲ್ಯಮಾಪನದ ಫಲಿತಾಂಶಗಳ ಆಧಾರದ ಮೇಲೆ ಗುಂಪುಗಳನ್ನು ಶ್ರೇಣೀಕರಿಸಲಾಗಿದ್ದು ಇದರಲ್ಲಿ ಮನಮುಟ್ಟುವಂತಹ ವಿಷಯವೆಂದರೆ 226 ಸ್ತ್ರೀಶಕ್ತಿ ಗುಂಪುಗಳು 'ಎ' ಶ್ರೇಣಿಯನ್ನು ಅಂದರೆ 75 ಪ್ರತಿಶತಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದು, 607 ಗುಂಪುಗಳು 'ಬಿ' ಶ್ರೇಣಿಯನ್ನು ಅಂದರೆ 57.75 ಪ್ರತಿಶತ ಅಂಕಗಳು ಮತ್ತು ಕೇವಲ 85 ಗುಂಪುಗಳು 'ಸಿ' ಶ್ರೇಣಿಯನ್ನು ಅಂದರೆ 50 ಪ್ರತಿಶತದಷ್ಟು ಅಥವಾ ಕಡಿಮೆ ಅಂಕಗಳನ್ನು ಪಡೆದಿವೆ. ಕ್ಷೇತ್ರ ಭೇಟಿಯ ಸಮಯದಲ್ಲಿ ಸಂಗ್ರಹವಾದ ಅಭಿಪ್ರಾಯದ ಪ್ರಕಾರ ಸದಸ್ಯರು ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ, ಸ್ವಯಂ ವಿಶ್ವಾಸ, ನಾಯಕತ್ವ, ಆರ್ಥಿಕ ಸಾಕ್ಷರತೆ, ಆರೋಗ್ಯದ ಬಗ್ಗೆ ತಿಳುವಳಿಕೆ, ನೈರ್ಮಲ್ಯ ಮತ್ತು ಪರಿಸರ ಕಾಳಜಿ ಇತ್ಯಾದಿ ಬಗ್ಗೆ ಈ ಯೋಜನೆಯಿಂದ ಅನುಕೂಲಪಟ್ಟಿದ್ದಾರೆ.

ಇಲಾಖೆಯು ನೀಡಿರುವ ದತ್ತಾಂಶದ ಪ್ರಕಾರ ದಿನಾಂಕ 31–12–2015 ಕ್ಕೆ ಒಟ್ಟು 1.40 ಲಕ್ಷ ಸ್ವಸಹಾಯ ಗುಂಪುಗಳ ಪೈಕಿ 12.6 ಪ್ರತಿಶತದಷ್ಟು ಗುಂಪುಗಳು ಕಾರ್ಯ ನಿರ್ವಹಿಸುತ್ತಿಲ್ಲ. ನಮ್ಮ ಮಾದರಿಯಲ್ಲಿಯೂ ಅವುಗಳು ಪ್ರಸ್ತುತ ಕಡಿಮೆ ಇದ್ದರೂ ಸಹ ನಿಷ್ಕ್ರಿಯ ಗುಂಪುಗಳು ಕಂಡು ಬಂದಿವೆ. ಕ್ಲಸ್ಟರ್‌ಗಳು ಸಾಕಷ್ಟು ಚುರುಕಾಗಿರುವುದಿಲ್ಲ ಮತ್ತು ಸ್ತ್ರೀಶಕ್ತಿ ಗುಂಪುಗಳಿಗೆ ಇದರ ಬಗ್ಗೆ ತಿಳಿದಿರುವುದಿಲ್ಲ. ತಾಲ್ಲೂಕು ಮಟ್ಟದಲ್ಲಿ ಒಕ್ಕೂಟಗಳನ್ನು ರಚಿಸಲಾಗಿದೆ. ಆದರೂ ಅವುಗಳ ಪಾತ್ರದ ಸ್ಪಷ್ಟತೆ ಮತ್ತು ಹಣಕಾಸಿನ ಸ್ವಾಯತ್ತತೆ ಕೊರತೆಯಿಂದಾಗಿ ಅವುಗಳು ಸ್ತ್ರೀಶಕ್ತಿ ಗುಂಪುಗಳಿಗೆ ಕೈ ಹಿಡಿದು ನಡೆಸುವ ಮತ್ತು ಮಾರ್ಗದರ್ಶನ ನಾಯಕತ್ವದ ಪಾತ್ರವನ್ನು ವಹಿಸಿಕೊಳ್ಳಬೇಕಾಗಿದೆ.

**ಆಕರ:** ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಇವರ ವರದಿ, 2018.

**ಪೂರಕ ಪಠ್ಯ**

**ಮೈಕ್ರೋ ಫೈನಾನ್ಸ್: ಮ್ಯಾಕ್ರೋ ಪ್ರಾಫಿಟ್**

**ಶಿವಸುಂದರ್**

ಈ ದೇಶದ ಸಂಪನ್ಮೂಲಗಳು ಅಂದರೆ ಜಮೀನು, ಇತರ ಆರ್ಥಿಕ ಉತ್ಪತ್ತಿಗಳಲ್ಲಿ ಸರಿಸಮಾನವಾದ ಪಾಲು ಸಿಗುವಂಥಾ ಕಾಯಿದೆಗಳೇ ನಮ್ಮ ಸಂವಿಧಾನದಲ್ಲಿ ಇಲ್ಲ.

ಇದೇ ಬಡವರು ಬಡವರಾಗಿಯೇ ಉಳಿಯಲು ಕಾರಣ ಎಂಬ ವಾದವನ್ನು ಸ್ವಾತಂತ್ರ್ಯ ಬರುವ ಹಿಂದಿನಿಂದಲೂ ಎಲ್ಲಾ ಪ್ರಗತಿಪರ ಮತ್ತು ಎಡಪಂತೀಯ ಚಿಂತಕರು ವಾದಿಸುತ್ತಾ ಬಂದಿದ್ದಾರೆ. ಅಂಬೇಡ್ಕರ್ ಅವರಂತೂ ಈ ದೇಶದ ಪ್ರಮುಖ ಉತ್ಪಾದನಾ ಸಾಧನವಾದ ಭೂಮಿಯು ಖಾಸಗಿ ವ್ಯಕ್ತಿಗಳಲ್ಲೇ ಕೇಂದ್ರೀಕೃತವಾಗಿರುವುದೆ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗೆ ಪ್ರಮುಖ ಕಾರಣ ಎಂದು ಸ್ಪಷ್ಟವಾಗಿ ಗುರುತಿಸಿದ್ದರು. ಆದ್ದರಿಂದಲೇ ಭೂಮಿಯ ರಾಷ್ಟ್ರೀಕರಣವಾಗಬೇಕೆಂದೂ ತಮ್ಮ "ಸ್ಟೇಟ್ ಅಂಡ್ ಮೈನಾರಿಟೀಸ್" ದಸ್ತಾವೇಜಿನಲ್ಲಿ ಪ್ರಬಲವಾಗಿ ವಾದಿಸಿದ್ದರು.

ಅದೇನೇ ಇರಲಿ, 1991ರ ನಂತರ ದೇಶದ ಚಿಂತನೆಯ ಕ್ರಮವೇ ಬದಲಾಯಿತಲ್ಲ. ಈಗ ಸಂಪನ್ಮೂಲದ ಸಮಾನ ವಿತರಣೆ ಇನ್ನಿತ್ಯಾದಿ ಸಮಾಜವಾದಿ ಪರಿಹಾರಗಳಿಗಿಂತ ಮಾರುಕಟ್ಟೆಯೇ ಸರ್ವರೋಗ ನಿವಾರಕವೆಂಬ ತತ್ವವನ್ನು ಸರ್ಕಾರ ಎಲ್ಲಾ ಕ್ಷೇತ್ರಗಳಲ್ಲೂ ಜಾರಿಗೆ ತಂದಿತು. ಅದರ ಪ್ರಕಾರ ಪ್ರತಿಯೊಬ್ಬರೂ ಕೊಳ್ಳುವವರೋ ಅಥವಾ ಮಾರುವವರೋ ಆದರೆ ಎಲ್ಲರ ಸಮಸ್ಯೆಯೂ ಬಗೆಹರಿಯುತ್ತದೆ. ಈ ಸಿದ್ಧಾಂತದ ಪ್ರಕಾರ ಬಡತನಕ್ಕೆ ಪ್ರಮುಖ ಕಾರಣ ಬಡವರು ಮಾರುಕಟ್ಟೆಯಲ್ಲಿ ಕೊಳ್ಳುವವರಾಗಿ ಅಥವಾ ಮಾರುವವರಾಗಿ ಹೆಚ್ಚಾಗಿ ಪ್ರವೇಶಿಸುತ್ತಿಲ್ಲ ಎನ್ನುವುದು. ಬಡವರು ಮಾರುಕಟ್ಟೆ ಪ್ರವೇಶ ಮಾಡಲಾಗದಿರುವುದಕ್ಕೆ ಪ್ರಮುಖ ಕಾರಣ ಅವರ ಬಳಿ ಬಂಡವಾಳ ಇಲ್ಲದಿರುವುದು. ಬಡವರೂ ಕೂಡಾ ಸಣ್ಣಪುಟ್ಟ ಉದ್ಯಮಗಳಲ್ಲಿ ತೊಡಗಿ, ಬುಟ್ಟಿ ಹೆಣೆಯುವುದು, ಹೂವು ಕಟ್ಟುವುದು, ಚಪ್ಪಲಿ ಮಾರುವುದು, ಸಣ್ಣ ಗೂಡಂಗಡಿ ನಡೆಸುವುದು, ಯಾವುದಾದರೂ ಸರಿ, ಉದ್ಯಮದಲ್ಲಿ ತೊಡಗಿ ತಮ್ಮ ಸರಕು ಮಾರಿದರೆ ಬಡತನ ಹೋಗುತ್ತದೆ ಎಂಬುದು ಇದರ ತರ್ಕ. ಆದರೆ ಬಡವರು ಉದ್ಯಮಿಗಳಾಗದೆ ಇರಲು ಅವರ ಬಳಿ ಬಂಡವಾಳವಿಲ್ಲದಿರುವುದೇ ಕಾರಣ ಎಂದು ತರ್ಕಿಸಿದ ಮೊಹಮ್ಮದ್ ಯೂನಸ್ ಎಂಬುವರು ಬಾಂಗ್ಲಾದೇಶದಲ್ಲಿ ಮೊಟ್ಟಮೊದಲಿಗೆ ಬಡವರಿಗೆ ಸಣ್ಣ ಸಾಲ ಕೊಡುವ "ಉದ್ಯಮ" ಪ್ರಾರಂಭಿಸಿದರು. ಅದರಲ್ಲೂ ಗ್ರಾಮೀಣ ಉದ್ಯಮಶೀಲ ಮಹಿಳೆಯರನ್ನು ಮಾರುಕಟ್ಟೆಗೆ ಸೆಳೆಯುವ ಉದ್ಯಮ ಪ್ರಾರಂಭವಾಯಿತು. ಇದಕ್ಕೆ, ಮೈಕ್ರೋ ಕ್ರೆಡಿಟ್– ಕಿರುಸಾಲ– ಆಂದೋಲನವೆಂದೂ ಕರೆಯಲಾಯಿತು. ಬಾಂಗ್ಲಾ–ಭಾರತದಂಥ ಬಡರಾಷ್ಟ್ರಗಳ ಬಡತನ ನಿವಾರಣೆಯಾಗಲು ಇದೇ ಹೊಸ ಮಂತ್ರದಂಡವೆಂದು ಆ ದೇಶಗಳನ್ನು ಸುಲಿಯುತ್ತಿರುವ ಶ್ರೀಮಂತ ದೇಶಗಳೇ ಹೇಳಲಾರಂಭಿಸಿದವು. ಮಾತ್ರವಲ್ಲ, ಬಡದೇಶಗಳ ಬಡತನಕ್ಕೆ ಕಾರಣವಾದ ತಮ್ಮ ಸುಲಿಗೆಯನ್ನು ಮರೆಮಾಚಲು ಹೊಸ ದಾರಿಯೊಂದನ್ನು ತೋರಿದ ಯೂನಸ್ ಸಾಹೇಬರಿಗೆ 'ನೊಬೆಲ್' ಪ್ರಶಸ್ತಿಯನ್ನೂ ದಯಪಾಲಿಸಿದರು. ಭಾರತವನ್ನು ಒಳಗೊಂಡಂತೆ ಪ್ರಪಂಚದ ಬಹುಪಾಲು ಬಡದೇಶಗಳಲ್ಲಿ ಇವರ ನೇತೃತ್ವದಲ್ಲೇ ಈ ಮೈಕ್ರೋ ಕ್ರೆಡಿಟ್ "ಆಂದೋಲನ" ಪ್ರಾರಂಭವಾಯಿತು. ಭಾರತದಲ್ಲೂ ಪ್ರಾರಂಭವಾದ ಸ್ವ–ಸಹಾಯ ಗುಂಪುಗಳು (SHG) ಈ ಆಂದೋಲನವನ್ನು ಭಾರತದ ಮೂಲೆ ಮೂಲೆಗೂ ಮುಟ್ಟಿಸಿದವು.

ಈ ಮೈಕ್ರೋ ಕ್ರೆಡಿಟ್ ಆಂದೋಲನದ ಮೂಲಕ ಒಂದು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ನಲುಗುತ್ತಿರುವ ಮಹಿಳೆಯರು ಹೊರಬಂದು ಸ್ವಂತ ಕಾಲ ಮೇಲೆ ನಿಲ್ಲುವಂತಾಗುತ್ತದೆ. ಅವರ ಬಡತನ ನೀಗುತ್ತದೆ. ಅವರ ಮೇಲಿನ ಪುರುಷ ಶೋಷಣೆ ತಪ್ಪುತ್ತದೆ ಎಂದೆಲ್ಲಾ ನಿರೀಕ್ಷಿಸಲಾಗಿತ್ತು. ಭಾರತವನ್ನೂ ಒಳಗೊಂಡಂತೆ ಈ ಸ್ವಸಹಾಯ ಗುಂಪು ಆಂದೋಲನ ಪ್ರಾರಂಭವಾಗಿ ಈಗ ಹತ್ತು ವರ್ಷಗಳಿಗಿಂತ ಹೆಚ್ಚು ಕಾಲವಾಗಿದೆ. ಇವುಗಳ ಘೋಷಿತ ಉದ್ದೇಶ ಮತ್ತು ಸಾಧನೆಗಳ ಬಗ್ಗೆ ಈಗ ಸಾಕಷ್ಟು ಅಧ್ಯಯನ ನಡೆದಿದೆ. ಈ ಅಧ್ಯಯನಗಳು ತುಂಬಾ ಸ್ಪಷ್ಟವಾಗಿ ಈ SHG ಆಂದೋಲನವು ಮಹಿಳೆಯರಲ್ಲಿ ಸ್ವಲ್ಪ ಚಲನೆ ಮತ್ತು ತಿಳುವಳಿಕೆಯನ್ನು ನೀಡಿರುವುದು ನಿಜವೇ ಆದರೂ ಅದು ಯಾವ ರೀತಿಯಿಂದಲೂ ಅವರ ಬಡತನವನ್ನಾಗಲಿ, ಕುಟುಂಬದ ಒಳಗಿನ ಅವರ ಶೋಷಣೆಯನ್ನಾಗಲೀ ತಪ್ಪಿಸಿಲ್ಲವೆಂದು ಸ್ಪಷ್ಟ ಮಾತಿನಲ್ಲಿ ತಿಳಿಸಿವೆ. ಈ ಕಿರುಸಾಲ ಆಂದೋಲನವು ಮಹಿಳೆಯ ಶೋಷಣೆ ನಡೆಯುವ ಪುರುಷಾಧಿಪತ್ಯದ ಸಾಮಾಜಿಕ ಹಂದರವನ್ನೇನೂ ಅಲುಗಾಡಿಸುವುದಿಲ್ಲ. ಆದ್ದರಿಂದ ಇದು ಮಹಿಳೆಯ ಸಂಸರಕ್ಕಾಗಿ ತನ್ನ ಎಲ್ಲಾ ಸುಖ ಸಂತೋಷವನ್ನೂ ತ್ಯಾಗ ಮಾಡುವ ಸಾಂಪ್ರದಾಯಿಕ ಪಾತ್ರವನ್ನೇ ಮತ್ತಷ್ಟು ಗಟ್ಟಿಗೊಳಿಸಿದೆ ಎಂದು ಕರ್ನಾಟಕ, ಆಂಧ್ರಗಳಲ್ಲಿ ಇತ್ತೀಚಿಗೆ ನಡೆದ ಮತ್ತೊಂದು ಅಧ್ಯಯನ ಸಾಬೀತು ಪಡಿಸಿದೆ.

ಆದರೂ ಈ "ಆದೋಲನ"ದಿಂದ ಸಾಕಷ್ಟು ಲಾಭ ಪಡೆದವರು ಮಾತ್ರ ದೊಡ್ಡ ದೊಡ್ಡ (MFI) ಮೈಕ್ರೋ ಫೈನಾನ್ಸ್ ಕಂಪನಿಗಳು. ವಾಸ್ತವದಲ್ಲಿ ಆಗುತ್ತಿರುವುದಿಷ್ಟೆ, ಪ್ರಾರಂಭದಲ್ಲಿ ಈ ಸ್ವ–ಸಹಾಯ ಗುಂಪುಗಳಿಗೆ ಬ್ಯಾಂಕುಗಳು ಅವರ ಅರ್ಹತೆ ಇತ್ಯಾದಿಗಳನ್ನು ಗಮನಿಸಿ ಸಾಲ ಕೊಡಲು ಪ್ರಾರಂಭಿಸಿದ್ದವು. ಆದರೆ ಜಾಗತೀಕರಣ–ಉದಾರೀಕರಣದ ಈ ಯುಗದಲ್ಲಿ ಬ್ಯಾಂಕಿಂಗ್ ಕ್ಷೇತ್ರವು ಮೊದಲಿದ್ದ ಸಾಮಾಜಿಕ ಕಾಳಜಿಯ ಮುಖವಾಡವನ್ನೆಲ್ಲಾ ಕಳಚಿಟ್ಟು ಪೂರ್ಣ ಪ್ರಮಾಣದ ಬ್ಯಾಂಕಿಂಗ್ ಉದ್ಯಮಕ್ಕೇ ಇಳಿಯಿತು. ಈ ಕಿರುಸಾಲ ಕ್ಷೇತ್ರದಲ್ಲಿ ಹಣ ನೀಡುವುದು ಮತ್ತು ಅದನ್ನು ವಸೂಲಿ ಮಾಡುವಂಥಾ ಡೆಲಿವರಿ ವೆಚ್ಚಗಳೇ ಅಧಿಕ. ಆ ಖರ್ಚನ್ನೆಲ್ಲಾ ನಿಭಾಯಿಸಿ ಲಾಭ ಮಾಡಬೇಕೆಂದರೆ ಅಧಿಕ ಬಡ್ಡಿ ದರವನ್ನು ಹೇರಬೇಕು. ಆದರೆ ಈ ಸಂಘಟಿತ ಬ್ಯಾಂಕಿಂಗ್ ಕ್ಷೇತ್ರದ ವಹಿವಾಟನ್ನು ರಿಸರ್ವ್ ಬ್ಯಾಂಕ್ ನಿಯಮಗಳು ನಿರ್ದೇಶಿಸುತ್ತವೆ. ಅದರ ಪ್ರಕಾರ ಅವರು ಸಿಕ್ಕಾಪಟ್ಟೆ ಬಡ್ಡಿ ವಸೂಲಿ ಮಾಡುವಂತಿಲ್ಲ. ಹಾಗಿದ್ದರೂ ಹಲವು ಬ್ಯಾಂಕುಗಳು ಈಗಲೂ ಎಸ್‌ಎಚ್‌ಜಿಗಳಿಗೆ ಶೇ.24ಕ್ಕೂ ಹೆಚ್ಚು ಗಮನ ನೀಡಿಲ್ಲ.

ಆಗ ಈ ಕ್ಷೇತ್ರಕ್ಕೆ ಪ್ರವೇಶಿಸಿದ್ದು ಖಾಸಗಿ ಎಂ.ಎಫ್.ಐ– ಮೈಕ್ರೋ ಫೈನಾನ್ಸ್ ಕಂಪನಿಗಳು. ಅರ್ಥಾತ್ ಗ್ರಾಮೀಣ ಮತ್ತು ಪಟ್ಟಣದ ಬಡಜನತೆಯ ಬದುಕನ್ನು ಪ್ಯಾರಾಸೈಟುಗಳಂತೆ ಕಿತ್ತು ತಿನ್ನುತ್ತಿರುವ ಹೊಸ ಬಡ್ಡಿ ವ್ಯಾಪಾರಿಗಳು! ಇವುಗಳ ಕ್ಷೇತ್ರ ಕಿರುಸಾಲವಾದ್ದರಿಂದ ರಿಸರ್ವ್ ಬ್ಯಾಂಕ್ ನಿಯಮಾವಳಿಗಳು ಇದಕ್ಕೆ ಅನ್ವಯಿಸುವುದಿಲ್ಲ. ಹೀಗಾಗಿ ಸಾಲವನ್ನು ಕೊಟ್ಟು ವಸೂಲಿ ಮಾಡುವ ತಾಕತ್ತಿದ್ದರೆ ಕಾನೂನುಬದ್ಧವಾಗಿಯೇ ಬಡಜನರನ್ನು ಲೂಟಿ ಹೊಡೆಯುವ ಹೊಸ ಅವಕಾಶವನ್ನು ಕಿರುಸಾಲ ಕ್ಷೇತ್ರ ತೆರೆದಿಟ್ಟಿತು. ಇಂದು ಇವುಗಳ ವಿಸ್ತಾರ ಎಷ್ಟಿದೆಯೆಂದರೆ ಭಾರತದ 2.2 ಕೋಟಿಗೂ ಹೆಚ್ಚು ಜನರನ್ನು ಈ ಎಂ.ಎಫ್.ಐಗಳು ತಮ್ಮ ಸಾಲದಶೂಲದಲ್ಲಿ ಇರಿಯುತ್ತಿವೆ. ಎಸ್.ಎಚ್.ಜಿ.ಗಳಿಗಿಂತ ಹೆಚ್ಚಿನ ಸದಸ್ಯರನ್ನು ಇವು ಹೊಂದಿವೆ. ಇವುಗಳು ಹಾಕುವ ಬಡ್ಡಿದರವೆಷ್ಟು ಗೊತ್ತೆ? ಶೇ.30–70ರಷ್ಟು! ಹಲವಾರು ಕಡೆ ಸಾಂಪ್ರದಾಯಿಕ ಬಡ್ಡಿ ವ್ಯಾಪಾರಿಗಳೂ ಸಹ ವಿಧಿಸುತ್ತಿರುವ ಬಡ್ಡಿ ಶೇ.50ನ್ನು ದಾಟುವುದಿಲ್ಲ.

ಈ ಎಂ.ಎಫ್.ಐಗಳು ಸಾಲ ವಸೂಲಿ ಮಾಡಲು ಎಂಥಾ ಕ್ರೂರ ವಿಧಾನಗಳನ್ನು ಬೇಕಾದರೂ ಅನುಸರಿಸುತ್ತವೆ. ಹಾಡುಹಗಲೇ ಮನೆಗೆ ನುಗ್ಗುವುದು, ಬೀದಿಯಲ್ಲಿ ಹೊಡೆಯುವುದು, ಮಕ್ಕಳನ್ನು ಒತ್ತೆ ಇಟ್ಟುಕೊಳ್ಳುವುದು, ಬಹಿರಂಗವಾಗಿ ಅಪಮಾನ ಮಾಡುವುದು ಇತ್ಯಾದಿ. ಇದರಿಂದಾಗಿ ಕಳೆದ ವರ್ಷ ಕೋಲಾರದಲ್ಲಿ ಒಬ್ಬ ಕೂಲಿ ಕಾರ್ಮಿಕ ಆತ್ಮಹತ್ಯೆ ಮಾಡಿಕೊಂಡಿದ್ದರೆ, ಆಂಧ್ರವೊಂದರಲ್ಲೇ 30ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರಿಂದ ರೊಚ್ಚಿಗೆದ್ದ ರೈತ ಸಂಘಟನೆಯ ಕಾರ್ಯಕರ್ತರು ಈ ಎಂ.ಎಫ್.ಐಗಳ ಕಚೇರಿಯನ್ನೇ ಕಳೆದ ವಾರ ವಿಶಾಖಪಟ್ಟಣದಲ್ಲಿ ಧ್ವಂಸ ಮಾಡಿದ್ದಾರೆ.

ಈ ಮೈಕ್ರೋ ಫೈನಾನ್ಸ್ ಯಾವ ಕಾರಣಕ್ಕೂ ರೈತಾಪಿಯ ಬಡತನವನ್ನು ನೀಗುವುದಿಲ್ಲ ಎಂದು ಸ್ವತಃ ರಿಸರ್ವ್ ಬ್ಯಾಂಕೇ ಈಗ ಹೇಳುತ್ತಿದೆ.

"ಒಂದು ಸ್ಥಗಿತಗೊಂಡ ಗ್ರಾಮೀಣ ಆರ್ಥಿಕತೆಯಲ್ಲಿ ಹೆಚ್ಚೆಚ್ಚು ಸಣ್ಣ ವ್ಯಾಪಾರಿಗಳು ಇರಲು ಸಾಧ್ಯ. ಹಳ್ಳಿಯ 2/3 ಭಾಗದಷ್ಟು ಜನ ವಾಣಿಜ್ಯ ಉದ್ದೇಶವಿಲ್ಲದ ಆಹಾರ ಧಾನ್ಯದ ಉತ್ಪಾದನೆಯ ಮೇಲೆ ಆಧಾರಿತವಾಗಿದ್ದರೆ ಉಳಿದ ಶೇ.20ರಷ್ಟು ಜನ ಸಣ್ಣಪುಟ್ಟ ಕುಶಲ ಕೆಲಸಗಾರರಾಗಿರುತ್ತಾರೆ. ಈ ಜನತೆಯ ಆರ್ಥಿಕ ಚಟುವಟಿಕೆಯ ಚಕ್ರ 6 ತಿಂಗಳಿಂದ ಒಂದು ವರ್ಷದಷ್ಟು ಸುದೀರ್ಘವಾಗಿರುತ್ತದೆ. ಈ ಯಾವುದೇ ಆರ್ಥಿಕ ಚಟುವಟಿಕೆಗಳು ಪ್ರತೀವಾರ ಮರುಪಾವತಿ ಮಾಡುವಂಥ ಆದಾಯವನ್ನಾಗಲೀ, ಶೇ.20–40ರಷ್ಟು ಬಡ್ಡಿಯನ್ನು ತೆರಬಲ್ಲಂಥ ಆದಾಯವನ್ನಾಗಲೀ ಹುಟ್ಟುಹಾಕುವುದಿಲ್ಲ. ಹೀಗಾಗಿ ಅವರು ಮೈಕ್ರೋ ಫೈನಾನ್ಸ್‌ಗಳಿಂದ ಈ ಬಗೆಯ ಭಾರೀ ಬಡ್ಡಿ ದರದಲ್ಲಿ ಸಾಲವನ್ನು ಪಡೆದುಕೊಂಡರೆ ಅವರ ಬಡತನವು ಅಳಿಯದಿರಲು ಕೆಲವೇ ದಿನಗಳಲ್ಲಿ ಮೊದಲಿಗಿಂತ ಹೆಚ್ಚಿನ ಬಡತನಕ್ಕೆ ಗುರಿಯಾಗುತ್ತಾರೆ" ಎಂದು ನಬಾರ್ಡ್‌ನ ಆರ್ಥಿಕ ತಜ್ಞರೇ ಹೇಳುತ್ತಾರೆ.

ಆದರೆ ಅದಕ್ಕೆ ಪ್ರತಿಯಾಗಿ "ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಗಳಿಕೆ 2002ರಲ್ಲಿ ಶೇ. 18.8ರಷ್ಟು ಮಾತ್ರ ಇದ್ದದ್ದು 2009ರ ವೇಳೆಗೆ ಶೇ. 31.4ಕ್ಕೆ ಏರಿದೆ. ಅದೇ ಅವಧಿಯಲ್ಲಿ ಅವರ ನಿರ್ವಹಣಾ ವೆಚ್ಚವು ಶೇ. 19.9ರಿಂದ ಶೇ. 11.5ಕ್ಕೆ ಇಳಿದಿದೆ. ಹೀಗಾಗಿ ಮೈಕ್ರೋ ಫೈನಾನ್ಸ್ ಕಂಪನಿಗಳ ಸಂಪತ್ತಿನ ಮೇಲಿನ ಗಳಿಕೆಯ ದರವು ವಿಶ್ವದೆಲ್ಲೆಡೆ ಕೇವಲ ಶೇ. 1.5ರಷ್ಟಿದ್ದರೂ ಭಾರತದಲ್ಲಿ ಮಾತ್ರ ಈ ಕಂಪನಿಗಳ ಸಂಪತ್ತಿನ ಮೇಲಿನ ಗಳಿಕೆಯ ದರವು 2002ರಲ್ಲಿ 1.5 ಇದ್ದದ್ದು 2009ರಲ್ಲಿ ಶೇ. 4.3ಕ್ಕೆ ಏರಿದೆ. ಹೀಗಾಗಿ ಈ ಕಂಪನಿಗಳು ತಮ್ಮ ಬಡ್ಡಿ ದರವನ್ನು ಕಡಿಮೆ ಮಾಡಿದರೆ ಏನೂ ನಷ್ಟವಿಲ್ಲ" ಎಂಬುದೂ ಸಹ ಇತ್ತೀಚಿನ ನಬಾರ್ಡ್ ವಿಶ್ಲೇಷಣೆ.

ಹೀಗಾಗಿಯೇ ಕೆಲ ವರ್ಷಗಳ ಹಿಂದೆ ಅಡ್ರೆಸ್ ಇಲ್ಲದ ಕಂಪನಿಯಾಗಿದ್ದ ಎಸ್.ಕೆ.ಎಸ್. ಎಂಬ ಬ್ಲೇಡ್ ಕಂಪನಿ ಈ ಮೈಕ್ರೋ ಫೈನಾನ್ಸ್ ದಂಧೆಯಲ್ಲಿ ತೊಡಗಿ ಈಗ ದೈತ್ಯನಾಗಿ ಬೆಳೆದಿದೆ. ಇಂದು ಈ ಕಂಪನಿ ಭಾರತದಲ್ಲೇ ಅತಿದೊಡ್ಡ ಮೈಕ್ರೋ ಫೈನಾನ್ಸ್ ಕಂಪನಿಯಾಗಿ ಬೆಳೆದಿದ್ದು ಕರ್ನಾಟಕ, ಆಂಧ್ರ, ಒರಿಸ್ಸಾವನ್ನು ಒಳಗೊಂಡಂತೆ ಹತ್ತು ರಾಜ್ಯಗಳಲ್ಲಿ ಗ್ರಾಮೀಣ ರೈತಾಪಿಯ ರಕ್ತ ಹೀರುತ್ತಿದೆ. ಕರ್ನಾಟಕದಲ್ಲೂ ಇದೇ ಕಂಪನಿಯೇ ಅತಿದೊಡ್ಡ ಕಿರುಸಾಲ ನೀಡುವ ಕಂಪನಿಯಾಗಿದ್ದು ಮೈಸೂರು, ಕೋಲಾರ, ರಾಮನಗರ, ಶಿಡ್ಲಘಟ್ಟ ಇತ್ಯಾದಿ ಕಡೆಗಳಲ್ಲಿ ಇವರಿಂದ ಸಾಲ ಪಡೆದ ರೈತರು ಪಡಬಾರದ ಚಿತ್ರಹಿಂಸೆ ಪಡುತ್ತಿದ್ದಾರೆ. ಆದರೆ ಈ ಎಸ್.ಕೆ.ಎಸ್. ವಿಕ್ರಮ್ ಅಕೂಲನ ಆಸ್ತಿ–ಪಾಸ್ತಿ ಮಾತ್ರ ಸಾವಿರ ಕೋಟಿ ರೂ.ಗಳನ್ನು ದಾಟಿದೆ. ಈ ಕಿರುಸಾಲ ಎಂಬುದು ಕೇವಲ ಲಾಭದ ದಂಧೆಯೇ ಹೊರತು ಬಡತನ ನಿವಾರಕವಲ್ಲ. ಎಂಬುದಕ್ಕೆ ಎಸ್.ಕೆ.ಎಸ್. ಎಂಬ ಬ್ಲೇಡ್ ಕಂಪನಿ ಇತಿಹಾಸವೇ ಒಂದು ದೊಡ್ಡ ನಿದರ್ಶನ. ಹೋದ ಜುಲೈನಲ್ಲಿ ಈ ಕಂಪನಿ ಸಾರ್ವಜನಿಕರಿಗೂ ತನ್ನ ಶೇರುಗಳನ್ನು ಬಿಡುಗಡೆ ಮಾಡಿತ್ತು. ಸಾಮಾನ್ಯವಾಗಿ ಲಾಭದಾಯಕ ಕಂಪನಿಗಳು ಮಾತ್ರ ಸಾರ್ವಜನಿಕ ಶೇರುಗಳನ್ನು ಬಿಡುಗಡೆ ಮಾಡುತ್ತವೆ. ಟಾಟಾ, ರಿಲಾಯನ್ಸ್ ಇತ್ಯಾದಿಗಳು. ಆದರೆ ಈ ಕಂಪನಿಯ ಶೇರುಗಳೂ ಸಹ ಅತ್ಯಂತ ಕಡಿಮೆ ಅವಧಿಯಲ್ಲಿ ಅತಿಹೆಚ್ಚು ದರಕ್ಕೆ ಬಿಕರಿಯಾಗಿ ಕಂಪನಿಗೆ 1,600 ಕೋಟಿ ರೂಪಾಯಿಯಷ್ಟು ಸಾರ್ವಜನಿಕ ಬಂಡವಾಳವನ್ನು ತಂದುಕೊಟ್ಟವು.

ಆದರೆ ಮೈಕ್ರೋ ಫೈನಾನ್ಸ್ ದಂಧೆ ಇತರ ದಂಧೆಗಳಿಗಿಂತ ಅಥವಾ ಅಷ್ಟೇ ಲಾಭದಾಯಕ ಎಂದಾಯಿತಲ್ಲವೇ? ಬೇರೆ ಕಂಪನಿಗಳಿಗೆ ತಮ್ಮ ಸರಕನ್ನು ಅತಿ ಹೆಚ್ಚಿನ ದರಕ್ಕೆ ಮಾರಿದರೆ ಮಾತ್ರ ಅತಿ ಹೆಚ್ಚು ಲಾಭ ಸಿಗುತ್ತದೆ. ಆದರೆ ಕಿರುಸಾಲ ಕಂಪನಿಗಳಿಗೆ ಲಾಭ ಎಲ್ಲಿಂದ ಬರುತ್ತದೆ? ಅತಿಹೆಚ್ಚು ಬಡ್ಡಿ ದರಕ್ಕೆ ಸಾಲವನ್ನು ಮಾರಿಕೊಂಡರೆ ಮಾತ್ರ ಅತಿ ಹೆಚ್ಚು ಲಾಭ ಸಿಗುತ್ತದೆ. ಇದೇ ಈ ಮೈಕ್ರೋ ಫೈನಾನ್ಸ್ ಕಂಪನಿಗಳ ಅಸಲಿ ಗುಟ್ಟು. ಇಂಥಾ ಬ್ಲೇಡ್ ಕಂಪನಿಯಾದ ಎಸ್.ಕೆ.ಎಸ್.ನಲ್ಲಿ ವಿದೇಶಿ ಬಂಡವಾಳ ಹೂಡಿಕೆಯೂ ಇದೆ. ಅಷ್ಟು ಮಾತ್ರವಲ್ಲ,

ಯಾವಾಗಲೂ ಉದ್ದಿಮೆಪತಿಗಳಲ್ಲೇ ಅತ್ಯಂತ ನ್ಯಾಯ ನಿಷ್ಠೂರ, ಆದರ್ಶವಾದಿ ಎಂದೆಲ್ಲಾ ಹೆಸರು ಮಾಡಿರುವ ಇನ್ಫೋಸಿಸ್ ನಾರಾಯಣಮೂರ್ತಿಗಳ 30 ಕೋಟಿಗೂ ಹೆಚ್ಚಿನ ಬಂಡವಾಳವಿದೆ!

ಬಂಡವಾಳಶಾಹಿ ಎಂದರೆ ಉಚ್ಚೆಯಲ್ಲಿ ಮೀನು ಹಿಡಿಯುವ ದಂಧೆ ಎನ್ನುತ್ತಾರೆ, ಈ ಮೈಕ್ರೋ ಫೈನಾನ್ಸ್ ದಂಧೆ ಅದಕ್ಕಿಂತ ಒಂದು ಹೆಜ್ಜೆ ಮುಂದು. ಬೆಂದು ಬಸವಳಿದಿರುವ ಬಡವರ ಮೂಳೆ ಚಕ್ಕಳವನ್ನು ಕೇಜಿ ಲೆಕ್ಕದಲ್ಲಿ ಕೊಳ್ಳುವ–ಮಾರುವ ದಂಧೆಯಿದು. ಜಾಗತೀಕರಣ, ಉದಾರೀಕರಣದಿಂದ ಜನರಿಗೆ ಅನುಕೂಲವೇ ಆಗಿದೆ ಎನ್ನುವ ಪಂಡಿತರೇ ಈ ಮೈಕ್ರೋ ಫೈನಾನ್ಸ್ ಕಂಪನಿಗಳ ಕಾಟ ತಡೆಯಲಾಗದೆ ಆತ್ಮಹತ್ಯೆ ಮಾಡಿಕೊಂಡ ಕೋಲಾರದ ಸೈಯ್ಯದ್ ಜಮೀರ್ ಖಾನ್ ಮನೆಗೆ ಒಮ್ಮೆ ಹೋಗಿ ಬನ್ನಿ.

**ಆಕರ:** ಚಾರ್ವಾಕ: ಶಿವಸುಂದರ್, ಲಂಕೇಶ್ ಪ್ರಕಾಶನ, ಬೆಂಗಳೂರು, 2011.

### ಲೇಖಕರ ಪರಿಚಯ

**ಶಿವಸುಂದರ್ (1967):** ಇವರು ಮೂಲತಃ ಚಿತ್ರದುರ್ಗ ಜಿಲ್ಲೆಯವರು. ಮೊದಲಿಗೆ ಲಂಕೇಶ್ ಪತ್ರಿಕೆಯಲ್ಲಿ ಆನಂತರ ಗೌರಿ ಲಂಕೇಶ್ ವಾರಪತ್ರಿಕೆಯಲ್ಲಿ ಪತ್ರಕರ್ತರಾಗಿ ಸೇವೆ ಸಲ್ಲಿಸಿದ್ದಾರೆ. ಸದ್ಯ ವಾರ್ತಾಭಾರತಿ ಪತ್ರಿಕೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಸಮಕಾಲೀನ ಎಂಬ ವಿಡಿಯೊ ಸಂವಾದದ ಕಾರ್ಯಕ್ರಮ, ಕಾಲಮ್ 9 ಎಂಬ ಅಂಕಣವನ್ನೂ ಬರೆಯುತ್ತಿದ್ದಾರೆ. ಪ್ರಖರ ಚಿಂತಕರಾದ ಇವರು ಸಾಮಾಜಿಕ ಚಳವಳಿಗಳಲ್ಲಿ ಕೂಡ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಚಾರ್ವಾಕ, ಖೈರ್ಲಾಂಜಿ ಮುಂತಾದುವು ಇವರ ಕೃತಿಗಳು.

### ಪದಕೋಶ

ಕ್ಲಸ್ಟರ್= ಎರಡು ಅಥವಾ ಅದಕ್ಕಿಂತ ಹೆಚ್ಚಿನ ಸಂಸ್ಥೆಗಳ (ಸಂಘಗಳ) ಒಕ್ಕೂಟ. ನಬಾರ್ಡ್= 1982ರಲ್ಲಿ ಆರಂಭವಾದ ನ್ಯಾಶನಲ್ ಬ್ಯಾಂಕ್ ಫಾರ್ ಅಗ್ರಿಕಲ್ಚರಲ್ ಅಂಡ್ ರೂರಲ್ ಡೆವಲಪ್‌ಮೆಂಟ್. ಕಾರ್ಯಕಾರಿ ಸಮಿತಿ= ಯಾವುದೇ ಸಂಘಟನೆಯಲ್ಲಿ ಇರುವ ಪದಾಧಿಕಾರಿಗಳನ್ನು ಹೊರತುಪಡಿಸಿದ ನಿರ್ಣಯಾತ್ಮಕ ಸಮಿತಿ. ನಾಮನಿರ್ದೇಶನ= ನೇರವಾಗಿ ಪದಾಧಿಕಾರಿಯಾಗಿ ಆಯ್ಕೆ ಆಗದೆ ಸರ್ಕಾರಿ ಅಥವಾ ಸಂಸ್ಥೆಯಿಂದ ನೇಮಿಸಲ್ಪಡುವುದು. ಬೈಲಾ= ನಿಯಮಾವಳಿ. ಮೂಲಭೂತ ಸೌಕರ್ಯ= ಯಾವುದೆ ಸಂಸ್ಥೆ ಅಥವಾ ಸಂಘಟನೆಗೆ ಇರಬೇಕಾದ ಕಟ್ಟಡ, ಪೀಠೋಪಕರಣ, ಸಿಬ್ಬಂದಿ, ಕುಡಿಯುವ ನೀರಿನ ವ್ಯವಸ್ಥೆ, ಸಂಡಾಸು ವ್ಯವಸ್ಥೆ ಇತ್ಯಾದಿ ಅಗತ್ಯ ಸೌಲಭ್ಯಗಳು. ದತ್ತಾಂಶ= ಸಂಗ್ರಹಿಸಿದ ಅಂಕಿ ಅಂಶ.

### ಸಂಭಾವ್ಯ ಪ್ರಶ್ನೆಗಳು

1. ಕರ್ನಾಟಕಸ್ತ್ರೀ ಶಕ್ತಿ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು?
2. ಸ್ತ್ರೀಶಕ್ತಿ ಗುಂಪುಗಳಿಗೆ ಸದಸ್ಯರಾಗಲು ಕನಿಷ್ಟ ಎಷ್ಟು ವಯಸ್ಸಾಗಿರಬೇಕು?
3. ಆರ್ಥಿಕ ಸಾಕ್ಷರತೆ ಎಂದರೇನು? ವಿವರಿಸಿ.
4. ಸ್ವಸಹಾಯ ಗುಂಪುಗಳ ಯಶಸ್ವಿ ಕಾರ್ಯನಿರ್ವಹಣೆಗೆ ನಿಮ್ಮ ಸಲಹೆಗಳಾವುವು?
5. ಗ್ರಾಮೀಣ ಆರ್ಥಿಕತೆಯನ್ನು ಸುಧಾರಿಸುವ ಹಿನ್ನೆಲೆಯಲ್ಲಿ ನಿಮ್ಮ ಯೋಜಗಳನ್ನು ಮತ್ತು ಸಲಹೆಗಳನ್ನು ಮಂಡಿಸಿ.
6. ನೀವು ಬಲ್ಲ ಕರ್ನಾಟಕ ಗ್ರಾಮೀಣ ಆರ್ಥಿಕತೆಯ ಯಾವುದಾದರೂ ಎರಡು ಸಂಸ್ಥೆಗಳ ಕಾರ್ಯನಿರ್ವಹಣೆ ಬಗ್ಗೆ ಬರೆಯಿರಿ.

### ಚಟುವಟಿಕೆಗಳು

1. ನಿಮ್ಮ ಪ್ರದೇಶದ ಸ್ತ್ರೀ ಶಕ್ತಿ ಗುಂಪನ್ನು ಕಲ್ಪಿಸಿಕೊಂಡು ಅದರ ಐದು ವರ್ಷಗಳ ವಾರ್ಷಿಕ ವಹಿವಾಟು ವರದಿಯನ್ನು ತಯಾರಿಸಿ.
2. ಸರ್ಕಾರಿ, ಖಾಸಗಿ ಮತ್ತು ಸಹಕಾರಿ ಹೀಗೆ ಮೂರು ಸಂಸ್ಥೆಗಳ ಕಾರ್ಯಕ್ಷಮತೆ ವರದಿ ಪಡೆದು, ಫಲಿತಗಳ ಆಧಾರದಲ್ಲಿ ಶ್ರೇಣೀಕರಿಸಿ, ವಿಶ್ಲೇಷಿಸಿ.
3. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಾಲತಾಣಕ್ಕೆ ಭೇಟಿ ನೀಡಿ ಪೂರ್ಣ ಪ್ರಮಾಣದ ವರದಿ ಅಭ್ಯಾಸ ಮಾಡಿ ದತ್ತಾಂಶ ವಿಶ್ಲೇಷಣೆ ಮಾಡಿ.
4. ಕಿರು ಬಂಡವಾಳ ಸಂಸ್ಥೆಯೊಂದರ ಬಗ್ಗೆ ಅಧ್ಯಯನ ಪ್ರಾಜೆಕ್ಟ್ ಮಾಡಿ.

### ಹೆಚ್ಚಿನ ಪರಾಮರ್ಶನಕ್ಕಾಗಿ

1. https://www.krishimaratavahini.kar.nic.in/
2. https://rbi.org.in/commonman/Upload/Kannada/Content/PDFs/Kannada_16042021.pdf
3. https://www.fincash.com/l/kn/money-market-funds
4. https://rbidocs.rbi.org.in/rdocs/content/DOCs/NMFI012014FL.xlsx

ಬೆಂಗಳೂರು ವಿಶ್ವವಿದ್ಯಾಲಯ

☎ 080-23157900, 22961557, 22961681
(M)094480 07630, 70222 29110
Email:nagabhushana.c@gmail.com

**ಡಾ.ಸಿ.ನಾಗಭೂಷಣ**
**ನಿರ್ದೇಶಕರು**
**ಕನ್ನಡ ಅಧ್ಯಯನ ಕೇಂದ್ರ**
**ಬೆಂಗಳೂರು ವಿಶ್ವವಿದ್ಯಾಲಯ**
**ಬೆಂಗಳೂರು-560056**

**Dr.C.Nagabhushana**
**Director**
**Centre For Kannada Studies**
**Bangalore University**
**Bangalore-560056**

ದಿನಾಂಕ: 18–11–2021

ಇವರಿಗೆ.

**ಎಲ್ಲಾ ಕನ್ನಡ ಅಧ್ಯಾಪಕರುಗಳು**

**ಬೆಂಗಳೂರು ವಿಶ್ವವಿದ್ಯಾಲಯ ವ್ಯಾಪ್ತಿಯ ಪದವಿಕಾಲೇಜುಗಳು**

**ಬೆಂಗಳೂರು ವಿಶ್ವವಿದ್ಯಾಲಯ**

**ಈ ಮೂಲಕ ಬೆಂಗಳೂರು ವಿಶ್ವವಿದ್ಯಾಲಯ ವ್ಯಾಪ್ತಿಯ ಪದವಿಕಾಲೇಜುಗಳ ಎಲ್ಲಾ ಕನ್ನಡ ಅಧ್ಯಾಪಕರುಗಳ ಗಮನಕ್ಕೆ ತರ ಬಯಸುವುದೇನೆಂದರೆ , ಈಗಾಗಲೇ ತಮಗೆ ತಿಳಿದಿರುವ ಹಾಗೆ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದ ಹಿನ್ನೆಲೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಸೂಚನೆಯ ಮೇರೆಗೆ ನೂತನ ಪದವಿ ಭಾಷಾ ಪಠ್ಯಗಳ ಸಿದ್ಧಪಡಿಸುವಿಕೆಗನುಗುಣವಾಗಿ, ಕನ್ನಡ ಭಾಷಾಪಠ್ಯಗಳು, ಐಚ್ಛಿಕ ಕನ್ನಡ ಪಠ್ಯ, ಮುಕ್ತ ಆಯ್ಕೆ ಕನ್ನಡ ಮತ್ತು ಕನ್ನಡ ಕಲಿಕೆ ಪಠ್ಯಗಳನ್ನು ಸಂಪಾದಕ ಮಂಡಳಿಯವರು ಈಗಾಗಲೇ ತಮಗೆ ವಹಿಸಿರುವ ಪಠ್ಯಗಳನ್ನು ಸಂಪಾದಿಸಿ ಪರಿಶೀಲಕರಿಂದ ಪರಿಶೀಲಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ (ಕೆಲವು ವಿಷಯಗಳ ಪಠ್ಯಗಳು ಮಾತ್ರ ಸಲ್ಲಿಸ ಬೇಕಾಗಿರುತ್ತದೆ). ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಪಠ್ಯಗಳನ್ನು ಪ್ರಸಾರಾಂಗದ ವತಿಯಿಂದ ಪ್ರಕಟಿಸಲು ಶೀಘ್ರವಾಗಿ ಕ್ರಮ ಕೈಗೊಳ್ಳ ಲಾಗುವುದು. ಅಲ್ಲಿಯವರೆಗೂ ಪದವಿ ತರಗತಿಗಳಲ್ಲಿ ಪಠ್ಯ ಬೋಧನೆಗೆ ಯಾವುದೇ ರೀತಿಯ ತೊಂದರೆ ಆಗದ ಹಿನ್ನೆಲೆಯಲ್ಲಿ ಕನ್ನಡ ಸ್ನಾತಕ ಅಧ್ಯಯನ ಮಂಡಳಿಯ ಅಧ್ಯಕ್ಷರು ಹಾಗೂ ಸದಸ್ಯರ ಒಮ್ಮತದಿಂದ ಪ್ರತೀ ಪದವಿಯ ಭಾಷಾ ಪಠ್ಯಗಳು ಐಚ್ಛಿಕ ಕನ್ನಡ ಪಠ್ಯ, ಮುಕ್ತ ಆಯ್ಕೆ ಕನ್ನಡ ಮತ್ತು ಕನ್ನಡ ಕಲಿಕೆ ಪಠ್ಯಗಳ ಪರಿವಿಡಿ ಹಾಗೂ ಪ್ರತಿ ಘಟಕದ ಒಂದೊಂದು ಪಠ್ಯಗಳನ್ನು ಪಿಡಿಎಫ್ ರೂಪದಲ್ಲಿ ತಮಗೆ ಕಳುಹಿಸಿ ಕೊಡಲಾಗುತ್ತಿದೆ. ಪದವಿ ಭಾಷಾ ಪಠ್ಯಗಳು ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟಗೊಂಡು ಮುಕ್ತವಾಗಿ ದೊರೆಯುವವರೆಗೂ ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ಪಿಡಿಎಫ್ ರೂಪದಲ್ಲಿ ತಮಗೆ ಕಳುಹಿಸಿರುವ ಪ್ರತಿ ಘಟಕದ ಒಂದೊಂದು**

ಪಠ್ಯಗಳನ್ನು ತರಗತಿಗಳಲ್ಲಿ ಬೋಧಿಸಲು ಬಳಸಿಕೊಳ್ಳಲು ಸೂಚಿಸಿದೆ. ತ್ವರಿತವಾಗಿ ಪಠ್ಯಗಳನ್ನು ಪ್ರಸಾರಾಂಗದಿಂದ ಪ್ರಕಟಿಸಲು ಕ್ರಮಕೈಗೊಳ್ಳಲಾಗುವುದು.

ಅಧ್ಯಕ್ಷರು
ಕನ್ನಡ ಸ್ನಾತಕ ಅಧ್ಯಯನ ಮಂಡಳಿ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ

# ವ್ಯವಹಾರ ನಿರ್ವಹಣಾ ಕನ್ನಡ

(ಬಿ.ಬಿ.ಎ ಪ್ರಥಮ ಸೆಮಿಸ್ಟರ್ - ಭಾಷಾ ಕನ್ನಡ ಪಠ್ಯ)

**ಪ್ರಧಾನ ಸಂಪಾದಕರು**

ಡಾ. ಸಿ. ನಾಗಭೂಷಣ

**ಸಂಪಾದಕರು**

ಡಾ.ರತ್ನಪ್ರಭಾ

ಪ್ರೊ.ವೀರೇಂದ್ರ.ಜಿ.ಜೆ

ಡಾ.ಶಾಂತರಾಜು

ಪ್ರೊ.ಪುಷ್ಪಲತ

## ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನ ಭಾರತಿ, ಬೆಂಗಳೂರು

### ಪ್ರಸ್ತಾವನೆ

ರಾಷ್ಟ್ರೀಯ ಶಿಕ್ಷಣ ನೀತಿ ೨೦೨೦ರ ಆಶಯದಂತೆ ಶೈಕ್ಷಣಿಕ ಚಟುವಟಿಕೆ ಮತ್ತು ಪಠ್ಯೇತರ ಚಟುವಟಿಕೆ ನಡುವೆ ಪೂರಕ ಸಂಬಂಧ ಕಲ್ಪಿಸುವ ನಿಟ್ಟಿನಲ್ಲಿ ಪಠ್ಯಪುಸ್ತಕ ರೂಪಿಸುವ ಪ್ರಯತ್ನ ಮಾಡಲಾಗಿದೆ. ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪಿಸುವಲ್ಲಿ ಭಾಷೆ ಪ್ರಧಾನ ಪಾತ್ರ ವಹಿಸುತ್ತದೆ. ಭಾಷಾ ಕಲಿಕೆಯ ಜೊತೆಯಲ್ಲಿಯೆ ಸಾಮಾಜಿಕ ಔದ್ಯೋಗಿಕ ಉದ್ಯಮ, ಮಾರುಕಟ್ಟೆ,ಹಾಗೂ ವಾಣಿಜ್ಯ ಕ್ಷೇತ್ರಕ್ಕೆ ಸಂಬಂಧಿಸಿದ ವ್ಯಾಪಾರ-ವ್ಯವಹಾರ ನಿರ್ವಹಣೆ ಮತ್ತು ವೃತ್ತಿಗೆ ಸಂಬಂಧಿಸಿದ ನೈತಿಕ ಮೌಲ್ಯಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸುವ ಪ್ರಯತ್ನವಾಗಿ ವ್ಯವಹಾರ ನಿರ್ವಹಣಾ ಕನ್ನಡದ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಪಠ್ಯಪುಸ್ತಕ ಮೊದಲನೇ ಸೆಮಿಸ್ಟರ್ ನಲ್ಲಿ ನಾಲ್ಕು ಘಟಕಗಳನ್ನು ಒಳಗೊಂಡಿದೆ.ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಮಾತೃಭಾಷೆಗೆ ಹೆಚ್ಚಿನ ಮಹತ್ವ ಕೊಟ್ಟಿರುವುದರಿಂದ ಘಟಕ-೧ 'ಕನ್ನಡ ನಾಡು ನುಡಿಗಳ ಚಿಂತನೆ' ಭಾಗದಲ್ಲಿ ಕನ್ನಡ ನಾಡಿನ ಭೌಗೋಳಿಕ ಸೌಂದರ್ಯ, ಕನ್ನಡ ಭಾಷೆಯ ಮಹತ್ವ ಮತ್ತು ವೈಶಿಷ್ಟ್ಯತೆಯನ್ನು ಕುರಿತ ಕನ್ನಡದ ಹಿರಿಮೆಯನ್ನು ಸಾರುವ ಪಠ್ಯ ವಿಷಯವನ್ನು ಆಯ್ಕೆ ಮಾಡಲಾಗಿದೆ. ವಿದ್ಯಾರ್ಥಿಗಳಲ್ಲಿ ನಾಡು - ನುಡಿಯ ಬಗೆಗೆ ಉತ್ಕಟ ಅಭಿಮಾನವನ್ನು ಮೂಡಿಸುವಲ್ಲಿ ಇವು ಸಹಕಾರಿಯಾಗುತ್ತವೆ. ಕನ್ನಡ ಭಾಷೆ ಅಭಿಮಾನದ, ಧನದ, ಉದ್ಯೋಗದ, ಅನ್ನದ ಭಾಷೆಯಾಗುವ ಕಡೆಗೆ ಸಾಗಬೇಕಾಗಿದೆ.

ಆಧುನಿಕತೆಯ ಪ್ರಭಾವದಿಂದಾಗಿ ಉಂಟಾಗಿರುವ ಒಳಿತು-ಕೆಡುಕುಗಳ ಮುಖಾಮುಖಿಗೆ ಸಂಬಂಧಿಸಿದ ಪರ ಮತ್ತು ವಿರೋಧದ ಅಂಶಗಳಿರುವ ಪಠ್ಯಗಳಿವೆ. ಇವು ವಿದ್ಯಾರ್ಥಿಗಳಲ್ಲಿ ಆಧುನಿಕತೆಯ ಆಗು - ಹೋಗುಗಳ ಬಗ್ಗೆ ತಿಳುವಳಿಕೆಯನ್ನು ಉಂಟು ಮಾಡುವಲ್ಲಿ ಸಹಕಾರಿಯಾಗುತ್ತವೆ.

'ಕುಟುಂಬದ' ಪರಿಕಲ್ಪನೆಯೊಳಗೆ ಸಮಾಜ, ಕುಟುಂಬದ ಪರಿಸರ, ಪ್ರಾಮುಖ್ಯತೆ, ತಾಳ್ಮೆ, ಪ್ರೀತಿ, ತ್ಯಾಗ, ಹೊಂದಾಣಿಕೆ....ಇವೇ ಮೊದಲಾದ ಗುಣ ಮತ್ತು ಮೌಲ್ಯಗಳ ಹಿನ್ನೆಲೆಯಲ್ಲಿ ಪಠ್ಯಗಳನ್ನು ಆಯ್ಕೆ ಮಾಡಲಾಗಿದೆ. ಇವು ವಿದ್ಯಾರ್ಥಿಗಳಲ್ಲಿ ನೈತಿಕತೆ ಮತ್ತು ಮೌಲ್ಯಗಳನ್ನು ರೂಪಿಸುವಲ್ಲಿ ಸಹಕಾರಿಯಾಗುತ್ತವೆ.

‘ಸಂಕೀರ್ಣ’ದ ಭಾಗದಲ್ಲಿ ವಿದ್ಯಾರ್ಥಿಗಳಲ್ಲಿ ಮಾನವೀಯತೆಯ ವ್ಯವಹಾರಿಕ ದೃಷ್ಟಿಕೋನ, ಮೌಲ್ಯಾಧಾರಿತ ಗುಣ ಹಾಗೂ ವ್ಯವಹಾರಿಕ ಬದುಕಿನ ಲೋಪ, ದೋಷ, ಆಗು-ಹೋಗುಗಳ ಅರಿವನ್ನು ಉಂಟು ಮಾಡುವ ಲೇಖನಗಳಿವೆ. ಇವು ವಿದ್ಯಾರ್ಥಿಗಳಲ್ಲಿ ವ್ಯವಹಾರಿಕ, ಸಂವಹನ ಮತ್ತು ಸ್ವಸ್ಥ ಬದುಕಿನ ನಿಜ ಅರ್ಥವನ್ನು ತಿಳಿಸಿಕೊಡುತ್ತವೆ. ವಿದ್ಯಾರ್ಥಿಗಳು ಸಮಕಾಲೀನ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಕಲಿಸುವ ಆಶಯವುಳ್ಳ ಲೇಖನಗಳನ್ನು ಇಲ್ಲಿ ಆಯ್ಕೆ ಮಾಡಲಾಗಿದೆ. ಜಾಗತೀಕರಣ ಮತ್ತು ಮಾರುಕಟ್ಟೆಯ ಆರ್ಥಿಕ ನೀತಿಗಳಿಂದಾಗಿ ದೇಶ ಭಾಷೆಗಳು ಹಿನ್ನೆಡೆ ಅನುಭವಿಸುತ್ತಿರುವುದರಿಂದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಶಿಕ್ಷಣವನ್ನು ಅನ್ಯ ಭಾಷೆಗಳ ಅತಿಯಾದ ಅವಲಂಬನೆಯಿಂದ ತಪ್ಪಿಸಿ ಪ್ರಾದೇಶಿಕ ಭಾಷೆಗಳ ಮಾಧ್ಯಮದ ಮೂಲಕ ಕಲಿಸುವುದಕ್ಕೆ ಒತ್ತು ನೀಡುತ್ತದೆ. ಇದಕ್ಕೆ ಪೂರಕವಾದ ಲೇಖನಗಳನ್ನು ಈ ಭಾಗದಲ್ಲಿ ಆಯ್ಕೆ ಮಾಡಲಾಗಿದೆ.

ಒಟ್ಟಾರೆಯಾಗಿ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯ ಆಶಯದೊಂದಿಗೆ ಪಠ್ಯಪುಸ್ತಕವನ್ನು ರೂಪಿಸಲಾಗಿದೆ. ಪಠ್ಯಪುಸ್ತಕ ರಚನೆಯಲ್ಲಿ ತೊಡಗಿಸಿ ಕೊಳ್ಳಲು ಅವಕಾಶ ಮಾಡಿ ಕೊಟ್ಟ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಿಗೆ ಹಾಗೂ ಪಠ್ಯಕ್ಕಾಗಿ ಕವನ, ಕಥೆ, ಲೇಖನ... ಇತ್ಯಾದಿಗಳನ್ನು ಬಳಸಿ ಕೊಳ್ಳಲು ಅನುಮತಿ ನೀಡಿದ ಎಲ್ಲಾ ಕನ್ನಡ ಸಾಹಿತಿಗಳಿಗೆ, ಅಭಿಮಾನಿ ಬರಹಗಾರರಿಗೆ ತುಂಬು ಹೃದಯದ ಧನ್ಯವಾದಗಳು.

**ಸಂಪಾದಕರು**

# ಬಿ.ಬಿ.ಎ ಮೊದಲನೇ ಸೆಮಿಸ್ಟರ್

# ವ್ಯವಹಾರ ನಿರ್ವಹಣಾ ಕನ್ನಡ

**ಪರಿವಿಡಿ**

**ಘಟಕ ೧ – ಕನ್ನಡ ನಾಡು ನುಡಿ**

೧. ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು – ಹುಯಿಲಗೋಳ ನಾರಾಯಣರಾಯರು
ಪೂರಕ ಪಠ್ಯ: ಕನ್ನಡ ಭಾಷಾ ಏಕೀಕರಣ ಡಾ. ಸೋಮಶೇಖರ ಗೌಡ

೨. ನಮಗೆ ಬೇಕಾದ ಕನ್ನಡ – ಕೆ.ವಿ ತಿರುಮಲೇಶ್
ಪೂರಕ: ಭಾಷೆಯ ಮಹತ್ವ – ಜಿ ಎಸ್ ಅಮೂರ

೩. ಉದ್ಯಮ, ಉದ್ಯೋಗ ಮತ್ತು ಕನ್ನಡ – ಪ್ರೊ. ಬರಗೂರು ರಾಮಚಂದ್ರಪ್ಪ
ಪೂರಕ ಪಠ್ಯ: ಕನ್ನಡಕ್ಕೆ ಅನ್ನಬ್ರಹ್ಮನ ಸ್ಥಾನ – ಡಾ. ಎಚ್.ಎಸ್ ಸತ್ಯನಾರಾಯಣ

**ಘಟಕ ೨– ಆಧುನಿಕತೆ**

೧. ನಮ್ಮ ನಗರದ ಬದುಕು – ಪ್ರೊ. ಕೆ ಎಸ್ ನಿಸಾರ್ ಅಹ್ಮದ್
ಪೂರಕ: ಇಳೆ ಎಂಬ ಕನಸು – ಶ್ರೀಧರ್ ಬಳಿಗಾರ

೨. ಈಗ ಸಕಲವೂ ಸ್ಮಾರ್ಟ್ – ಟಿ ಜಿ ಶ್ರೀನಿಧಿ
ಪೂರಕ: ಮೌನೇಶನೊಂದಿಗೆ ವಾಕಿಂಗ್ – ಎಂ ಆರ್ ಕಮಲ

೩. ನೀರು ಕೊಡದ ನಾಡಿನಲ್ಲಿ – ನೇಮಿಚಂದ್ರ
ಪೂರಕ: ಹತ್ತು ಪೈಸೆಗೆ ಒಂದು ಲೀಟರ್ ನೀರು – ನಾ. ಕಾರಂತ ಪೆರಾಜೆ

**ಘಟಕ–೩: ಕುಟುಂಬ**

೧. ಗಂಡ ಹೆಂಡತಿ ಜಗಳ ಗಂಧ ತೀಡಿದ್ಹಾಂಗ – ಸೋಮಶೇಖರ ಇಮ್ರಾಪುರ
ಪೂರಕ: ಕಾಡುತೊರೆಯ ಹಾಡು – ಕಡಿದಾಳು ಶಾಮಣ್ಣ

೨. ಹೃದಯ ತೊಂದರೆ: ನಾ. ಡಿಸೋಜ
ಪೂರಕ: ಲೂಸಿಯ ಪ್ರಯಾಣ – ತ.ರಾ.ಸು

೩. ಕೊನೆಯ ನಿರ್ಧಾರ – ತ್ರಿವೇಣಿ
ಪೂರಕ: ಧ್ವನಿಯಿಲ್ಲದ ನೋವುಗಳು – ಸಾರಾ ಅಬೂಬಕ್ಕರ್

**ಘಟಕ–೪: ಸಂಕೀರ್ಣ**

೧. ವಾರೆನ್ ಬಫೆಟ್: ವಿಶ್ವಶ್ರೇಷ್ಠ ಹೂಡಿಕೆದಾರ – ಕೆ.ಕೆ ಪೂರ್ಣೇಶ್
ಪೂರಕ: ನಮ್ಮ ಬದುಕಿನ ಧ್ಯೇಯ ಮತ್ತು ಧ್ಯೇಯ ವಾಕ್ಯವೇನು? – ಎಸ್ ಷಡಕ್ಷರಿ

೨. ಕರಾವಳಿ ಬ್ಯಾಂಕಿಂಗ್ ಉದ್ಯಮ – ಎಂ.ಬಿ ಪಾಟೀಲ್
ಪೂರಕ: ದೃಢನಿರ್ಧಾರದೊಡನೆ ಕಾರ್ಯನಿರ್ವಹಿಸಿ–ಜಿ.ಸುರೇಂದ್ರನ್ ,ಅನು: ಬಿ.ಕೆ.ಎಸ್.ಮೂರ್ತಿ

೩. ಮಹಿಳಾ ಸಂಘಟನೆಯಲ್ಲಿ ಚರಕ – ಪ್ರಸನ್ನ
ಪೂರಕ: ಯುವ ಜನಾಂಗದ ಹೊಸ ಆಕರ್ಷಣೆ ಜೀನ್ಸ್ – ಟಿ.ಎಂ ಸುಬ್ಬರಾಯ

## ಘಟಕ-1 ಕನ್ನಡ ನಾಡು-ನುಡಿ ಚಿಂತನೆ

**ಪಠ್ಯ : 1.1**

### ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು

**ಹುಯಿಲಗೋಳ ನಾರಾಯಣರಾಯರು**

**ಪ್ರವೇಶಿಕೆ**

"ವಿಷಯ ಗ್ರಹಣಕ್ಕಾಗಿ ಬೇರೆ ಭಾಷೆಗಳನ್ನು ಅಭಿವ್ಯಕ್ತಿ ಮಾಧ್ಯಮವಾಗಿ ಕನ್ನಡವನ್ನು ಬಳಸುವುದರ ಮೂಲಕ ಕನ್ನಡ ಭಾಷೆ ತನ್ನ ಯೋಗ್ಯತೆಗೆ ತಕ್ಕ ಮಟ್ಟವನ್ನು ಮುಟ್ಟುವುದು ಸಾಧ್ಯವಾಗುವಂತಹ ಸನ್ನಿವೇಶ ಕನ್ನಡ ನಾಡಲ್ಲಿ ಈ ಕೂಡಲೆ ಏರ್ಪಡಬೇಕು" **ಡಾ. ಯು.ಆರ್. ಅನಂತಮೂರ್ತಿ**

ಹರಿದು ಹಂಚಿ ಹೋಗಿದ್ದ ಕರ್ನಾಟಕ ರಾಜ್ಯವನ್ನು ಒಂದುಗೂಡಿಸಲು ಈ ಕವಿತೆ ಅತ್ಯಂತ ಮಹತ್ವದ ಭೂಮಿಕೆ ವಹಿಸಿತು. ಹಾಗೆಯೇ ಕನ್ನಡ ನಾಡಿನ ಭವ್ಯ ಪರಂಪರೆ, ಸಂಸ್ಕೃತಿ, ಸ್ವರೂಪವನ್ನು ಅಪ್ಪಟವಾಗಿ ತೋರಿಸುತ್ತದೆ. ವಿವಿಧ ಸಂಸ್ಕೃತಿಗಳ ಸಾಮ್ಯತೆಗಳನ್ನು ಆದರ್ಶಭಾವನಾ ಪ್ರಧಾನವಾಗಿ ವರ್ಣಿಸಿದೆ. ಇದು ಏಕೀಕರಣದ ಭಾವನೆಗೆ ಭದ್ರವಾದ ಬುನಾದಿಯನ್ನು ಒದಗಿಸಿರುವುದಲ್ಲದೆ, ಅದಕ್ಕೊಂದು ನಿರ್ದಿಷ್ಟ ರೂಪವನ್ನು ಕೊಟ್ಟಿದೆ.

ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು
ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು

ರಾಜನ್ಯರಿಪು ಪರಶುರಾಮನಮ್ಮನ ನಾಡು
ಜಲನಿಧಿಯನೆ ಜಿಗಿದ ಹನುಮನುದಿಸಿದ ನಾಡು
ಓಜೆಯಿಂ ಮೆರೆದರಸುಗಳ ಸಾಹಸದ ಸೂಡು
ತೇಜವನು ನಮಗೀವ ವೀರವೃಂದದ ಬೀಡು

ಲೆಕ್ಕಿಗ ಮಿತಾಕ್ಷರರು ಬೆಳೆದು ಮೆರೆದಿಹ ನಾಡು
ಜಕ್ಕಣನ ಶಿಲ್ಪಕಲೆಯಚ್ಚರಿಯ ಕರುಗೋಡು
ಚೊಕ್ಕ ಮತಗಳ ಸಾರಿದವರಿಗಿದು ನೆಲೆವೀಡು
ಬೊಕ್ಕಸದ ಕಣಜವೈ ವಿದ್ವತ್ತೆಗಳ ಕಾಡು

ಪಾವನೆಯರಾ ಕೃಷ್ಣ ಭೀಮೆಯರ ತಾಯ್ನಾಡು
ಕಾವೇರಿ ಗೋದೆಯರು ಮೈದೊಳೆವ ನಲುನಾಡು
ಆವಗಂ ಸ್ಫೂರ್ತಿಸುವ ಕಬ್ಬಿಗರ ನಡೆಮಾಡು
ಕಾವ ಗದುಗಿನ ವೀರನಾರಾಯಣನ ಬೀಡು

**ಆಕರ** : ಕನ್ನಡ ಕಾವ್ಯಗಳ ಗೆಜ್ಜೆನಾದ. ಸಂ: ಪ್ರೊ. ಎ.ವಿ. ಸೂರ್ಯನಾರಯಣಸ್ವಾಮಿ, ಎಚ್.ಎಸ್. ಗೋವಿಂದಗೌಡ, ಹಸ್ಯಾಲು ಪ್ರಕಾಶನ. 2006

**ಪೂರಕ ಪಠ್ಯ:**

**ಕನ್ನಡ ಭಾಷಾ ಏಕೀಕರಣ**

**ಡಾ. ಸೋಮಶೇಖರಗೌಡ**

ಕರ್ನಾಟಕ ಏಕೀಕರಣ ಕನ್ನಡಿಗರೆಲ್ಲ ಬಲ್ಲ ಸಂಗತಿ. ಆದರೆ ಕನ್ನಡ ಭಾಷಾ ಏಕೀಕರಣ ಎಂದ ತಕ್ಷಣ ಹುಬ್ಬೇರಿಸುವವರೇ ಹೆಚ್ಚು. ಎರಡು ಸಾವಿರ ವರ್ಷಗಳ ಇತಿಹಾಸವುಳ್ಳ ವಿಸ್ತಾರವಾದ ಭೌಗೋಳಿಕ ಎಲ್ಲೆಯೊಳಗೆ ಮಾತಾಡಲ್ಪಡುವ ಹಲವಾರು ಪ್ರಾದೇಶಿಕ ಹಾಗೂ ಸಾಮಾಜಿಕ ಉಪಭಾಷೆಗಳಿಂದ ಕೂಡಿರುವ ಕನ್ನಡ ಭಾಷೆಯನ್ನು ಏಕೀಕರಣಗೊಳಿಸುವುದು ಸಾಧ್ಯವೆ? ಎಂಬ ಪ್ರಬಲ ಸಂಶಯ ಯಾರನ್ನಾದರೂ ಕಾಡುವುದು ಸಹಜ. ನಿತ್ಯ ಪರಿವರ್ತನೆ ಭಾಷೆಯ ಸಹಜ ಗುಣ, ಜಾಯಮಾನ. ಅದು ಬದುಕಲು, ಬೆಳೆಯಲು ಬದಲಾವಣೆ ಅನಿವಾರ್ಯ. ಮೇಲ್ನೋಟಕ್ಕೆ ಒಂದೇ ಎಂದು ಕಾಣುವ ಕನ್ನಡ ಭಾಷೆಯನ್ನು ಒಳಹೊಕ್ಕು ನೋಡಿದರೆ, ಅದರ ಉಚ್ಚಾರಣೆಯಲ್ಲಿ, ವ್ಯಾಕರಣಾಂಶಗಳಲ್ಲಿ, ಪದಬಳಕೆಯಲ್ಲಿ ನಾನಾ ಬಗೆಯ ಭಿನ್ನತೆಗಳು ಕಾಣಸಿಗುತ್ತವೆ. ಭಾಷೆ ಕಾಲದಿಂದ ಕಾಲಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುವುದು, ಜೊತೆಗೆ ಜಾತಿ, ಮತ, ವೃತ್ತಿ, ವರ್ಗಗಳಿಂದಾಗಿ ಪರಿವರ್ತನೆಗೊಳ್ಳುವುದು ಇದ್ದದ್ದೇ.

ಪ್ರಾಚೀನ ಕಾಲದಿಂದಲೂ ಕನ್ನಡದಲ್ಲಿ ಭಾಷಿಕ ವೈವಿಧ್ಯ ಇದ್ದಿರಲೇಬೇಕು. ಕವಿರಾಜಮಾರ್ಗಕಾರನ ಗಮನಕ್ಕೂ ಇದು ಬಂದಿದೆ. ಆತ "ವಾಸುಗಿಯುಮರಿಯಲಾರದೆ ಬೇಸರೆಗುಂ ದೇಸಿ ಬೇರೆರವೇರಪ್ಪುದರಿಂ" ಎಂದು ಹೇಳಿದ್ದಾನೆ. ಆ ವೇಳೆಗೆ ಕನ್ನಡದಲ್ಲಿ ಉತ್ತರಮಾರ್ಗ, ದಕ್ಷಿಣಮಾರ್ಗ, ಉತ್ತರೋತ್ತರ ಮಾರ್ಗಗಳೆಂಬ ಭಿನ್ನತೆಗಳಿದ್ದುವೆಂಬುದು ಖಚಿತಪಟ್ಟಿದೆ. ಬಹುಶಃ ದೇಸಿ ಹಾಗೂ ಮಾರ್ಗ ಇಂದಿನ ಗ್ರಾಮ್ಯ ಹಾಗು ಶಿಷ್ಟ ಭಾಷೆಗೆ ಪರ್ಯಾಯ ಪದಗಳಾಗಿದ್ದಿರಬೇಕು. 'ಕಾವೇರಿಯಿಂದ ಗೋದಾವರಿ'ಯವರೆಗೆ ಹರಡಿದ್ದ ಕನ್ನಡ ನಾಡಿನಲ್ಲಿ ಹಲವಾರು ಉಪಭಾಷೆಗಳಿದ್ದದ್ದರಲ್ಲಿ ಆಶ್ಚರ್ಯವೇನಿಲ್ಲ. ನೂರಕ್ಕೆ ನೂರು ವಿದ್ಯಾವಂತರಿರುವ ಸದ್ಯದ ಇಂಗ್ಲೆಂಡಿನಲ್ಲಿಯೇ ಇಂಗ್ಲಿಷ್ ಸಂಬಂಧಿಯಾದ ಅನೇಕ ಉಪಭಾಷೆಗಳಿರುವಾಗ ಸಾವಿರಾರು ವರ್ಷಗಳ ಹಿಂದಿನ ಕನ್ನಡ ನಾಡಿನಲ್ಲಿ ಅಸಂಖ್ಯಾತವಾದ ಉಪಭಾಷೆಗಳಿದ್ದಿರಬೇಕು ಎಂಬುದರಲ್ಲಿ ಸಂದೇಹವಿಲ್ಲ. ಪ್ರಾದೇಶಿಕವಾಗಿ ಕನ್ನಡದಲ್ಲಿ ಮೈಸೂರು ಕನ್ನಡ, ಮಂಗಳೂರು ಕನ್ನಡ, ಧಾರವಾಡ ಕನ್ನಡ ಮತ್ತು ಹೈದರಾಬಾದ್, ಅಥವಾ ಗುಲ್ಬರ್ಗ ಕನ್ನಡ ಎಂಬ ನಾಲ್ಕು ಉಪಭಾಷೆಗಳನ್ನು ಹೆಸರಿಸುವುದು ರೂಢಿ. ಈ ವರ್ಗೀಕರಣವು ಮೇಲುನೋಟಕ್ಕೆ ಎಷ್ಟು ಸರಳವೋ ಒಳಹೊಕ್ಕು ನೋಡಿದಾಗ ಅಷ್ಟು ಸರಳವಾಗಿಲ್ಲ. . ಹಾಗೆ ನೋಡಿದರೆ ಕನ್ನಡದಲ್ಲಿ ಉಪಭಾಷೆಗಳಿರುವುದು ಈ ನಾಲ್ಕೆ ಅಲ್ಲ. ಈ ನಾಲ್ಕರಲ್ಲಿ ಒಂದೊಂದರಲ್ಲೂ ಹತ್ತಾರೂ ಉಪಭಾಷೆಗಳಿವೆ. ತೀರಸೂಕ್ಷ್ಮವಾಗಿ ಅಧ್ಯಯನ ಮಾಡಿದ ಪಕ್ಷದಲ್ಲಿ ಕನ್ನಡ ಭಾಷೆ ಪ್ರಾದೇಶಿಕವಾಗಿ, ಜಿಲ್ಲೆಗಳಲ್ಲಿರಲಿ ಪ್ರತಿಯೊಂದು ತಾಲ್ಲೋಕು, ಹೋಬಳಿಗಳ ಮಟ್ಟದಲ್ಲಿ ಕೂಡ ವೈಶಿಷ್ಟ್ಯಪೂರ್ಣ ಉಚ್ಚಾರ, ನುಡಿಗಟ್ಟು, ಪದ

ಪ್ರಯೋಗಗಳನ್ನು ಹೊಂದಿರುವುದುಂಟು. ಇಂಥ ವೈವಿಧ್ಯ ಪೂರ್ಣವಾದ ಕನ್ನಡ ಭಾಷೆಯನ್ನು ಏಕೀಕರಣಗೊಳಿಸುವುದು ಎಂದರೇನು? ಎಂಬ ಕೌತುಕುದ ಪ್ರಶ್ನೆ ಎದುರಾಗುತ್ತದೆ.

ಕನ್ನಡ ಏಕೀಕರಣ ಎಂದರೆ, ಕರ್ನಾಟಕದಾದ್ಯಂತ ಬಳಕೆಯಲ್ಲಿರುವ ಕನ್ನಡ ಭಾಷೆ ಏಕೀಭವಿಸುವುದು, ಅರ್ಥಾತ್ ಹತ್ತು ಹಲವು ಭಿನ್ನತೆಗಳಿಂದ ಕೂಡಿರುವ ಕನ್ನಡ ಭಾಷೆ ಕನ್ನಡಿಗರೆಲ್ಲರಿಗೂ ತಿಳಿಯುವಂಥ ಒಂದು ಏಕೀಕೃತ ಹೊಸರೂಪ ಪಡೆಯಬೇಕು ಎಂಬುದು ಹೆಚ್ಚು ಕಡಿಮೆ ಇದೇ ಅರ್ಥದಲ್ಲಿ ಶಿಷ್ಟೀಕರಣ (Standardisation) ಎಂಬ ಪದ ಭಾಷಾವಿಜ್ಞಾನದಲ್ಲಿ ಬಳಕೆಯಲ್ಲಿದೆ.

'ಶಿಷ್ಟಭಾಷೆ' ಎಂಬುದು ಆಕಾಶದಿಂದ ಉದುರುವುದಿಲ್ಲ. ಅದೂ ಸಹ ಸಂಬಂಧಿತ ಉಪಭಾಷೆಗಳ ಒಡನಾಟದಿಂದಲೇ ಒಡಮೂಡುವಂಥದು. ಹೆಚ್ಚು ಜನರನ್ನು ಅದು ತಲುಪುವುದರಿಂದ, ಹೆಚ್ಚು ಜನರಿಗೆ ಅದು ಅರ್ಥವಾಗುವುದರಿಂದ, ಶಿಕ್ಷಣ, ಆಡಳಿತ, ಕಾನೂನು ಮತ್ತು ಪ್ರಸಾರ ಮಾಧ್ಯಮಗಳಲ್ಲಿ ಅದು ಬಳಕೆಯಾಗುತ್ತಿರುವುದರಿಂದ ಅದಕ್ಕೆ ಶಿಷ್ಟತೆ ಪ್ರಾಪ್ತವಾಗುತ್ತದೆ. ವಿದ್ಯಾವಂತರು, ಅಧಿಕಾರಿಗಳು, ಸಾಹಿತಿಗಳು ಅದನ್ನು ಬಳಸುವುದರಿಂದ ಅದಕ್ಕೆ ಮನ್ನಣೆ, ಗೌರವ ಹೆಚ್ಚು. ಅವಿದ್ಯಾವಂತರು, ಗ್ರಾಮೀಣ ಜನರು, ಅದನ್ನು ಪ್ರಮಾಣ ಭಾಷೆಯೆಂದು ಅಭಿಮಾನಿಸುವುದೇ ಅಲ್ಲದೆ ಸದಾ ಅನುಕರಿಸುವ ಪ್ರಯತ್ನ ಮಾಡುತ್ತಿರುತ್ತಾರೆ. ಹಾಗೆಂದ ಮಾತ್ರಕ್ಕೆ ಶಿಷ್ಟಭಾಷೆ ಮಾತ್ರ ಶ್ರೇಷ್ಠ, ಉಳಿದ ಉಪಭಾಷೆಗಳೆಲ್ಲ ಅಗಣ್ಯ ಎಂದರ್ಥವಲ್ಲ. ಕನ್ನಡನಾಡು ರಾಜಕೀಯವಾಗಿ ಒಂದಾದ ಮೇಲೆ, ಶಾಲೆಯ ಪಠ್ಯಪುಸ್ತಕಗಳಲ್ಲಿ ಭಾಷೆಯ ಏಕತೆಯನ್ನು ಸಾಧಿಸುವ ಪ್ರಯತ್ನ ಸಾಗಿರುವುದನ್ನು ಕಾಣಬಹುದು. ಮುಖ್ಯವಾಗಿ ಪ್ರಾಥಮಿಕ ಪಠ್ಯಪುಸ್ತಕಗಳಲ್ಲಿ ಇದು ಕಾಣುತ್ತದೆ. ಕನ್ನಡಿಗರ ಪರಸ್ಪರ ಅರಿವಿನ ಹಿನ್ನೆಲೆಯಲ್ಲಿ ಪ್ರಸ್ತುತ ಕನ್ನಡ ಏಕೀಕರಣಕ್ಕೆ ಹೆಚ್ಚು ಒತ್ತುಕೊಡುವ ದೇಜಗೌ ಅವರು ಒಂದು ಕಾಲಕ್ಕೆ 'ಏಕಮಾತ್ರ ಶಿಷ್ಟಭಾಷೆಯ ಕಲ್ಪನೆ ಅರ್ಥರಹಿತ'ವಾದದ್ದೆಂದು, 'ಏಕೈಕ ಶಿಷ್ಟಭಾಷೆಯ ಶ್ರೇಷ್ಠತಾ ಸ್ಥಾಪನೆ ಹುರುಳಿಲ್ಲದ ವಾದ'ವೆಂದು ಖಂಡತುಂಡವಾಗಿ ಅಲ್ಲಗಳೆದಿದ್ದಾರೆ.

ಶಿಷ್ಟಭಾಷೆಯ ಅನಿವಾರ್ಯ ಅಗತ್ಯವನ್ನು ಒಟ್ಟು ಸಂಪರ್ಕ ದೃಷ್ಟಿಯಿಂದ ಡಾ. ಆರ್. ಸಿ. ಹಿರೇಮಠ ಅವರು ಒತ್ತಿ ಹೇಳಿದ್ದಾರೆ. ವಿವಿಧ ಪ್ರಾದೇಶಿಕ, ಸಾಮಾಜಿಕ ಪ್ರಭೇದಗಳನ್ನು ಹಾಗೆಯೇ ಬೆಳೆಯಗೊಟ್ಟರೆ ಒಟ್ಟು ಸಂಪರ್ಕಕ್ಕೆ ವ್ಯತ್ಯಯವುಂಟಾಗುತ್ತದೆ. ಒಂದು ಪ್ರಭೇದ ಇನ್ನೊಂದು ಪ್ರಭೇದವನ್ನು ಬಳಸುವವರಿಗೆ ಅರ್ಥವಾಗುವುದಿಲ್ಲ. ಅವರ ಪ್ರಭೇದ ಇವರಿಗೆ ಅರ್ಥವಾಗುವುದಿಲ್ಲ. ಹೀಗಾಗಿ ಸಾಮಾನ್ಯ ಸಂಪರ್ಕಕ್ಕೆ ವ್ಯತ್ಯಯ ಬರುತ್ತದೆ. ಇಂಥ ಪರಿಸ್ಥಿತಿಯನ್ನು ಹೋಗಲಾಡಿಸಲು ಒಂದು ಪ್ರಮಾಣಭೂತ ಪ್ರಭೇದ ನಿರ್ಮಾಣವಾಗುತ್ತದೆ. ಇದು ಒಂದು ಭಾಷೆಯನ್ನು ಮಾತನಾಡುವ ಸಕಲರಿಗೂ ಅರ್ಥವಾಗುವ ಗುರಿಯನ್ನು ಹೊಂದಿದೆ. ಇಂಥ ಒಂದು ರೂಪ ನಿರ್ಮಾಣವಾದಾಗ ಆಯಾ ಪ್ರಾದೇಶಿಕ ವೈಶಿಷ್ಟ್ಯಗಳು ಮಾಯವಾಗಿ ಒಂದು ವಿಶಿಷ್ಟ ರೂಪವೇ ನಿರ್ಮಾಣವಾಗುತ್ತದೆ. ಗ್ರಂಥಗಳು, ಆಕಾಶವಾಣಿ, ಸಿನೆಮಾ ಮುಂತಾದ ಮಾಧ್ಯಮಗಳು ಬಳಸುವ ಪ್ರಭೇದ ಇದು. ಈ ಪ್ರಭೇದವೂ ಕನ್ನಡವೇ ಆದರೂ ಅದು ಪ್ರತಿಯೊಂದು ಪ್ರಭೇದಕ್ಕಿಂತಲೂ ಭಿನ್ನವಾದದ್ದು

ಶಿಷ್ಟ ಅಥವಾ ಪ್ರಾತಿನಿಧಿಕ ಭಾಷೆಯ ಕಲ್ಪನೆ ಇಂದು ನಿನ್ನೆಯದಲ್ಲ. ಪ್ರಾಚೀನ ಕಾಲದಿಂದಲೂ ಇಂಥ ಒಂದು ಭಾಷಾರೂಪ ಕನ್ನಡದಲ್ಲಿದ್ದಿರಲೇಬೇಕು. ಸಹಜವಾಗಿಯೇ ಅನೇಕ ಭಾಷಾಪ್ರಭೇದಗಳು ಕನ್ನಡದಲ್ಲಿದ್ದದ್ದರಿಂದ ಅವುಗಳಿಗೆಲ್ಲ ಪ್ರಾತಿನಿಧಿಕ ಸ್ಥಾನದಲ್ಲಿರಬಹುದಾದ, ಅನುಕರಣಯೋಗ್ಯವಾದಂಥ ಶಿಷ್ಟಭಾಷೆ ಇದ್ದಿರಬೇಕು. ಕವಿರಾಜಮಾರ್ಗಕಾರನ 'ಕನ್ನಡದ ತಿರುಳು' ಇಂಥ ಶಿಷ್ಟಭಾಷೆಯ ಅಸ್ತಿತ್ವದ ಪುರಾವೆಯಾದರೆ, ಪಂಪನ ಕಾಲದ 'ಪುಲಿಗೆರೆಯ ಕನ್ನಡ', ಆಂಡಯ್ಯನ 'ಬನವಾಸಿಯ ತಿರುಳನ್ನಡ' ಇಂಥ ಮಾತುಗಳು ಈ ಬಗೆಯ ಪುರಾವೆಗೆ ಪೂರಕವಾಗುವಂಥವು.

ಈಗಲೂ ಒಂದೇ ಕನ್ನಡ ಕನ್ನಡಿಗರಿಗೆಲ್ಲ ಇಲ್ಲವೆಂದಲ್ಲ. ಇದೆ : ಅದಕ್ಕೆ "ಶಿಷ್ಟಭಾಷೆ" ಯೆಂದು ಹೆಸರು. ಇಡೀ ಕರ್ನಾಟಕವನ್ನು ಅದು ವ್ಯಾಪಿಸಿಕೊಂಡಿದೆ. ಅಧಿಕೃತವಾಗಿ ಅಂಗೀಕೃತವಾಗಿದೆ : ಶಾಸನ, ಆಡಳಿತ, ವಿದ್ಯಾಭ್ಯಾಸ, ನ್ಯಾಯ ವಿನಿಯೋಗ ಮುಂತಾದ ಹೊಣೆಗಾರಿಕೆಯ ವ್ಯವಹಾರಗಳಿಗೆಲ್ಲ ಅದೇ 'ವಾಹಕ' ಮಾಧ್ಯಮ, ನಿರ್ದಿಷ್ಟ ಮಾದ್ಯಮ. ಇನ್ನು ಅನ್ಯಭಾಷೆಗಳಿಂದ ಕನ್ನಡಕ್ಕೆ ಎರವಲಾಗಿ ಬಂದಿರುವ ಪದಗಳು ಸಾಮಾನ್ಯವಾಗಿ ಅಲ್ಪಸ್ವಲ್ಪ ವ್ಯತ್ಯಾಸಗಳೊಡನೆ ಎಲ್ಲರಿಗೂ ಅರ್ಥವಾಗುವಂತಹವಾಗಿರುತ್ತವೆ. ಇಂಗ್ಲಿಷ್ ಹಾಗೂ ಸಂಸ್ಕೃತದ ಇಂಥ ಅಸಂಖ್ಯ ಪದಗಳು ಕನ್ನಡದಲ್ಲಿವೆ. ಜೊತೆಗೆ ಅಂದಾಜು, ಕರಾರು, ಕಾಗದ, ಕಸುಬು, ಇನಾಮು, ಗಿರಾಕಿ, ಅರ್ಜಿ ಮುಂತಾದ ಹಿಂದೂಸ್ಥಾನಿ ಪದಗಳು ಹಾಗೂ ಪಾದ್ರಿ, ಪಿರಂಗಿ, ಇಸ್ತ್ರಿ, ಮುಂತಾದ ಪೋರ್ಚುಗೀಸ್ ಪದಗಳು ಏಕಭಾಷೆಯನ್ನು ರೂಪಿಸುವಲ್ಲಿ, ಮಹತ್ವದ ಪಾತ್ರ ವಹಿಸುತ್ತವೆ.

ಕನ್ನಡ ಏಕೀಕರಣ ಸಾಧಿತವಾಗಬೇಕಾದರೆ ಮೊತ್ತಮೊದಲನೆಯದಾಗಿ ಸಾಕ್ಷರತೆ ಹೆಚ್ಚಬೇಕು. ಹೆಚ್ಚು ಹೆಚ್ಚು ಜನ ವಿದ್ಯಾವಂತರಾಗಬೇಕು. ಶಿಕ್ಷಣ ಭಾಷಾಪ್ರಭೇದಗಳನ್ನು ಕ್ಷೀಣಿಸಬಲ್ಲ ಶಕ್ತಿಯುತ ಮಾಧ್ಯಮ, ವಿವಿಧ ಪ್ರಾದೇಶಿಕ ಹಿನ್ನೆಲೆಯ ಸಾಹಿತಿಗಳು, ಕಲಾವಿದರು, ಪತ್ರಕರ್ತರು, ವಿದ್ಯಾರ್ಥಿಗಳು, ಪರಸ್ಪರ ಸಮ್ಮೇಳನಗಳಲ್ಲಿ, ಗೋಷ್ಠಿಗಳಲ್ಲಿ, ವಿಚಾರ ಸಂಕಿರಣಗಳಲ್ಲಿ, ಸಮಾವೇಶಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವುದು. ಹೀಗೆ ಮಾಡುವುದರಿಂದ ಜನರಲ್ಲಿ ಪರಸ್ಪರ ಅರಿವು (Mutual intelligibility), ಮೂಡಿ ಭಾಷಾ ಭಿನ್ನತೆಗಳು ಮೂಲೆಗುಂಪಾಗುತ್ತವೆ. ಸಂಚಾರ ಸೌಲಭ್ಯಗಳು ಹೆಚ್ಚಿದರೆ ಜನರ ನಡುವಣ ಭಾಷಾ ವ್ಯತ್ಯಾಸದ ಗೋಡೆಗಳು ಬಿರುಕು ಬಿಡುತ್ತವೆ. ಒಡೆದು ಬೀಳುತ್ತವೆ. ಅಲ್ಲದೆ ಜನಪ್ರಿಯ ಸಾಹಿತಿಗಳು, ಪತ್ರಕರ್ತರು, ಜೊತೆಗೆ ನಾಟಕ, ಸಿನೆಮಾ, ದೂರದರ್ಶನ, ಆಕಾಶವಾಣಿಗಳು, ಭಾಷಿಕ ವ್ಯತ್ಯಯಗಳನ್ನು ಸಮತಟ್ಟುಗೊಳಿಸುವ ಕೆಲಸವನ್ನು ನಿರಂತರವಾಗಿ ಕೈಗೊಳ್ಳುತ್ತಲೇ ಬಂದಿವೆ. ತನ್ಮೂಲಕ ಏಕೈಕ ಶಿಷ್ಟಭಾಷೆಯನ್ನು ಛಾಪಿಸುತ್ತ ನಡೆದಿವೆ.

ಕನ್ನಡ ಏಕೀಕರಣ ಸಮಗ್ರವಾದ ರೀತಿಯಲ್ಲಿ ಕೈಗೂಡಬೇಕಾದರೆ ಸರ್ಕಾರದ ಆಡಳಿತದ ಪಾತ್ರ ಮಹತ್ವಪೂರ್ಣವಾದುದು. ಇದಕ್ಕಾಗಿ ಸರ್ಕಾರದ ವತಿಯಿಂದ ಅನೇಕ ರೀತಿಯ ಕಾರ್ಯಕ್ರಮಗಳು ಜರುಗಬೇಕಾದ್ದು, ತಂತ್ರಗಳು ರೂಪಿತವಾಗಬೇಕಾದ್ದು ಅನಿವಾರ್ಯ :

1. ಸಂಪೂರ್ಣವಾಗಿ ಕನ್ನಡವನ್ನು ಆಡಳಿತ ಭಾಷೆಯಾಗಿಸುವುದು. ಕನ್ನಡಿಗರ ಭಾಷಾಭಿಮಾನ ವೃದ್ಧಿಸುವಂಥ ಪ್ರಚೋದನೆಗಳನ್ನು ಒದಗಿಸುವುದು.

2. ಕನ್ನಡದಲ್ಲಿ ಬರೆಯುವವರಿಗೆ, ಓದುವವರಿಗೆ ಅನುಕೂಲವಾಗುವಂತೆ ಮಾರ್ಗದರ್ಶನ ಕೈಪಿಡಿಗಳನ್ನೂ ಸರ್ಕಾರದ ವತಿಯಿಂದ ಪ್ರಕಟಿಸುವುದು.

3. ವೈದ್ಯಕೀಯ, ತಂತ್ರಜ್ಞಾನ, ವಾಣಿಜ್ಯ ಮುಂತಾದ ವಿಷಯಗಳ: ಪಾರಿಭಾಷಿಕ ಪದಗಳನ್ನು, ಆಡಳಿತ ಇಲಾಖಾ ಶಬ್ದಕೋಶಗಳನ್ನು, ಕಾಯಿದೆ ಮತ್ತು ಕಾನೂನು ವಿಷಯಗಳನ್ನು ಕನ್ನಡದಲ್ಲಿ ಒದಗಿಸುವುದು ಇಲ್ಲವೇ ಅನುವಾದಗೊಳಿಸಿ ದೊರಕಿಸುವುದು.

4. ಕೊನೆಯ ಪಕ್ಷ ಮಾಧ್ಯಮಿಕ ಹಂತದವರೆಗೆ ಪ್ರಾದೇಶಿಕ ಭೇದವಿಲ್ಲದೆ ಎಲ್ಲ ಮಕ್ಕಳಿಗೂ ಕನ್ನಡ ಕಲಿಕೆ ಕಡ್ಡಾಯಗೊಳಿಸುವುದು,

5. ಶಿಕ್ಷಣಕ್ಕೆ ಸಂಬಂಧಿಸಿದಂತೆ ಪರಾಮರ್ಶನ ಸಾಹಿತ್ಯ, ಪಾರಿಭಾಷಿಕ ಶಬ್ದಕೋಶಗಳು, ಸ್ಥಳನಾಮಗಳು, ರಸ್ತೆಯ ಹೆಸರುಗಳು, ಖಗ, ಮೃಗ, ಮಾನವರ ಹೆಸರುಗಳು, ವ್ಯಾಕರಣಗಳು, ನಿಘಂಟುಗಳನ್ನು ಕನ್ನಡದಲ್ಲಿ ಪ್ರಕಟಿಸುವುದು.

6. ಅಧಿಕೃತ ಪ್ರಕಟಣೆಗಳಲ್ಲಿ ಭಾಷೆ ಮತ್ತು ಅಭಿವ್ಯಕ್ತಿಯ ಗುಣಮಟ್ಟವನ್ನು ಕಾಯ್ದುಕೊಳ್ಳುವುದು.

7. ಕನ್ನಡಕ್ಕಾಗಿ ದುಡಿದ, ದುಡಿಯುತ್ತಿರುವ ತಜ್ಞರ ಸಮಿತಿಯೊಂದನ್ನು ರಚಿಸಿ, ಅವರ ರಚನಾತ್ಮಕ ಸಲಹೆಗಳನ್ನು ಮಾನ್ಯ ಮಾಡುವುದು.

8. ವಿಚಾರ ಸಂಕಿರಣಗಳನ್ನು, ತರಬೇತಿ ಶಿಬಿರಗಳನ್ನು ಏರ್ಪಡಿಸಿ ವಿಚಾರ ವಿನಿಮಯಕ್ಕೆ, ಭಾಷಿಕ ಬೆಳವಣಿಗೆಗೆ ಸೂಕ್ತ ವೇದಿಕೆಗಳನ್ನಾಗಿಸುವುದು.

10. ಭಾಷಾಭಿವೃದ್ಧಿಗಾಗಿ ದುಡಿಯಲು ಸಾಹಿತ್ಯ ಪರಿಷತ್ತು, ಅಕಾಡೆಮಿಗಳ ಕಾರ್ಯಕ್ರಮಗಳನ್ನು ತಾಲ್ಲೂಕು, ಹೋಬಳಿಗಳ ಮಟ್ಟದಲ್ಲಿ ಹಮ್ಮಿಕೊಳ್ಳುವುದು.

11. ಕನ್ನಡ ಏಕೀಕರಣಕ್ಕೆ, ತನ್ಮೂಲಕ ಶಿಷ್ಟಭಾಷೆಯೊಂದನ್ನು ಬೆಳೆಸುವುದಕ್ಕೆ ದುಡಿದ ಗಣ್ಯರಿಗೆ ಪ್ರಶಸ್ತಿ, ಬಹುಮಾನಗಳನ್ನು ಕೊಟ್ಟು ಸನ್ಮಾನಿಸುವುದರ ಮೂಲಕ ಗೌರವಿಸುವುದು.

ಒಟ್ಟಿನಲ್ಲಿ ಕನ್ನಡ ಏಕೀಕರಣ ಸಾಧ್ಯವಾಗಬೇಕಾದರೆ, ಕರ್ನಾಟಕದಾದ್ಯಂತ ಎಲ್ಲರಿಗೂ ಅರ್ಥವಾಗುವಂಥ ಒಂದು ಕನ್ನಡ ಭಾಷಾರೂಪ ಸಿದ್ಧಿಸಬೇಕು. ಇದು ಕೇವಲ ಸರ್ಕಾರದಿಂದ, ಯಾವುದೇ ಸಮಿತಿ ಅಥವಾ ಸಂಸ್ಥೆಯಿಂದ ಸಾಧಿತವಾಗುವಂಥದಲ್ಲ. ಕನ್ನಡಿಗರೆಲ್ಲ ತಮ್ಮ ತಮ್ಮ ಪ್ರಾದೇಶಿಕ ಭಿನ್ನತೆಯನ್ನು ಮರೆತು ಶಿಷ್ಟಭಾಷೆಯೊಂದನ್ನು ತ್ರಿಕರಣಪೂರ್ವಕವಾಗಿ ಪೋಷಿಸಿ ಬೆಳೆಸಿದರೆ ಆಗ ಮಾತ್ರ ಕನ್ನಡ ಏಕೀಕರಣ ಸಾಧ್ಯ.

**ಆಕರ** : ಭಾಷೆ ರಚನೆ ಬಳಕೆ. ಡಾ. ಸೋಮಶೇಖರಗೌಡ, ಕನ್ನಡ ಸಾಹಿತ್ಯ ಪರಿಷತ್ತು ಪ್ರಕಾಶನ, 2012.

**ಕವಿ ಪರಿಚಯ 1**

**ಹುಯಿಲಗೋಳ ನಾರಾಯಣರಾಯರು** : 'ಉದಯವಾಗಲು ನಮ್ಮ ಚೆಲುವ ಕನ್ನಡನಾಡು' ಗೀತೆಯೊಂದಿಗೆ ಪ್ರಸಿದ್ಧರಾಗಿರುವ ಹುಯಿಲಗೋಳ ನಾರಾಯಣರಾಯರು (1844– 1971 ) ಕೃಷ್ಣರಾಯರು ಮತು ವಹೆಣಕ್ಕ ದಂಪತಿಗಳ ಮಗನಾಗಿ ಗದಗದಲ್ಲಿ ಜನಿಸಿದರು. ನವೋದಯ ಪೂರ್ವದ ಶ್ರೇಷ್ಠ ಕವಿ ಹಾಗೂ ನಾಟಕಕಾರರು. ಸುಮಾರು ಒಂದು ನೂರರಷ್ಟು ದೇವರನಾಮ 13 ದೀರ್ಘ ಕಥನ ಕವನಗಳು ಅನೇಕ ರಂಗಗೀತೆಗಳು ಹಾಗೂ ಹಲವಾರು ನಾಡಗೀತೆಗಳನ್ನು ರಚಿಸಿದ್ದಾರೆ. ಶ್ರೀನಿವಾಸ ಹಾವನೂರರು ಇವರನ್ನು 'ದಾಸಸಾಹಿತ್ಯದ ಕೊನೆಯ ಕೊಂಡಿ' ಎಂದು ಕರೆದಿದ್ದಾರೆ.

**ಕವಿ ಪರಿಚಯ 2**

**ಡಾ. ಸೋಮಶೇಖರಗೌಡ** : ಭಾಷಾವಿಜ್ಞಾನ ಕ್ಷೇತ್ರದಲ್ಲಿ ಪರಿಣಿತರು. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಭಾಷಾ ವಿಜ್ಞಾನಕ್ಕೆ ಸಂಬಂಧಿಸಿದಂತೆ ಹಲವಾರು ಕೃತಿಗಳನ್ನು ರಚಿಸಿದ್ದಾರೆ. "ಕನ್ನಡ ಭಾಷಾ ಏಕೀಕರಣ" ಪೂರಕ ಪಠ್ಯಭಾಗವನ್ನು ಇವರ "ಭಾಷೆ ರಚನೆ ಬಳಕೆ" ಎಂಬ ಕೃತಿಯಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

**ಕಠಿಣ ಪದಗಳ ಅರ್ಥ**:

ನಿಧಿ – ಸಂಪತ್ತು,ರಿಪು – ಶತೃ, ಓಜೆ – ಕ್ರಮ, ಸೂಡು – ಗುಂಪು,

ಪರಶುರಾಮನಮ್ಮನ ನಾಡು– ಪರಶುರಾಮನ ತಾಯಿ ರೇಣುಕಾ (ಯಲ್ಲಮ್ಮ ದೇವಿ) ನೆಲೆಸಿದ ನಾಡು

**ತರಗತಿ/ಅಭ್ಯಾಸಗಳು ಚಟುವಟಿಕೆಗಳು** :

1. ಕನ್ನಡ ಚಿಂತನೆಯನ್ನು ಕುರಿತು ವಿದ್ಯಾರ್ಥಿಗಳಿಂದ ಕವಿತೆ, ಲೇಖನ ರಚಿಸಿ, ತರಗತಿಯಲ್ಲಿ ವಾಚಿಸಲು ಅವಕಾಶ ಮಾಡಿಕೊಡುವುದು.

2. ಕರ್ನಾಟಕ ಏಕೀಕರಣದ ಹೋರಾಟಗಾರರ ಬಗ್ಗೆ ವಿದ್ಯಾರ್ಥಿಗಳು ವಿಷಯ ಸಂಗ್ರಹಿಸುವುದು.

3. ಪ್ರಾದೇಶಿಕ ಭಾಷಾ ವೈವಿದ್ಯತೆ ಬಗೆಗೆ ವಿದ್ಯಾರ್ಥಿಗಳಿಂದ ಗುಂಪು ಚರ್ಚೆ ಮಾಡಿಸುವುದು.

4. ಕರ್ನಾಟಕದ ವೈಶಿಷ್ಟಗಳಾದ ಕನ್ನಂಬಾಡಿ, ಗೋಳಗುಮ್ಮಟ, ಬೇಲೂರು, ಹಳೇಬೀಡು, ಮೃಗಾಲಯ ಇತ್ಯಾದಿ ಮಾಡೆಲ್‌ಗಳನ್ನು ಮಾಡಲು ವಿದ್ಯಾರ್ಥಿಗಳನ್ನು ಉತ್ತೇಜಿಸುವುದು. ಮತ್ತು ಈ ಸ್ಥಳಗಳ ಐತಿಹ್ಯದ ಬಗ್ಗೆ ವಿಷಯ ಸಂಗ್ರಹಿಸಲು ತಿಳಿಸುವುದು.

5. ಪತ್ರಿಕೆಗಳಲ್ಲಿ ಬರುವ ಕನ್ನಡ ಪರ ಬರವಣಿಗೆಯನ್ನು ತರಗತಿಯಲ್ಲಿ ಓದಿಸುವುದು, ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಬರವಣಿಗೆಯನ್ನು ಉತ್ತೇಜಿಸುವುದು.

**ಸಂಭಾವ್ಯ ಪ್ರಶ್ನೆಗಳು** :

1. ಈ ಕವಿತೆಯನ್ನು ರಚಿಸಿದವರು ಯಾರು?

2. ಗದುಗಿನ ವೀರನಾರಯಣನ ಬೀಡು ಯಾವುದು?

3. ಕರ್ನಾಟಕದಲ್ಲಿ ಹರಿವ ಪಾವನ ನದಿಗಳನ್ನು ಹೆಸರಿಸಿ.

4. ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಕವಿತೆಯ ಮಹತ್ವವೇನು?

5. ಕವಿತೆಯೂ ಕರುನಾಡಿನ ಏಕೀಕರಣವನ್ನು ಹೇಗೆ ಪ್ರತಿನಿಧಿಸುತ್ತದೆ?

6. ಹುಯಿಲಗೋಳ ನಾರಾಯಣರಾಯರು ಕರ್ನಾಟಕದ ಅಖಂಡತೆಯನ್ನು ಹೇಗೆ ಚಿತ್ರಿಸಿದ್ದಾರೆ ?

7. ಕನ್ನಡ ಭಾಷಾ ಏಕೀಕರಣವಾದರೆ, ಕನ್ನಡ ನಾಡು ಏಕೀಕರಣವಾದಂತೆಯೇ? ಚರ್ಚಿಸಿ.

8. ಕರ್ನಾಟಕವು ಒಡೆಯದ ರೀತಿ ಅಖಂಡವಾಗಿರಬೇಕೆ ? ಇದರ ಬಗ್ಗೆ ನಿಮ್ಮ ನಿಲುವೇನು ?

**ಪ್ರವೇಶಿಕೆ ಉಲ್ಲೇಖಿತ ಆಕರ**: ಪ್ರಜ್ಞೆ ಮತ್ತು ಪರಿಸರ–ಡಾ॥ ಯು.ಆರ್. ಅನಂತಮೂರ್ತಿ, ಅಂಕಿತ ಪ್ರಕಾಶನ, ಬೆಂಗಳೂರು, 2014.

**ಹೆಚ್ಚಿನ ಪರಾಮರ್ಶನಕ್ಕೆ**

1. ಹಚ್ಚೇವು ಕನ್ನಡದ ದೀಪ : ಡಿ.ಎಸ್. ಕರ್ಕಿ

2. ಕನ್ನಡ ದೀವಿಗೆ ವೆಬ್ಪುಸ್ತಕದಲ್ಲಿ ದಾಖಲಾಗಿರುವ ಕನ್ನಡ ನಾಡು–ನುಡಿ ಸಂಬಂಧಿ ಗೀತೆಗಳ ಕಡೆ ಗಮನ ಹರಿಸುವುದು.

3. https://youtu.be/C5yYfF_pNSY

ಪದ್ಯ : 2.1

## ನಮ್ಮ ನಗರದ ಬದುಕು

**ಕೆ.ಎಸ್. ನಿಸಾರ್ ಅಹಮದ್**

**ಪ್ರವೇಶಿಕೆ**

ನೋಡ ನೋಡುತ್ತಿದ್ದಂತೆಯೇ ಇಂದು ಇಡೀ ಭೂಮಂಡಲವೇ ಸಮಸ್ಯೆಗಳ ಮಡುವಾಗಿ ನಿಂತಿದೆ. ಆನಸಂಖ್ಯೆಯ ಸಮಸ್ಯೆ ಆಹಾರ ಸಮಸ್ಯೆ, ಶಕ್ತಿ ಸಮಸ್ಯೆ, ಕಚ್ಚಾ ಪದಾರ್ಥಗಳ ಸಮಸ್ಯೆ, ಪರಿಸರ ಸಮಸ್ಯೆ..... ಒಂದಲ್ಲ ಎರಡಲ್ಲ, ಹಳೆಯ ಸಮಸ್ಯೆಗಳಿಗೆ ಪರಿಹಾರ ಹುಡುಕುತ್ತಿರುವಂತೆಯೇ ಹೊಸ ಸಮಸ್ಯೆಗಳು ಉದ್ಭೂತವಾಗುತ್ತಿವೆ. ಭೂಮಿಯ ಯಾವುದೋ ಒಂದು ಮೂಲೆಯಲ್ಲಿ ನಿನ್ನೆ ತಲೆದೋರಿದ ಸಮಸ್ಯೆ ಇಂದು ಇಡೀ ಪೃಥ್ವಿಯನ್ನೇ ಆಕ್ರಮಿಸುತ್ತಿದೆ......... ಮನುಷ್ಯ ತನ್ನವರ ಏಳಿಗೆಯ 'ಸದುದ್ದೇಶ'ದಿಂದ ಮಾಡಿದ ಕೆಲಸಗಳೇ ಇಂದಿನ ಸಮಸ್ಯೆಗಳಿಗೆ ಮೂಲ ಕಾರಣಗಳಾಗಿವೆ. ತನ್ನವರ ಏಳಿಗೆಯೊಂದನ್ನು ಮುಖ್ಯ ಗುರಿಯಾಗಿಟ್ಟುಕೊಂಡು ಮನುಷ್ಯ ಈವರೆಗೆ ತನ್ನ ಸುತ್ತಲ ನಿಸರ್ಗವನ್ನು ಕಡೆಗಣಿಸುತ್ತ ಬಂದದ್ದಂತೂ ನಿಜ. ಆದರೆ ನಾವು ತಿಳಿಉಕೊಂಡಂತೆ ನಿಸರ್ಗ ನಮಹೆ ಸೋತು ಶರಣಾಗಿಲ್ಲ,ಸರಿಪಡಿಸಲಾರದಷ್ಟು ವಿಕೃತವಾಗಿದೆ. ಅಪರೂಪಕ್ಕೆ ಅಲ್ಲಲ್ಲಿನ ಕೆಲವು ಭಾಗಗಳಲ್ಲಿ ಪ್ರಕೃತಿ ತನ್ನತನವನ್ನು ಉಳಿಸಿಕೊಂಡಿದ್ದರೂ, ಇನ್ನು ಹೆಚ್ಚುದಿನ ಉಳಿಸಿಕೊಳ್ಳಲಾರದಷ್ಟು ಕ್ಷೀಣಿವಾಗಿದೆ. **ನಾಗೇಶ್ ಹೆಗಡೆ**

ಆಧುನಿಕ ಯುಗದಲ್ಲಿ ಮನುಷ್ಯನ ಬದುಕು ಯಾಂತ್ರಿಕವಾಗುತ್ತಿದ್ದು, ದೊಡ್ಡ ನಗರಗಳು ಮಾನವ ನಿರ್ಮಿತ ನರಕಗಳಾಗಿ ಬದಲಾಗುತ್ತಿವೆ. ಮಾನವೀಯತೆ, ಅಂತಃಕರಣಗಳು ದೂರವಾಗುತ್ತಿವೆ. ಐಶಾರಾಮಿ ಬದುಕು ನಿರ್ಮಿಸಲು ಹೊರಟ ಮನುಷ್ಯ ಬೆಲೆ ಏರಿಕೆ ಸುಳಿಗೆ ಸಿಲುಕಿ, ಪ್ರಗತಿಯ ಎಂಬ ಶಾಪಕ್ಕೆ ಒಳಗಾಗುತ್ತಿರುವುದನ್ನು ಈ ಕವಿತೆ ವಿವರಿಸುತ್ತದೆ.

1

ನಮ್ಮ ನಗರಕ್ಕೆ ಗರ ಬಡಿದ ರಿಕ್ತತೆಯ ಬರದ ಗರ
ಕಿಲ್ಲ ಜಗದಲ್ಲಿ ಎಲ್ಲು ಸರಿ ಮಿಸಾಲು;
ಪ್ರಗತಿ ಹೆಸರಿನ ಶಾಪ[ ಸೌಂದರ್ಯ, ಶಾಂತತೆಗೆ
ಕಾಣಿಸಿದ ಪರಗತಿಯೊ ಬಲು ಕುಶಾಲು.

2

ಎಲ್ಲೆಲ್ಲು ಮಾರ್ಪಾಟು, ಎಲ್ಲ ನೀಟು ಸಪಾಟು;
ನುಡಿಗೆ ದೇಶಾವರಿಯ ನಯ ಗಿಲೀಟು;
ವ್ಯಕ್ತಿಗಳ ವರ್ತನೆಯೊ ಗಿರವಿ ಅಂಗಡಿ ಥೇಟು,
ಸ್ನೇಹ ಸೌಹಾರ್ದಗಳಿಗಿಲ್ಲ ರೇಟು.

3

ದಿನದಿನವು ದರವೇರಿ ಇಲ್ಲಿ ಎಲ್ಲ ದುಬಾರಿ;
ಮಾನ, ಅಂತಃಸಾಕ್ಷಿ ತಲೆಯ ಹೊರತು;

ಶಾಲೆ ದೇಗುಲಕ್ಕಿಂತ ಮದ್ಯಾಲಯಗಳತ್ಯಧಿಕ
ನಾಗರಿಕನೆನಿಸಿಕೊಳಲಿದುವೆ ಗುರುತು.

4

ಅಪಾಟ ಮೆರೆದಿದ್ದ ಪಕ್ಷಿ ಕುಲಕೀಗಿಲ್ಲ
ತಲೆಯ ಮರೆಸಲು ತಾವು ಷಹರಿನಲ್ಲಿ
ಕಣ್ಣುಹಾಯಿಸಿದೆಡೆಗೆ ಕಂಗೆಡಿಸುವುದು ಉಕ್ಕು,
ಕಾಂಕ್ರೀಟು, ಮರಮುಟ್ಟು, ಮರಳು, ಜಲ್ಲಿ.

5

ವಿಲಾಸೋಘಾಭೋಗಕ್ಕೆ ಪಟ್ಟದಾನೆಯ ಬಡ್ತಿ.
ಮನಸಿನ ವಿಕಾಸವ್ರೋ ದುಡಿವ ಕತ್ತೆ;
ಜ್ಞಾನ ವಿಶ್ವಾಮಿತ್ರ ಧನದ ಮೇನಕೆ ಪಾದ
ಒತ್ತಿರುವ ಗೌರವವನಿಟ್ಟು ಒತ್ತೆ.

6

ದಿನಕೆಂಟು ಅಪಘಾತ, ಖೂನಿ, ಚೋರಿ, ದರೋಡೆ;
ಕ್ಷೇಮ ನೆಮ್ಮದಿ ಸ್ವಾಸ್ಥ್ಯ ಕಾಡುಪಾಲು;
ಇನ್ನು ಮಕ್ಕಳು ಫೀಜು, ತೆರಿಗೆ, ವಿದ್ಯುತ್ ಬಿಲ್ಲು;
ಬೇಸಿಗೆಯಲ್ಲಿ ಹೊದ್ದಂತೆ ತಾಡಪಾಲು.

7

ನಡೆಯಲುಂಟೆ ಗಲ್ಲಿ ಫುಟ್ ಪಾತುಗಳ ಮೇಲೆ?
ಅಲ್ಲಿ ಕುಕ್ಕುರುಗಾಲು ಬಡ ಮಕ್ಕಳು;
ಹವಾಮಾನವಂತು ಆ ಪರಮಾತ್ಮನಿಗೆ ಪ್ರೀತಿ;
ಗೋಸುಂಬೆ ಗೋತ್ರದ್ದು; ಸಖತ್ ತಿಕ್ಕಲು

8

ಅಪ್ಪಿತಪ್ಪಿಯೂ ಕೂಡ ಸಕ್ಕರೆ ಮೂಸದಿದೆ
ಕಲಬೆರಕೆ ಪ್ರಾಣಭಯದಿಂದ ಇರುವೆ.
ಗಂಡು–ಹೆಣ್ಣಿನ ನಡುವಿನ ಸಮಾನತೆಯ ನಶಿಸುತಿದೆ
ಸಾಕ್ಷಿ ಬೇಕೆ? ನೋಡಿ ಉಟ್ಟ ಅರಿವೆ.

9

ಪಟ್ಟಣದ ಹಿರಿಯಕ್ಕ ಹಳ್ಳಿ ತಂಗಿಗೆ ಮುದ್ದಿ
ನಿಂದ ಕಲಿಸಿದ್ದಾಳೆ ಪೂರ್ತಿ ಚಾಳಿ;

ಬೇಚರಾಖ್ ಕೊಂಪೆಯಲು ಟಿ.ವಿ. ವಿಡಿಯೋ, ಗುಟ್ಕಾ;

ರಾಜಕೀಯದ ಚರ್ಚೆಯದೆ ಹಾವಳಿ.

10

ಷಹರಿಗರ ಅಸ್ತಿತ್ವ ತೊಡೆಯ ಮೇಲಿನ ಹುಣ್ಣು

ತೊಡಲಾಗದು, ಅನುಭವಿಸದಿರಲಾಗದು

ಉಳ್ಳವರಿಗೊದಗಿರುವ ಸ್ವಾತಂತ್ರಯದಡೆಯಲ್ಲಿ

ಸಾಧಾರಣರ ಮಿಡಿ ಬದುಕು ಕಹಿ ನೀಗದು.

ಆಕರ : ಆಕಾಶಕ್ಕೆ ಸರಹದ್ದುಗಳಿಲ್ಲ–ಕೆ..ಎಸ್. ನಿಸಾರ್ ಅಹಮದ್. ಸಪ್ನ ಬುಕ್ ಹೌಸ್ ಪ್ರಕಾಶನ, ಬೆಂಗಳೂರು 2010.

**ಪೂರಕ ಪಠ್ಯ**

**ಇಳೆ ಎಂಬ ಕನಸು**

**ಶ್ರೀಧರ ಬಳಗಾರ**

ಗೋಡೆ ಮಾತ್ರ ಉಳಿದುಬಿಟ್ಟ ಬೋಳು ಮನೆಗಳ ಅವಶೇಷಗಳನ್ನು ದಾಟುವಾಗ ಕುರುಕ್ಷೇತ್ರದ ಯುದ್ಧಭೂಮಿಯಲ್ಲಿ ದುರ್ಯೋಧನ ತನ್ನ ಅವಸಾನದ ಹೆಜ್ಜೆಗಳನ್ನು ಹೆಣಗಳ ನಡುವೆಯಿಡುತ್ತ ನಡೆಯುತ್ತಿರುವ ದೃಶ್ಯ ನೆನಪಾಯಿತು. ದುಃಖುಬಿಕ್ಕುವ ಪಾಳು ನಿಶ್ಯಬ್ದ ನೋಡಿ ಖಿನ್ನನಾದ ನಾಗು "ನನ್ನ ಕರುಳು ಕಿವುಚಿದಾಂಗ ಆಗ್ತದೆ" ಎಂದ. ಹೊಗೆ ಹಿಡಿದು ಕಪ್ಪಾದ ಕುಸಿದ ಗೋಡೆಗಳು, ಇಬ್ಭಾಗವಾಗಿ ಒಡೆದುಕೊಂಡ ಬಚ್ಚಲುಕಲ್ಲು, ಅನೇಕ ತಲೆಮಾರುಗಳ ಶಿಶುಗಳನ್ನು ತೂಗಿದ ಮುರಿದ ಬೆತ್ತದ ತೊಟ್ಟಿಲು, ಭರಣಿಯ ಚೂರುಗಳು, ಗೆದ್ದಲು ತಿಂದ ಕಂದಿದ ದಪ್ಪ ದಪ್ಪ ಪುಸ್ತಕಗಳು ನಿರ್ಗಮಿಸಿದವರ ನೆನಪನ್ನಿಟ್ಟುಕೊಂಡು ವಾತಾವರಣವನ್ನು ದಾರುಣಗೊಳಿಸಿದ್ದವು. ಶಾಶ್ವತವಾಗಿ ಮುಳುಗಿ ಹೋಗಲಿರುವ ಗದ್ದೆ–ತೋಟಗಳು ಭಯ ಹಿಡಿದು ನಿಂತಂತೆ ಬಿಕೋಗುಡುತ್ತಿದ್ದವು. ಜನಕಜ್ಜ ತಿರುಗಿ ನಿಂತು "ನೀನು ಎಂಥದಕ್ಕೆ ಬರ್ತ್ತಿಯೊ" ಎಂದ. ಲೋಹದಂತಿದ್ದ ತನ್ನ ಮೈಗೆ ಪಂಜಿಸುತ್ತಿಕೊಂಡ ನಾಗು ಉತ್ತರಿಸುವ ಗೋಜಿಗೆ ಹೋಗದೆ ಜನ್ಮಾಂತರದ ನೆರಳಿನಂತೆ ಹಿಂಬಾಲಿಸುತ್ತಿದ್ದ. ಜಿಗುಪ್ಸೆಯಿಂದ ಮುದುಕ ಜೀವ ಕಳೆದುಕೊಂಡಾನೆಂದು ಈ ಭಂಟ ಭಾವಿಸಿರಬಹುದೆ ಎಂದು ಜನಕಜ್ಜ ನಾಗುವನ್ನು ಪ್ರೀತಿಯಿಂದ ನೋಡಿದ. ತನ್ನ ಚಡಪಡಿಕೆಯನ್ನು ಸೂಕ್ಷ್ಮವಾಗಿ ಗಮನಿಸಿದ ಅವನು ಸಹಜವಾಗಿಯೇ ಏನೇನೂ ಊಹಿಸಿಕೊಂಡು ಹೆದರಿರಬೇಕೆಂದು ಯೋಚಿಸಿದ. ಶಿಥಿಲವಾದ ಮನೆಯ ತೊಲೆಗಳು ನೀರ ಮೇಲೆ ತೇಲುತ್ತಿದ್ದವು. ಹಿಂದೊಮ್ಮೆ ಪ್ಲೇಗ್ ರೋಗಕ್ಕೆ ಊರಿಗೆ ಊರೇ ಬಲಿಯಾಗಿ ಹೋದ ದುರಂತದ ಕತೆಯನ್ನು ಮನೆಯಲ್ಲಿ ಹಿರಿಯರು ಹೇಳುತ್ತಿದ್ದದ್ದು ಜನಕಜ್ಜನಿಗೆ ನೆನಪಾಯಿತು. ಹೆಣ ಸುಡಲೂ ಊರಲ್ಲಿ ಜನರಿರಲಿಲ್ಲವಂತೆ, ಬದುಕುಳಿದ ಕೆಲವರು ಪಲಾಯನ ಗೈದಿದ್ದರು. ಹಾಗೆ ತೀರಿಕೊಂಡವರು ಆದಿವಾಸಿಗಳಾದ ಕುಣಬಿಯರಾಗಿದ್ದರಂತೆ. ಈಗ ಮುಳುಗುತ್ತಿರುವ ಅಪಾರ ಜಮೀನಿಗೆ ಒಂದು ಕಾಲದಲ್ಲಿ ನಾಗುವಿನ ಪೂರ್ವಿಕರು ಒಡೆಯರಾಗಿದ್ದರಂತೆ. ಈ ಭಯಂಕರ ನಿರ್ನಾಮದ ನಂತರ ಬಹುಕಾಲ ಊರು ಮಸಣದಂತಾಗಿ ಹೋಗಿತ್ತು. ಈ ನೋವಿನ ನಿಜಗಳು ವಾರಸುದಾರರಾಗಬೇಕಿದ್ದ ನಾಗುವಿನಲ್ಲಿ ಹತಾಶ, ಅಸಹಾಯಕತೆಗಳಾಗಿ ನೆಲೆನಿಂತಿವೆ. ಸದ್ಯ ತಾನು ಅನುಭವಿಸುತ್ತಿರುವ ಸಂಕಟಗಳು ನಾಗುವಿನಲ್ಲಿ ಎಂದೊ ಶುರುವಾಗಿದೆ. "ನಾಗೂ, ಈ ಭೂಮಿ ಯಾರಿಗೂ ದಕ್ಕೋದು ಖರೆಯಿಲ್ಲ' ಜನಕಜ್ಜ ವಿಷಾದದಿಂದ ನುಡಿದ. ಗತಕಾಲದ ಅವಘಡಗಳ ಪ್ರತೀಕದಂತಿರುವ ನಾಗೂನ ತಾಂಬೂಲ ತುಟಿಯ ಮೇಲೆ ಆಲದಲೆಯ ಮೇಲೆ ತೇಲುತ್ತಿರುವ ಪ್ರಳಯ ಕೃಷ್ಣನ ಮಂದಹಾಸವಿತ್ತು.

ಹೀಗೆ ಪಾಳುಬಿದ್ದ ಊರಿಗೆ ಪರಸ್ಥಳದಿಂದ ಹಲವು ಕುಟುಂಬಗಳು ವಲಸೆ ಬಂದವಂತೆ. ಈ ಆಕ್ರಮಣಕ್ಕೆ ಸತ್ಯ ಸಾಕ್ಷಿಗಳಾಗಿ ಜನಕಜ್ಜನಿಗೆ ತಾಲ್ಲೂಕು ಕಛೇರಿಯ ಗಣತಿ ಪುಸ್ತಕದಲ್ಲಿ ಮೂಲವಾಸಿಗಳ ಹೆಸರು ದಾಖಲಾಗಿರುವುದು ಪತ್ತೆಯಾಗಿತ್ತು. ಜಮೀನು ಆಳುತ್ತಿದ್ದ ದೇವತೆಗಳೆಲ್ಲ ಗುಡಿಗಳಿಲ್ಲದೆ ಮರಗಳ

ಆಶ್ರಯದಲ್ಲಿ ನಿಂತು ಮಳೆ ಬಿಸಿಲಿಗೆ ಒಡ್ಡಿಕೊಂಡು ವರ್ಷಕ್ಕೊಮ್ಮೆ ಪ್ರಾಣಿಗಳ ಬಲಿ ಪಡೆಯುತ್ತ ಮೂಲ ನಿವಾಸಿಗಳಿಂದ ಪೂಜೆ ಪಡೆಯುತ್ತ ರಕ್ಷಣೆಗಿದ್ದವು. ಪಂಚಾಂಗದಲ್ಲೂ ಈ ದೇವತೆಗಳ ಪೂಜೆ ಹಬ್ಬಗಳ ಕುರಿತು ತಿಥಿ ನಕ್ಷತ್ರಗಳನ್ನು ಉಲ್ಲೇಖಿಸಿರಲಿಲ್ಲ. ಊರ ಮಧ್ಯದಲ್ಲಿರುವ ಮಾರುತಿ ದೇವಸ್ಥಾನ ಜನಕಜ್ಜನ ಪೂರ್ವಿಕರು ಇತ್ತೀಚೆಗೆ ಸ್ಥಾಪಿಸಿದ್ದು, ನೆಲದ ಋಣ ಹರಣಕ್ಕಾಗಿ ಜೀತಕ್ಕಿರುವ ನಾಗುವಿನ ವಂಶವಾಹಿನಿಯಲ್ಲಿ ಎಲ್ಲೊ ಒಂದೆಡೆ ಇತಿಹಾಸದ ಕೊಂಡಿ ಕಳಚಿ ಹೋಗಿತ್ತು. ನುಗ್ಗುವ ಕಾಡನ್ನು ತಡೆದು ನಾಗರಿಕ ಗಡಿ ಹಾಕಿದ ಪಾಗಾರ ದಾಟುವಾಗ ಜನಕಜ್ಜನಿಗೆ ಗಂಗಾದೇವಿ ಇದಕ್ಕಾಗಿಯೇ ಮುನಿದುಕೊಂಡಳೇ ಎಂದು ಕಳವಳವಾಯಿತು. "ದೇವರ ಸ್ವಲ್ಪ ಮುಂದೆ ನರಮನುಷ್ಯರ ಆಟ ನಡೆಯೋದಿಲ್ರಾ" ಎಂದು ನಾಗು ತನಗೆ ತಾನೆ ನುಡಿದುಕೊಂಡ. ಎಲ್ಲವನ್ನೂ ವಿಧಿಲೀಲೆಗೆ ಒಪ್ಪಿಸುವ ನಾಗು ರಾಗ ದ್ವೇಷಗಳಿಂದ ಮುಕ್ತನೇ ಎಂದು ಜನಕಜ್ಜ ಯೋಚಿಸಿದ. ಆದರೆ ತನ್ನ ರಕ್ತದಲ್ಲಿ ಎಲ್ಲವನ್ನು ಪಳಗಿಸುವ ಹಟ ಉಳಿದು ಹೋಗಿದೆ.

ಕಾಡು ಕೊಟ್ಟ ವರ್ಣ ಪಡೆದು, ಕತ್ತಲು ಕಲಸಿಕೊಂಡಂತೆ ಹರಿವ ಹಲವು ಕಾಡುಗಳ ಕೂಸಾದ ಕಾಳಿನದಿಗೆ ಆಣೆಕಟ್ಟು ಕಟ್ಟುವುದನ್ನು ಪ್ರತಿಭಟಿಸುವುದರಲ್ಲಿ, ಜನಕಜ್ಜ ಮುಂಚೂಣಿಯಲ್ಲಿದ್ದವನು. ಅವನ ಮುಂದಾಳತ್ವದಲ್ಲಿ ಬೇರೆ ಬೇರೆ ಹಂತ ಮತ್ತು ನೆಲೆಗಳಲ್ಲಿ ಚಳುವಳಿಗಳು ನಡೆದವು. ವಿಜ್ಞಾನಿ, ರಾಜಕಾರಣಿಗಳ ಸಭೆಯಲ್ಲಿ ಚರ್ಚೆಯಾಯಿತು; ಜಿಲ್ಲಾಧಿಕಾರಿ ಕಛೇರಿಯ ಮುಂದೆ ಊರವರು ಉಪವಾಸ ಕೂತು ಜೈಲಿಗೆ ಹೋದರು. ಮೂಲ ನಿವಾಸಿಗಳ ಬೆಂಬಲದಿಂದ ಹೋರಾಟಕ್ಕೆ ಬಲಬಂತೆಂದು ಜನಕಜ್ಜ ಭಾವಿಸಿದ್ದನು. ಆದರೆ ಜನ ತಮ್ಮ ಒಗ್ಗಟ್ಟನ್ನು ಕೊನೆಯವರೆಗೆ ಕಾಪಾಡಿಕೊಂಡು ಬರುವಲ್ಲಿ ಸೋತಿದ್ದರು. ಸರಕಾರದವರಿಂದ ಒಡ್ಡಿನ ಸರ್ವೆ ನಡೆಯಿತು. ಬೃಹತ್ ಶಿಲೆಗಳನ್ನು ಸ್ಫೋಟಿಸುವ, ಬೆಟ್ಟಗಳ ನಡುವೆ ಅಡ್ಡಗೋಡೆ ಕಟ್ಟುವ ಕೆಲಸದಲ್ಲಿ ಸಹಸ್ರಾರು ಹಸ್ತಗಳು ಜತೆಗೂಡಿದವು. ತಮ್ಮ ತಮ್ಮ ಜಮೀನುಗಳಿಗೆ ಸಿಗುವ ಧನದ ಮೊತ್ತದ ಲೆಕ್ಕಾಚಾರದಲ್ಲೇ ಜನ ನಿರತರಾದರು. ಅವರ ಜೀವಮಾನದಲ್ಲಿ ಅಷ್ಟೊಂದು ಹಣವನ್ನು ಕಾಣಲು ಸಾಧ್ಯವಿರಲಿಲ್ಲ. ತಮ್ಮ ಆಸ್ತಿಗೆ ಹೆಚ್ಚು ಬೆಲೆ ಪಡೆಯಲು ಪೈಪೋಟಿ ನಡೆಯಿತು. ಪುನಃ ಸರ್ವೆ ಮಾಡಿಸಿ ಬೆಲೆ ಹೆಚ್ಚಿಸಿ ಕೊಡಲು ಮಧ್ಯವರ್ತಿ ಲಾಭಕೋರರು ಹುಟ್ಟಿಕೊಂಡರು. ಜನಕಜ್ಜ, ನಾಗುವಿನಂಥವರು ಆತ್ಮಘಾತುಕ ಕೃತ್ಯಗಳಲ್ಲಿ ದನಿ ಇಲ್ಲದ ದೀನರಾಗಿ ಹೋದರು.

ಇತ್ತ ಜನಕಜ್ಜ ತೊರೆದು ಹೋಗಲಿರುವ ಭೂಮಿ, ದೇವರ ಬಗ್ಗೆ ಕಳವಳ ಪಡುತ್ತಿದ್ದರೆ ಅತ್ತ ಕಮಲಾಕರ ಖಾಕಿ ಬಟ್ಟೆಯ ಫಾರಸ್ಟರ್‌ನಿಗೆ ಚಹಾ ಕೊಟ್ಟು ಮನೆಯ ಮರದ ಪೀಠೋಪಕರಣಗಳೊಂದಿಗೆ ಗುಪ್ತವಾಗಿ ಸಾಗವಾನಿ ಕಟ್ಟಿಗೆಯನ್ನು ಅಕ್ರಮ ಸಾಗಿಸಲು ಯೋಜನೆ ಹಾಕಿಕೊಳ್ಳಲು ತೊಡಗಿದ್ದ. ಫಾರೆಸ್ಟರ್‌ನೊಂದಿಗೆ ಗಾಳಿ ತುಂಬಿದ ಟಾಯರಿನ ಒಳ ಟ್ಯೂಬ್‌ನ್ನು ಬಗಲಿಗೆ ತೂಗು ಹಾಕಿಕೊಂಡು ಇಬ್ಬರು ನಿಂತಿದ್ದರು. ಅಣೆಕಟ್ಟಿನ ಆಚೆ ಪಾರ್ಶ್ವದಲ್ಲಿ ಬತ್ತಿಹೋದ ನದಿಯ ಗುಂಡಿಯಲ್ಲಿ ಸಿಡಿಮದ್ದು ಸ್ಫೋಟಿಸಿ ಮೀನು ಹಿಡಿಯಲು ಬಂದ ಅವರನ್ನು ಫಾರೆಸ್ಟರ್ ಬೆದರಿಸಲು ತೊಡಗಿದ್ದ. ನದಿಯ ಕೊಳಪ್ರದೇಶದಲ್ಲಿದ್ದ ಮನೆ–ಕೊಟ್ಟಿಗೆಗಳು ಜಲಾವೃತಗೊಂಡಿದ್ದು ತಡವಾಗಿ ಹೊರಟ, ನಡುರಸ್ತೆಯ ಒದ್ದೆ ರಾಡಿಯಲ್ಲಿ ಸಿಕ್ಕಿಬಿದ್ದ ಲಾರಿ ನೀರು ಪಾಲಾಗಿದ್ದುದನ್ನು ಅವರು ವಿವರಿಸತೊಡಗಿದ್ದರು. ಜನಕಜ್ಜನಿಗೆ ಮನೆ ಬಿಡುವ ಮನಸ್ಸು ಸುತಾರಾಮಿರಲಿಲ್ಲ. ಸರಕಾರ ಅಧಿಕೃತವಾಗಿ ಅಂತಿಮ ಗಡುವು ನೀಡಿದರೂ ಊರು ತೆರವು ಮಾಡಲು ಹಿಂದೇಟು ಹಾಕಿದವರ ಪೈಕಿ ಜನಕಜ್ಜನೂ ಒಬ್ಬ. ಕಳೆದ ಎರಡು ವರ್ಷಗಳಿಂದ ಇಂಥ ಆಜ್ಞೆಗಳ ವದಂತಿಗಳು ಹಬ್ಬುತ್ತಲೆ ಇವೆ. ಈ ವರ್ಷವೂ ಹೀಗೆಯೇ ಎಂದು ಜನಕಜ್ಜ ಲೆಕ್ಕಹಾಕಿ ಮುಂಬರುವ ಮಳೆಗಾಲದ ಪೂರ್ವಸಿದ್ಧತೆಗೆ ತೊಡಗಿದ್ದನು. ಕಾಡಿನಿಂದ ಉರವಲು ಕಟ್ಟಿಗೆ ತರಿಸಿ, ಕೊಟ್ಟಿಗೆ ಹೊದಿಕೆ ಮುಗಿಸಿ ವ್ಯವಸ್ಥೆ ಮಾಡಿಕೊಂಡಿದ್ದನು. ಅವನ ಎಣಿಕೆ ತಪ್ಪಿತ್ತು.

ಸಾಮಾನು ಸಾಗಿಸುವ ಲಾರಿ ಬಂದು ನಿಂತಿತು. ಅಪಾರ ಜಲರಾಶಿಯ ಎದುರು ಆದೊಂದು ಕ್ಷುದ್ರ ಜಂತುವಿನಂತೆ ಕಾಣುತ್ತಿತ್ತು. ಜನಕನಿಗೆ ಎಲ್ಲವೂ ಅಪರಕ್ರಿಯೆಯಾಗಿ ಕಾಣತೊಡಗಿದವು. ಉಳಿದವರಿಗೆ ಭರ್ಜರಿ ದೊರತ ಪರಿಹಾರದ ಹಣ ಹಲವು ಕನಸಿನ ದಾರಿಗಳನ್ನು ನಿರಂಬಳ ತೆರೆಯುತ್ತಿರುವಾಗ ಜನಕಣ್ಣ ಮಣ್ಣಿಗಾಗಿ ರೋದಿಸುತ್ತಿದ್ದ. ಕುಟುಂಬದ ಸಕಲರು ಲಾರಿ ಏರಿದರು. ಕಣ್ತಪ್ಪಿ ಉಳಿದು ಹೋಗಿರಬಹುದಾದ ಸಾಮಾನುಗಳನ್ನು ನೋಡಿಬರಲು ಕಮಲಾಕರ ಮನೆಯನ್ನೊಮ್ಮೆ ಪ್ರದಕ್ಷಿಣೆ ಹಾಕಿ ಬಂದ. ಬಾನಿಗೆ ಬಾಯ್ದೆರೆದ, ಕುಸಿದ ಗೋಡೆಗಳ ಶೂನ್ಯದಲ್ಲಿ ಜನಕಜ್ಜ ದಿಗ್ಮೂಢನಾಗಿ ನಿಂತೇ ಇದ್ದ. ಕಮಲಾಕರ ಅವನ ಕೈಹಿಡಿದು ಕರೆತಂದು ಲಾರಿಯ ಕ್ಯಾಬಿನ್ನಲ್ಲಿ ಕೂರಿಸಿದ. ಲಾರಿ ಚಲಿಸತೊಡಗಿತು. ಆ ಊರಿನಿಂದ ಹೊರಟ ಕಟ್ಟ ಕೊನೆಯ ಕುಟುಂಬವಾಗಿತ್ತು ಅದು.

ಆಕರ : ಸ್ವಾತಂತ್ರ್ಯೋತ್ತರ ಕನ್ನಡ ಕಥಾಲೋಕ. ಸಂ. ಜಿ.ಎಸ್. ಆಮೂರ. ಅಂಕಿತ ಪುಸ್ತಕ ಪ್ರಕಾಶನ, 2004.

**ಲೇಖಕರ ಪರಿಚಯ** 1

**ಕೆ. ಎಸ್. ನಿಸಾರ್ ಅಹಮದ್ :** (5 ಫೆಬ್ರವರಿ 1936 – 3 ಮೇ 2020) ನಿತ್ಯೋತ್ಸವ ಕವಿ ಎಂದೆ ಪರಿಚಿತರಾದ ಇವರ ಪೂರ್ಣ ಹೆಸರು ಕೊಕ್ಕರೆ ಹೊಸಹಳ್ಳಿ ಶೇಖ್ ಹೈದರ್ ನಿಸಾರ ಅಹಮದ್. ತಂದೆ ಕೆ.ಎಸ್. ಹೈದರ್. ತಾಯಿ ಹಮೀನ ಬೇಗಂ. ಇವರು 5 ಮಕ್ಕಳ ಸಾಹಿತ್ಯ, 21 ಕವನ

ಸಂಕಲನ,14 ವೈಚಾರಿಕ ಕೃತಿ, 5 ಅನುವಾದಿತ ಕೃತಿ ರಚಿಸಿದ್ದು, 13 ಸಂಪಾದನಾ ಗ್ರಂಥಗಳನ್ನು ಹೊರತಂದಿದ್ದಾರೆ. ಇವರಿಗೆ ಪದ್ಮಶ್ರೀ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಸಂದಿವೆ.

**ಲೇಖಕರ ಪರಿಚಯ 1**

**ಶ್ರೀಧರ ಬಳಗಾರ :** ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ಸಮೀಪದ ಬಳಗಾರ. ಕುಮುಟಾದ ಕಮಲಾ ಬಾಳಿಗಾ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ನಿರ್ವಹಿಸುತ್ತಿದ್ದಾರೆ. ಇವರು ಇಳೆ ಎಂಬ ಕನಸು, ಒಂದು ಫೋಟೋದ ನೆಗೆಟಿವ್, ಅಮೃತಪಡಿ ಕಥಾ ಸಂಕಲನವನ್ನು ಹೊರತಂದಿದ್ದಾರೆ. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಸಸ್ತಿ, ಅಮ್ಮ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಸಂದಿವೆ.

**ಕಠಿಣ ಪದಗಳ ಅರ್ಥ:**

ರಿಕ್ತತೆ : ಬಡತನ, ದಾರಿದ್ರ್ಯ, ಗರ : ಪೀಡೆ, ಕಾಟ, ಚಟ, ಸಪಾಟು : ಸಮತಟ್ಟು, ದರ : ಬೆಲೆ, ಷಹರಿ : ನಗರ; ಖೂನಿ : ಕೊಲೆ,

ಅರಿವೆ : ಬಟ್ಟೆ

ತಾಟಪಾಲು : ಟಾರ್ಪಲ್, ಮಳೆಗಾಲದಲ್ಲಿ ಮನೆಯ ಮೇಲೆ, ಕೃಷಿ ಬೆಳೆಗಳನ್ನು ರಕ್ಷಿಸಲು ಹೊದಿಸಲು ಬಳಸುವ ಪ್ಲಾಸ್ಟಿಕ್ ಹೊದಿಕೆ

**ತರಗತಿ/ಅಭ್ಯಾಸ ಚಟುವಟಿಕೆಗಳು :**

1. ನೀವು ಹಳ್ಳಿಯನ್ನು ಇಷ್ಟಪಡುತ್ತೀರೋ ಅಥವಾ ನಗರವನ್ನೋ ? ಏಕೆ ಇಷ್ಟಪಡುತ್ತೀರಿ –ಈ ಕುರಿತು ಒಂದು ಪ್ರಬಂಧವನ್ನು ಬರೆಯಿರಿ.
2. ನಗರಗಳ ಕಡೆಗೆ ಜನ ಆಕರ್ಷಿತರಾಗಲು ಕಾರಣಗಳೇನು? ಯೋಚಿಸಿ.
3. ಬೇರೆ ಬೇರೆ ರಾಜ್ಯದ ರಾಜಧಾನಿಗಳ ಜೊತೆ ಬೆಂಗಳೂರನ್ನು ಹೋಲಿಸಿ, ಸಾಮ್ಯತೆ ಮತ್ತು ವಿಶಿಷ್ಟತೆಗಳನ್ನು ಪಟ್ಟಿಮಾಡಿ.
4. ಸಂಚಾರಿ ನಿಯಮದ ಬಗ್ಗೆ ವಿದ್ಯಾರ್ಥಿಗಳಿಂದಲೇ ತರಗತಿಯಲ್ಲಿ ಅಣಕ ಪ್ರದರ್ಶನ ಮಾಡಿಸಿ.
5. ಕಾರ್ಖಾನೆಗಳಲ್ಲಿ, ಪ್ರವಾಸಿ ತಾಣಗಳಲ್ಲಿ, ದೃಶ್ಯ ಚಟುವಟಿಕೆಗಳಲ್ಲಿ ಸೃಜನಶೀಲತೆಯ ಫಲಿತಾಂಶ ಸಂಗ್ರಹಿಸುವಂತೆ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುವುದು.
6. ಚಲನಚಿತ್ರ, ರಂಗಭೂಮಿ, ಟೆಲಿವಿಷನ್ ನಿರ್ಮಾಣಗಳು, ರೇಡಿಯೋ ಪ್ರದರ್ಶನಗಳ ಕುರಿತ ಸಮ್ಮೇಳನಗಳಲ್ಲಿ ವಿದ್ಯಾರ್ಥಿಗಳನ್ನು ಪಾಲ್ಗೊಳ್ಳುವಂತೆ ಉತ್ತೇಜಿಸುವುದು.

**ಸಾಂಭವ್ಯ ಪ್ರಶ್ನೆಗಳು :**

1. ನಮ್ಮ ನಗರದ ಬದುಕು ಕವಿತೆಯನ್ನು ರಚಿಸಿದವರು ಯಾರು?
2. ವ್ಯಕ್ತಿಗಳ ವರ್ತನೆ ಹೇಗಿದೆ?
3. ನಗರದ ಹವಾಮಾನ ಹೇಗಿದೆ?
4. ಸೌಂದರ್ಯ ಯಾವಾಗ ಶಾಪವಾಗುತ್ತದೆ? ಯಾವಾಗ ವರವಾಗುತ್ತದೆ? ವಿವರಿಸಿ.
5. ಮಾನವನಿಗೆ ಎಂಥ ಬದಲಾವಣೆ ಬೇಕು? ಚರ್ಚಿಸಿ.
6. ಮನುಷ್ಯನ ಜೀವನ ಕ್ರಮದಲ್ಲಿ ಆದ ಬದಲಾವಣೆ ನಿಸರ್ಗದ ಮೇಲೆ ಇತರ ಜೀವಿಗಳ ಮೇಲೆ ಪರಿಣಾಮವನ್ನುಂಟು ಶಮಾಡಿದ ಬಗೆಯನ್ನು ವಿವರಿಸಿ.
7. ನಗರದ ಮಾಯಾಲೋಕದಂತಹ ಬದುಕು ಯಾರಿಗೆ ಹಿತ? ಏಕೆ ಹಿತ? ಏನಿಸುತ್ತದೆ ಚರ್ಚಿಸಿ.
8. ಕವಿ ಆಧುನಿಕತೆಯನ್ನು ಕವಿತೆಯಲ್ಲಿ ಹೇಗೆ ಚಿತ್ರಿಸಿದ್ದಾರೆ? ವಿವರಿಸಿ.

**ಪ್ರವೇಶಿಕೆ ಉಲ್ಲೇಖಿತ ಆಕರ**: ಮಾನವ ನಿರ್ಮಿತ ಮಹಾ ಸಮಸ್ಯೆಗಳು–ನಾಗೇಶ್ ಹೆಗಡೆ

**ಹೆಚ್ಚಿನ ಪರಾಮರ್ಶನಕ್ಕೆ**

1. ಕಲ್ಕಿ – ಕುವೆಂಪು
2. ಇತಿಹಾಸ ಕಥೆ ಹೇಳುತ್ತದೆ – ಅವಧಿ ವೆಬ್ ಪುಸ್ತಕ

**ಘಟಕ 3: ಕುಟುಂಬ**

**ಅಧ್ಯಾಯ 1**

**ಪಠ್ಯ**

**1. ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ**
**– ಸೋಮಶೇಖರ ಇಮ್ರಾಪುರ.**

**ಪ್ರವೇಶಿಕೆ**

ತಾವರಿಯ ಗಿಡ ಹುಟ್ಟಿ ದೇವರಿಗೆ ನೆರಳಾದಿ
ನಾ ಹುಟ್ಟಿ ಮನಿಗೆ ಎರವಾದೆ/ಹಡದವ್ವ
ನೀ ಕೊಟ್ಟ ಮನಿಗೆ ಹೆಸರಾದೆ
ಹೆಣ್ಣುಹಡೆಯಲಿ ಬ್ಯಾಡ ಹೆರವರಿಗಿ ಕೊಡಬ್ಯಾಡ
ಹೆಣ್ಣು ಹೋಗಾಗ ಅಳಬ್ಯಾಡ/ಹಡದವ್ವ
ಸಿಟ್ಟಾಗ ಶಿವಗ ಬೈಬ್ಯಾಡ.

–ಜನಪದ.

ಜನಸಾಮಾನ್ಯರ ದೈನಂದಿನ ಕೌಟುಂಬಿಕ ಜೀವನದಲ್ಲಿ ಕಷ್ಟ–ಸುಖ, ನೋವು–ನಲಿವು, ನಿತ್ಯದ ಬದುಕಿನಲ್ಲಿ ಗಂಡ ಹೆಂಡಿರ ಜಗಳಗಳು, ಸ್ವಾರಸ್ಯಕರ ಘಟನೆಗಳು ಕೌಟುಂಬಿಕ ಜೀವನದಲ್ಲಿ ಗಂಡ ಹೆಂಡಿರನ್ನು ಆತ್ಮೀಯಾ ಭಾವಲೋಕಕ್ಕೆ ಕರೆದೊಯ್ಯುತ್ತವೆ. ಈ ಘಟನೆಗಳು ಸೃಷ್ಟಿಸುವ ತಿಳುವಳಿಕೆ ಮುಂದಿನ ದಿನಗಳಲ್ಲಿ ಮೌಲ್ಯಗಳಾಗುವುದನ್ನು ಕಾಣಬಹುದು.

"ಏಳ ಹೊತ್ತು ಹೊಡಮರಳಿ ಬಂತು
ಕಸ ಹೊತ್ತು ಹಾಕು ಹೊರಗ
ದೊಡ್ಡೆಮ್ಮಿ ಎಲ್ಲಿ ಹೋಗ್ಯೆತಿ ಹ್ಯಾಂಗ
ಕರ ಕಟ್ಟು ಹಿತ್ತಲೊಳಗ"

"ಕಟ್ಟ್ಯಾರ ಕಟ್ಟು ಬಿಟ್ಟಾರ ಬಿಟಗೊ
ಒಟ್ಟೈತಿ ಕೆಲಸ ನನಗ
ಕುಟ್ಟಾಕ ಮತ್ತ ಬೀಸಾಕ ಇದಕ
ಕೊಟ್ಟಿಲ್ಲ ನನ್ನ ನಿನಗ"

"ಏಳೇಳ ಊರ ಎತ್ತೆಲ್ಲಾ ಹೊಲಕ
ಹೊಂಟಾವ ತಿಳಿಯಿತೇನ?
ಮಾರೀಯ ಗಂಟು ಹಾಕೀದಿ ಯಾಕ

ನಿಟ್ಟೆಲುವು ಮುರಿಯಲೇನ?"

"ಹೆಣ್ಣಾಗಿ ಯಾಕ ಬಂದೇನ ಎವ್ವಾ
ಈ ಜೀವ ಸಾಕು ಸಾಕ
ನಮ್ಮಪ್ಪ ಅವ್ವ ಕೊಟ್ಟಾರ ಇಲ್ಲಿ
ಇನ್ನೇಟು ಬದುಕ ಬೇಕ"

"ನಿಮ್ಮಪ್ಪ ಸತ್ತು ಪಾರಾದ ಇದ್ರ
ಅವನೆದೆಯ ಸೀಳುತಿದ್ದ್ಯಾ
ನಿಮ್ಮವ್ವ ಅಂದ್ರ ನಮ್ಮಕ್ಕ ಅಂತ
ಬಿಟ್ಟೇನಿ ಹುಗಿಯುತಿದ್ದ್ಯಾ"

"ನಮ್ಮಪ್ಪ ಅವ್ವ ಮಾಡ್ಯಾರ ಏನ
ಸುಮ್ಸುಮಕ ಬೆಯ್ಯಬ್ಯಾಡ
ಉಟ್ಟರವಿ ಮ್ಯಾಗ ಬದುಕಿದ್ದ ನಿನ್ನ
ಸಲುಹಿದ್ದು ಮರಿಯಬ್ಯಾಡಾ"

"ಎಲ್ಲಿದ್ದಿ ಏನೋ ಭಿಮಾರಿ ನಿನ್ನ
ಕಟ್ಟಾರ ಗುದ್ದಿಹಾಂಗ
ಸೊಸಿ ಅಂತ ಕೈಯ ತಡದೀನಿ ಜ್ವಾಕಿ
ಹೀಂಗಾದ್ರ ಮುಂದೆ ಹ್ಯಾಂಗ?"

"ಮುಂದೇನು ಏನ ಹೋಗ್ತೀನಿ ಇಂದ
ನಾ ಬೆಳೆದ ತವರಿಗೀಗ
ಹೋಗಿ ಬಡದು ಬುದ್ಧಿ ಮಬ್ಬಾದ ಮ್ಯಾಗ
ಬರತೀನಿ ಇಲ್ಲಿಗಾಗ"

ಎಂಥ ಚಂಡಿ ನೀಗಂಟು ಬಿದ್ದಿ
ಹೇಳಿದ್ದು ಕೇಳಲೊಲ್ಲಿ
ಶಾರ ಬಿಟ್ಟು ಹಳ್ಳಾಗ ಬಂದಿ
ಆಯ್ತೇನ ಹೇಳಲೊಲ್ಲಿ"

"ಮದುವಿಯ ಸೀರಿ ಹರಿದ್ಹೋಗಿ ಮತ್ತ
ಹೊಲಿದದ್ದು ಪಿಸಿದುಹೋಯ್ತು
ನಿನ ಕೈಯಹಿಡಿದು ಮೂಗುತಿಗೆ ಹೊರತು
ನನ ಜೀವ ಕಾಣದಾಯ್ತು"

"ನೈಲಾನ ಸೀರಿ ಬಂದೈತಿ ಅಂತ
ಒಂದೆಮ್ಮಿ ಮಾರಿ ತರಲೆ?
ಧಾರ್ವಾಡದಾಗ ಹುಡಿ ಬಾಳ ಅಂತ
ಪೌಡರಕ ಹೇಳಿಬರಲೆ"

ಪುಂಡೀಯ ಪಲ್ಲೆಗೊಂದಿಷ್ಟು ನುಚ್ಚು
ಐತೇನ ನೋಡ ಒಳಗ
ಒಣ ಟೆಬರು ಯಾಕ ತೆಲಿಗಿಲ್ಲ ಎಣ್ಣಿ
ನಾನಾದೆ ಮನೆಯ ಸೊಣಗ"

'ಪ್ಯಾಟೀಯ ನೀರಿಗಿಳಿಬ್ಯಾಡ ನಿಲ್ಲ

ಸ್ವಾಟೀಯ ತಿರುವಬ್ಯಾಡಾ
ಒಂದೊಂದ ಹಲ್ಲು ಉದುರ್ಯಾವು ನೋಡ
ನನಗ್ವಾದ ಮಾಡಬ್ಯಾಡ"

"ಮನಿ ತುಂಬಾ ಎಲ್ಲಮಣ್ಣಿನ ಗಡಿಗಿ
ಒಂದಾದ್ರು ಗಟ್ಟಿ ಇಲ್ಲಾ
ನನ ತವರುಮನೆಯ ಕೊಡ ನೆಗ್ಗಿದ್ದನ್ನ
ಮಾಡ್ಸೊದು ಆಗಲಿಲ್ಲಾ"

"ನಿಮ್ಮಪ್ಪನ್ಹಾಂಗ ನಾ ಸೋಗು ಮಾಡಿ
ಜೋಗಪ್ಪನಾಗಲೇನ
ಹಾಸಿದಷ್ಟರಲೆ ಕಾಲು ಚಾಚಿ ನೀ
ಬಾಳಲಾರಿಯೇನ"

"ಎಲ್ಲೈತಿ ಬಾಳು ಸುಡುಗಾಡಿಗಿಟ್ಟು ಬಾ
ಹಾಳು ಜಲುಮ ಹೊತ್ತು
ನಮ್ಮಪ್ಪ ಅವ್ವ ಕೊಟ್ಟಾರ ನಿನಗೆ
ಕೈತುಂಬಾ ರೊಕ್ಕ ತೆತ್ತು"

"ಜನ ತುಂಬಿ ನಿಂತ ಹಂದರದ ಒಳಗ
ನಿಮ್ಮಪ್ಪ ಕೈಯ ಕೊಟ್ಟಾ
ಕಡೆಗೆ ಎಲ್ಲಾ ಕೊಡತೀನಿ ಅಂತ
ಕೊಡಲಿಲ್ಲ ಒಂದು ಚುಟ್ಟಾ"

"ಸಾಕವ್ವಾ ಸಾಕು ಕೆರೆ ಭಾವಿ ಪಾಲು
ನಾನಾಗಿ ಹೋಗಲೇನ
ದಿನ ಗಳಿಗೆಗೂನು ಕಟಿಪಿಟಿಯ ತಿಂದು
ಉಪವಾಸ ಸಾಯಲೇನ"

"ಹ್ಯಾಂಗಾರ ಮಾಡಿ ಆ ಭಾವಿಗ್ಹೋಗು
ಇದರಾಗ ಇಲ್ಲ ನೀರ
ಹೊಟ್ಟೆ ತುಂಬಾ ನೀ ನೀರು ಹಿಗ್ಗಿ
ನನ ಮ್ಯಾಲ ಕರುಣ ತೋರ"

"ನನಗೆಂತ ಗಂಡ ಜತಿಯಾದ ಇಸಾ
ಕುಡಿಲಾಕ ಇಲ್ಲ ಕಾಸು
ಸುಡುಗಾಡಿನ್ಯಾಗ ಸುಖ ಐತಿ ಅಂತ
ಹೋಗೂದು ನನಗೆ ಲೇಸು"

"ಹೋಗ್ತಿದ್ದಿ ಅಂದ್ರ ವಿಮಾ ಇಳಿಸತಿದ್ದ್ಯಾ
ಮೊದಲನ ತಿಳಿಸಬಾರ್ದ
ಸುಡುಗಾಡಿಗ್ಯಾಕ ಬೇಕೇನು ಇಲ್ಲೆ
ತರತೀನಿ ಸಾಯಬಾರ್ದ"

"ಹೊಟ್ಯಾನ ಕಿಚ್ಚು ಎಷ್ಟಂತ ಹಿಡಿದು
ಕಟ್ಟೇನಿ ಕಳ್ಳಿನೊಳಗ
ಕಳ್ಳೀಯ ಹಾಲು ಕುಡಿದ್ಹಾಂಗ ಆತು
ಸೊಗಸಿಲ್ಲ ಮನಸಿನೊಳಗ"

"ನಿನ ಕೈಯ ಹಿಡಿದು ಮುಳಜಾಲಿ ಗಿಡವ–
ಏರೀದ ಹಾಂಗ ಆಯ್ತು
ತೆಲಿ ಕೆಡಿಸಬ್ಯಾಡ ನಾ ಹೊಂಟೆ ಹೊರಗ
ಈ ಜೀವ ಬ್ಯಾಸರಾಯ್ತು"

"ಮಾರಾಯ ನಿನ್ನ ಕಾಲ್ಮುಗಿಯತತೀನಿ
ಸಾಕೇಳ ಸೆಟಗೊಬ್ಯಾಡಾ
ಕಸಮುಸುರಿ ತೊಳೆದು ಬಿಸಿ ಬುತ್ತಿ ಕಟ್ಟಿ
ಕಳುಸ್ತೀನಿ ನಿನ್ನ ಕೂಡ"

ಅಳಬ್ಯಾಡ ಮಳ್ಳಿ ಬಾ ಬಾರ ಇಲ್ಲಿ
ಅಳತಾರ ಏನ ಹೀಂಗ
ಗಂಡ ಹೆಂಡ್ರ ಜಗಳಂದ್ರ ನೋಡ ಏ
ಗಂಧ ತೀಡಿದ್ಹಾಂಗ"

**ಆಕರ: ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ, ಕವನ ಸಂಕಲನ 1971 ಸಿರಿಗನ್ನಡ ಪ್ರಕಾಶನ, ಕನ್ನಡ ಅಧ್ಯಯನ ಸಂಸ್ಥೆ, ಧಾರವಾಡ.**

**ಪೂರಕ ಪಠ್ಯ**

## ಭಗವತಿಕೆರೆ ಎಂಬ ನೆಲೆ

**ಕಡಿದಾಳು ಶಾಮಣ್ಣ**

ಮದುವೆಯಾದ ಎರಡ್ಮೂರು ದಿನಕ್ಕೆ ನಾನು, ಶ್ರೀದೇವಿ ಭಗವತಿಕೆರೆಗೆ ಬಂದು ಸಂಸಾರ ಹೂಡಿದೆವು. ನಮ್ಮ ಜೊತೆಗೆ ಶ್ರೀದೇವಿ ತಾಯಿ ರುಕ್ಮಿಣಮ್ಮ ಬಂದಿದ್ದರು. ನಾನೀಗ ಸಂಸಾರಿಯಾಗಿದ್ದೆ ನಿಜ. ಆದರೆ ಸಂಸಾರ ನಡೆಸಲು ಬೇಕಾದ ಕನಿಷ್ಠ ಅಗತ್ಯಗಳನ್ನು ನಾನು ಮಾಡಿಕೊಂಡಿರಲಿಲ್ಲ. ನನ್ನದು ಎನ್ನುವ ಒಂದಿಷ್ಟು ಭೂಮಿ, ಅದರಲ್ಲಿ ನಾನೇ ಬೆಳೆದ ಭತ್ತದ ಬೆಳೆ, ಆಗ ತಾನೆ ಹಾಕಿದ ಅಡಿಕೆ ಗಿಡಗಳು, ವಾಸಮಾಡಲು ಚಿಕ್ಕದೊಂದು ಗುಡಿಸಲು. ಇಷ್ಟೆ ಇದ್ದಿದ್ದು ಮದುವೆ ಮಾಡಿಕೊಂಡು ಈ ಊರಿಗೆ ಖಾಯಂ ಆಗಿ ನೆಲೆಸಲುಘೇ ಬರುವಾಗ, ಬಾಗಿಲು, ಗೋಡೆ ಯಾವುದು ಭದ್ರವಿಲ್ಲದ, ಮಳೆ ಬಂದರೆ ಸೋರುವ, ಜೋರಾಗಿ ಗಾಳಿ ಬೀಸಿದರೆ ಹಾರಿಹೋಗುವ ಮೇಲ್ಛಾವಣಿಯ ಗುಡಿಸಲದು. ಒಂದು ಬಚ್ಚಲು ಮನೆಯನ್ನು ಸಹ ಕಟ್ಟಿಸಿಕೊಂಡಿರಲಿಲ್ಲ. ಹೆಂಗಸರಿಗೆ ಬಚ್ಚಲುಮನೆಯ ಅಗತ್ಯವಿದೆ ಎನ್ನುವುದು ಸಹ ನನಗೆ ಹೊಳೆಯದ ವಿಷಯವಾಗಿತ್ತು. ಹೇಗೂ ಪಕ್ಕದಲ್ಲೆ ಛಾನೆಲ್ ಇದೆ ಯಾರೂ ಬರೋರಿಲ್ಲ ಹೋಗೋರಿಲ್ಲ ಅಲ್ಲೆ ಸ್ನಾನ ಮಾಡಿಕೊಂಡರೆ ಆಯಿತು ಎನ್ನುವ ಧೋರಣೆ. ಅಕ್ಕಪಕ್ಕದಲ್ಲಿರಲಿ ಇಡೀ ಊರಿನಲ್ಲಿ ಬೇರೊಂದು ನರಪಿಳ್ಳೆಯು ವಾಸಿಸುತ್ತಿರಲಿಲ್ಲ. ಒಂಟಿ ಬಡಕ ಸಂಸಾರ ನಮ್ಮದು. ಇದನ್ನೆಲ್ಲ ನೋಡಿ ಶ್ರೀದೇವಿಯನ್ನು ಮನೆ ತುಂಬಿಸಿ ಹೋಗಲು ಬಂದ ಅವರ ತಾಯಿ ದುಃಖ, ಸಂಕಟ ತಡೆಯಾಲಾಗದೇ ಅಳುತ್ತಿದ್ದರು. ದೊಡ್ಡ ಶ್ರೀಮಂತರೇನು ಅಲ್ಲದಿದ್ದರೂ ಅನುಕೂಲಸ್ಥ ಸ್ಥಿತಿಯಲ್ಲೆ ಬದುಕುತ್ತಿರುವವರು. ಹಾಗಿರುವಾಗ ಇವಳೊಬ್ಬಳು ಅದೂ ಕಡಿದಾಳು ಮನೆಯ ಸೊಸೆಯಾಗಿ ಇಂಥ ಸ್ಥಿತಿಯಲ್ಲಿ ಬಾಳ್ವೆ ಮಾಡಬೇಕಾಯಿತಲ್ಲ ಎಂದು ಸಹಜವಾಗಿಯೇ ಅವರಿಗೆ ಸಂಕಟವಾಗಿತ್ತು.

ಆದರೆ ಯೌವನದ ಹುಮ್ಮಸ್ಸೋ, ಪರಸ್ಪರರಲ್ಲಿದ್ದ ಸ್ನೇಹ ಸಲುಗೆಯೋ, ಜೊತೆಗೆ ನಾವು ನಂಬಿಕೊಂಡ ಆದರ್ಶಗಳ ಪ್ರಭಾವವೋ ಒಟ್ಟಿನಲ್ಲಿ ನಾನು, ಶ್ರೀದೇವಿ ಯಾವುದಕ್ಕೂ ಕೊರಗದೇ, ಪರಿತಪಿಸದೇ ಸಂತೋಷವಾಗಿದ್ದೆವು. ಇಡೀ ಊರಿನಲ್ಲಿ ಭೂಮಿ ಸಾಗು ಮಾಡಿರಲಿಲ್ಲ. ದಟ್ಟ ಕುರುಚಲು ಕಾಡಿತ್ತು. ಮನುಷ್ಯರು ಇಲ್ಲದಿದ್ದರೆ ಏನಾಯ್ತು. ಕಾಡು ಹಂದಿಗಳು, ಸಾರಗ, ಕರಡಿ, ಮೊಲ, ನವಿಲು ಹೀಗೆ ಕಾಡು ಪ್ರಾಣಿಗಳು ರಾಶಿ ರಾಶಿ ಸಂಖ್ಯೆಯಲ್ಲಿ ಇದ್ದವು. ಮನೆಯ ಎದುರಿಗೆ ನಿಂತರೆ ಮಲ್ಲಾಪುರದ ಗುಡ್ಡ ಕಾಣುತ್ತಿತ್ತು. ಅಲ್ಲಿ ಕಾಡೆಮ್ಮೆಗಳು ಮೇಯುತ್ತಿರುವುದನ್ನು ನೋಡಬಹುದಾಗಿತ್ತು. ರಾತ್ರಿ ಹೊತ್ತಿನಲ್ಲಿ ಎರಡ್ಮೂರು ಕರಡಿಗಳು ನಮ್ಮ ಗುಡಿಸಲ ಪಕ್ಕದಲ್ಲೆ ಬಂದು ಕೂರುತ್ತಿದ್ದುದು ದಿನ ನಿತ್ಯದ ದೃಶ್ಯವಾಗಿತ್ತು. ಬೆಳಗಿನ ಜಾವದಲ್ಲಿ ಐವತ್ತು, ಅರವತ್ತು ಸಂಖ್ಯೆಯಲ್ಲಿ ಸಾರಗಗಳು ಸಾಲು ಸಾಲಾಗಿ ಪೆರೇಡ್ ಹೋಗುತ್ತಿದ್ದವು. ಬೇಟೆ ಮಾಡಿದರೆ ಕನಿಷ್ಠಎಂಟೊಂಬತ್ತು ಮೊಲಗಳಂತೂ ಸಿಕ್ಕೆ ಸಿಗುತ್ತಿದ್ದವು ಅವುಗಳನ್ನು

ಗೂಟಕ್ಕೆ ನೇತು ಹಾಕಿಕೊಂಡು ಬರ್ತಿದ್ದೆ. ಶ್ರೀದೇವಿ ಮಾಂಸ ತಿನ್ನುವವಳಲ್ಲ ಅದರೆ ಮಾಂಸದ ಅಡುಗೆ ಮಾಡುವುದಕ್ಕೆ ಅವಳ ಅಭ್ಯಂತರ ಇರಲಿಲ್ಲ. ತುಂಬಾ ರುಚಿಯಾಗಿ ಮಾಂಸದ ಅಡುಗೆ ಮಾಡೋಳು. ದೇವಂಗಿ ಪ್ರಫುಲ್ಲ ಚಂದ್ರ ಇಲ್ಲಿಗೆ ಬೇಟೆಗೆ ಬರೊರು. ತಮ್ಮಗನ್ನಿಂದ ನಾಲ್ಕೈದು ಹಂದಿಯನ್ನಾದರೂ ಉರುಳಿಸಿ ಒಂದು ಹಂದಿಯನ್ನು ನಮಗೆ ಕೊಟ್ಟು ಹೋಗೋರು. ಹೊಸ ಬದುಕನ್ನು ಕಟ್ಟಿಕೊಳ್ಳುವ ಉಮೇದಿನಲ್ಲಿದ್ದ ನಮ್ಮಿಬ್ಬರಿಗೆ ಒಂಟಿತನ, ಭಯ, ಕೊರತೆಗಳು ಯಾವುದು ಕಾಡುತ್ತಿರಲಿಲ್ಲ.

ಹೈಸ್ಕೂಲ್ ಮೇಷ್ಟ್ರಾಗಿದ್ದರೆ ಅಷ್ಟಿಷ್ಟು ಸಂಬಳವಾದರೂ ನಿಗದಿತವಾಗಿ ಸಿಗ್ತಿತ್ತು. ವ್ಯವಸಾಯ ನಂಬ್ಕೊಂಡು ಅದನ್ನು ಕಳೆದುಕೊಂಡಿದ್ದೆ ಮಾಳೂರು ಶಾಲೆಯಲ್ಲಿ ಮೇಷ್ಟ್ರಾಗಿದ್ದಾಗ ನೀರಾವರಿ ಜಮೀನಿನಲ್ಲಿ ವರ್ಷಕ್ಕೆ ಕನಿಷ್ಠ ಎರಡು ಬೆಳೆ ಬೆಳೆದರೂ ಇಷ್ಟು ಲಾಭ ಬರುತ್ತೆ. ಅಷ್ಟು ಲಾಭ ಬರುತ್ತೆ ಬೋರ್ಡ್ ಮೇಲೆ ಲೆಕ್ಕ ಹಾಕದೂ, ಕನಸು ಕಾಣೋದು, ವರ್ಷ ಇಡೀ ದುಡಿದ್ರೂ ಮೇಷ್ಟ್ರ ಕೆಲಸದಲ್ಲಿ ಇದರ ಅರ್ಧ ಭಾಗ ದುಡಿಯಕಾಗಲ್ಲ ಅಂತ ಸಹೋದ್ಯೋಗಿಗಳ ಎದುರು ಜಂಭ ಕೊಚ್ಚೋದು ಮಾಡ್ತಿದ್ದೆ. ಜಮೀನನ್ನೆ ನಂಬಿಕೊಂಡು ಬಂದು ಎರಡು ವರ್ಷಕ್ಕೆ ಸುಸ್ತಾದೆ. ಜಮೀನು ಕೊಟ್ಟ ಬಳುವಳಿ ಏನುಅ ಎಂದರೆ ನಿರಂತರ ಸಾಲ ಎಂದು ಘಂಟಾಘೋಷವಾಗಿ ಹೇಳುವಂತಾಯ್ತು. ವಾಸ್ತವದಲ್ಲಿ ವರ್ಷಕ್ಕೆ ಹತ್ತು ಎಕರೆ ಭತ್ತ ಬೆಳೆವ ರೈತನಾದ ನಾನು ಎರಡ್ಮೂರು ವರ್ಷವಾದರೂ ಟಿಲ್ಲರಿನ ಸಾಲ ತೀರಿಸಲಾಗದೇ ಟಿಲ್ಲರ್ ಕೊಟ್ಟಿದ್ರಲ್ಲ ವಾಸುದೇವ್ ಅವರಿಗೇ ಅದನ್ನು ವಾಪಸ್ ಕೊಟ್ಟು ಮರ್ಯಾದಿ ಉಳಿಸಿಕೊಳ್ಳಬೇಕಾಯಿತು.

ಆದರೆ ಸಾಲಸೋಲ ಎಲ್ಲದರ ನಡುವೆಯು ನಾನು ಶ್ರೀದೇವಿ ಬದುಕುವ ಉತ್ಸಾಹವನ್ನೇನೂ ಕಳೆದುಕೊಂಡಿರಲಿಲ್ಲ. ಸಾಲ, ಬಡತನ ಎಲ್ಲ ಬದುಕಿನಲ್ಲಿ ಇದ್ದಿದ್ದೇ ಜೊತೆಗೆ ನಾವು ಮಾತ್ರ ಈ ಸ್ಥಿತಿಯಲ್ಲಿ ಇರಲಿಲ್ಲ. ತೇಜಸ್ವಿಯು ಸೇರಿದಂತೆ ಈ ಸಂದರ್ಭದ ನಮ್ಮ ಎಲ್ಲ ಒಡನಾಡಿಗಳ ಸ್ಥಿತಿಯು ಇದೇ ರೀತಿ ಇತ್ತು. ನಾವು ಶ್ರೀಮಂತರು ಹಣದ ಮದದಿಂದ ಮೆರೆಯೋರ ಜೊತೆ ಅವರೆಷ್ಟೆ ಹತ್ತಿರದ ಸಂಬಂಧಿಗಳಾಗಿದದರೂ ಸೇರ್ತಿರಲಿಲ್ಲ. ಅವರನ್ನು ದೂರವೇ ಇಟ್ಟುಬಿಡ್ತಿದ್ವಿ ಇದು ಯಾವಾಗಲೂ ನಮ್ಮ ಮನಸ್ಸಿನ ಆರೋಗ್ಯವನ್ನುಕಾಪಾಡಿದೆ ಅಂತಲೇ ತಿಳಿದಿದ್ದೇನೆ. ನಮಗೆ ಈ ಸಂದರ್ಭದಲ್ಲಿ ತೀರ ತೀರಾ ನಿಕಟವಾಗಿದ್ದ ಕುಟುಂಬವೆಂದರೆ ತೇಜಸ್ವಿಯವದೇ, ನಮ್ಮೂರುಗಳಿಗೆ ಹೋಗೋದಕ್ಕಿಂತ ಜಾಸ್ತಿ ನಾವು ತೇಜಸ್ವಿ ಮನೆಗೆ ಹೋಗಿದ್ದೇವೇನೋ. ಕನಿಷ್ಠ ತಿಂಗಳಿಗೆ ಒಮ್ಮೆಯಾದರೂ ತೇಜಸ್ವಿ ರಾಜೇಶ್ವರಿ ಇಲ್ಲಿಗೆ ಬರೋರು ಇಲ್ಲ ನಾನು ಶ್ರೀದೇವಿ ಅವರ ತೋಟಕ್ಕೆ ಹೋಗಿ ಒಂದೆರಡು ದಿನ ಉಳಿದು ಬರ್ತಿದ್ವಿ.

ಒಮ್ಮೆ ತೇಜಸ್ವಿ ನಮ್ಮ ಗುಡಿಸಲಿಗೆ ಲಂಕೇಶರನ್ನು ಕರೆತಂದಿದ್ದರು. ಲಂಕೇಶ್ ನನಗೆ ಮೈಸೂರಿನಲ್ಲಿ ಇರುವಾಗಲೇ ಪರಿಚಯ. ಅವರ 'ಬಿಚ್ಚು' ಕವನ ಸಂಕಲನವನ್ನು ನಾನೇ ಪ್ರಕಟಿಸಿದ್ದೆ. ಗುಡಿಸಲಲ್ಲಿ ಮಂಚ ಇರಲಿಕ್ಕೆ ಹೇಗೆ ಸಾಧ್ಯ? ನಮ್ಮನೆಗೆ ಯಾರೇ ಬಂದರೂ ಒಂದು ಚಾಪೆ ಹಾಸಿಕೊಂಡು ನೆಲದ ಮೇಲೆ ಮಲಗುವುದು ರೂಢಿ. ಆಗ ಈಗಿನಂತೆ ಬಸ್ಸು ಇತ್ಯಾದಿ ಸೌಲಭ್ಯಗಳಿಲ್ಲದ್ದರಿಂದ ಅದಕ್ಕಿಂತ ಹೆಚ್ಚಾಗಿ ಈಗಿನ ಅವಸರದ ಬದುಕು ಆಗಿರಲಿಲ್ಲ ಆದ್ದರಿಂದಯಾರೇ ನಮ್ಮನೆಗೆ ಬಂದರೂ ಕನಿಷ್ಠ ಎರಡು ದಿನವಾದರೂ ಉಳಿದು ಹೋಗುತ್ತಿದ್ದರು. ಲಂಕೇಶ್ ಮತ್ತು ತೇಜಸ್ವಿ ಸಹ ಆ ದಿನ ಬಂದವರು ನಮ್ಮ ಮನೆಯಲ್ಲೆ ಉಳಿದುಕೊಂಡರು.

**ನಿರೂಪಣೆ: ಅಕ್ಷತಾ ಕೆ**

**ಆಕರ:** ಕಾಡ ತೊರೆಯ ಜಾಡು, ಅಭಿನವ ಪ್ರಕಾಶನ, 2012

ಲೇಖಕರ ಪರಿಚಯ

**ಸೋಮಶೇಖರ ಇಮ್ರಾಪುರ** (1940–): ಕವಿ, ಜನಪದ ತಜ್ಞರಾದ ಇವರು ಕವಿ, ಕಥೆಗಾರ, ಲೇಖಕ, ಜಾನಪದ ತಜ್ಞರಾಗಿ ತಮ್ಮನ್ನು ಗುರುತಿಸಿ ಕೊಂಡು, ಗ್ರಂಥ ಸಂಪಾದನೆ,ಕಥೆ,ಕವನ, ವಿಮರ್ಶೆ ಕ್ಷೇತ್ರದಲ್ಲಿ ಸಾಹಿತ್ಯ ಕೃಷಿಯಲ್ಲಿ ಬಿಸಿಲಹೂ, ಬಿರುಗಾಳಿ, ಗಂಡ ಹೆಂಡತಿ ಜಗಳ ಗಂಧ ತೀಡಿದ್ಹಾಂಗ, ಬೇವು ಬೆಲ್ಲ, ಹುತ್ತಗಳು, ಚಿತ್ತ ಚಿತ್ತಾರ, ಕನ್ನಡ ಪದಕೋಶ, ಬೆಳದಿಂಗಳು ಇತ್ಯಾದಿ ಕೃತಿಗಳನ್ನು ರಚಿಸಿರುವ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜಾನಪದ ತಜ್ಞ ಪ್ರಶಸ್ತಿ, ಜೀಶಂಪ ಜಾನಪದ ಪ್ರಶಸ್ತಿ ಗೌರವಗಳಿಗೆ ಪಾತ್ರರಾಗಿದ್ದಾರೆ. ಈಗ ನಿವೃತ್ತ ಜೀವನವನ್ನು ಕಳೆಯುತ್ತಿದ್ದಾರೆ

**ಕಡಿದಾಳು ಶಾಮಣ್ಣ (1938–):**ವೇದಿಕೆಯನ್ನು ಹತ್ತದೆ, ಭಾಷಣ ಮಾಡದೆ, ನಾಯಕರೆಂದು ಕರೆದುಕೊಳ್ಳದೆ ರೈತ ಸಮುದಾಯದ ನಾಯಕರಾದವರು. ಮೈಸೂರು ವಿಶ್ವವಿದ್ಯಾಲಯದಿಂದ ಪದವಿ ಪಡೆದು, ಶಿಕ್ಷಕರಾಗಿ, ಉಪನ್ಯಾಸಕರಾಗಿ ಸೇವೆ ಮಾಡಿ, ಗಾಂಧೀಜಿ, ಲೋಹಿಯಾ ಅವರ ಚಿಂತನೆಗಳಿಂದ ಪ್ರಭಾವಿತರಾಗಿ ತಮ್ಮ ನೆಲದಲ್ಲಿಯೇ ಅನೇಕ ಚಳುವಳಿಗಳನ್ನು ಜೀವಂತವಾಗಿ ಕಟ್ಟಿ,

ಹಿಂಸೆಯನ್ನು ಪ್ರತಿಪಾದಿಸದೇ, ವೈಜ್ಞಾನಿಕ, ವೈಚಾರಿಕತೆಯನ್ನು ಬಿಡದೆ ಸಮುದಾಯದ ಜೋತೆ ಒಂದಾಗಿ ಬಾಳುವುದು ಸಾಧ್ಯ ಎಂದು ಸಂತನಂತೆ ಬದುಕಿ, ಜೋತೆಗೆ ಕೃಷಿಯೇ ಜೀವನವಾಯಿತು.

**ಅಕ್ಷತಾ ಕೆ** (1980)

ಕನ್ನಡದ ಉದಯೋನ್ಮುಖ ಬರಹಗಾರ್ತಿ, ಕವಯಿತ್ರಿ, ಪ್ರಕಾಶಕಿಯಾಗಿ ವ್ಯಕ್ತಿತ್ವ ರೂಪಿಸಿಕೊಂಡ ಯುವ ಪ್ರತಿಭಾನ್ವಿತೆ. ವಿದ್ಯಾರ್ಥಿಯಾಗಿದ್ದ ದಿನಗಳಿಂದ ಬರವಣಿಗೆ ರೂಢಿಸಿಕೊಂಡು 'ರೆಕ್ಕೆ ಬಿಚ್ಚಿ ಆಕಾಶ ನೆಚ್ಚಿ, ನೀರ ಮೇಲಣ ಚಿತ್ರ, ಕವನ ಸಂಕಲನ ಹಾಗೂ ಮತ್ತೆ ಮತ್ತೆ ಬೇಂದ್ರೆ, ಕಾಡ ತೊರೆಯ ಜಾಡು, ಕಡಿದಾಳು ಶಾಮಣ್ಣ ಅವರ ಆತ್ಮ ಚರಿತ್ರೆಯ ನಿರೂಪಣೆ ಮಾಡಿದ್ದಾರೆ. ಸದ್ಯಕ್ಕೆ ಸಾಹಿತ್ಯದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಶಿವಮೊಗ್ಗದಲ್ಲಿ ನೆಲೆಸಿದ್ದಾರೆ

**ಪದಕೋಶ**: ಹೊಡಮರಳಿ–ಮತ್ತೆ ಬೆಳಕು ಮೂಡುವುದು, ಹ್ಯಾಂಗ–ಹೇಗೆ, ಕರ–ಕರು, ಒಟ್ಟೈತಿ–ಹೆಚ್ಚು, ಬಿಡುವಿಲ್ಲದ ಕೆಲಸ;ಕುಟ್ಟಾಕ–ಕುಟ್ಟುವದಕ್ಕೆ, ಮಾರಿ–ಮುಖ, ನಿಟ್ಟೆಲುವು–ಬೆನ್ನೆಲುಬು, ಎಲುವು–ಎಲುಬು, ಮೂಳೆ; ಏಟು–ಎಷ್ಟು, ಅರಿವಿ–ಬಟ್ಟೆ, ಗುದ್ದಿ–ಗುದ್ದಗಿ, (ತುಂಟ ದನವನ್ನು ಹತೋಟಿಯಲ್ಲಿಡಲು  ಕೊರಳಲ್ಲಿ ಕಟ್ಟುವ ಕಟ್ಟಿಗೆಯ ತುಂಡು)ಜ್ವಾಕಿ–ಜೋಕೆ; ಶಾರಾ–ಶಹರ,  ನಗರ; ಪಿಸಿದು–ಹರಿದು, ಸೀಳು, ಹುಡಿ–ಮಣ್ಣಿನ ಧೂಳು, ಟೆಬರು–ಧಿಮಾಕು, ಕೊಬ್ಬು,ಸೊಣಗ–ನಾಯಿ, ಪ್ಯಾಟಿ–ಪೇಟೆ, ಸ್ವಾಟಿ–ಗಲ್ಲ, ಸೋಗು–ಧಿಮಾಕು, ಚುಟ್ಟಾ–ಸೇದಿ ಬಿಟ್ಟಿದ್ದ ಬೀಡಿಯ ತುಂಡು, ಜತಿ–ಜೊತೆ; ಇಸಾ–ವಿಷ; ಐತಿ–ಇದ, ಕಳ್ಳು–ಕರುಳು, ಸೆಟಗೊಬ್ಯಾಡ–ಸಿಟ್ಟಾಗಬೇಡ;

**ಅಭ್ಯಾಸ ಪ್ರಶ್ನೆಗಳು.**

1. ಕವಿತೆಯಲ್ಲಿ ಬರುವ ನಾಯಕನನ್ನು ಸಾಕಿದವರು ಯಾರು?
2. ಬಾವಿಗೆ ಬಿದ್ದು ನೀರ ಕುಡಿದು ಕರುಣೆ ತೋರು ಎಂದವರು ಯಾರು?
3. ಹೆಣ್ಣಿನಲ್ಲಿರುವ ತವರಿನ ಹಂಬಲ ಯಾವ ಸ್ವರೂಪದ್ದು.
4. ಪದ್ಯದಲ್ಲಿ ವ್ಯಕ್ತವಾಗುವ ಪೌರುಷದ ತೀವ್ರತೆಯನ್ನು ವಿವರಿಸಿ.
5. ಸಂಸಾರದ ಬದುಕನ್ನು ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.
6. ಗಂಡ–ಹೆಂಡಿರ ಜಗಳದ ಸ್ವಾರಸ್ಯವೇನು? ವಿವರಿಸಿ.
7. ಧಾರವಾಡ ಕನ್ನಡ ಭಾಷೆಯ ಚೆಲುವು ಪದ್ಯದಲ್ಲಿ ಹೇಗೆ ಮೂಡಿಬಂದಿದೆ?

**ಚಟುವಟಿಕೆಗಳು**

1. ಕನ್ನಡ ನಾಡಿನ ಪ್ರಾದೇಶಿಕ ಭಾಷೆಗಳ ಬಗೆಗೆ ತಿಳಿದುಕೊಳ್ಳಿ.
2. ಸಾಕು ಪ್ರಾಣಿಗಳ ಉಪಯೋಗ, ಪಟ್ಟಿಮಾಡಿ.
3. ಗಂಡ ಹೆಂಡಿರ ಜಗಳದ ಸಂಭಾಷಣೆ ಬರೆಯಿರಿ.

**ಪ್ರವೇಶಿಕೆಯ ಉಲ್ಲೇಖದ ಆಕರ:**ಹೂಗೊಂಚಲು, ಮೈಸೂರು ವಿದ್ಯಾ ಇಲಾಖೆ,1966.

**ಪರಾಮಾರ್ಶನ ಗ್ರಂಥಗಳು:**

ಸಖಿಗೀತ – ದ.ರಾ.ಬೇಂದ್ರೆ.
ಮೈಸೂರು ಮಲ್ಲಿಗೆ – ಕೆ ಎಸ್ ನರಸಿಂಹಸ್ವಾಮಿ.

## ಅಧ್ಯಾಯ–೧

## ವಾರೆನ್ ಬಫೆಟ್: ವಿಶ್ವ ಶ್ರೇಷ್ಠ ಹೂಡಿಕೆದಾರ

**–ಕೆ.ಕೆ. ಪೂರ್ಣೇಶ್**

**ಪ್ರವೇಶಿಕೆ:**

ಹಣದ ಉದ್ದೇಶವನ್ನು ಅರ್ಥಮಾಡಿಕೊಳ್ಳುವ ಪ್ರತಿಯೊಬ್ಬ ವ್ಯಕ್ತಿ ಅದಕ್ಕಾಗಿ ಹಾತೊರೆಯುತ್ತಾನೆ. ಕೇವಲ ಹಾತೊರೆಯುವುದರಿಂದ ಐಶ್ವರ್ಯ ಬರುತ್ತದೆಯೆ? ಖಂಡಿತ ಇಲ್ಲ. ಶ್ರೀಮಂತನಾಗಬೇಕೆಂಬ ಆಕಾಂಕ್ಷೆ, ಮನದ ತುಂಬ ಅದೇ ಯೋಚನೆ, ಅದಕ್ಕಾಗಿ ದೃಢವಾದ ಯೋಜನೆ, ಆ ಯೋಜನೆಯ ಜೊತೆ ಫಲವನ್ನು ಮೈಗೂಡಿಸಿಕೊಂಡರೆ ಮಾತ್ರ ಸಿರಿವಂತಿಕೆ ಪ್ರಾಪ್ತವಾಗುತ್ತದೆ. ಇಲ್ಲಿ ಸೋಲನ್ನು ಸೋಲೆಂದು ತಿಳಿಯಲೇಬಾರದು, ಅಂಥ ಛಲ ಇರಬೇಕು. ಐಶ್ವರ್ಯಕ್ಕಾಗಿ ಅತೀವ ಆಕಾಂಕ್ಷೆ ಪಟ್ಟು ಯೋಜನೆ ರೂಪಿಸದೇ ಇದ್ದರೆ ಹಾಗೂ ಆ ಹಣ ಸಂಪಾದಿಸುವುದು ಖಚಿತ ಎಂದು ನಂಬಿಕೆ ಇಡದೇ ಇದ್ದರೆ ಸಿರಿವಂತರಾಗಲು ನಿಮಗೆ ಎಂದೂ ಸಾಧ್ಯವಿಲ್ಲ.

**ನೆಪೋಲಿಯನ್ ಹಿಲ್**

ಆಕರ: ಸಿರಿತನಕ್ಕೆ ಹದಿಮೂರೇ ಹೆಜ್ಜೆ, ವಾಸನ್ ಪಬ್ಲಿಕೇಷನ್, ಬೆಂಗಳೂರು, ಮುದ್ರಣ–೨೦೦೬

I will tell you the secret of getting rich on wall street. You try to be greedy when others are fearful and you try to be very fearful when others are greedy.

Warren Buffett.

ಷೇರುಪೇಟೆಯ ಹೂಡಿಕೆಯ ದಂತಕಥೆಯಾದ ಅಮೇರಿಕಾದ ವಾರೆನ್ ಬಫೆಟ್ ಸಂಪತ್ತಿನ ಸೃಷ್ಟಿಯಲ್ಲಿ ಸುಪ್ರಸಿದ್ಧ. ವಿಶ್ವದ ಶ್ರೀಮಂತರಲ್ಲಿ ಬಿಲ್‌ಗೇಟ್ಸ್ ನಂತರದ ಎರಡನೇ ಸ್ಥಾನದಲ್ಲಿರುವ ವಾರೆನ್ ಬಫೆಟ್ ಹೂಡಿಕೆ ರಂಗದಲ್ಲಿಯೇ ಅಪಾರ ಪ್ರಮಾಣದ ಸಂಪತ್ತನ್ನು ಸೃಷ್ಟಿಸಿರುವವರಲ್ಲಿ ವಿಶ್ವದಲ್ಲಿಯೇ ಮೊದಲಿಗ. ಸಂಪತ್ತಿನ ಸೃಷ್ಟಿಯಲ್ಲಿ ಮತ್ತು ಷೇರುಪೇಟೆಯ ಹೂಡಿಕೆಯಲ್ಲಿ ಆಸಕ್ತಿಯಿರುವವರಿಗೆ ಈತನ ಬದುಕು ಅತ್ಯುತ್ತಮವಾದ ಪಾಠವಾಗಿದೆ. ಅಪಾರ ಸಂಪತ್ತನ್ನು ಹೊಂದಿದ್ದರೂ ಕೂಡ ಈತನ ಸರಳ ಬದುಕು ಉದಾತ್ತವಾದ ಚಿಂತನೆಗಳು ಅನುಸರಿಸಲು ಯೋಗ್ಯವಾದಂಥವು.

ಸಿರಿವಂತಿಕೆಯ ಕನಸು ಎಲ್ಲರಿಗೂ ಇರುತ್ತದೆ; ಸಿರಿವಂತಿಕೆಯನ್ನು ನಿರ್ಲಕ್ಷಿಸುವವರು ಅಪವಾದವಾಗಿ ಕಾಣುತ್ತಾರೆ. ಆದರೆ ಸಿರಿವಂತಿಕೆ ಸುಮ್ಮಸುಮ್ಮನೆ ಬರುವುದಿಲ್ಲ. ಒಂದು, ಕಷ್ಟಪಟ್ಟು ಸಂಪಾದಿಸಿ ಶ್ರೀಮಂತರಾಗಬೇಕು. ಎರಡು, ವಿಶೇಷ ಜ್ಞಾನವನ್ನು ಬಳಸಿ ಶ್ರೀಮಂತರಾಗಬೇಕು.

ವಿಶ್ವದ ಸಂಪತ್ತಿನ ಇತಿಹಾಸವನ್ನು ಗಮನಿಸಿದರೆ ಸಾವಿರಾರು ಶ್ರೀಮಂತರು (ಬಿಲಿಯನೇರ್ಸ್) ಕಾಣಸಿಗುತ್ತಾರೆ. ಇವರೆಲ್ಲ ಯಾವುದಾದರೊಂದು ಉದ್ದಿಮೆ ಸ್ಥಾಪಿಸಿ ಬೆಳಸಿ ಶ್ರೀಮಂತರಾಗಿದ್ದಾರೆ. ಆದರೆ ವಾರೆನ್ ಬಫೆಟ್ ಒಬ್ಬನೇ ಷೇರುಮಾರುಕಟ್ಟೆಯಲ್ಲಿ ಹಣಹೂಡಿ ವಿಶ್ವದ ಎರಡನೇ ಶ್ರೀಮಂತನ ಪಟ್ಟಕ್ಕೇರಿದ್ದಾನೆ. ಇಂದು ಮೈಕ್ರೋಸಾಫ್ಟ್‌ನ ಬಿಲ್‌ಗೇಟ್ಸ್‌ನ ನಂತರದ ಶ್ರೀಮಂತನಾಗಿ ಬಫೆಟ್‌ನನ್ನು ಗುರುತಿಸಲಾಗಿದೆ.

ವಿಶ್ವದ ಶ್ರೇಷ್ಠ ಹೂಡಿಕೆದಾರನಾಗಿ ಬೆಳೆದಿರುವ ವಾರೆನ್ ಬಫೆಟ್‌ನ ಬದುಕಿನ ಪ್ರಾರಂಭವನ್ನು ನೋಡಿದರೆ ಆತನ ವಿನಯವಂತಿಕೆ ಸ್ಪಷ್ಟವಾಗಿ ಗೋಚರಿಸುತ್ತದೆ. ವಿನಯ, ಸರಳತೆ, ವ್ಯಾಪಾರ, ವ್ಯಾಸಂಗ, ಆಳವಾದ ಅಧ್ಯಯನ ಮತ್ತು ಹಣಕಾಸಿನ ವಿಚಾರದಲ್ಲಿ ಅನನ್ಯ ಜ್ಞಾನ ಈತನ ವ್ಯಕ್ತಿತ್ವದ ವಿಶೇಷಣಗಳು.

ತನ್ನ ೨೦ನೇ ವಯಸ್ಸಿನಲ್ಲಿ ಕೇವಲ ೧೦೦೦೦ ಡಾಲರ್‌ಗಳೊಂದಿಗೆ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಪ್ರಾರಂಭಿಸಿದ ಬಫೆಟ್ ಇಂದು ೪೦ ಬಿಲಿಯನ್ ಡಾಲರ್‌ಗಳ ಒಡೆಯ. (ಅಂದರೆ ಸುಮಾರು ೧೮೦,೦೦೦ ಕೋಟಿ ರೂಗಳು)

ಇಂಥ ಹಣಕಾಸಿನ – ಸಂಪತ್ತಿನ ಚಮತ್ಕಾರ ಹೇಗೆ ಸಾಧ್ಯವಾಯಿತು ಎಂದರೆ ಬಫೆಟ್‌ನ ಪರಿಪೂರ್ಣ ವ್ಯಕ್ತಿತ್ವ ಕಣ್ಣ ಮುಂದೆ ನಿಲ್ಲುತ್ತದೆ. ಬದುಕಿನ ಉತ್ತಮ ಮೌಲ್ಯಗಳ ಸಾಕಾರ ಮೂರ್ತಿಯಾದ ಬಫೆಟ್ ವಿಶ್ವದಾದ್ಯಂತ ಹೂಡಿಕೆದಾರರೆಲ್ಲರ ಆರಾಧ್ಯದೈವವಾಗಿದ್ದಾನೆ.

ಇಂಥ ಅಗಾಧ ಸಂಪತ್ತನ್ನು ಈತ ಹೇಗೆ ಸೃಷ್ಟಿಸಿದ ಎಂಬುದೊಂದು ಕುತೂಹಲಕಾರಿ ಕಥಾನಕ. ಸಾಧಾರಣ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ಬಫೆಟ್ ವಿದ್ಯಾರ್ಥಿ ದೆಸೆಯಲ್ಲಿ ಮನೆಮನೆಗೆ ಪತ್ರಿಕೆ ಹಂಚುತ್ತಾ ದುಡಿಯತೊಡಗಿದ. ನಂತರ ಹಳೆಯ ಗಾಲ್ಫ್ ಬಾಲ್‌ಗಳನ್ನು ಕಡಿಮೆ ಬೆಲೆಗೆ ಖರೀದಿಸಿ ಹೆಚ್ಚಿನ ಬೆಲೆಗೆ ಮಾರತೊಡಗಿದ. ಹೀಗೆ ಕಷ್ಟಪಟ್ಟು ದುಡಿಯುತ್ತಾ ತನ್ನ ಇಪ್ಪತ್ತನೇ ವಯಸ್ಸಿಗೆ ೧೦೦೦೦ ಡಾಲರ್‌ಗಳನ್ನು ಸಂಪಾದಿಸಿದ ಜೊತೆಗೆ ವ್ಯವಹಾರದ ಪಟ್ಟುಗಳನ್ನು ಅರ್ಥೈಸಿಕೊಂಡ.

ವಿಶ್ವವಿದ್ಯಾಲಯದ ಶಿಕ್ಷಣ ಮುಗಿದ ನಂತರ ಬೆಂಜಮಿನ್ ಗ್ರಹಾಂ (ದಿ ಫಾದರ್ ಆಫ್ ವ್ಯಾಲ್ಯೂ ಇನ್‌ವೆಸ್ಟ್‌ಮೆಂಟ್) ನಡೆಸುತ್ತಿದ್ದ ಸೆಕ್ಯೂರಿಟಿ ಅನಾಲಿಸಿಸ್ ತರಗತಿಗೆ ಸೇರಿ ಗ್ರಹಾಂನ ಅಪ್ಪಟ ಶಿಷ್ಯನಾದ. ನಂತರ ಬೆಂಜಮಿನ್ ಗ್ರಹಾಂ ನಡೆಸುತ್ತಿದ್ದ ಹೂಡಿಕೆ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ. ತನ್ನ ೨೫ನೇ ವಯಸ್ಸಿಗೆ ಬಫೆಟ್ ಸಂಪತ್ತು ೧೪೦,೦೦೦ ಡಾಲರ್‌ಗೆ ಬೆಳೆದಿತ್ತು. ತನ್ನದೇ ಪಾಲುದಾರ ಸಂಸ್ಥೆ ಸ್ಥಾಪಿಸಿದ ಬಫೆಟ್ ಅತ್ಯುತ್ತಮ ಷೇರುಗಳ ಮೇಲೆ ಹಣಹೂಡಿ ತನ್ನ ೩೨ನೇ ವಯಸ್ಸಿಗೆ ೨೫ ಮಿಲಿಯನ್ ಡಾಲರ್‌ಗಳ ಒಡೆಯನಾದ.

೧೯೭೦ ರ ದಶಕದಲ್ಲಿ ವಿಶ್ವವಿಖ್ಯಾತ 'ಬರ್ಕ್‌ಶೈರ್ ಹಾಥ್‌ವೇ' ಎಂಬ ತನ್ನದೇ ಕಂಪನಿಯನ್ನು ಸ್ಥಾಪಿಸಿದ. ೧೯೮೦ ರ ದಶಕದಲ್ಲಿ ಷೇರುಮಾರುಕಟ್ಟೆ ಕೆಳಹಂತ ತಲುಪಿದ್ದಾಗ ಷೇರುಗಳ ಬೆಲೆಗಳು ಪಾತಾಳ ತಲುಪಿದ್ದವು. ಅಂಥ ಪೆಸ್ಸಿಮಿಸ್ಟಿಕ್ ಕಾಲದಲ್ಲಿ ಬಫೆಟ್ ವಾಷಿಂಗ್‌ಟನ್ ಪೋಸ್ಟ್ ಮತ್ತು ಜಿಇಐಸಿಒ ಎಂಬ ಎರಡು ಕಂಪನಿಗಳ ಷೇರುಗಳ ಮೇಲೆ ಬೃಹತ್ ಪ್ರಮಾಣದ ಬಂಡವಾಳ ಹೂಡಿದ. ೧೯೭೯ರ ಸುಮಾರಿಗೆ ಅಂದರೆ ಬಫೆಟ್ ತನ್ನ ೫೦ನೇ ವರ್ಷಕ್ಕೆ ತನ್ನ ಸಂಪತ್ತನ್ನು ೧೦೦ ಮಿಲಿಯನ್ ಡಾಲರ್‌ಗಳಿಗೆ ವಿಸ್ತರಿಸಿದ. ೧೯೮೦ ರಿಂದ ೧೯೮೫ ರ ಸುಮಾರಿಗೆ ವಾಲ್‌ಸ್ಟ್ರೀಟ್ ತೀವ್ರವಾಗಿ ಏರಿತು. ಇದರಿಂದಾಗಿ ೧೯೮೫ ಅಂದರೆ ತನ್ನ ೫೫ನೇ ವಯಸ್ಸಿಗೆ ಬಫೆಟ್ ಬಿಲಿಯನೇರ್ ಪಟ್ಟಕ್ಕೇರಿದ. ಷೇರು ಮಾರುಕಟ್ಟೆಯಲ್ಲಿ ಹಣಹೂಡಿ ಬಿಲಿಯನೇರ್ಸ್ ಪಟ್ಟಕ್ಕೇರಿದ ಮೊದಲಿಗ ಎಂಬ ಖ್ಯಾತಿ ಬಫೆಟ್‌ಗೆ ಬಂದಿತು.

೧೯೮೬ ರಿಂದ ೧೯೮೯ ಈ ಅವಧಿಯಲ್ಲಿ ವಾಲ್‌ಸ್ಟ್ರೀಟ್ ತೀವ್ರ ಮುಗ್ಗಟ್ಟನ್ನು ಎದುರಿಸಬೇಕಾಗಿ ಬಂತು. ವಾಲ್‌ಸ್ಟ್ರೀಟ್ ಕೆಳಹಂತದಲ್ಲಿದ್ದಾಗ ಬಫೆಟ್ ವಿಶ್ವಶ್ರೇಷ್ಠ ಕಂಪನಿಗಳಾದ ಕೋಕಾಕೋಲಾ ಮತ್ತು ಜಿಲ್ಲೆಟ್ ಕಂಪನಿಗಳ ಷೇರುಗಳನ್ನು ಅತ್ಯಂತ ಕಡಿಮೆ ಬೆಲೆಗೆ ಖರೀದಿಸಿದ, ತತ್ಪರಿಣಾಮವಾಗಿ, ತನ್ನ ೬೫ನೇ ವಯಸ್ಸಿಗೆ, ೧೯೯೫ ರಲ್ಲಿ ೧೦ ಬಿಲಿಯನ್ ಡಾಲರ್‌ಗಳ ಒಡೆಯನಾದ. ನಂತರದ  ಮೂರು ವರ್ಷಗಳಲ್ಲಿ ಅಂದರೆ ೧೯೯೮ ಕ್ಕೆ ತನ್ನ ಸಂಪತ್ತನ್ನು ೨೦ ಬಿಲಿಯನ್ ಡಾಲರ್‌ಗಳಿಗೇರಿಸಿದ.

ಬರ್ಕ್‌ಶೈರ್ ಹಾಥ್‌ವೇ ಕಂಪನಿಯ ಷೇರಿನ ಬೆಲೆ ೨೦೦೩ ರ ಹೊತ್ತಿಗೆ ೮೪೦೦೦ ಡಾಲರ್‌ಗಳಿಗೇರಿತು. ಆಗ ಬಫೆಟ್‌ನ ಸಂಪತ್ತು ಸುಮಾರು ೪೦ ಬಿಲಿಯನ್ ಡಾಲರ್‌ಗಳು.

ತನ್ನ ೨೦ ನೇ ವಯಸ್ಸಿನಲ್ಲಿ ೧೦,೦೦೦ ಡಾಲರ್‌ಗಳಿಂದ ಆರಂಭವಾದ ಬಫೆಟ್‌ನ ಸಂಪತ್ತಿನ ಯಾತ್ರೆ ೭೫ನೇ ವಯಸ್ಸಿಗೆ ೪೦ ಬಿಲಿಯನ್ ಡಾಲರ್‌ಗಳಿಗೇರಿತು. ಅಂದರೆ ಬಫೆಟ್‌ನ ಹೂಡಿಕೆಯ ಬೆಳವಣಿಗೆಯ ದರ ವರ್ಷದಿಂದ ವರ್ಷಕ್ಕೆ ೩೨% ಕಠಿಣ ಪರಿಶ್ರಮದೊಂದಿಗೆ ತನ್ನ ಸಂಪಾದನೆ ಪ್ರಾರಂಭಿಸಿದ ಬಫೆಟ್ ದೀರ್ಘಾವಧಿಯಲ್ಲಿ ಹೇಗೆ ಸಂಪತ್ತನ್ನು ಸೃಷ್ಟಿಸಬಹುದು ಎಂಬ ಪಾಠವನ್ನು ಜಗತ್ತಿಗೆ ತೋರಿಸಿಕೊಟ್ಟ.

ಬಫೆಟ್‌ನಿಂದ ನಾವು ಕಲಿಯಬಹುದಾದ ಪಾಠಗಳು.

೧. ಷೇರುಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲು ದೊಡ್ಡ ಪ್ರಮಾಣದ ಬಂಡವಾಳ ಬೇಕಾಗಿಲ್ಲ. ಸಣ್ಣ ಮೊತ್ತದಿಂದಲೇ ಷೇರುಪೇಟೆಯಲ್ಲಿ ಹಣ ಹೂಡಬಹುದು.
೨. ಹದಿವಯಸ್ಸಿನಿಂದಲೇ ಹೂಡಿಕೆ ಪ್ರಾರಂಭಿಸಿದರೆ ಯಶಸ್ಸಿನ ಸಾಧ್ಯತೆಗಳು ಹೆಚ್ಚಾಗಿರುತ್ತದೆ.
೩. ಅಲ್ಪಾವಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಷೇರುಮಾರುಕಟ್ಟೆಯಲ್ಲಿ ಹಣ ಹೂಡಬಾರದು. ಷೇರು ಮಾರುಕಟ್ಟೆಯ ಹೂಡಿಕೆ ದೀರ್ಘಾವಧಿಯದ್ದಾಗಿರಬೇಕು. ೧೦ ರಿಂದ ೧೫ ವರ್ಷಗಳ ದೃಷ್ಟಿಯಿಂದ ಹೂಡಿಕೆ ಮಾಡಬೇಕು.
೪.  ಮುಗ್ಗಟ್ಟಿನ ಅವಧಿಯಲ್ಲಿ ಷೇರುಗಳನ್ನು ಖರೀದಿಸಬೇಕು.
೫. ಉತ್ಕರ್ಷದ ಅವಧಿಯಲ್ಲಿ ಷೇರುಗಳನ್ನು ಖರೀದಿಸಬಾರದು ಬದಲಿಗೆ ಮಾರಾಟ ಮಾಡಬೇಕು.
೬. ಷೇರುಗಳಲ್ಲಿ ಹೂಡಿಕೆ ಮಾಡುವಾಗ ಷೇರಿನ ಬೆಲೆಗಿಂತಲೂ ಅದರ ಹಿಂದಿರುವ ಆಂತರಿಕ ಮೌಲ್ಯ ಕ್ಕೆ ಮಹತ್ವ ನೀಡಬೇಕು.

೭. ಷೇರುಗಳಲ್ಲಿ ಹೂಡಿಕೆ ಮಾಡುವಾಗ ಸದರಿ ಕಂಪನಿಗಳು ಉತ್ಪಾದಿಸುವ ಸರಕು ಸೇವೆಗಳ ಗುಣಮಟ್ಟವನ್ನು ಸಂಪೂರ್ಣವಾಗಿ ಅರಿತುಕೊಳ್ಳಬೇಕು. ಬಫೆಟ್ ಕೋಕಾಕೋಲ ತಂಪುಪಾನಿಯ ಮತ್ತು ಜಿಲೆಟ್ ಶೇವಿಂಗ್ ಬ್ಲೇಡ್‌ಗಳ ಕಂಪನಿ ಷೇರುಗಳಲ್ಲಿ ಹಣ ವಿನಿಯೋಗ ಮಾಡಿ ಅತ್ಯದ್ಭುತ ಲಾಭಗಳಿಸಿದ.

೮. ಷೇರುಪೇಟೆ ಮುಗ್ಗರಿಸಿ ಬೀಳುವ ಸದವಕಾಶಕ್ಕಾಗಿ ಕಾಯುತ್ತಿರಬೇಕು. ಷೇರು ಬೆಲೆಗಳು ಹಠಾತ್ತಾಗಿ ಕೆಳಗೆ ಬಿದ್ದಾಗ ಉತ್ತಮ ಕಂಪನಿಗಳ ಷೇರುಗಳನ್ನು ಕಡಿಮೆ ಬೆಲೆಯಲ್ಲಿ ಖರೀದಿಸಬೇಕು.

೯. ಷೇರು ಖರೀದಿಸುವಾಗ ಷೇರಿನ ಆಂತರಿಕ ಮೌಲ್ಯಕ್ಕಿಂತ ಕಡಿಮೆ ಬೆಲೆಯಿರುವ ಷೇರನ್ನು ಖರೀದಿಸಬೇಕು.

೧೦.ಅತ್ಯುತ್ತಮ ನಿರ್ವಹಣೆ ಹೊಂದಿರುವ ಕಂಪನಿಗಳ ಷೇರುಗಳನ್ನು ಮಾತ್ರ ಖರೀದಿಸಬೇಕು.

ಷೇರುಪೇಟೆ ಬಗ್ಗೆಯಾಗಲೀ ಹಣಕಾಸಿನ ವಿಚಾರವಾಗಿಯಾಗಲೀ ಅಥವಾ ಬದುಕಿನ ನೈತಿಕ ಮೌಲ್ಯಗಳ ಬಗೆಗಾಗಲೀ ಬಫೆಟ್ ನಿಲುವುಗಳು ಜಗತ್ತಿನಾದ್ಯಂತ ನುಡಿಮುತ್ತುಗಳಾಗಿ ಪ್ರಚಲಿತವಾಗಿವೆ.

ಹೂಡಿಕೆ ಸಂಬಂಧ ಮಾತನಾಡುತ್ತಾ ಸಿಕ್ಕಸಿಕ್ಕ ಷೇರುಗಳಲ್ಲೆಲ್ಲಾ ಹಣ ವಿನಿಯೋಗಿಸಬಾರದು ಎನ್ನುತ್ತಾನೆ ಬಫೆಟ್, "ಒಂದು ಕೆಟ್ಟ ಪರಿಸ್ಥಿತಿಯಲ್ಲಿ ಬಂಡವಾಳ ಹೂಡುವುದು ಎಂದರೆ ಒಂದು ಒಳ್ಳೆಯ ಅವಕಾಶವನ್ನು ಬಿಟ್ಟುಕೊಟ್ಟಂತಯೇ ಸರಿ" ಎನ್ನುತ್ತಾನೆ ಬಫೆಟ್. ಹೂಡಿಕೆ ಮಾಡುವಾಗ ದೀರ್ಘಾವಧಿಯಲ್ಲಿ ಯೋಚಿಸಬೇಕೆನ್ನುತ್ತಾ ಬಫೆಟ್ ಹೇಳುತ್ತಾನೆ, "ನೀವು ಸ್ಟಾಕ್ ಮಾರ್ಕೆಟ್‌ನಲ್ಲಿ ನಿಮ್ಮ ಸ್ಟಾಕ್‌ಗಳನ್ನು ಹತ್ತು ವರ್ಷಕ್ಕಾದರೂ ಉಳಿಸಿಕೊಳ್ಳಲು ನಿರ್ಧರಿಸದಿದ್ದರೆ ನೀವು ಅವುಗಳ ಒಡೆತನವನ್ನು ಹತ್ತು ನಿಮಿಷಗಳ ಕಾಲ ಕೂಡ ಉಳಿಸಿಕೊಳ್ಳಲು ಆಗುವುದಿಲ್ಲ". ಷೇರು ಮಾರುಕಟ್ಟೆಯೆಂದರೆ ತುಂಬಾ ರಿಸ್ಕ್ ಎಂದು ಹೌಹಾರುವವರನ್ನು ಕುರಿತು "ನೀವು ಏನನ್ನು ಮಾಡುತ್ತಿದ್ದೀರಿ ಎಂಬ ಬಗೆಗೆ ಖಚಿತವಾದ ತಿಳುವಳಿಕೆ ಇಲ್ಲದಿದ್ದರೆ ನಿಜವಾಗಿಯೂ ಅದರಿಂದಲೇ ನೀವು ಅಪಾಯವನ್ನು ಎದುರಿಸುತ್ತೀರಿ", ಎನ್ನುತ್ತಾನೆ. ಅಧ್ಯಯನ ಮತ್ತು ಸಂಶೋಧನೆ ಮಾಡದೆ ಸುಖಾಸುಮ್ಮನೆ ಷೇರು ಖರೀದಿಸುವವರ ಕುರಿತು ಬಫೆಟ್ ಹೇಳುತ್ತಾನೆ, "ನೀವು ದಿನಸಿ ಸಾಮಾಗ್ರಿಗಳನ್ನು ಕೊಳ್ಳುವ ಹಾಗೆ ನಿಮ್ಮ ಸ್ಟಾಕುಗಳನ್ನು ಕೊಳ್ಳಿ. ನಿಮ್ಮ ಪರ್‌ಫ್ಯೂಮ್‌ಅನ್ನು ಕೊಳ್ಳುವಂತೆ ಅಲ್ಲ".

ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿ ಸಂಪತ್ತು ಸೃಷ್ಟಿಸುವವರನ್ನು ಕುರಿತು ಬಫೆಟ್ ಹೇಳುತ್ತಾನೆ, "ವಾಲ್‌ಸ್ಟ್ರೀಟ್‌ನಲ್ಲಿ ಬೇಕಾದರೆ ನಿಮಗೆ ನಾನು ಶ್ರೀಮಂತರಾಗುವ ಗುಟ್ಟುಗಳನ್ನು ಹೇಳಿಕೊಡಬಲ್ಲೆ. ಬೇರೆಯವರು ಹಿಂಜರಿಯುವಾಗ ನೀವು ಮಹತ್ವಾಕಾಂಕ್ಷೆಯಿಂದ ಮುನ್ನುಗ್ಗಿ. ಬೇರೆಯವರು ಮಹತ್ವಾಕಾಂಕ್ಷೆಯಿಂದ ಮುನ್ನುಗ್ಗುತ್ತಾ ಇರುವಾಗ ನಿಮ್ಮ ನಡೆಯ ಬಗ್ಗೆ ಎಚ್ಚರದಿಂದ ಇರಿ".

ವಿಶ್ವದ ಅತ್ಯಂತ ಶ್ರೀಮಂತ ವ್ಯಕ್ತಿಯಾದರೂ ಹಣದ ಬಗೆಗೆ ಬಫೆಟ್‌ಗೆ ವ್ಯಾಮೋಹವಿಲ್ಲ. "ನನಗೆ ಹಣಬೇಕು ಅಂತ ಅಲ್ಲ. ಹಣವನ್ನು ಮಾಡುವುದು ಮತ್ತು ಹಣ ಬೇಳೆಯುವುದನ್ನು ನೋಡುವುದೇ ಒಂದು ಆನಂದ", ಎಂದು ಹೇಳಿದ್ದಾನೆ. "ಮೂರ್ಖರು ಮತ್ತು ದುರಾಸೆಯುಳ್ಳವರು ಸಾಮಾನ್ಯವಾಗಿ ಒಟ್ಟಿಗೆ ಕೈ ಕೈ ಹಿಡಿದು ನಡೆಯುತ್ತಾರೆ. ಕುಶಾಗ್ರಮತಿಗಳಿಗೆ ಇದೇ ಒಳ್ಳೆಯ ಅವಕಾಶ" ಎಂದು ಹೇಳಿದ್ದಾನೆ.

ಅಲ್ಪಾವಧಿಯಲ್ಲಿ ಹಠಾತ್ ಶ್ರೀಮಂತರಾಗಬೇಕೆಂಬ ದುರಾಸೆಗೆ ಬಫೆಟ್ ಕಡಿವಾಣ ಹಾಕುತ್ತಾನೆ, "ನೀವು ಒಂಭತ್ತು ಜನ ಗರ್ಭಿಣಿ ಮಹಿಳೆಯರನ್ನು ಹೊಂದಿದ್ದಾಗಲೂ ಒಂದೇ ತಿಂಗಳಿಗೆ ಯಾವ ಮಗುವನ್ನು ಪಡೆಯಲು ಸಾಧ್ಯವಿಲ್ಲ." ಎಂದು ಹೇಳಿದ್ದಾನೆ. ಮಾಡುವ ವೃತ್ತಿ ಮುಖ್ಯವೇ ಹೊರತು ಅದರಿಂದ ಬರುವ ಹಣವಲ್ಲ ಎಂಬುದನ್ನು ಈ ರೀತಿ ಹೇಳುತ್ತಾನೆ, "ನಾನು ಫಲಿತಗಳಿಗಿಂತ ಪ್ರಕ್ರಿಯೆಯನ್ನು ಆನಂದಿಸುತ್ತೇನೆ", ಬಫೆಟ್‌ಗೆ ತನ್ನ ಮಿತಿಯೂ ಗೊತ್ತಿದೆ. ಅದಕ್ಕೆ ಹೇಳುತ್ತಾನೆ "ನಾನು ಚೆನ್ನಾಗಿ ತಿಳಿದಿರುವ ಸಂಗತಿಯ ಬಗ್ಗೆ ಮಾತ್ರ ಕೆಲಸ ಮಾಡಲು ಇಚ್ಛಿಸುತ್ತೇನೆ".

ಹಣ ಮತ್ತು ಸಂಪತ್ತಿನ ಮಿತಿಯನ್ನು ಬಫೆಟ್ ಈ ರೀತಿ ಹೇಳುತಾನೆ "ಹಣವು ನಿಮ್ಮನ್ನು ಕೆಲವೊಮ್ಮೆ ಒಂದು ಮಟ್ಟಿಗೆ ಕೆಲವು ಸುಂದರವಾದ ಸೌಲಭ್ಯ ಮತ್ತು ಪರಿಸರಗಳಲ್ಲಿ ಇರುವಂತೆ ಮಾಡಬಲ್ಲದು; ಆದರೆ ನೀವು ಎಷ್ಟು ಆರೋಗ್ಯವಾಗಿದ್ದೀರಿ ಅಥವಾ ಎಷ್ಟು ಮಂದಿ ನಿಮ್ಮನ್ನು ಪ್ರೀತಿಸುತ್ತಾರೆ? ಎಂಬುದನ್ನು ಅದು ರೂಪಿಸಲಾರದು". ಸಿರಿವಂತಿಕೆ ಮತ್ತು ಸಂಪತ್ತಿನ ಬಗೆಗೆ ಬಫೆಟ್ ಹೇಳುತ್ತಾನೆ, "ಶ್ರೀಮಂತರು ಸದಾ ಹೆಚ್ಚು ಹಣ ಸಂಪಾದಿಸುವ ಮತ್ತು ಅದರಿಂದಲೇ ಹೆಚ್ಚು ತೃಪ್ತಿಪಡೆಯುವ

ಮನಸ್ಸುಳ್ಳವರೇ ಆಗಿರುತ್ತಾರೆ. ಆದರೆ ನನ್ನ ಪ್ರಕಾರ ಶ್ರೀಮಂತಿಕೆ ಎಂದರೆ ಜ್ಞಾನವನ್ನು ಪಡೆದಿರುವುದು, ಯಶಸ್ವಿ ಮನುಷ್ಯ ಸಂಬಂಧಗಳನ್ನ ಹೊಂದಿರುವುದು, ಹಾಸ್ಯಪ್ರಜ್ಞೆಯನ್ನು ಮತ್ತು ಸದಾಚಾರ ಸನ್ನಡತೆಗಳ ಅಡಿಪಾಯವನ್ನು ಹೊಂದಿರುವುದು".

ಹಣಕಾಸಿನ ಹೂಡಿಕೆಯಲ್ಲಿ ಗಟ್ಟಿ ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಅಳ್ಳೆದೆಯವರಿಗೆ ಇಂಥ ಶಕ್ತಿ ಇರುವುದಿಲ್ಲ. ಇದಕ್ಕೆ ಬಫೆಟ್ ಹೇಳುತ್ತಾನೆ "ನಿಮಗೆ ನಿರ್ಧಾರಕವಾಗಿ ಬದುಕಲು ತೊಡಗಿದಾಗ ಮಾತ್ರ ನಿಮಗೆ ಕೆಲವೇ ಕೆಲವು ದೊಡ್ಡ ಆಲೋಚನೆಗಳು ಹೊಳೆಯಬಲ್ಲವು" ಮುಂದುವರಿದು ಹೇಳುತ್ತಾನೆ "ದೊಡ್ಡ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಖಚಿತವಾಗಿ ಮತ್ತು ಕಠಿಣವಾಗಿರಿ".

ಹಣ ಎಲ್ಲರಿಗೂ ಮುಖ್ಯ, ನಿಜ. ಆದರೆ ಬಫೆಟ್‌ಗೆ ಹಣಕ್ಕಿಂತ ಒಳ್ಳೆಯ ಹೆಸರು, ಒಳ್ಳೆಯ ಬದುಕು ಮುಖ್ಯ. ನೈತಿಕತೆಗೆ ಮೊದಲ ಆದ್ಯತೆ. ಈ ಕುರಿತು ಬಫೆಟ್ "ನೀವು ಒಳ್ಳೆಯ ಹೆಸರನ್ನು ಮಾಡಬೇಕಿದ್ದರೆ ಕನಿಷ್ಠ ಇಪ್ಪತ್ತು ವರ್ಷಗಳು ಬೇಕಾಗುತ್ತವೆ. ಅದನ್ನು ನಾಶಮಾಡಿಕೊಳ್ಳಲು ಐದೇ ನಿಮಿಷ ಸಾಕು. ಈ ನೆಲೆಯಲ್ಲಿ ನೀವು ಯೋಚಿಸಿದಲ್ಲಿ ಕೆಲಸವನ್ನು ಎಲ್ಲರಿಗಿಂತ ಭಿನ್ನವಾಗಿ ಮಾಡಲು ತೊಡಗುತ್ತೀರಿ" ಎನ್ನುತ್ತಾನೆ. ಎಷ್ಟು ಚೆಂದದ ಮಾತು. ಈ ನೀತಿಯನ್ನು ನಾವು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡರೆ ನಾವಿಡುವ ಒಂದೊಂದು ಹೆಜ್ಜೆಯೂ ಎಷ್ಟು ಭಿನ್ನವಾಗಿರುತ್ತದೆ.

ಬಫೆಟ್‌ನ ಬದುಕನ್ನು ಅಧ್ಯಯನ ಮಾಡಿದರೆ ಹಣ ಮತ್ತು ಸಂಪತ್ತಿನ ಹೊಸ ಜಗತ್ತೊಂದು ತೆರೆದುಕೊಳ್ಳುತ್ತದೆ. ಅಲ್ಲಿ ಕೇವಲ ಸಿರಿವಂತಿಕೆಯಿಲ್ಲ; ಸರಳತೆಯಿದೆ. ಅಲ್ಲಿ ಆಡಂಬರವಿಲ್ಲ; ಸಹಜತೆಯಿದೆ. ಅಲ್ಲಿ ಹಣವಿಲ್ಲ; ಸಂಪತ್ತಿದೆ. ಅಲ್ಲಿ ಅಹಂಕಾರವಿಲ್ಲ; ವಿನಯವಂತಿಕೆಯಿದೆ. ಅಲ್ಲಿ ಅನೈತಿಕತೆಯಿಲ್ಲ; ನೈತಿಕತೆಯಿದೆ. ಅಲ್ಲಿ ಅಜ್ಞಾನವಿಲ್ಲ; ಜ್ಞಾನದ ಬೆಳಕಿದೆ.

ಆಕರ: ಷೇರುಪೇಟೆ ಎಂಬ ವಿಸ್ಮಯ ಲೋಕ, ಲೇಖಕರು ಕೆ.ಕೆ. ಪೂರ್ಣೇಶ್, ಅಂಕಿತ ಪ್ರಕಾಶನ, ೨೦೦೮,
ಪುಟ ಸಂ: ೧೫೨–೧೫೬

**ಪೂರಕ ಪಠ್ಯ**

**ನಮ್ಮ ಬದುಕಿನ ಧ್ಯೇಯ ಮತ್ತು ಧ್ಯೇಯ ವಾಕ್ಯವೇನು?**

ಹೆನ್ರಿಫೋರ್ಡ್ ಅವರು ಇಪ್ಪತ್ತನೆಯ ಶತಮಾನದ ಅಮೇರಿಕದ ಕಾರು ಉದ್ಯಮದ ಪಿತಾಮಹ. ವಿನೂತನ ವಿಧಾನಗಳಿಂದ ಉತ್ಪಾದನೆ, ಕೆಲಸಗಾರರ ವೇತನವನ್ನು ಇಮ್ಮಡಿಗೊಳಿಸಿದ್ದರಿಂದ, ಕಾರುಗಳನ್ನು ಬೃಹತ್ ಸಂಖ್ಯೆಯಲ್ಲಿ ಉತ್ಪಾದಿಸಿ ಜನಸಾಮಾನ್ಯರಿಗೂ ಎಟುಕುವ ಬೆಲೆಯಲ್ಲಿ ಸಿಗುವಂತೆ ಮಾಡಿದರು. ವಿಶ್ವದ ಅತಿ ಶ್ರೀಮಂತರಲ್ಲೊಬ್ಬರಾದರು.

ಅವರೊಮ್ಮೆ ಒಬ್ಬ ಎಂಜಿನಿಯರ್ ಅವನ ಜೀವನದ ಧ್ಯೇಯವೇನೆಂದು ಕೇಳಿದರು. ಆತ ತುಂಬಾ ಹಣ ಸಂಪಾದಿಸಬೇಕೆಂಬುದೇ ತನ್ನ ಏಕೈಕ ಧ್ಯೇಯವೆಂದು ಹೇಳಿದ. ಫೋರ್ಡ್ ನಸುನಕ್ಕರು. ಕೆಲವು ದಿನಗಳ ನಂತರ ಆ ಯುಕನನ್ನು ಕರೆಸಿ ಆತನಿಗೊಂದು ಲೋಹದ ಫ್ರೇಮ್ ಇರುವ ಕನ್ನಡಕವನ್ನು ಕೊಟ್ಟು ಹಾಕಿಕೊಳ್ಳಲು ಹೇಳಿದರು. ವಿಚಿತ್ರವೆಂದರೆ ಕನ್ನಡಕದಲ್ಲಿ ಗಾಜಿನ ಬದಲು ಅಗಲವಾದ ನಾಣ್ಯಗಳು ಜೋಡಿಸಲ್ಪಟ್ಟಿದ್ದವು. ಯುವಕ ಕನ್ನಡಕ ಹಾಕಿಕೊಂಡ, ಫೋರ್ಡ್‌ರವರು ಈಗೇನು ಕಾಣುತ್ತಿದೆಯೆಂದು ಕೇಳಿದರು. ಆ ಯುವಕ 'ನಾಣ್ಯ ದೃಷ್ಟಿಯನ್ನು ಮುಚ್ಚಿಬಿಟ್ಟಿದೆ, ನನಗೇನೂ ಕಾಣಿಸುತ್ತಿಲ್ಲ' ಎಂದ. ಆಗ ಫೋರ್ಡ್ ಅವರು 'ಬದುಕಿನಲ್ಲೂ ಅಷ್ಟೇ ಹಣವೇ ಮುಖ್ಯ ಧ್ಯೇಯವೆಂದುಕೊಂಡರೆ ಮತ್ತೇನೂ ಕಾಣುವುದಿಲ್ಲ' ಎಂದು ಹೇಳಿದರು. ಸ್ವಲ್ಪ ಕಕ್ಕಾಬಿಕ್ಕಿಯಾದ ಆ ಯುವಕ 'ಇಷ್ಟು ದೊಡ್ಡ ಕಾರ್ಖಾನೆಯ ಮಾಲೀಕರಾದ ನಿಮ್ಮ ಧ್ಯೇಯವೂ ಹಣಗಳಿಕೆಯೇ ಅಲ್ಲವೇ?' ಎಂದು ಪ್ರಶ್ನಿಸಿದ. ಅವರು ಖಂಡಿತವಾಗಿಯೂ ಅಲ್ಲ! ಸಾಮಾನ್ಯರಿಗೂ ಎಟುಕುವ ಬೆಲೆಯ ಕಾರು! ಕಾರ ಮುಖ್ಯ ಉತ್ಪಾದನೆ. ಹಣ ಉಪಉತ್ಪಾದನೆ! ನೀನೊಬ್ಬ ಎಂಜಿನಿಯರ್. ಉತ್ತಮ ಎಂಜಿನಿಯರಿಂಗ್ ನಿನ್ನ ಮುಖ್ಯ ಧ್ಯೇಯವಾಗಬೇಕು. ಹಣ ಬಂದೇ ಬರುತ್ತದೆ' ಎಂದ ಹೇಳಿದರು. ಅಂದು ಹೆನ್ರಿಫೋರ್ಡ್ ಕಲಿಸಿದ ಬದುಕಿನ ಅಮೂಲ್ಯವಾದ ಪಾಠ ಇಂದಿಗೂ ಪ್ರಸ್ತುತ. ಕೇವಲ ಹಣ ಗಳಿಕೆಯೇ ನಮ್ಮ ಜೀವನದ ಪ್ರಮುಖ ಧ್ಯೇಯವಾದರೆ ನಮಗೂ ಬೇರೇನೂ ಕಾಣುವುದಿಲ್ಲ.

ಸಾಮಾನ್ಯವಾಗಿ ಎಲ್ಲ ಉದ್ಯಮಗಳು ತಾವು ನಂಬುವ ತತ್ವವನ್ನು ಘೋಷಿಸುವ ಒಂದು ಧ್ಯೇಯವಾಕ್ಯವನ್ನು ಹೊಂದಿರುತ್ತದೆ. ಕೆಲವು ಉದಾಹರಣೆಗಳು: ಜೀವ ವಿಮಾ ನಿಗಮದವರ 'ಯೋಗಕ್ಷೇಮಂ ವಹಾಮ್ಯಹಂ' ಎಂಬ ಧ್ಯೇಯವಾಕ್ಯ ವಿಮೆ ಮಾಡಿದವರ ಯೋಗ ಕ್ಷೇಮಗಳನ್ನು ನಾವು ವಹಿಸಿಕೊಳ್ಳುತ್ತೇವೆ ಎಂಬ ಭರವಸೆ ನೀಡುತ್ತದೆ. ಬ್ಯಾಂಕುಗಳವರಿಗೆ ಹಣವೇ

ವ್ಯವಹಾರದ ಮೂಲ ವಸ್ತು. ಆದರೆ ಕೆನರಾ ಬ್ಯಾಂಕಿನ ಧ್ಯೇಯ ವಾಕ್ಯ 'ಬೆಳವಣಿಗೆಗಾಗಿ ಸೇವೆ, ಸೇವೆಗಾಗಿ ಬೆಳವಣಿಗೆ'. ಕಾರ್ಪೋರೇಷನ್ ಬ್ಯಾಂಕಿನದ್ದು 'ಸರ್ವೇ ಜನಾಃ ಸುಖಿನೋ ಭವಂತು'. ಬೆಂಗಳೂರು ವಿಶ್ವವಿದ್ಯಾಲಯದವರದ್ದು 'ನಹಿ ಜ್ಞಾನೇನ ಸದೃಶಂ'.(ಭಗವದ್ಗೀತೆಯಿಂದ ತೆಗೆದುಕೊಂಡ ವಾಕ್ಯಗಳು). ಕರ್ನಾಟಕ ವಿಶ್ವವಿದ್ಯಾಲಯದವರದ್ದು 'ಅರಿವೇ ಗುರು'. ಕನ್ನಡ ವಿಶ್ವವಿದ್ಯಾನಿಯದವರದ್ದು 'ಮಾತೆಂಬುದು ಜ್ಯೋತಿರ್ಲಿಂಗ'. ಇವೆಲ್ಲ ಜ್ಞಾನಪ್ರಸಾರವೇ ಅವುಗಳ ಮುಖ್ಯ ಧ್ಯೇಯ ಎಂಬುದನ್ನು ತೋರಿಸುತ್ತದೆ. ಮೈಸೂರಿನ ವಿಕ್ರಮ್ ಆಸ್ಪತ್ರೆಯವರದ್ದು 'ನಮ್ಮ ವೈದ್ಯರು ನಿಮ್ಮ ಸ್ನೇಹಿತರು'. ಬ್ರಿಟಾನಿಯಾ ಬಿಸ್ಕೆಟ್‌ನವರು 'ಆರೋಗ್ಯಕರವಾಗಿ ತಿನ್ನಿ, ಚೆನ್ನಾಗಿ ಚಿಂತಿಸಿ' ಎನ್ನುತ್ತಾರೆ. ಡಿಸ್ನಿಲ್ಯಾಂಡಿನ ಘೋಷಣೆ 'ಭೂಮಿಯ ಮೇಲಿನ ಅತ್ಯಂತ ಸಂತೋಷಕರ ಸ್ಥಳ'. ಹಚ್ ಸೆಲ್‌ಫೋನ್‌ನವರು 'ನೀವೆಲ್ಲೇ ಹೋಗಿ ನಮ್ಮ ನೆಟ್‌ವರ್ಕ್ ನಿಮ್ಮನ್ನು ಹಿಂಬಾಲಿಸುತ್ತದೆ' ಎನ್ನುತ್ತಾರೆ. ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ಘೋಷಣೆ 'ಒಂದು ರಾಜ್ಯ, ಹಲವು ಪ್ರಪಂಚಗಳು'. ನಮ್ಮೆಲ್ಲರ ನೆಚ್ಚಿನ ದಿನಪತ್ರಿಕೆ ವಿಜಯ ಕರ್ನಾಟಕದ ಮಾತು 'ಸಮಸ್ತ ಕನ್ನಡಿಗರ ಹೆಮ್ಮೆ'. ನಾವೂ ನಮ್ಮ ಬದುಕಿನ ಮುಖ್ಯ ಧ್ಯೇಯ ಏನೆಂದು ತೀರ್ಮಾನಿಸಿದ್ದರೆ ನಮ್ಮ ಧ್ಯೇಯ ವಾಕ್ಯವನ್ನು ಬರೆಯಬಹುದು.

ಆಕರ: ಕ್ಷಣಹೊತ್ತು ಆಣಿಮುತ್ತು, ಲೇಖಕರು ಎಸ್. ಷಡಕ್ಷರಿ, ರಮಣಶ್ರೀ ಪ್ರಕಾಶನ, ೨೦೦೮,

**ಲೇಖಕರ ಪರಿಚಯ – ೧**

ಶ್ರೀ ಕೆ.ಕೆ. ಪೂರ್ಣೇಶ್‌ರವರು ೧೯೯೧ ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದು ೬ ವರ್ಷಗಳ ಕಾಲ ಉಪನ್ಯಾಸಕರಾಗಿ ಮಾನಸ ಗಂಗೋತ್ರಿ ಮತ್ತು ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ನಂತರ ಕೆ.ಎ.ಎಸ್. ಪರೀಕ್ಷೆ ಪಾಸು ಮಾಡಿಕೊಂಡು ೧೯೯೭ ರಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿಯಾಗಿ ಆಯ್ಕೆಯಾದರು. ಪ್ರಸ್ತುತ ಸಹಾಯಕ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ವಿದ್ಯಾರ್ಥಿದೆಸೆಯಿಂದಲೇ ಅರ್ಥಶಾಸ್ತ್ರದ ಕುರಿತು ವಿಶೇಷ ಪ್ರೀತಿ ಬೆಳೆಸಿಕೊಂಡ ಲೇಖಕರು ಷೇರುಪೇಟೆ ಮತ್ತು ಸಂಪತ್ತಿನ ಸೃಷ್ಟಿಯ ಕುರಿತು ವಿಶೇಷ ಅಧ್ಯಯನ ನಡೆಸುತ್ತಿದ್ದಾರೆ. ಈಗಾಗಲೇ ಕೆಲವು ಪುಸ್ತಕಗಳನ್ನು ಬರೆದಿರುವ ಲೇಖಕರು ನಾಡಿನ ದಿನಪತ್ರಿಕೆಗಳಿಗೆ ಲೇಖನಗಳನ್ನೂ ಬರೆಯುತ್ತಿದ್ದು ಜನರಲ್ಲಿ ಆರ್ಥಿಕ ವಿಷಯಗಳ ಕುರಿತು ತಿಳಿವಳಿಕೆ ಮೂಡಿಸುವ ಪ್ರಯತ್ನ ಮಾಡುತ್ತಿದ್ದಾರೆ.

ಇವರ The Karnataka Value Added Tax Act and Rules ಶಂಕರಗೌಡ ಪಾಟೀಲರೊಂದಿಗೆ ಬರೆದ ಮೊದಲ ಪುಸ್ತಕ ಮಾರುಕಟ್ಟೆಯಲ್ಲಿ ಉತ್ತಮ ಪ್ರತಿಕ್ರಿಯೆ ಪಡೆದಿದೆ. ಅಲ್ಲದೆ ಇವರ VAT: A SIMPLE TAX ಎಂಬ ಪುಸ್ತಕ ಕೂಡ ಒಂದು ವಿಭಿನ್ನ ಪ್ರಯತ್ನವಾಗಿದ್ದು ಸಾಮಾನ್ಯ ಓದುಗರ ಮೆಚ್ಚುಗೆಗೆ ಪಾತ್ರವಾಗಿದೆ. ಇವರ 'ಷೇರುಪೇಟೆ ಎಂಬ ವಿಸ್ಮಯ ಲೋಕ" ಕೃತಿ ಕನ್ನಡದಲ್ಲಿ ಈ ಬಗೆಯ ಮೊದಲ ಕೃತಿಯಾಗಿದೆ.

**ಲೇಖಕರ ಪರಿಚಯ – ೨**

ಎಸ್. ಷಡಕ್ಷರಿ: ಇವರು ವೃತ್ತಿಯಲ್ಲಿ ವಾಣಿಜ್ಯೋದ್ಯಮಿಗಳು ಪ್ರವೃತ್ತಿಯಲ್ಲಿ ಅಪರೂಪದ ಚಿಂತಕರು. ಉತ್ತಮ ವಾಗ್ಮಿಗಳು ಹಾಗೂ ಲೇಖಕರು. ವಿಜಯಕರ್ನಾಟಕ ಪತ್ರಿಕೆಗೆ ನಿತ್ಯವೂ 'ಕ್ಷಣಹೊತ್ತು ಆಣಿಮುತ್ತು' ಎಂಬ ಅಂಕಣ ಬರೆದಿದ್ದಾರೆ. ಇವರ ಕ್ಷಣಹೊತ್ತು ಆಣಿಮುತ್ತು ಏಳು ಸಂಪುಟಗಳಲ್ಲಿ ಪ್ರಕಟವಾಗಿವೆ. ಬಹುಶ್ರುತ ಪಾಂಡಿತ್ಯ ಮತ್ತು ಅದನ್ನು ಬದುಕಿಗೆ ಮೇಳೈಸುವ ಜೀವನ ಪ್ರೀತಿ ಇವರ ಬರಹಗಳಲ್ಲಿ ಕಂಡುಬರುತ್ತದೆ.

**ಪದಕೋಶ:**

ಉದಾತ್ತ = ಶ್ರೇಷ್ಠ, ಅಳ್ಳೆದೆ = ನಡುಗುವ ಎದೆ, ಧೈರ್ಯವಿಲ್ಲದ

**ಅಭ್ಯಾಸ ಪ್ರಶ್ನೆಗಳು:**

೧. ವಾರೆನ್ ಬಫೆಟ್ ಯಾವ ದೇಶದವನು?

೨. ವಿಶ್ವದ ಶ್ರೇಷ್ಠ ಹೂಡಿಕೆದಾರ ಯಾರು?

೩. ವಿಶ್ವದ ಶ್ರೀಮಂತರ ಪಟ್ಟಿಯಲ್ಲಿ ವಾರೆನ್ ಬಫೆಟ್ ಯಾವ ಸ್ಥಾನದಲ್ಲಿದ್ದಾರೆ?

೪. ಹಣ ಮತ್ತು ಸಂಪತ್ತಿನ ಮಿತಿಯ ಬಗ್ಗೆ ವಾರೆನ್ ಬಫೆಟ್‌ನ ಅಭಿಪ್ರಾಯವನ್ನು ಚರ್ಚಿಸಿ.

೫. ವಾರೆನ್ ಬಫೆಟ್‌ನ ವ್ಯಕ್ತಿತ್ವವನ್ನು ಪರಿಚಯಿಸಿ.

೬. ವಾರೆನ್ ಬಫೆಟ್‌ನಿಂದ ನಾವು ಕಲಿಯಬಹುದಾದ ಪಾಠಗಳಾವುವು? ವಿವರಿಸಿ.

೭. "ವಾರೆನ್ ಬಫೆಟ್ ವಿಶ್ವದಾದ್ಯಂತ ಹೂಡಿಕೆದಾರರೆಲ್ಲರ ಆರಾಧ್ಯದೈವ" ನಿಮ್ಮ ಆಲೋಚನೆಯ ಹಿನ್ನೆಲೆಯಲ್ಲಿ ವಿವರಿಸಿ.

**ಚಟುವಟಿಕೆಗಳು:**

1. ಜಗತ್ತಿನ ಗಮನಸೆಳೆದಿರುವ ಷೇರುಪೇಟೆ ಉದ್ಯಮಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಚರ್ಚಿಸುವುದು.
2. ವಿವಿಧ ಸಂಸ್ಥೆಗಳ ಧ್ಯೇಯ ವಾಕ್ಯಗಳನ್ನು ಪಟ್ಟಿಮಾಡುವುದು.
3. 'ಸಂಸ್ಥೆಗಳು ಮತ್ತು ಧ್ಯೇಯ ವಾಕ್ಯ' – ಕುರಿತು ಗುಂಪು ಚರ್ಚೆ ಮಾಡುವುದು.
4. ಷೇರುಪೇಟೆ ಹೂಡಿಕೆಯ ಸಾಮಾನ್ಯ ಜ್ಞಾನ ಹೊಂದುವುದು.
5. https://kn.m.wikipedia.org



**ಅಧ್ಯಕ್ಷರು**

**ಕನ್ನಡ ಸ್ನಾತಕ ಅಧ್ಯಯನ ಮಂಡಳಿ**

**ಕನ್ನಡ ಅಧ್ಯಯನ ಕೇಂದ್ರ**

**ಬೆಂಗಳೂರು ವಿಶ್ವವಿದ್ಯಾಲಯ**

ಬೆಂಗಳೂರು ವಿಶ್ವವಿದ್ಯಾಲಯ

☎ 080-23157900, 22961557, 22961681
(M)094480 07630, 70222 29110
Email:nagabhushana.c@gmail.com

**ಡಾ.ಸಿ.ನಾಗಭೂಷಣ**
**ನಿರ್ದೇಶಕರು**
**ಕನ್ನಡ ಅಧ್ಯಯನ ಕೇಂದ್ರ**
**ಬೆಂಗಳೂರು ವಿಶ್ವವಿದ್ಯಾಲಯ**
**ಬೆಂಗಳೂರು-560056**

**Dr.C.Nagabhushana**
**Director**
**Centre For Kannada Studies**
**Bangalore University**
**Bangalore-560056**

ದಿನಾಂಕ: 17–12–2021

ಇವರಿಗೆ.

**ಎಲ್ಲಾ ಕನ್ನಡ ಅಧ್ಯಾಪಕರುಗಳು**

**ಬೆಂಗಳೂರು ವಿಶ್ವವಿದ್ಯಾಲಯ ವ್ಯಾಪ್ತಿಯ ಪದವಿಕಾಲೇಜುಗಳು**

**ಬೆಂಗಳೂರು ವಿಶ್ವವಿದ್ಯಾಲಯ**

**ಈ ಮೂಲಕ ಬೆಂಗಳೂರು ವಿಶ್ವವಿದ್ಯಾಲಯ ವ್ಯಾಪ್ತಿಯ ಪದವಿಕಾಲೇಜುಗಳ ಎಲ್ಲಾ ಕನ್ನಡ ಅಧ್ಯಾಪಕರುಗಳ ಗಮನಕ್ಕೆ ತರ ಬಯಸುವುದೇನೆಂದರೆ , ಈಗಾಗಲೇ ತಮಗೆ ತಿಳಿದಿರುವ ಹಾಗೆ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದ ಹಿನ್ನೆಲೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಸೂಚನೆಯ ಮೇರೆಗೆ ನೂತನ ಪದವಿ ಭಾಷಾ ಪಠ್ಯಗಳ ಸಿದ್ಧಪಡಿಸುವಿಕೆಗನುಗುಣವಾಗಿ, ಕನ್ನಡ ಭಾಷಾಪಠ್ಯಗಳು, ಐಚ್ಛಿಕ ಕನ್ನಡ ಪಠ್ಯ, ಮುಕ್ತ ಆಯ್ಕೆ ಕನ್ನಡ ಮತ್ತು ಕನ್ನಡ ಕಲಿಕೆ ಪಠ್ಯಗಳನ್ನು ಸಂಪಾದಕ ಮಂಡಳಿಯವರು ಈಗಾಗಲೇ ತಮಗೆ ವಹಿಸಿರುವ ಪಠ್ಯಗಳನ್ನು ಸಂಪಾದಿಸಿ ಪರಿಶೀಲಕರಿಂದ ಪರಿಶೀಲಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ (ಕೆಲವು ವಿಷಯಗಳ ಪಠ್ಯಗಳು ಮಾತ್ರ ಸಲ್ಲಿಸ ಬೇಕಾಗಿರುತ್ತದೆ). ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಪಠ್ಯಗಳನ್ನು ಪ್ರಸಾರಾಂಗದ ವತಿಯಿಂದ ಪ್ರಕಟಿಸಲು ಶೀಘ್ರವಾಗಿ ಕ್ರಮ ಕೈಗೊಳ್ಳ ಲಾಗುವುದು. ಪುಸ್ತಕಗಳ ಲೇ–ಔಟ್ ಕಾರ್ಯ ನಡೆಯುತ್ತಿದೆ. ಈಗಾಗಲೇ ಕಳುಹಿಸಿದ್ದ ಪದವಿ ಪಠ್ಯದ ಪ್ರತೀ ಘಟಕದ ಮೊದಲ ಪಠ್ಯಗಳ ಬೋಧನೆ ಪೂರ್ಣಗೊಂಡಿರುವುದಾಗಿ ತಿಳಿದು ಬಂದಿರುವುದರ ಹಿನ್ನೆಲೆಯಲ್ಲಿ ಅಲ್ಲಿಯವರೆಗೂ ಪದವಿ ತರಗತಿಗಳಲ್ಲಿ ಪಠ್ಯ ಬೋಧನೆಗೆ ಯಾವುದೇ ರೀತಿಯ ತೊಂದರೆ ಆಗದ ಹಿನ್ನೆಲೆಯಲ್ಲಿ ಕನ್ನಡ ಸ್ನಾತಕ ಅಧ್ಯಯನ ಮಂಡಳಿಯ ಅಧ್ಯಕ್ಷರು ಹಾಗೂ ಸದಸ್ಯರ ಒಮ್ಮತದಿಂದ ಪ್ರತೀ ಪದವಿಯ ಭಾಷಾ ಪಠ್ಯಗಳು ಐಚ್ಛಿಕ ಕನ್ನಡ ಪಠ್ಯ, ಮುಕ್ತ ಆಯ್ಕೆ ಕನ್ನಡ ಮತ್ತು ಕನ್ನಡ ಕಲಿಕೆ ಪಠ್ಯಗಳ ಪರಿವಿಡಿ ಹಾಗೂ ಪ್ರತಿ ಘಟಕದ ಎರಡನೇ ಅಧ್ಯಾಯದ ಪಠ್ಯಗಳನ್ನು ಪಿಡಿಎಫ್ ರೂಪದಲ್ಲಿ ತಮಗೆ ಕಳುಹಿಸಿ ಕೊಡಲಾಗುತ್ತಿದೆ. ಪದವಿ ಭಾಷಾ ಪಠ್ಯಗಳು ವಿಶ್ವವಿದ್ಯಾಲಯದ**

ಪ್ರಸಾರಾಂಗದಿಂದ ಪ್ರಕಟಗೊಂಡು ಮುಕ್ತವಾಗಿ ದೊರೆಯುವವರೆಗೂ ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ಪಿಡಿಎಫ್ ರೂಪದಲ್ಲಿ ತಮಗೆ ಕಳುಹಿಸಿರುವ ಪ್ರತಿ ಘಟಕದ ಎರಡನೇ ಅಧ್ಯಾಯದ ಪಠ್ಯಗಳನ್ನು ತರಗತಿಗಳಲ್ಲಿ ಬೋಧಿಸಲು ಬಳಸಿಕೊಳ್ಳಲು ಸೂಚಿಸಿದೆ. ತ್ವರಿತವಾಗಿ ಪಠ್ಯಗಳನ್ನು ಪ್ರಸಾರಾಂಗದಿಂದ ಪ್ರಕಟಿಸಲು ಸಂಪಾದಕ ಮಂಡಳಿಯವರು ಅಂತಿಮವಾಗಿ ಪರಿಶೀಲಿಸಿ ಕೊಟ್ಟ ನಂತರ ಕ್ರಮಕೈಗೊಳ್ಳಲಾಗುವುದು.

ಅಧ್ಯಕ್ಷರು

ಕನ್ನಡ ಸ್ನಾತಕ ಅಧ್ಯಯನ ಮಂಡಳಿ

ಕನ್ನಡ ಅಧ್ಯಯನ ಕೇಂದ್ರ

ಬೆಂಗಳೂರು ವಿಶ್ವವಿದ್ಯಾಲಯ

# ಬೆಂಗಳೂರು ವಿಶ್ವವಿದ್ಯಾಲಯ

## ಕನ್ನಡ ಭಾಷಾ ಪಠ್ಯ

## ಬಿ ಸಿ ಎ

# ಗಣಕ ಕನ್ನಡ – ೧


**ಪ್ರಧಾನ ಸಂಪಾದಕರು**

**ಡಾ. ಸಿ.ನಾಗಭೂಷಣ**

**ಸಂಪಾದಕರು**

**ಡಾ. ಪ್ರಕಾಶ್ ರಂಜೇರಿ**

**ಡಾ. ವತ್ಸಲಾ ಮೋಹನ್**

**ಪ್ರೊ. ಆಶಾ ಜಿ.**

**ಪ್ರೊ. ತಿಮ್ಮೆಗೌಡ ಬಿ.ಪಿ**

# ಪರಿವಿಡಿ

ಘಟಕ–೧ ಕನ್ನಡ ನಾಡು – ನುಡಿ ಚಿಂತನೆ

೧. ಅನುಭವಾಮೃತ – ಮಹಲಿಂಗರಂಗ
ಪೂರಕ ಪಠ್ಯ : ಜಾಗತೀಕರಣದ ಸಂದರ್ಭದಲ್ಲಿ ಕನ್ನಡದ ಪ್ರಾದೇಶಿಕ ಮತ್ತು ಸಾಮಾಜಿಕ ಪ್ರಭೇದಗಳು– ಡಾ. ಅಶೋಕ್ ಕುಮಾರ ರಂಜೇರೆ

2. ಒಂದೇ ಕರ್ನಾಟಕ – ದ.ರಾ.ಬೇಂದ್ರೆ
ಪೂರಕ ಪಠ್ಯ : ಕನ್ನಡ ಎದುರಿಸುತ್ತಿರುವ ಆತಂಕ ಒಂದೇ ಎರಡೇ..?– ಡಾ. ಪದ್ಮರಾಜ ದಂಡಾವತಿ

3. ಬಂಡವಾಳಗಾರ ಕೊಂಡುಮಾರುವ ಭಾಷಾ ಮಾಧ್ಯಮ– ಡಾ. ವಸು ಮಳಲಿ
ಪೂರಠ ಪಠ್ಯ : ಜಾಗತೀಕರಣದ ಸಂದರ್ಭದಲ್ಲಿ ಕನ್ನಡ ಪ್ರಬೇಧಗಳು –ಡಾ.ಅಶೋಕ ಕುಮಾರ ರಂಜೇರೆ

ಘಟಕ–೨ : ಆಕಾಶ

೧. ಎಷ್ಟೊಂದು ಮುಗಿಲುಗಳು – ಡಾ. ಎಚ್.ಎಸ್. ವೆಂಕಟೇಶ ಮೂರ್ತಿ
ಪೂರಕ ಪಠ್ಯ : ಮುಗಿಲುಗಳು– ಪ್ರೊ. ಎಂ.ವಿ.ಸೀತಾರಾಮಯ್ಯ

2. ಆಕಾಶಕ್ಕೆ ನೀಲಿ ಪರದೆ –ಬೋಳುವಾರು ಮಹಮದ್ ಕುಂಞ
ಪೂರಕ ಪಠ್ಯ : ಸೌರಮಂಡಲಗಳ ದಾಟೋಣ – ಎಚ್.ಎಸ್. ಮುಕ್ತಾಯಕ್ಕ

3. ಶೂನ್ಯತೆಯ ಬೆನ್ನು ಹತ್ತಿ–ಡಾ. ಪಾಲಹಳ್ಳಿ ಆರ್. ವಿಶ್ವನಾಥ್
ಪೂರಕ ಪಠ್ಯ : ಅತಿ ಸೂಕ್ಷ್ಮ ಜಗತ್ತು –ನಜೀಮ್ ಹಿಕ್ಮತ್(ಅನು. ಎಸ್. ದಿವಾಕರ)

ಘಟಕ–೩– ತಾರುಣ್ಯ

೧. ಒಂದು ಚಿತ್ರ – ಡಾ. ಅಮರೇಶ್ ನುಗಡೋಣಿ
ಪೂರಕ ಪಠ್ಯ : ಅತ್ತೆ ಸೊಸೆಯರು– ಇರಾವತಿ ಕರ್ವೆ(ಅನು. ಚಂದ್ರಕಾಂತ ಪೋಕಳೆ)

2. ಗಂಡಸರು – ಡಾ. ವೀಣಾ ಶಾಂತೇಶ್ವರ್
ಪೂರಕ ಪಠ್ಯ : ಏನಮ್ಮ ನೀಲು – ಚೆನ್ನವೀರ ಕಣವಿ

3. ಎಲ್ಲವಳೆಲ್ಲವಳೆಲ್ಲವಳು – (ಗೋಕುಲ ನಿಗರ್ಮನ)–ಪು.ತಿ.ನ
ಪೂರಕ ಪಠ್ಯ : ನಮ್ಮೂರ ಮಳ್ಳೀಮನೆ ಸೀತೆ – ಎಚ್.ಆರ್. ಸುಜಾತ

ಘಟಕ–೪ : ಸಂಕೀರ್ಣ

೧. ಭಾಷೆ–ತಂತ್ರಜ್ಞಾನ: ಕಡಿಮೆಯಾಗಬೇಕಾದ ಕಂದಕ – ಸುಧೀಂದ್ರ ಹಾಲ್ದೊಡ್ಡೇರಿ
ಪೂರಕ ಪಠ್ಯ : ಕನ್ನಡ ಗ್ರಂಥ ಸಂಪಾದನಾ ಶಾಸ್ತ್ರ ಮತ್ತು ತಂತ್ರಜ್ಞಾನ – ಬೇಳೂರು ಸುದರ್ಶನ

೨. ಫೇಸ್‌ಬುಕ್ , ಟ್ವಿಟರ್, ಬ್ಲಾಗುಗಳು : ಸಮಸ್ಯೆ ಪರಿಣಾಮ – ವಸುಧೇಂದ್ರ
ಪೂರಕ ಪಠ್ಯ : ಡಿಜಿಟಲ್ ದುಶ್ಚಟಕ್ಕೆ ಮದ್ದು ಎಲ್ಲಿದೆ – ನಾಗೇಶ್ ಹೆಗಡೆ

೩. ಕಂಪ್ಯೂಟರ್‌ನಲ್ಲಿ ಕನ್ನಡ ಬಳಕೆ – ಡಾ. ಎ. ಸತ್ಯನಾರಾಯಣ
ಪೂರಕ ಪಠ್ಯ : ಕನ್ನಡದಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರ ಬೆಳೆದ ಬಗೆ– ಜಿ.ಎಸ್. ನರಸಿಂಹಮೂರ್ತಿ

**ಅಧ್ಯಾಯ– ೧.೨**
**ಪಠ್ಯ**

## ಒಂದೇ ಕರ್ನಾಟಕ

ದ.ರಾ.ಬೇಂದ್ರೆ

**ಪ್ರವೇಶಿಕೆ**
ಕನ್ನಡದ ಅಭಿಮಾನ ಇಲ್ಲದವರ ಬಗ್ಗೆ ಒಂದು ಕಟುವಾದ ವಿಮರ್ಶೆಯನ್ನು ಈ ಕವಿತೆ ವ್ಯಕ್ತಪಡಿಸುತ್ತದೆ. ಕನ್ನಡದ ಅಭಿಮಾನ ಶೂನ್ಯತೆ, ಆತಂಕಕಾರಿಯಾದ ವಿಷಯ ಎಂಬ ಭಾವ ಇಲ್ಲಿದೆ. ಭಾಷಾಭಿಮಾನದ ಮಹತ್ವವನ್ನು ಸಾರುವ ಈ ಕವಿತೆ, ಭಾಷೆ ಮತ್ತು ಸಂಸ್ಕೃತಿ, ಭಾಷೆ ಮತ್ತು ಜ್ಞಾನಗಳ ನಡುವಿನ ಸಂಬಂಧಗಳ ಬಗ್ಗೆ ಯೋಚಿಸುವಂತೆ ನಮ್ಮನ್ನು ಪ್ರೇರೇಪಿಸುತ್ತದೆ. ನಾಡು–ನುಡಿಯೇ ನಿಜವಾದ ಆಸ್ತಿ ಎಂದು ಹೇಳುವ ಮೂಲಕ, ಆಸ್ತಿಯ ಕಲ್ಪನೆಯಲ್ಲಿರುವ ಚಿರ ಮತ್ತು ಚರದ ಕಲ್ಪನೆಯನ್ನು ವಿಸ್ತರಿಸುತ್ತದೆ. ದರ್ಶನಿಕ ಕವಿ ಬೇಂದ್ರೆ ಈ ಯುಗದ ಮಹಾಕವಿ, ಅವರ ಅಂದಿನ ಮಾತುಗಳು, ಇಂದಿನ ಜಾಗತಿಕ ಯುಗದಲ್ಲಿ ಸ್ಥಳೀಯ ಮತ್ತು ಜಾಗತಿಕತೆಯ ನಡುವಿನ ಸಂಬಂಧದಲ್ಲಿ ಹೊಸ ಅರ್ಥಗಳ ಆಯಾಮಗಳಲ್ಲಿ ಸ್ಫುರಿಸುವುದನ್ನು ನೋಡಬಹುದು. ಬೇಂದ್ರೆಯವರ ಏಕೈಕ ಕರ್ನಾಟಕದ ಕಲ್ಪನೆಯ ಮೂಲಕ ಮತ್ತು ಕನ್ನಡಿಗರು ಎಂದರೆ ಯಾರು ಎಂಬ ಕಲ್ಪನೆಯ ಮೂಲಕ ನಾವು ಯಾವ ಮೌಲ್ಯ, ಆಚಾರಗಳನ್ನು ರೂಢಿಸಿಕೊಳ್ಳಬಹುದು ಎಂದು ಚಿಂತಿಸುವುದು ಈ ಪಠ್ಯಭಾಗದ ಕಲಿಕಾ ಫಲಿತ ಆಗಿದೆ.

ಒಂದೇ ಒಂದೇ ಒಂದೇ ಕರ್ನಾಟಕ ಒಂದೇ ॥ ಪಲ್ಲವಿ ॥

೧
ಹಿಂದೆ ಮುಂದೇ ಎಂದೇ ಕರ್ನಾಟಕ ಒಂದೇ
ಜಗದೇಳಿಗೆಯಾಗುವುದಿದೆ ಕರ್ನಾಟಕದಿಂದೆ
ಇಲ್ಲಿಯ ಜನ–ಮನ–ಭಾಷೆಯು ಕನ್ನಡವದು ಒಂದೇ
ಒಂದೇ ಜನವೂ ಒಂದೇ ಮನವೂ ಕನ್ನಡಿಗರು ಎಂದೇ
ಕುಲವೊಂದೇ ಸ್ಥಲವೊಂದೇ ನೀತಿಯ ನೆಲೆಯೊಂದೇ
ಹೀಗೆನ್ನದ ಹೆರವರು ಅವರಿದ್ದರು ಒಂದೇ
ಇರದಿದ್ದರು ಒಂದೇ!
ಕನ್ನಡವೆಂದೂ ಒಪ್ಪದು ಕರ್ನಾಟಕ ನಿಂದೇ
ಒಂದೇ ಒಂದೇ ಒಂದೇ ಕರ್ನಾಟಕ ಒಂದೇ

೨
ಕನ್ನಡ ಮಾತೇ ಮಾತೆಯು, ಕರ್ನಾಟಕ ಒಂದೇ
ಅದು ದೈವತ ಅದು ಜೀವಿತ ಒಪ್ಪಿಹೆವದುವೆಂದೇ
ನಮ್ಮದು ನಿಮ್ಮದು ಆವರದು ಈ ಆಸ್ತೀಪಾಸ್ತೀ
ನಾಡಿನ ತಾಯಿಗೆ ಸೇರಿದೆ, ಬೇರೆಯ ಮನೆ ನಾಸ್ತೀ
ಕನ್ನಡ ಕಾಯಕದಲ್ಲಿಲ್ಲವು ಕಮ್ಮೀಜಾಸ್ತೀ
ಇದನೊಪ್ಪದ ಹೆರವರು ಅವರಿದ್ದರು ಒಂದೇ
ಇರದಿದ್ದರು ಒಂದೇ!
ಕರ್ನಾಟಕ ಹಿತ–ವಿಹಿತವು ಕನ್ನಡ– ಕುಲದಿಂದೇ
ಒಂದೇ ಒಂದೇ ಒಂದೇ ಕರ್ನಾಟಕ ಒಂದೇ

ಕನ್ನಡವೂ ಭಾರತವೂ ಜಗವೆಲ್ಲವು ಒಂದೇ
ತುಂಬಿದೆ ಕನ್ನಡ ಕುಲವನ್ನೊಪ್ಪುವ ಕುಲದಿಂದೇ

ಕನ್ನಡ ದೀಕ್ಷೆಯ ಹೊಂದಿದ ಪ್ರತಿಯೊಬ್ಬನು ಆರ್ಯ
ಕನ್ನಡ ತೇಜವು ಸಾರಲಿ ಕನ್ನಡಿಗರ ಕಾರ್ಯ
ಕನ್ನಡ ನಡೆ ಇರದವರೇ ಶೂದ್ರರು ಅನಿವಾರ್ಯ
ಇಂತರಿಯದ ಹೆರವರು ಅವರಿದ್ದರು ಒಂದೇ
ಇರದಿದ್ದರು ಒಂದೇ!
ಉಗ್ಗಡಿಸಿರಿ ನಾಸ್ತಿಗೆ ಜಯ ಜಯ ಜಯ ಜಯವೆಂದೇ
ಒಂದೇ ಒಂದೇ ಒಂದೇ ಕರ್ನಾಟಕ ಒಂದೇ!

**ಆಕರ :** ಗಂಗಾವತರಣ–ದ.ರಾ.ಬೇಂದ್ರೆ, ಶ್ರೀಮಾತಾ ಪ್ರಕಾಶನ, ಹುಬ್ಬಳಿ, ೨೦೦೮.

**ಪೂರಕ ಪಠ್ಯ**

**ಕನ್ನಡ ಎದುರಿಸುತ್ತಿರುವ ಆತಂಕ ಒಂದೇ ಎರಡೇ...?**

ಡಾ. ಪದ್ಮರಾಜ ದಂಡಾವತಿ

'ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ಕಾಸರಗೋಡು' ಎಂಬ ಸಿನಿಮಾ ಈಚೆಗೆ ಬಂದಿತ್ತು. ಅದು ಕಾಸರಗೋಡಿನಲ್ಲಿ ಮಲೆಯಾಳ ಭಾಷೆಯಡಿ ಸಿಲುಕಿ ಕನ್ನಡ ಶಿಕ್ಷಣ ಹೇಗೆ ಸಂಕಷ್ಟಕ್ಕೆ ಈಡಾಯಿತು ಎಂಬ ವಸ್ತುವನ್ನು ಒಳಗೊಂಡಿದ್ದ ಸಿನಿಮಾ. ಅದರ ನಿರ್ದೇಶಕರು ಅನೇಕ ವರ್ಷಗಳ ಹಿಂದೆ ಅಲ್ಲಿನ ಕನ್ನಡ ಶಾಲೆಯಲ್ಲಿ ಕಲಿತವರು. ಅಲ್ಲಿ ಕಲಿತುದು ಅವರಿಗೆ ಒಂದು ಕಲ್ಲು ಸಕ್ಕರೆಯಂಥ ಸವಿ ನೆನಪು. ಅಲ್ಲಿನ ಶಿಕ್ಷಕರು, ಅಲ್ಲಿ ಜೊತೆಗೆ ಕಲಿತ ಗೆಳೆಯರು, ಗೆಳತಿಯರು, ಆಗಿನ ಕಲಿಕೆ, ವಿದ್ಯಾಭ್ಯಾಸದ ಕ್ರಮ... ಬಾಲ್ಯದ ನೆನಪುಗಳು ಎಂದರೆ ಹಾಗೆಯೇ. ಅದು ಒಂದು ಸರಪಣಿಯಂಥದು. ಒಂದರ ಜೊತೆಗೆ ಒಂದು ಕೊಂಡಿ ಹಾಕಿಕೊಂಡಿರುತ್ತದೆ.

ಗಡಿರಾಜ್ಯದಲ್ಲಿ ಇರುವ ಕನ್ನಡ ಶಾಲೆಗಳ ಹಣೆಬರಹ ಹೀಗೆಯೇ ಇರುತ್ತದೆ. ಆಯಾ ರಾಜ್ಯ ಸರ್ಕಾರದವರು ಇಂಥ, ತಮ್ಮ ರಾಜ್ಯದ್ದು ಅಲ್ಲದ ಭಾಷಾ ಶಾಲೆಗಳನ್ನು ಸಲಹಲು ಮುಂದಾಗುವುದಿಲ್ಲ. ಏನಾದರೂ ಅವುಗಳನ್ನು ತಮ್ಮ ರಾಜ್ಯಭಾಷಾ ಶಾಲೆಗಳಾಗಿ ಪರಿವರ್ತಿಸಲು ಪ್ರಯತ್ನಿಸುತ್ತಾರೆ. ಪ್ರಯತ್ನದ ಭಾಗವಾಗಿ ಒಂದು ರೀತಿಯ ನಿಧಾನ ವಿಷ ಉಣಿಸಲು ತೊಡಗುತ್ತಾರೆ.

ನಾನು ಬೆಳಗಾವಿಯಲ್ಲಿ ಒಂಬತ್ತು ವರ್ಷ ಕೆಲಸ ಮಾಡಿದ್ದೆ. ಅಲ್ಲಿ ಇದಕ್ಕೆ ತದ್ವಿರುದ್ಧವಾದ ಸನ್ನಿವೇಶ ಇತ್ತು. ಅಲ್ಲಿನ ಮಹಾನಗರಪಾಲಿಕೆಯಲ್ಲಿ ಮರಾಠಿ ಆಡಳಿತವೇ ಇದ್ದುದರಿಂದ ಅದು ಕನ್ನಡ ಶಾಲೆಗಳಿಗೆ ಯಾವ ಸವಲತ್ತುಗಳನ್ನೂ ಕೊಡುತ್ತಿರಲಿಲ್ಲ. ಅಲ್ಲಿನ ಸ್ಥಳೀಯ ಶಾಲೆಗಳು ಪಾಲಿಕೆಯ ಸುಪರ್ದಿಗೆ ಒಳ ಪಟ್ಟಿದ್ದುವು. ತೀರಾ ಈಚೆಗೆ ಅಂದರೆ ಹತ್ತಿಪ್ಪತ್ತು ವರ್ಷಗಳ ಹಿಂದೆ ಬೆಳಗಾವಿ ಹೊರವಲಯದ ಕಂಗ್ರಾಳಿಖುರ್ದ ಎಂಬ ಊರಿನ ಶಾಲೆಯಲ್ಲಿ ಕನ್ನಡ ಮಕ್ಕಳು ಬಯಲಿನಲ್ಲಿ ಮರದ ಕೆಳಗೂ, ಮರಾಠಿ ಮಕ್ಕಳು ಸುಸಜ್ಜಿತ ಕಟ್ಟಡದ ಒಳಗೂ ಕಲಿಯುತ್ತಿದ್ದರು. ಅದು ಕೂಡ ಒಂದು ರೀತಿ ನಿಧಾನ ವಿಷ ಉಣಿಸುವ ಕೆಲಸ. ವ್ಯತ್ಯಾಸವೆಂದರೆ ರಾಜ್ಯಭಾಷೆಯ ಶಾಲೆಗಳು ಪಕ್ಕದ ರಾಜ್ಯದ ಮರಾಠಿ ಭಾಷೆಯಡಿ ತೊತ್ತಳದುಳಿತಕ್ಕೆ ಒಳಗಾಗಿಯೂ ಅಲ್ಲಿನ ಕನ್ನಡ ಶಾಲೆಗಳು ಉಳಿದುದೇ ಒಂದು ದೊಡ್ಡ ಕಥೆ.

ಸರ್ಕಾರಿ ಶಾಲೆಗಳಲ್ಲಿ ಕೊಠಡಿಗಳು ಸುಸ್ಥಿತಿಯಲ್ಲಿ ಇರುವುದಿಲ್ಲ. ಕೊಠಡಿಗಳು ಸುಸ್ಥಿತಿಯಲ್ಲಿ ಇದ್ದರೆ ನೆಲ ಹಾಸು ಸರಿ ಇರುವುದಿಲ್ಲ. ನೆಲ ಹಾಸು ಸರಿ ಇದ್ದರೆ ಮಕ್ಕಳು ಕುಳಿತುಕೊಳ್ಳಲು ಅಲ್ಲಿ ಬೆಂಚುಗಳು ಇರುವುದಿಲ್ಲ. ಬೆಂಚುಗಳು ಇದ್ದರೆ, ಅಲ್ಲಿ ಪುಸ್ತಕಗಳು ಇರುವುದಿಲ್ಲ. ಪ್ರಸ್ತಕಗಳು ಇದ್ದರೆ ಅಲ್ಲಿ ಕಂಪ್ಯೂಟರ್‌ಗಳು ಇರುವುದಿಲ್ಲ. ಹೀಗೆಯೇ ಸರ್ಕಾರಿ ಶಾಲೆಗಳಲ್ಲಿ ಇರಲಿಲ್ಲ ಸರಮಾಲೆ ಮಾತ್ರ ಇರುತ್ತದೆ. ಖಾಸಗಿ ಆಂಗ್ಲ ಮಾಧ್ಯಮ ಶಾಲೆಗಳಲ್ಲಿಯಾದರೆ ಅಲ್ಲಿ ಕಲಿಸುವ ಶಿಕ್ಷಕರ ಗುಣಮಟ್ಟ ಹೇಗೆಯೇ ಇರಲಿ ಅದು ಆಕರ್ಷಕವಾಗಿ ಇರುತ್ತದೆ, ಥಳುಕು ಬಳುಕಿನದು ಎಂದು ಅನಿಸುತ್ತದೆ.

ಕಾಲಕ್ಕೆ ತಕ್ಕಂತೆ ಕನ್ನಡ ಶಾಲೆಗಳು ಸುಧಾರಣೆ ಆಗಬೇಕಿತ್ತು. ಅಲ್ಲಿ ಸೌಕರ್ಯಗಳು ಹೆಚ್ಚಬೇಕಿತ್ತು. ಅಲ್ಲಿ ಮಕ್ಕಳಿಗೆ ಬೆಂಚುಗಳು ಬರಬೇಕಿತ್ತು ಕಂಪ್ಯೂಟರ್‌ಗಳು ಬರಬೇಕಿತ್ತು, ಇಂಗ್ಲಿಷ್ ಅನ್ನು ಒಂದು ಭಾಷೆಯಾಗಿ ಕಲಿಸಲು ತಕ್ಕ ಸಿದ್ಧತೆಗಳು ಬಹಳ ಆರಂಭದ ಹಂತದಲ್ಲಿಯೇ ಆಗಬೇಕಿತ್ತು. ಅವರಿಗೆ ಮೂತ್ರ ಮಾಡಲು ಒಳ್ಳೆಯ ಜಾಗ ಇರಬೇಕಿತ್ತು. ಹೆಣ್ಣು ಹುಡುಗಿಯರಿಗೆ ಪ್ರತ್ಯೇಕ ಶೌಚಾಲಯ ಇರಬೇಕಿತ್ತು. ಅದು ಯಾವುದೂ ಆಗಲಿಲ್ಲ. ಅಲ್ಲಿನ ಸ್ಥಿತಿ ದಾರುಣ ಎನ್ನುವಂತೆ ಇತ್ತು. ಅವು ಇದ್ದಕ್ಕಿದ್ದಂತೆ ಬಿದ್ದು ಹೋಗದೇ ಇದ್ದರೆ ಸಾಕು ಎನ್ನುವಂತೆ ಆಯಿತು. ಯಾವುದೇ ಗತಿಯಿಲ್ಲದ ಬಡಬಗ್ಗರ, ನಿರ್ಗತಿಕರ ಮಕ್ಕಳು ಮಾತ್ರ ಅಂಥ ಶಾಲೆಗೆ ಬರುತ್ತಾರೆ ಎನ್ನುವಂತೆ ಆಯಿತು. ಕನ್ನಡ ಶಾಲೆಗಳು ಆಕರ್ಷಣೆ ಕಳೆದುಕೊಂಡವು. ಅದೇ ಕಾಲಕ್ಕೆ ಇತ್ತ ಕಲಿಕೆಯ ಮಟ್ಟ ಅಷ್ಟೇನೂ ಚೆನ್ನಾಗಿ ಇಲ್ಲದೆ ಇದ್ದರೂ ಆಡಂಬರದ ಆಂಗ್ಲ ಮಾಧ್ಯಮದ ಶಾಲೆಗಳು ತಲೆ ಎತ್ತಿದ್ದವು. ನಸುಕಿನಲ್ಲಿಯೇ ಬಂದು ನಿಂತು ಇಂಥ ಶಾಲೆಗಳ ಪ್ರವೇಶ ಪತ್ರ ತೆಗೆದುಕೊಳ್ಳಲು ಪಾಲಕರು ಕಾಯುತ್ತಾರೆ ಎಂದರೆ ಅದು ಎಂಥ ಪರಿಣಾಮ ಬೀರಿರಬೇಕು ಎಂದು ನಾವು ಊಹಿಸಬಹುದು. 'ಓ' ಎಂದರೆ 'ಠೋ' ಎನ್ನಲು ಬಾರದ ಎರಡು ವರ್ಷದ, ಮೂರು ವರ್ಷದ ಹಸುಳೆಗಳನ್ನು ಕರೆದುಕೊಂಡು ಹೋಗಿ ಶಾಲೆಗಳ ಆಡಳಿತ ವರ್ಗದ ಮುಂದೆ ಸಂದರ್ಶಕ್ಕೆ ಹಾಜರು ಮಾಡಿದ ಪಾಪಿಗಳು ನಾವೇ ಅಲ್ಲವೇ? ಇದು ಎಂಥ ಮೋಹ? ಎಂಥ ಹುಚ್ಚು?

ವೃತ್ತಿ ಶಿಕ್ಷಣದ ಪರಿಣಾಮ:

ಒಟ್ಟು ಈಗಿನ ಶಿಕ್ಷಣ ವ್ಯವಸ್ಥೆ ಅಸಮಾನ ಸಮಾಜವನ್ನು ನಿರ್ಮಿಸುತ್ತಿದೆ. ಯಾರಿಗೆ ಒಂದಿಷ್ಟು ಅನುಕೂಲ ಇದ್ದರೂ ಅವರು ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸುತ್ತಾರೆ. ಸರ್ಕಾರದ ಶಾಲೆಗಳಲ್ಲಿ ಪಾಠ ಮಾಡುವ ಶಿಕ್ಷಕರಾದರೂ ತಮ್ಮ ಮಕ್ಕಳನ್ನು ತಾವು ಪಾಠ ಮಾಡುವ ಶಾಲೆಗಳಿಗೇ ಕಳಿಸುತ್ತಾರಾ ಎಂಬ ಬಗೆಗೆ ನನಗೆ ಅನುಮಾನವಿದೆ. ಕನ್ನಡ ಮಾಧ್ಯಮದಲ್ಲಿ ಅಥವಾ ಸರ್ಕಾರಿ ಶಾಲೆಗಳಲ್ಲಿ ಓದುವುದರಿಂದ ನೌಕರಿ ಸಿಗುವುದಿಲ್ಲ ಎಂದು ಜನರಿಗೆ ಈಗ ಖಚಿತವಾಗಿ ಹೋಗಿದೆ. ಅವರ ಅನಿಸಿಕೆ ಸರಿಯಲ್ಲ ಎಂದು ಹೇಗೆ ತಿಳಿಸಿಕೊಡುವುದು? ಸರ್ಕಾರಿ ಶಿಕ್ಷಣ ವ್ಯವಸ್ಥೆ ಅಸಮಾನ ಸಮಾಜವನ್ನು ನಿರ್ಮಿಸಿದೆ. ಇದು ಸಮಾಜದಲ್ಲಿ ಒಂದು ವರ್ಗಭೇದವನ್ನೂ ಸೃಷ್ಟಿಸಿದೆ.

ಅದಕ್ಕೆ ಇನ್ನೊಂದು ಕಾರಣ ಎಂದರೆ ಉನ್ನತ ಶಿಕ್ಷಣದ ಪಠ್ಯಗಳು ಮಾತೃಭಾಷೆಯಲ್ಲಿ ಸಿದ್ಧವಾಗದೇ ಇದ್ದುದು; ಅದರಲ್ಲಿಯೂ ವಿಜ್ಞಾನ ಪಠ್ಯಗಳು ಸಿದ್ಧವಾಗದೇ ಇದ್ದುದು. ಪಿಯುಸಿ ಮುಗಿಯುತ್ತಿದ್ದಂತೆಯೇ ಮಕ್ಕಳು ವೃತ್ತಿ ಕೋರ್ಸ್‌ಗಳನ್ನು ಆಯ್ಕೆ ಮಾಡಬೇಕು. ಹೀಗಾಗಿ ಅವರು ಪಿಯುಸಿಗೆ ಸೇರುವಾಗಲೇ ಶಿಕ್ಷಣ ಮಾಧ್ಯಮವನ್ನು ನಿರ್ಧಾರ ಮಾಡಬೇಕಾಯಿತು. ಅವರಿಗೆ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯುವುದು ಅನಿವಾರ್ಯವಾಯಿತು. ಕನ್ನಡ ಮಾಧ್ಯಮದಲ್ಲಿಯೇ ಕಲಿತು ವೃತ್ತಿ ಶಿಕ್ಷಣಕ್ಕೆ ಪ್ರವೇಶ ಪಡೆದಾಗ ಮಕ್ಕಳು ಕಕ್ಕಾಬಿಕ್ಕಿಯಾಗುವ ಬದಲು ಆರಂಭದಿಂದಲೇ ಅವರನ್ನು ಇಂಗ್ಲೀಷ್ ಮಾಧ್ಯಮಕ್ಕೆ ಹಾಕಿದರಾಯಿತು ಎಂದು ಪಾಲಕರೂ ನಿರ್ಧರಿಸಿದರು. ಬಿ.ಎ. ಪದವಿ ಅನಾಕರ್ಷಕವಾಗಿ ಕಂಡುದು. ಬಿ.ಎ. ಓದಿದರೆ ಯಾವ ನೌಕರಿಯೂ ಸಿಗುವುದಿಲ್ಲ ಎಂಬ ಕಾರಣಕ್ಕಾಗಿ. ಆದರೆ ಬಿ.ಎ.ಗೆ ಹೋಗುವವರೇ ಇಲ್ಲ. ಅದೇ ರೀತಿ ಬಿ.ಎಸ್ಸಿ. ಓದುವ ಮಕ್ಕಳಿಗೆ ಮಾತೃಭಾಷೆಯಲ್ಲಿ ಪಠ್ಯಗಳು ಇದ್ದರೂ ಆ ಪದವಿ ಮಾಡಿದವರಿಗೂ ನೌಕರಿ ಅವಕಾಶಗಳು ಕಡಿಮೆ. ಹೀಗಾಗಿ ಈಗ ಮಕ್ಕಳು ಒಂದೋ ವೈದ್ಯಕೀಯಕ್ಕೆ ಹೋಗುತ್ತಾರೆ; ಇಲ್ಲವೇ ಎಂಜಿನಿಯರಿಂಗ್‌ಗೆ ಹೋಗುತ್ತಾರೆ. ಅಲ್ಲಿ ಸೀಟು ಸಿಗದೇ ಇದ್ದರೆ ಬಿ.ಕಾಂ. ತರಗತಿಗಳಿಗೆ ಹೋಗುತ್ತಾರೆ. ಎಲ್ಲಿಯೂ ಸೀಟು ಸಿಗದವರು ಬಿ.ಎ.ಗೆ, ಹೆಚ್ಚೆಂದರೆ ಬಿ.ಎಸ್ಸಿ.ಗೆ ಬರುತ್ತಾರೆ. ಹೀಗೆ ಒಟ್ಟು ಕಲಿಕೆಗೂ, ಉದ್ಯೋಗಕ್ಕೂ ಸಂಬಂಧ ಇರುವುದು ಶಿಕ್ಷಣ ಮಾಧ್ಯಮದ ಬಿಕ್ಕಟ್ಟಿಗೆ ಕಾರಣವಾಗಿರಬಹುದು. ಆಗಿರಬಹುದು ಅಲ್ಲ, ಆಗಿದೆ. ಕನ್ನಡವು ಅನ್ನದ ಭಾಷೆ ಅನಿಸಲಿಲ್ಲ. ಹಾಗೆಂದು ನಮಗೆಲ್ಲ ಅನಿಸಿ ಬಹಳ ವರ್ಷಗಳೇ ಆಯಿತು.

ಕನ್ನಡ ಚಳವಳಿಗಾರರು ಮತ್ತು ಕನ್ನಡ ಸಾಹಿತಿಗಳು ಕನ್ನಡವನ್ನು ಉಳಿಸುವ ಒಂದೇ ಬಗೆ ಎಂದರೆ ಕನ್ನಡ ಶಾಲೆಗಳನ್ನು ಉಳಿಸುವುದು ಹಾಗೂ ಸುಧಾರಿಸುವುದು ಎಂದು ತಿಳಿಯಲಿಲ್ಲ. ತಿಳಿದರೂ ಅದಕ್ಕಾಗಿ ಹೋರಾಟ ಮಾಡಲಿಲ್ಲ. ನಾನು ಕನ್ನಡ ಶಾಲೆಯಲ್ಲಿ ಓದಿದ್ದು ೬೦ರ ದಶಕದಲ್ಲಿ ಊರಿನಲ್ಲಿ ನಾನು ಕಲಿತ ಶಾಲೆ ಈಗಲೂ ಅದೇ ಸ್ಥಿತಿಯಲ್ಲಿ ಇದೆ. ಹಾಗಿರುವಾಗ ನನ್ನ ಮೊಮ್ಮಗ ಅಥವಾ ಮೊಮ್ಮಗಳು ಅದೇ ಶಾಲೆಗೆ ಹೋಗಲಿ ಎಂದು ನಾನು ಹೇಗೆ ಬಯಸಲಿ? ಅಥವಾ ನನಗೆ ಕನ್ನಡದ ಮೇಲೆ ಎಷ್ಟೇ ಪ್ರೀತಿ ಇದ್ದರೂ ಅದನ್ನು ನನ್ನ ಮಗನ ಮೇಲೆ ಹೇಗೆ ಹೇರಲಿ?

ಕನ್ನಡ ಲೇಖಕರ ದ್ವಂದ್ವ :

ಕನ್ನಡ ಲೇಖಕರು ತಮ್ಮ ಮಕ್ಕಳನ್ನು ಹೇಗೆ ಬೆಳೆಸುತ್ತಿದ್ದಾರೆ ಎಂಬುದಕ್ಕೆ ಇದಕ್ಕಿಂತ ಒಂದು ಒಳ್ಳೆಯ ಜೀವಂತ ನಿದರ್ಶನ ಬೇಕಿಲ್ಲ. ನಮ್ಮ ಮಕ್ಕಳೇ ನಾನು ಬರೆದುದನ್ನು ಓದದೇ ಇದ್ದರೆ ಬೇರೆ ಯಾರು ಓದುತ್ತಾರೆ? ಕನ್ನಡ ಪುಸ್ತಕಗಳನ್ನು ಓದುವುದಿಲ್ಲ ಎಂದು ನಾವು ಲೇಖಕರು ಗೊಣಗುವುದರಲ್ಲಿ ಏನರ್ಥವಿದೆ? ಎಲ್ಲ ಲೇಖಕರು ತಮ್ಮ ಮಕ್ಕಳನ್ನು ಸ್ನಾತಕೋತ್ತರ ಕನ್ನಡ ಪದವಿ ಓದಿಸಬೇಕು ಎಂಬುದು ನನ್ನ ಒತ್ತಾಯವಲ್ಲ, ಆದರೆ, ತಮ್ಮ ತಂದೆ ಅಥವಾ ತಾಯಿ ಬರೆದುದನ್ನು ಸುಲಭವಾಗಿ ಓದುವಷ್ಟು ಕನ್ನಡವನ್ನಾದರೂ ಅವರು ಕಲಿಯುವುದು ಬೇಡವೇ? ಕನ್ನಡದ ಲೇಖಕರ ಮಕ್ಕಳೇ ಕನ್ನಡ ಪುಸ್ತಕಗಳನ್ನು ಓದದೇ ಇದ್ದರೆ ಇತರರ ಮಕ್ಕಳು ಏಕೆ ಓದಬೇಕು? ಕನ್ನಡದ ಇನ್ನೊಬ್ಬ ಹಿರಿಯ ಲೇಖಕರು ತಮ್ಮ ಕೃತಿಗಳನ್ನು ತಮ್ಮ ಮೊಮ್ಮಕ್ಕಳೂ ಓದುವುದಿಲ್ಲವೆಂದು ಯಾವಾಗಲೂ ದುಃಖಿಸುತ್ತಾರೆ. ಅದು ಯಾರ ತಪ್ಪು? ಖಂಡಿತ ಮೊಮ್ಮಕ್ಕಳದು ಅಲ್ಲ. ಹಿರಿಯ ಕವಿಗಳು ತಮ್ಮ ಮಕ್ಕಳಿಗೆ ಅವರ ಮಕ್ಕಳನ್ನು ಕನ್ನಡ ಮಾಧ್ಯಮ ಶಾಲೆಗಳಿಗೆ ಕಳಿಸಿಕೊಡಿ ಎಂದು ಹೇಳುವಂಥ ಅಧಿಕಾರವನ್ನು ಉಳಿಸಿಕೊಂಡಿಲ್ಲ ಎಂದೇ ಇದರ ಅರ್ಥವಲ್ಲವೇ?

ಕುವೆಂಪು ಅವರಂಥ ಕವಿಗಳು ಹಾಗೂ ದ್ರಷ್ಟಾರರು ಐವತ್ತು ವರ್ಷಗಳ ಹಿಂದೆಯೇ ಕನ್ನಡ ಮಾಧ್ಯಮ ಅಥವಾ ಮಾತೃಭಾಷಾ ಶಿಕ್ಷಣ ಮಾಧ್ಯಮದ ಮಹತ್ವದ ಬಗೆಗೆ ಎಷ್ಟು ಮನವರಿಕೆಯಾಗುವಂತೆ ಮಾತನಾಡಿದರೂ, ಇಂಗ್ಲಿಷ್ ಅನ್ನು ಒಂದು ಭಾಷೆಯಾಗಿ ಕಲಿಯುವುದಕ್ಕೂ ಅದನ್ನು ಮಾಧ್ಯಮವಾಗಿ ಕಲಿಯುವುದಕ್ಕೂ ಇರುವ ವ್ಯತ್ಯಾಸವನ್ನು ಕುರಿತು ಎಷ್ಟು ಹೇಳಿದರೂ ಹಾಗೂ ಬರೆದರೂ ಅದರಿಂದ ಏನೂ ಪ್ರಯೋಜನವಾಗಲಿಲ್ಲ ಎಂದೇ ನನಗೆ ಅನಿಸುತ್ತದೆ.

ಜನರ ಬದುಕು ಮತ್ತು ಭಾಷಾ ಬಳಕೆ :

ಕವಿರಾಜಮಾರ್ಗಕಾರ ಒಂಬತ್ತನೇ ಶತಮಾನದಷ್ಟು ಹಿಂದೆಯೇ ಭಾಷೆ ಎಂಥದು ಮತ್ತು ಕನ್ನಡಿಗರು ಎಂಥವರು ಎಂದು ಹೇಳಿದ್ದ. ಕವಿರಾಜ ಮಾರ್ಗಕಾರನು ನಾಡು-ನುಡಿ ಮತ್ತು ಜನರ ಬದುಕಿನ ಸಂಬಂಧಗಳಲ್ಲಿ ಬೆಸದುಕೊಂಡಿರುವ ದಾರಿ ಹೇಗೆ ಕನ್ನಡ ಸಮಾಜವನ್ನು ಮುನ್ನಡೆಸಬಲ್ಲುದು ಎಂದು ಹೇಳುತ್ತಾನೆ. ಇದಕ್ಕಾಗಿ ಆಡಳಿತದ ಪರಿಕರಗಳನ್ನು ಹೇಗೆ ಕಟ್ಟಿಕೊಳ್ಳಬೇಕು, ಹಾಗೆ ಕಟ್ಟಿಕೊಳ್ಳುವಲ್ಲಿ ಜನನುಡಿಯ ಬಳಕೆಯನ್ನು ಯಾವ ಬಗೆಯಲ್ಲಿ ಇರಿಸಬೇಕು, ಅದು ಎಲ್ಲರ ಕನ್ನಡ ಆಗಿರಬೇಕಾದುದು ಹೇಗೆ? ಅದು ಆಳ್ವಿಕೆಗೂ, ಜನರ ಬದುಕಿಗೂ ಹೇಗೆ ನಂಟನ್ನು ಬೆಸೆದಿರಬೇಕು, ಆಡಳಿತದ ಭಾಷೆ ಬಳಕೆಯ ಬಗೆಯನ್ನು ಜನರಾಡುವ ಭಾಷೆಯೊಂದಿಗೆ ಹೇಗೆ ರೂಢಿಸಬೇಕು ಎಂಬ ಕುರಿತು ಪ್ರಸ್ತಾಪಿಸಿದ್ದ ಶ್ರೀವಿಜಯನು ಸಂಸ್ಕೃತವನ್ನು ಎದುರಿಸುವ ಬಗೆ ಹೇಗೆ ಎಂದು ಆಗಲೇ ಪ್ರಸ್ತಾಪಿಸಿದ್ದ. ಈಗ ಕನ್ನಡದ ಶಬ್ದಗಳು ಎಂದು ಒಳಹೊಕ್ಕಿರುವ ಸಂಸ್ಕೃತದ ಪದಗಳ ಜೊತೆಗೆ ಇಂಗ್ಲಿಷ್ ರಾಕ್ಷಸನನ್ನು ಹೇಗೆ ಎದುರಿಸಬೇಕು ಮತ್ತು ಆಡಳಿತವನ್ನು ಹೇಗೆ ಜನಪರವಾಗಿ, ಜನರಿಗೆ ಹತ್ತಿರವಾಗಿ ತೆಗೆದುಕೊಂಡು ಹೋಗಬೇಕು ಎಂದು ನಾವು ಚರ್ಚಿಸಬೇಕಾಗಿದೆ.

* * *

**ಆಕರ :** ಕನ್ನಡ : ಅಂದು–ಇಂದು–ಮುಂದು –ಸಂ: ಆರ್.ಡಿ.ಜಿ., ಸಪ್ನ ಬುಕ್ ಹೌಸ್, ೨೦೨೦.

**ಲೇಖಕರ ಪರಿಚಯ**

ದ. ರಾ. ಬೇಂದ್ರೆ (ಅಂಬಿಕಾತನಯ ದತ್ತ): ಕನ್ನಡದ ವರಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರು ರಾಮಚಂದ್ರ ಬೇಂದ್ರೆ – ಅಂಬವ್ವನವರ ಪುತ್ರರಾಗಿ ೩೧–೧–೧೮೯೬ರಲ್ಲಿ ಧಾರವಾಡದಲ್ಲಿ ಜನಿಸಿದರು. ಧಾರವಾಡದಲ್ಲಿ ೧೯೧೩ರಲ್ಲಿ ಮೆಟ್ರಿಕ್ ಮುಗಿಸಿದ ಮೇಲೆ ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ೧೯೧೮ರಲ್ಲಿ ಬಿ.ಎ. ಮಾಡಿದರು. ಕೆಲವು ಕಾಲ ಅಧ್ಯಾಪಕ ವೃತ್ತಿ ಮಾಡಿದ ಮೇಲೆ ೧೯೩೫ರಲ್ಲಿ ಮುಂಬಯಿ ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿ ಗಳಿಸಿದರು.

ಬೇಂದ್ರೆ ಅವರಿಗೆ ೧೯೬೮ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ ಡಾಕ್ಟರೇಟ್ ಪದವಿ ನೀಡಿತು. ೧೯೭೬ರಲ್ಲಿ ಕಾಶಿಯ ವಿದ್ಯಾಪೀಠವೂ ಗೌರವ ಡಾಕ್ಟರೇಟ್ ನೀಡಿತು. ಕೇಂದ್ರ ಸರ್ಕಾರ ೧೯೬೮ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಿತು. ಕೇಂದ್ರದ ಸಾಹಿತ್ಯ ಅಕಾಡೆಮಿ ಫೆಲೋ ಗೌರವ ಇವರಿಗೆ ಸಂದಿದೆ. ಅದಮಾರು ಮಠದವರು ಕರ್ನಾಟಕ ಕವಿಕುಲ ತಿಲಕ ಬಿರುದನ್ನು ೧೯೭೨ರಲ್ಲಿ ನೀಡಿದರು. ೧೯೪೩ರಲ್ಲಿ ಶಿವಮೊಗ್ಗದಲ್ಲಿ ನಡೆದ ೨೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪಟ್ಟ ಇವರಿಗೆ ನೀಡಲಾಯಿತು. ೧೯೫೬ರಲ್ಲಿ ಅರಳು ಮರಳು ಕವನಸಂಗ್ರಹಕ್ಕೆ ಕೇಂದ್ರಸಾಹಿತ್ಯ ಅಕಾಡೆಮಿ ದೊರೆತರೆ ೧೯೭೪ರಲ್ಲಿ ನಾಕುತಂತಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ.

**ಡಾ. ಪದ್ಮರಾಜ ದಂಡಾವತಿ:** ಹುಟ್ಟಿದ್ದು ೧೯೫೫ರಲ್ಲಿ. ವಿಜಯಪುರ ಜಿಲ್ಲೆಯ ಮುದ್ದೇಬಿಹಾಳದವರು. ಕನ್ನಡ ಸ್ನಾತಕೋತ್ತರ ಪದವೀಧರರು. ಪ್ರಜಾವಾಣಿ ಪತ್ರಿಕೆಗೆ ೧೯೮೨ರಲ್ಲಿ ವರದಿಗಾರ /ಉಪ ಸಂಪಾದಕರಾಗಿ ಸೇರಿ ಆ ಸಂಸ್ಥೆಯ ಅತ್ಯುನ್ನತ ಹುದ್ದೆಯಾದ ಸಹ ಸಂಪಾದಕ ಹಾಗೂ ಕಾರ್ಯ ನಿರ್ವಾಹಕ ಸಂಪಾದಕ ಹುದ್ದೆಗೆ ಏರಿದರು. **'ನಾಲ್ಕನೇ ಆಯಾಮ'** ಎಂಬ ಅಂಕಣದಿಂದ ಜನಪ್ರಿಯರಾಗಿದ್ದಾರೆ. ಅವರ ಹನ್ನೊಂದು ಕೃತಿಗಳು ಮತ್ತು ಮೂರು ಸಂಪಾದಿತ ಕೃತಿಗಳು ಪ್ರಕಟಗೊಂಡಿವೆ. ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಮಾಧ್ಯಮ ಅಕಾಡೆಮಿಯ ಜೀವಮಾನ ಸಾಧನೆ ಪ್ರಶಸ್ತಿ, ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ ಸೇರಿದಂತೆ ಹತ್ತಾರು ಪ್ರಶಸ್ತಿಗಳು ಸಂದಿವೆ. ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿಗೂ ಭಾಜನರಾಗಿದ್ದಾರೆ. ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

**ಅಭ್ಯಾಸ ಪ್ರಶ್ನೆಗಳು**

೧. ಕನ್ನಡಾಭಿಮಾನದ ಕುರಿತು ಬೇಂದ್ರೆ ಅವರ ಅಭಿಪ್ರಾಯವೇನು?
೨. ಕರ್ನಾಟಕ ಒಂದೇ ಎಂದು ಹೇಳಿದ ಕಾರಣವೇನು? ಚರ್ಚಿಸಿ.
೩. ಕನ್ನಡ ಜಗವೆಲ್ಲವು ಒಂದೇ ಎಂದು ಹೇಳಲು ಕಾರಣವೇನು? ವಿವರಿಸಿ.
೪. ಕನ್ನಡ ದೀಕ್ಷೆಯನ್ನು ಹೊಂದುವುದು ಎಂದರೇನು? ಈ ಬಗ್ಗೆ ನಿಮ್ಮ ನಿಲುವೇನು?
೫. ಕನ್ನಡ ಭಾಷೆಯ ವಿಶಾಲತೆಯನ್ನು ಕವಿ ಬೇಂದ್ರೆ ಹೇಗೆ ವಿವರಿಸಿದ್ದಾರೆ?
೬. ಕರ್ನಾಟಕವು ಒಂದಾಗಿರಲು ನಿಮ್ಮ ಸಲಹೆಗಳು ಏನು? ಬೇಂದ್ರೆಯವರ ಕವಿತೆಯ ಹಿನ್ನೆಲೆಯಲ್ಲಿ ಮಂಡಿಸಿ.

**ಚಟುವಟಿಕೆಗಳು**

೧. ಕನ್ನಡದ ಕುರಿತ ನಾಲ್ಕು ಚಿತ್ರಗೀತೆಗಳನ್ನು ಸಂಗ್ರಹಿಸಿ ಒಂದೆಡೆ ಹಾಕಿ; ಅವುಗಳ ಸಾಹಿತ್ಯಗುಣದ ಬಗ್ಗೆ ಒಂದು ವಿವರಣೆ ಬರೆಯಿರಿ.

೨. ಯೋಜನಾ ಕಾರ್ಯದ ಅಡಿಯಲ್ಲಿ ನಿಮ್ಮ ಅನುಭವದ ಹಿನ್ನೆಲೆಯಲ್ಲಿ ಒಂದು ಕೃಷಿ ಪದ ಕೋಶ ರಚಿಸಿ.

೩. ಕನ್ನಡ ಸಾಧಕರ ಕುರಿತು ಒಂದು ಪ್ರಾಜೆಕ್ಟ್ ವರ್ಕ್ ಮಾಡಿ ಸಲ್ಲಿಸಿ.

೪. ಬೇಂದ್ರೆಯವರ ಒಂದೆರಡು ಹಾಡುಗಳನ್ನು ಸಂಗ್ರಹಿಸಿ; ಅವುಗಳನ್ನು ಅನುಸರಿಸಿ ನಿಮ್ಮದೇ ಧಾಟಿಯಲ್ಲಿ ಹಾಡು ಬರೆದು ನಿಮ್ಮ ತರಗತಿ ಅಧ್ಯಾಪಕರಿಗೆ/ ಮೆಂಟರ್‌ಗೆ ಸಲ್ಲಿಸಿ.

**ಹೆಚ್ಚಿನ ಪರಾಮರ್ಶನಕ್ಕೆ**

೧. ಕನ್ನಡ ಭಾಷೆಯ ಚರಿತ್ರೆ –ಡಾ. ಸಾ.ಶಿ ಮರುಳಯ್ಯ, ಅಂಕಿತ ಪ್ರಕಾಶನ, ಬೆಂಗಳೂರು, ೧೯೯೯.

೨.https://www.youtube.com/ watch?v=dHKfuNpt8rM&ab_channel=YuvarajMadha

**ಅಧ್ಯಾಯ– ೨.೨.**
**ಪಠ್ಯ**

## ಆಕಾಶಕ್ಕೆ ನೀಲಿ ಪರದೆ

ಬೋಳುವಾರು ಮಹಮದ್ ಕುಂಞ

**ಪ್ರವೇಶಿಕೆ**
ಗಂಡು ಮತ್ತು ಹೆಣ್ಣಿನ ನಡುವಣ ಸಂಬಂಧಗಳನ್ನು ಹೇಗೆಲ್ಲ ನಮ್ಮ ಸಮಾಜದಲ್ಲಿ ಕಟ್ಟಿಕೊಡಲಾಗಿದೆಯೊ ಅದನ್ನು ಮರುಪರಿಶೀಲನೆ ನಡೆಸುವ ಪಠ್ಯವಾಗಿ ಇಲ್ಲಿನ ಆಕಾಶಕ್ಕೆ ನೀಲಿ ಪರದೆ ಕತೆಯನ್ನು ಚರ್ಚಿಸಬಹುದಾಗಿದೆ. ತಾರುಣ್ಯಕ್ಕೆ ಬಂದ ಹೆಣ್ಣೊಬ್ಬಳು ತನ್ನ ಬದುಕನ್ನು ಹೇಗೆ ರೂಪಿಸಿಕೊಳ್ಳಬೇಕು? ಕುಟುಂಬದ ಸ್ವರೂಪ, ದಾಂಪತ್ಯದ ಸ್ವರೂಪ ಹಾಗೂ ಪ್ರೀತಿಯ ಸ್ವರೂಪಗಳು ಯಾವುವು? ದೇಹದ ಬಣ್ಣ, ಆಕಾರ, ಸೌಂದರ್ಯ, ದೇಹಸುಖ ಸಾಮರ್ಥ್ಯ ಇವುಗಳನ್ನು ಸಂಬಂಧ ಮಾಡುವಾಗ ಮುಖ್ಯವೆಂದು ಪರಿಗಣಿಸಬೇಕೆ? ಮದುವೆಗೆ ವಯಸ್ಸು, ಜಾತಿ, ಧರ್ಮ, ಅಂತಸ್ತು ಇವುಗಳು ಮುಖ್ಯವೆ? ಇಂತಹ ಪ್ರಶ್ನೆಗಳ ಹಿನ್ನೆಲೆಯಲ್ಲಿ ನಮ್ಮದೇ ನಿಲುವುಗಳ ಮೂಲಕ ಒಟ್ಟಾರೆ ಬದುಕನ್ನು ಚರ್ಚೆ ಮಾಡಬಹುದಾದ ನೆಲೆಗಳನ್ನು ಈ ಪಠ್ಯವು ಒದಗಿಸಬಲ್ಲುದು ಎಂಬ ಅರಿವಿನೊಂದಿಗೆ ಈ ಕತೆಯನ್ನು ಇಲ್ಲಿ ಪಠ್ಯವಾಗಿ ಇರಿಸಲಾಗಿದೆ.

ತಿಂಗಳೊಂದರ ಹಿಂದೆ ಮಂಗಳೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಅಡ್ಮಿಟ್ ಆಗಿದ್ದ ಗೆಳೆಯನೊಬ್ಬನನ್ನು ನೋಡಲು ಹೋಗಿದ್ದ ನನಗೆ, ಅಲ್ಲಿನ ನರ್ಸ್ ಒಬ್ಬರ ಪರಿಚಯವಾಯಿತು. ಸುಮಾರು ಐವತ್ತರ ಗಡಿ ಸಮೀಪಿಸುತ್ತಿದ್ದ ಗೋಧಿ ಬಣ್ಣದ ಆಕೆಯ ದೊಡ್ಡ ಮುಖದಲ್ಲಿ ವಿಶೇಷವಾದ ಬೆಳಕೊಂದನ್ನು ನಾನು ಕಂಡಿದ್ದೆ. ಪ್ರತಿಯೊಂದು ಪದವನ್ನೂ ತೂಗಿನೋಡಿ ಮಾತನಾಡುವ ಆಕೆಯ ಗಂಭೀರವಾದ ನಡವಳಿಕೆ ಎಂಥವರಲ್ಲೂ ಗೌರವದ ಭಾವನೆಯನ್ನು ಹುಟ್ಟಿಸಬಲ್ಲದು, ಗೆಳೆಯ ಮಲಗಿದ್ದ ಮಂಚದ ಪಕ್ಕದಲ್ಲಿ ಆಕೆ ನಿಂತಿರುವಷ್ಟು ಹೊತ್ತು ನನಗೆ ಕುಳಿತುಕೊಂಡು ಮಾತು ಮುಂದುವರಿಸಲು ಸಾಧ್ಯವಾಗಿರಲಿಲ್ಲ. ಆಕೆ ಕೊನೆಗೆ ಕೈ ಬೀಸಿ ನಗುತ್ತಾ ಕೋಣೆಯಿಂದ ಹೊರಟು ಹೋದಾಗ ನಾನು ನಿಜವಾಗಿಯೂ ಭಕ್ತಿಯಿಂದ ಕೈ ಮುಗಿದು ನಿಂತುಬಿಟ್ಟಿದ್ದೆ. ಅಂತಹ ತೇಜಸ್ಸು ಆಕೆಯದು.

ಮೋಟಾರು ಸೈಕಲು ಅಪಘಾತವೊಂದರಲ್ಲಿ ಕಾಲು ಮೂಳೆ ಮುರಿಸಿಕೊಂಡು ಮಲಗಿದ್ದ ನನ್ನ ಗೆಳೆಯನಿಗೂ ಆಕೆಯ ಬಗ್ಗೆ ವಿಶೇಷ ಗೌರವವಿತ್ತು. ಆತ ಆಕೆಯ ಗುಣಗಾನ ಮಾಡಿದ್ದು ಅಸಹಜವೆಂದೇನೂ ನನಗೆ ಅನ್ನಿಸಲಿಲ್ಲ. ಆಕೆ ಸ್ಪೆಶಲ್ ರೂಮಿನ ಬಾಗಿಲು ತೆರೆದು ಒಳಗೆ ಬರುವ ಕ್ರಮ, ಮಾತುಗಳಲ್ಲಿ ಸೂಸುತ್ತಿದ್ದ ಪ್ರೀತಿ, ಆಡುವ ಸಾಂತ್ವನದ ಮಾತುಗಳು, ಎಲ್ಲಕ್ಕಿಂತ ಹೆಚ್ಚಾಗಿ ಆಕೆಯ ಅದ್ಭುತ (ಗೆಳೆಯನೇ ಬಳಸಿದ್ದ ಪದ) ಮುಖ, ಎಲ್ಲವನ್ನೂ ಆತ ಹೊಗಳಿದ್ದೇ ಹೊಗಳಿದ್ದು.

ಮರುದಿನ ನಾನು ಆಸ್ಪತ್ರೆಗೆ ಹೋಗಲು ಗೆಳೆಯನ ಅನಾರೋಗ್ಯ ಬರಿಯ ನೆವಮಾತ್ರ. ನನಗೆ ಆ ನರ್ಸನ್ನು ಕಂಡು ಮಾತಾಡಿಸಬೇಕು ಅನ್ನಿಸಿತು; ಆದರೆ ಆಕೆ ಅಂದು ಆಸ್ಪತ್ರೆಗೇ ಬಂದಿದ್ದಿರಲಿಲ್ಲ. ಆಕೆಯ ಹೆಸರು ಮಾತ್ರ ಗೊತ್ತಾಯಿತು.

ಮತ್ತೆರಡು ದಿನ ಬಿಟ್ಟು ಹೋಗಿದ್ದಾಗ, 'ಲಿಫ್ಟ್' ಬಳಿಯೇ ಎದುರಾದ ಆಕೆ ನನ್ನನ್ನು ಕಂಡವರೇ ಕಣ್ಣರಳಿಸಿಕೊಂಡು ನನ್ನ ಬಳಿ ಬಂದು, "ನೀವು ನನ್ನೆ ನನ್ನನ್ನು ಕೇಳಿಕೊಂಡು ಬಂದಿರಂತೆ?" ಎಂದು ಏಕಾಯೇಕಿ ಪ್ರಶ್ನಿಸಿದಾಗ ಒಂದು ಕ್ಷಣ ಗಾಬರಿಯೆನ್ನಿಸಿದರೂ, ತಕ್ಷಣ ಸಾವರಿಸಿಕೊಂಡು ಸಂಕೋಚ ಬಿಟ್ಟು "ಹೌದು ನಿಮ್ಮನ್ನು ಕಂಡಾಗ ಯಾಕೋ ನಿಮ್ಮ ಜೊತೆ ಬಹಳ ಮಾತನಾಡಬೇಕು ಅನ್ನಿಸಿತ್ತು. ಅದಕ್ಕಾಗಿ ಬಂದಿದೆ" ಎಂದುಬಿಟ್ಟೆ. ನನ್ನ ಮಾತಿನ ಧಾಟಿ ಆಕೆಗೂ ಇಷ್ಟವಾದಂತಿತ್ತು. ಮುಖ ತುಂಬಾ ನಗು ಚೆಲ್ಲಿದ ಆಕೆ, "ಹೌದಾ! ಹಾಗಾದರೆ ನನಗೂ ನಿಮ್ಮ ಜತೆ ಬಹಳ ಮಾತನಾಡುವುದು ಉಂಟು" ಎಂದರು. ನಾನು ನನಗರಿವಿಲ್ಲದೇ ಕೈಜೋಡಿಸಿ "ಥ್ಯಾಂಕ್ಸ್" ಎಂದುಬಿಟ್ಟಿದೆ. ನನ್ನ ಮುಖದಲ್ಲಿ ಸಂಕೋಚದ ಗೆರೆಗಳನ್ನು ಗಮನಿಸಿದ ಆಕೆ ನನ್ನ ಭುಜ ತಟ್ಟುತ್ತಾ "ನನಗೆ ನೀವು ತುಂಬಾ ಇಷ್ಟವಾದಿರಿ" ಎಂದಾಗ ನಾನು ಮತ್ತಷ್ಟು ಮುದುಡಿದೆ. ಆಕೆಯ ಜತೆ ಹತ್ತು ಹೆಜ್ಜೆ ಬದಲಿಸುವಷ್ಟರಲ್ಲಿ ಆಕೆಯ ಹುಟ್ಟೂರು 'ಮುತ್ತುಪ್ಪಾಡಿ' ಎಂಬುದನ್ನು ಕೇಳಿ ನಾನು ಅಚ್ಚರಿಯಿಂದ ನಿಂತುಬಿಟ್ಟಿದ್ದೆ. ಆಕೆಗೆ ನನ್ನ ಅನಿರೀಕ್ಷಿತ ವರ್ತನೆ ಕುತೂಹಲ ಹುಟ್ಟಿಸಿದ್ದಿರಬಹುದು. "ಯಾಕೆ ಮುತ್ತುಪ್ಪಾಡಿ ನಿಮಗೆ ಗೊತ್ತುಂಟಾ?" ಎಂದು ಪ್ರಶ್ನಿಸಿದಾಗ ನಾನು ಉತ್ಸಾಹದಿಂದ "ಅದು ನನ್ನ ಊರು" ಎಂದಿದ್ದೆ. ಈಗ ಅಚ್ಚರಿಪಡುವ ಸರದಿ ಆಕೆಯದಾಗಿತ್ತು. ಒಂದು ಕ್ಷಣ ನನ್ನನ್ನೇ ದಿಟ್ಟಿಸಿದ ಆಕೆ ಹೇಳಿದರು, "ಹಾಗಾದರೆ ನಾವೀಗ ಬಂಧುಗಳು ಅಲ್ವಾ?" ಆಕೆಯ ಕಣ್ಣುಗಳಲ್ಲಿ ಸಂತಸದ ಹೊಳಪು ಎದ್ದು ಕಾಣುತ್ತಿತ್ತು.

ಅಂದು ಆಕೆಯ ಜತೆ ಹೆಚ್ಚು ಮಾತನಾಡುವುದಾಗಲಿಲ್ಲ. ವಾರ್ಡಿಗೆ ತಲುಪುತ್ತಿದ್ದಂತೆಯೇ ಡಾಕ್ಟರರೊಬ್ಬರು ಅವರನ್ನು ಕರೆದುಕೊಂಡು ಹೋಗಿದ್ದರು. ಸುಮಾರು ಮೂವತ್ತು ವರ್ಷಗಳಿಂದ ಮುತ್ತುಪ್ಪಾಡಿಗೆ ಕಾಲಿಟ್ಟಿರದಿದ್ದ ಆಕೆಗೆ ನನ್ನಲ್ಲಿ ವಿಚಾರಿಸಿ ತಿಳಿಯಬೇಕಾದ ಸಂಗತಿಗಳು ಬಹಳವಿದ್ದಂತಿತ್ತು. ನನಗೂ ಆಕೆಯ ಬಗ್ಗೆ ನೂರಾರು ಪ್ರಶ್ನೆಗಳು ಸಾಲುಗಟ್ಟಿ ನಾಲಗೆ ತುದಿಯಲ್ಲಿ ನಿಂತಿದ್ದವು. ಮುಖ್ಯವಾಗಿ ಆಕೆ ತನ್ನ ಮನೆಯಿತ್ತು ಎಂದು ಹೇಳಿದ್ದ ಜಾಗದಲ್ಲಿ ಈಗೊಂದು ಸಿನಿಮಾ ಥಿಯೇಟರನ್ನು ಗುರುತಿಸಲು ನನಗೆ ಸಾಧ್ಯವಾಯಿತೇ ಹೊರತು ಆಕೆ ಹೇಳಿದ್ದ 'ಸರಸ್ವತೀ ಪುಸ್ತಕ ಭಂಡಾರ'ವನ್ನಲ್ಲ. ನನ್ನ ಎಲಿಮೆಂಟರಿ ಶಾಲಾ ದಿನಗಳಲ್ಲಿ ಅಂತಹ ಹೆಸರನ್ನೇ ಕೇಳಿದ ನೆನಪು ನನಗಿಲ್ಲ.

ಮತ್ತೆರಡು ದಿನ ನನಗೆ ಆಸ್ಪತ್ರೆಯ ಕಡೆಗೆ ಹೋಗಲು ಸಾಧ್ಯವಾಗಲಿಲ್ಲ. ಮೂರನೆಯ ದಿನ ಹೋಗಿದ್ದಾಗ ನನ್ನನ್ನೇ ಕಾದು ಕುಳಿತಂತಿದ್ದ ಆಕೆ, ನಾನು ಕೋಣೆಯೊಳಗೆ ಕಾಲಿಡುತ್ತಿರುವಂತೆಯೇ, "ನೀವು ಎರಡು ದಿನ ಬರಲೇ ಇಲ್ಲ. ಹಾಗೆ ಮಾಡುವುದಾ?" ಎಂದು

ಪ್ರಶ್ನಿಸಿದಾಗ ನಾನು ಆವಾಕ್ಕಾಗಿ ನಿಂತುಬಿಟ್ಟೆ. ನನ್ನ ಗಲಿಬಿಲಿಯನ್ನು ಗಮನಿಸಿದ ಆಕೆ ನನ್ನನ್ನು ಸಮಾಧಾನ ಪಡಿಸಲೆಂಬಂತೆ ಹತ್ತಿರ ಬಂದು ನನ್ನ ಕೈಯಲ್ಲಿದ್ದ ಕಾದಂಬರಿಯೊಂದನ್ನು ಸೆಳೆದುಕೊಂಡು ಹಿಂದೆ ಮುಂದೆ ತಿರುಗಿಸಿ ನೋಡುತ್ತಾ "ನೀವು ತುಂಬಾ ಪುಸ್ತಕ ಓದುತ್ತೀರಾ?" ಎಂದು ಪ್ರಶ್ನಿಸಿದರು. ನಾನು ಸಾವರಿಸಿಕೊಳ್ಳುತ್ತಾ "ಹಾಗೇನೂ ಇಲ್ಲ" ಎಂದೆ.

ಮಂಚದಲ್ಲಿ ಕಾಲು ಕಟ್ಟಿಕೊಂಡು ಮಲಗಿದ್ದ ಗೆಳೆಯ ಏನನ್ನೋ ಹೇಳಲು ತುಟಿ ಅಲುಗಿಸುತ್ತಿದ್ದಂತೆಯೇ ನಾನು ಕಣ್ಣಲ್ಲೇ ಮೌನವಾಗಿರಲು ಸೂಚಿಸಿದೆ. ಆಕೆ ಗಮನಿಸಿದಂತೆ ಕಾಣಲಿಲ್ಲ. ಪುಸ್ತಕವನ್ನು ನನ್ನತ್ತ ಚಾಚುತ್ತಾ ಇದ್ದಕ್ಕಿದ್ದಂತೆ ಶಕ್ತಿಯನ್ನೆಲ್ಲಾ ಕಳೆದುಕೊಂಡವರಂತೆ, 'ನಾನು ಹೇಳುವ ಕತೆಯನ್ನು ನೀವು ಕೇಳಿದರೆ ಮತ್ತ್ಯಾವ ಕತೆ ಪುಸ್ತಕವೂ ನಿಮಗೆ ಹಿಡಿಸಲಿಕ್ಕಿಲ್ಲ' ಎಂದರು. ಆಕೆಯ ನಿರುತ್ಸಾಹವನ್ನು ಗಮನಿಸಿದ ನಾನು ಆ ದಿನ ಹೆಚ್ಚೇನೂ ಪ್ರಶ್ನಿಸಲಿಲ್ಲವಾದರೂ "ನೀವು ಕತೆ ಹೇಳಿದರೆ ನಾನು ಕೇಳಲು ತಯಾರು" ಎಂದಿದ್ದೆ.

ಮುಂದಿನ ನಾಲ್ಕೈದು ದಿನಗಳಲ್ಲಿ ಅವರು ನನ್ನನ್ನು ತಮ್ಮ ಸ್ಟಾಫ್ ರೂಮಿನಲ್ಲಿ ಕುಳ್ಳಿರಿಸಿಕೊಂಡು ಮಾತನಾಡಿದೇ ಮಾತನಾಡಿದ್ದು. ಆಗೊಮ್ಮೆ ಈಗೊಮ್ಮೆ ಬಂದು ಹೋಗುತ್ತಿದ್ದ ಇತರ ನರ್ಸುಗಳನ್ನು ಒಂದೆರಡು ಮಾತುಗಳಲ್ಲೇ ಸಾಗ ಹಾಕುತ್ತಿದ್ದ ಆಕೆ, ನಾನು ಹುಟ್ಟಿದ ದಿನಗಳ ಹಿಂದೆ–ಮುಂದೆ ಮುತ್ತುಪ್ಪಾಡಿಯಲ್ಲಿ ನಡೆದ ಒಂದು ಕತೆಯನ್ನು ಹೇಳಿದರು. ಕೆಲವೊಮ್ಮೆ ಅತಿ ಉತ್ಸಾಹದಿಂದ ಕೆಲವೊಮ್ಮೆ ಏನನ್ನೋ ಜ್ಞಾಪಿಸಿಕೊಳ್ಳುತ್ತಿರುವವರಂತೆ ಅನುಮಾನದಿಂದ ಹೇಳುತ್ತಿದ್ದುದನ್ನೆಲ್ಲಾ ಆಸಕ್ತಿಯಿಟ್ಟು ಕೇಳುತ್ತಿದ್ದ ನಾನು, ಆ ಬಳಿಕ ಕಚೇರಿಗೆ ಎರಡು ದಿನ ರಜೆ ಹಾಕಿ, ಆಕೆಯ ಮಾತುಗಳನ್ನೇ ಹಿಂದೆ ಮುಂದೆ ಜೋಡಿಸಿಕೊಂಡು ಈ ರೀತಿ ಬರೆದಿಡಲು ಯತ್ನಿಸಿದೆ...

ಗುಜ್ಞಾನೆ ಮರಿಯ ಗರ್ಲ್ ಫ್ರೆಂಡ್

ಕುಂಞಪಾತುಮ್ಮಳ ಮುದ್ದಿನ ಮಗಳು 'ಮುಬೀನಾ'ಳಿಗೆ ಬೇಬಿಯೆಂದು ಹೆಸರಿಟ್ಟ ಮುಕುಂದಣ್ಣನಿಗೂ ಕುಂಞಿಪಾತುಮ್ಮಳದ್ದೆ ವಯಸ್ಸು. ಹತ್ತು ವರ್ಷಗಳಷ್ಟು ಕೆಳಗೆ ಅಣ್ಣ–ಅತ್ತಿಗೆಯ ಜತೆ ರಾಜರಸ್ತೆಯ ಪಕ್ಕದಲ್ಲಿದ್ದ ದೊಡ್ಡ ಮಾಳಿಗೆ ಮನೆಯ ಒಂದು ಭಾಗದಲ್ಲಿ ಪುಸ್ತಕ ವ್ಯಾಪಾರಕ್ಕೆ ನೆರವಾಗುತ್ತಿದ್ದ ಹುಡುಗ ಮುಕುಂದ, ಮುಂದೆ ತನ್ನ ಅಣ್ಣ, ಹೆಂಡತಿಯ ಜತೆಗೆ ಗೋವಾಕ್ಕೆ ಹೋದ ಬಳಿಕ ತಾನೊಬ್ಬನೇ ವ್ಯಾಪಾರ ಮುಂದುವರಿಸಿದವನು. ವಯಸ್ಸಿಗಿಂತ ನಾಲ್ಕು ಪಟ್ಟು ಹೆಚ್ಚು ಮಾಂಸವನ್ನು ತನ್ನ ಐದಡಿ ದೇಹದ ತುಂಬಾ ಹೊತ್ತುಕೊಂಡಿದ್ದ ಆತ ಅಂಗಡಿಯ ಮಂಚದ ಮೇಲೆ ಕೂತರೆ ಬಿಳಿಯಾನೆ ಮರಿಯಂತೆಯೇ ಕಾಣಿಸುತ್ತಿದ್ದ. ಆರನೆ ತರಗತಿ ತನಕ ಹಾಗೂ ಹೀಗೂ ಶಾಲೆಯ ಮೆಟ್ಟಿಲು ಹತ್ತಿದ್ದ ಆತನನ್ನು ಕ್ಲಾಸಿನ ಹುಡುಗರೆಲ್ಲರೂ 'ಗುಜ್ಞಾನೆಮರಿ'ಯೆಂದು ಗೇಲಿ ಮಾಡುತ್ತಿದ್ದುದರಿಂದಲೇ ಆತ ಶಾಲೆಯನ್ನು ಬಿಟ್ಟ ಎಂದು ಅವನ ಕ್ಲಾಸ್ಮೇಟ್ ಆಗಿದ್ದವರು ಹೇಳುತ್ತಾರೆಂಬುದು ಬೇಬಿಗೂ ಗೊತ್ತಾಗಿತ್ತು.

ಮುಬೀನಾಳ ತಾಯಿ ಕುಂಞಪಾತುಮ್ಮ ಹೇಳುವುದನ್ನೇ ನಂಬುವುದಾದರೆ, ಮುಕುಂದಣ್ಣ ಎಂದಾದರೂ ಯಾರೊಡನೆಯಾದರೂ ನಕ್ಕು ಮಾತನಾಡಿದ್ದರೆ ಅದು ಆಕೆಯ ಮುದ್ದಿನ ಮಗಳು ಮುಬೀನಾಳೊಂದಿಗೆ ಮಾತ್ರ. ಮುಕುಂದಣ್ಣನ ಸರಸ್ವತೀ ಪುಸ್ತಕ ಭಂಡಾರದ ಎದುರಿನ ರಾಜರಸ್ತೆಯ ಮತ್ತೊಂದು ಬದಿಯ ಪುಟ್ಟ ಗುಡಿಸಲಿನೊಳಗೆ ಬೀಡಿ ನೂಲಿನೊಂದಿಗೇ ಬದುಕು ಮುಂದುವರಿಸಿದ್ದ ಕುಞಂಪಾತುಮ್ಮಳ ಗಂಡನ ನೆನಪು ಮುಬೀನಾಳಿಗೆ ಇರುವುದು ಸಾಧ್ಯವಿಲ್ಲ. ಎರಡು ವರ್ಷದ ಪುಟ್ಟ ಹುಡುಗಿಯನ್ನು ಬಳುವಳಿಯಾಗಿ ಕೊಟ್ಟು, ದುಡ್ಡು ಮಾಡಿಬರಲು ಬೊಂಬಾಯ್‌ಗೆ ಹೋಗಿದ್ದ ಗಂಡ ಮರಳಿ ಬಂದದ್ದಿಲ್ಲ. ರಾಜರಸ್ತೆಯೆದುರಿನ ಅಂಗಡಿಯಲ್ಲಿ ಬೆಳ್ಳಗೆ – ಬೆಳ್ಳಗೆ ಚಲಿಸುವ ದೊಡ್ಡ ದೇಹದ ಮುಕುಂದಣ್ಣ, ಪುಟ್ಟ ಮಗುವಿಗೆ ಅದೇಕೋ ಬಹಳ ಇಷ್ಟವಾಗಿ ಬಿಟ್ಟಿದ್ದ. ಅಂಗಡಿಗೆ ಬರುವ ಗಿರಾಕಿಗಳ ಜತೆಗೂ ಹೆಚ್ಚು ಮಾತನಾಡದ ಮುಕುಂದಣ್ಣನಿಗೆ ಸ್ನೇಹಿತರೆಂಬವರಾರೂ ಇಲ್ಲದ್ದರಿಂದಲೋ ಏನೋ–ಆತನಿಗೂ ಮುಬೀನಾಳಲ್ಲಿ ಆಸಕ್ತಿ ಮೂಡಿತ್ತು.

ಮುಕುಂದಣ್ಣನ ವಿರೋಧಿಗಳಾರಾದರೂ ಇದ್ದರೆ, ಅವರು ಕೂಡಾ ಆತನ ಸಜ್ಜನಿಕೆಯ ಬಗ್ಗೆ 'ಅಪಸ್ವರ' ಹೇಳಲಾರರು. ಆದ್ದರಿಂದಲೇ ಆತ ಪುಟ್ಟ ಮುಬೀ ನಾಳನ್ನು ಕರೆದುಕೊಂಡು ಹೋಗಲು ರಸ್ತೆ ದಾಟಿ ಕುಂಞಿಪಾತುಮ್ಮಳ ಮನೆಗೆ ಹೋಗಿ ಬರುತ್ತಿರುವುದನ್ನು ಯಾರೂ ಅನುಮಾನದಿಂದ ನೋಡಲು ಸಾಧ್ಯವಿರಲಿಲ್ಲ. ಹದಿನಾರು ಹದಿನೇಳಕ್ಕೇ ಮುಬೀನಾಳಿಗೆ ತಾಯಿಯಾಗಿದ್ದ ಕುಂಞಪಾತುಮ್ಮಳ ಬಸಳೆ ಬಳ್ಳಿಯಂತಹ ಶರೀರದಲ್ಲಿ, ಗುಡಾಣದಂತಹ ಮುಕುಂದಣ್ಣನಿಗೆ ಸರಿದೂಗುವ ಯಾವ ಆಕರ್ಷಕ ಸಂಗತಿಗಳೂ ಇದ್ದಿರಲಿಲ್ಲ. ಕಲ್ಲುಗುಂಡಿನಂತಹ ಗಂಡನಿಗೆ ನಾಲ್ಕು ವರ್ಷಗಳ ಕಾಲ ತನ್ನೆಲ್ಲವನ್ನೂ ಬಡಿಸಿ ಉಣ್ಣಿಸಿದ್ದ ಆಕೆಗೂ ಮುಕುಂದಣ್ಣ ಯಾವ ಆಸೆಯನ್ನೂ ಹುಟ್ಟಿಸಲಿಲ್ಲ. ಆದ್ದರಿಂದಲೇ ಕುಂಞಪಾತುಮ್ಮಳಿಗೆ ಮುಕುಂದಣ್ಣ, ಮುಬೀನಾಳ ಸಲುವಾಗಿ ನೀಡುತ್ತಿದ್ದ ಯಾವುದೇ ಸಹಾಯಗಳನ್ನು ಸ್ವೀಕರಿಸಲು ಸಂಕೋಚವಾಗಲಿಲ್ಲ. ನಾಲ್ಕು ಮಂದಿಗಾಗುವಷ್ಟು ಅಡುಗೆ ಮಾಡಿ ತಾನೊಬ್ಬನೇ ಮುಕ್ಕುತ್ತಿದ್ದ ಮುಕುಂದಣ್ಣನ ಉರುಟು ಹೊಟ್ಟೆಯ ಮೇಲೆ ಜಾರು ಬಂಡೆಯಾಟವಾಡುತ್ತಾ ಹಗಲಿಡೀ ಅಂಗಡಿಯಲ್ಲಿ ಆಡುವ ಮುಬೀನಾ. ಹೆಚ್ಚು ಕಮ್ಮಿ ಆತನ ಮನೆಮಗುವೇ ಆಗಿದ್ದಳು.

ಆದರೆ, ಅಚ್ಚರಿಯ ಸಂಗತಿಯೆಂದರೆ ನಾಲ್ಕು ವರ್ಷಗಳಷ್ಟು ಕಾಲ ತನ್ನ ಮಡಿಲಲ್ಲೇ ಬೆಳೆದ ಮಗುವನ್ನು ಹೊಸ ಬಟ್ಟೆ ತೊಡಿಸಿ ಶಾಲೆಗೆ ಸೇರಿಸಲು ಅತಿ ಉತ್ಸಾಹದಿಂದ ಕರೆದುಕೊಂಡು ಹೋಗಿದ್ದ ಮುಕುಂದಣ್ಣನಿಗೆ ಶಾಲೆಯಲ್ಲಿ ಮಗುವಿನ ಹೆಸರೇ ಮರೆತು ಹೋದದ್ದು. ಗಲಿಬಿಲಿಗೊಂಡಿದ್ದ ಮುಕುಂದಣ್ಣ ಸ್ವತಃ ಮಗುವೇ ತನ್ನ ಹೆಸರನ್ನು ಸ್ಪಷ್ಟವಾಗಿ 'ಮುಬೀನಾ' ಎಂದು ಹೇಳುತ್ತಿದ್ದರೂ, ಗಮನಿಸದೆ "ಬೇಬಿ ಎಂದೇ ನಾವೆಲ್ಲ ಕರೆಯುವುದು. ಹಾಗೆಯೇ ಬರೆದುಕೊಳ್ಳಿ" ಎಂದಿದ್ದ.

ಹೆಡ್ಮಾಸ್ತರರಿಗೆ ಮುಕುಂದಣ್ಣ ಅಪರಿಚಿತನೇನೂ ಅಲ್ಲ. ಮುಕುಂದಣ್ಣನ ತೊಡೆಯನ್ನು ತಬ್ಬಿಕೊಂಡು ಭಯದಿಂದ ಕಣ್ಣು ಪಿಳಿಪಿಳಿ ಮಾಡುತ್ತಿದ್ದ ಪುಟ್ಟ ಹುಡುಗಿ ಆತನ ಆಶ್ರಯದಲ್ಲೇ ಬೆಳೆಯುತ್ತಿರುವುದು ಅವರಿಗೂ ಗೊತ್ತಿರದೇಇಲ್ಲ. ಎಂದೂ ತನ್ನೊಡನೆ ಮಾತುಕತೆಯಾಡಿರದಿದ್ದ ಮುಕುಂದಣ್ಣನ ಈ ಬೇಡಿಕೆಯನ್ನು ಪೂರೈಸುವ ಮೂಲಕ ಮಾಸ್ತರರೂ ಧನ್ಯಭಾವ ಹೊಂದಿದ್ದಿರಬಹುದು.

ಮುಂದಿನ ಹನ್ನೆರಡು ವರ್ಷಗಳ ಇತಿಹಾಸ ತೀರಾ ಮಾಮೂಲಿಯದ್ದು. ನಾಲ್ಕು ವರ್ಷಗಳ ಕೆಳಗೆ ಕುಂಞಪಾತುಮ್ಮಳಿಗೆ ಉಬ್ಬಸ ಅಂಟಿಕೊಂಡು ಆಕೆ ಮತ್ತಷ್ಟು ತೆಳ್ಳಗಾದದ್ದು ಮತ್ತು ಮುಕುಂದಣ್ಣ ತನ್ನ ದೇಹದ ಮಾಂಸವನ್ನು ಮತ್ತೊಂದು ಮೂವತ್ತು ಕೇಜಿ ಹೆಚ್ಚು ಮಾಡಿಕೊಂಡದ್ದು ಬಿಟ್ಟರೆ ಮತ್ತೆಲ್ಲ ಮಾಮೂಲಿ. ಬೇಬಿಯ ಬಗ್ಗೆ ಹೇಳುವುದಾದರೆ ಮುತ್ತುಪ್ಪಾಡಿಯ ಪಡ್ಡೆ ಹುಡುಗರ ಎದೆಗಳಲ್ಲಿ ಮಿಡಿನಾಗರವನ್ನು ಹರಿದಾಡಿಸಿದ ಆಕೆಯ ಬಗ್ಗೆ ಅವರಾಡುತ್ತಿದ್ದ ಮಾತನ್ನೇ ಉದಾಹರಿಸಬೇಕಾದೀತು: ಆಕೆ ಅವರೆಲ್ಲರಿಗೂ 'ಮುತ್ತುಪ್ಪಾಡಿಯ ವೈಜಯಂತಿಮಾಲಾ'.

ಆದರೂ, ಪಿ.ಯು.ಸಿ. ಓದುತ್ತಿದ್ದಾಗ ಕಾಲೇಜಿನ 'ಬ್ಯೂಟಿ ಕ್ವೀನ್' ಎಂದೇ ಹುಡುಗರಿಂದ 'ಸಿಳ್ಳು' ಹಾಕಿಸಿಕೊಂಡಿದ್ದ ಆಕೆಯನ್ನು ಗೆಳತಿಯರು ಛೇಡಿಸುತ್ತಿದ್ದದ್ದು 'ಗುಜ್ಜಾನೆ ಮರಿಯ ಗರ್ಲ್‌ಫ್ರೆಂಡ್' ಎಂದೇ. ಯಾರೊಂದಿಗೂ ನಿಷ್ಠುರವಾಗಿ ವರ್ತಿಸದಿದ್ದ ಹದಿನೇಳರ ದಂತದ ಗೊಂಬೆಯಂತಹ ಹುಡುಗಿ ತನ್ನನ್ನು ಗೆಳತಿಯರು ಮುಕುಂದಣ್ಣನ ಗರ್ಲ್‌ಫ್ರೆಂಡ್ ಎಂದು ತಮಾಷೆ ಮಾಡಿದಾಗಲೂ ಎದುರು ವಾದಿಸುತ್ತಿರಲಿಲ್ಲ. ತಾನು ದೇವರೆಂದೇ ಪೂಜಿಸುತ್ತಿರುವ ಮುಕುಂದಣ್ಣನಂತಹ ಮನುಷ್ಯನ ಸಜ್ಜನಿಕೆಯ ಬಗ್ಗೆ ಹುಚ್ಚುಚ್ಚಾಗಿ ಹರಟೆ ಹೊಡೆಯುವ ಗೆಳತಿಯರ ಜೊತೆಗೆ ಸಮರ್ಥಿಸಬೇಕಾದ ಅಗತ್ಯವೇ ಅವಳಿಗೆ ಕಾಣಿಸುತ್ತಿರಲಿಲ್ಲ. ಒಮ್ಮೆ ಈ ವಿಷಯವನ್ನು ಮುಕುಂದಣ್ಣನಿಗೇ ತಿಳಿಸಿದಾಗ ಆತ ತೀರಾ ಸಹಜವಾಗಿ ನಗುತ್ತಾ "ಈಗ ಅಲ್ಲ ಎಂದವರು ಯಾರು?" ಎಂದು ಬಿಟ್ಟಿದ್ದ.

ಸರಸ್ವತೀ ಭಂಡಾರದ ಸೇಲ್ಸ್ ಗರ್ಲ್

ಎರಡು ವರ್ಷಗಳ ಕೆಳಗೆ, ಎಸ್.ಎಸ್.ಎಲ್.ಸಿ. ಫಲಿತಾಂಶ ಪ್ರಕಟವಾದ ಹತ್ತು ದಿನಗಳಲ್ಲಿ ಬೇಬಿಯ ಜೀವದ ಗೆಳತಿ ಸುಮತಿಯಿಂದ ಆಕೆಗೆ ಬಂದಿದ್ದ ಪತ್ರದ ಒಟ್ಟು ಆತಂಕ ಇಷ್ಟು. "ನೀನು ಪಿ.ಯು.ಸಿ.ಗೆ ಸೇರಲು ಕಾಲೇಜಿಗೆ ಬರುವುದಿಲ್ಲ ಎಂಬುದನ್ನು ನಾನು ನಂಬುವುದಿಲ್ಲ. ನಿನ್ನ ಅಮ್ಮ ಬೇಡವೆನ್ನುವುದಾದರೂ ಯಾಕೆ? ನಿನ್ನ ಎಲ್ಲ ಖರ್ಚುಗಳನ್ನು ನಿನ್ನ ಬಾಯ್‌ಫ್ರೆಂಡ್ ಕೊಡುತ್ತಿರುವಾಗ ನಿನ್ನ ತಾಯಿಯ ಗಲಾಟೆ ಯಾಕೆ? ಆಸ್ಪತ್ರೆಯಿಂದ ನಿನ್ನ ತಾಯಿ ಗುಣವಾಗಿ ಬಂದ ಬಳಿಕ ಹೇಗಾದರೂ ಮಾಡಿ ಅವರನ್ನು ಒಪ್ಪಿಸು. ನಿನ್ನ ಮುಕುಂದಣ್ಣನಂತಹ ಅಣ್ಣ ನನಗೆಲ್ಲಾದರೂ ಸಿಕ್ಕಿರುತ್ತಿದ್ದರೆ ನಾನು ಫಿಯಟ್ ಕಾರಿನಲ್ಲೇ ಕಾಲೇಜಿಗೆ ಬರುತ್ತಿದ್ದೆ" ಇತ್ಯಾದಿ.

ಕುಂಞಪಾತುಮ್ಮ ತನ್ನ ಮಗಳ ಶಾಲಾ ಬದುಕಿಗೆ ಏಕಾಏಕಿ ಕಡಿವಾಣ ಹಾಕಲು ನಿರ್ಧರಿಸಿದುದಕ್ಕೆ ಬಲವಾದ ಕಾರಣವೂ ಇತ್ತು. ಪಕ್ಕದ ಗಲ್ಲಿಯಲ್ಲಿನ ಗಣೇಶ ಬೀಡಿ ಕಂಟ್ರಾಕ್ಟರ್ ಮ್ಯೊದೂಬ್ಯಾರಿಯವರ ಹೆಂಡತಿ ತಮ್ಮ ದೇಹ ತುಂಬಾ ಬಂಗಾರದ ಆಭರಣಗಳನ್ನು ತೂಗಿಸಿಕೊಂಡು ಗಿಲಿಗಿಲಿಸುತ್ತಾ ನಡು ಮಧ್ಯಾಹ್ನದ ಹೊತ್ತಲ್ಲಿ ಕುಂಞಪಾತುಮ್ಮಳ ಗುಡಿಸಲೊಳಗೆ ಬಂದಿದ್ದವಳು, ತನ್ನ ಮಗ ಸುಲೇಮಾನ್‌ನಿಗೆ ಮುಬೀನಾಳನ್ನು ತಂದುಕೊಳ್ಳುವ ಬಗ್ಗೆ ಏಕಾಯೇಕಿ ಪ್ರಸ್ತಾಪ ಮಾಡಿದಾಗ ಕುಂಞಪಾತುಮ್ಮಳ ಎದೆ ತುಂಬಿದ ಕಫವೆಲ್ಲವೂ ಕರಗಿ ನೀರಾಗಿ ಹೋದದ್ದು ತೀರಾ ಸಹಜ. ಅದುವರೆಗೆ ಹೇಗಿದ್ದೀಯಾ ಎಂದೂ ವಿಚಾರಿಸಿರದಿದ್ದ ಈ ಬಂಗಾರದ ಹೆಂಗಸು ತನ್ನನ್ನು ತಮಾಶೆ ಮಾಡುತ್ತಿದ್ದಾಳೇನೋ ಎಂಬ ಅನುಮಾನವೂ ಒಂದು ಕ್ಷಣ ಇಣಿಕಿ ಹಾಕಿದರೂ ತನ್ನ ಮಗಳ ಸೌಂದರ್ಯದ ಬಗ್ಗೆ ಇದ್ದ ಭರವಸೆಯಿಂದ ಮಗಳು ದೊಡ್ಡ ಮನೆಯೊಂದರ ಸೊಸೆಯಾಗುತ್ತಿರುವುದನ್ನೇ ಕಲ್ಪಿಸಿಕೊಳ್ಳುತ್ತಾ ಸೆಟೆದು ಕುಳಿತಳು. "ನಾನೀಗ, ನನ್ನಲ್ಲಿ ಏನು ಉಂಟು ಅಂತ ಮದುವೆ ಮಾಡಿಸಲು ಹೊರಡಲಿ? ನೀವೇ ಹೇಳಿ. ನಾನು ಬರುವಾಗ ತಂದಿದ್ದ ಕಿವಿಯ ಅಲಿಖತ್ ಬಿಟ್ಟು ನನ್ನಲ್ಲಿ ಬೇರೆ ಬಂಗಾರ ಏನುಂಟು? ನಿಮ್ಮಲ್ಲಿ ನಾನು ಏನು ಅಡಗಿಸುವುದು" ಎಂದು ನಕ್ಕು ವ್ಯವಹಾರದ ಮಾತು ಆಡಿದ್ದಳು.

ಹೈಸ್ಕೂಲು ರಸ್ತೆಯ ಬದಿಯಲ್ಲಿ ಮೆಟ್ಟಿನಂಗಡಿಯಿಟ್ಟು ಹಗಲಿಡೀ ಹೋಕರ ಕಾಲುಗಳನ್ನೇ ಲೆಕ್ಕ ಮಾಡುತ್ತಿದ್ದ ಕೋಲು ದೇಹದ ಸುಲೇಮಾನ್ ತನ್ನ ಅಂಗಡಿಯೆದುರು ದಿನಕ್ಕೆ ನಾಲ್ಕು ಬಾರಿ ಪುಸ್ತಕಗಳನ್ನು ಎದೆಗೊತ್ತಿಕೊಂಡು ತಲೆಯೆತ್ತಿ ಹೆಜ್ಜೆ ಹಾಕುತ್ತಿದ್ದ 'ವೈಜಯಂತಿಮಾಲಾ'ಳ ಬಿಳಿ ಕಾಲುಗಳ ನುಣುಪಿನಲ್ಲಿ ಜಾರಿ ಬೀಳತೊಡಗಿದವನು ತನ್ನ ತಾಯಿಗೆ ದುಂಬಾಲು ಬಿದ್ದಿದ್ದ. ದೊಡ್ಡ ಮಗನೊಬ್ಬ ಪರ ಊರಲ್ಲಿ ಅದ್ಯಾವುದೋ ಬಿಕನಾಸಿಯೊಬ್ಬಳನ್ನು ಕಟ್ಟಿಕೊಂಡು ತಾಯಿಗೆ ಮುಖವನ್ನೇ ತೋರಿಸದೇ ಇದ್ದುದರಿಂದ, ಉಳಿದಿದ್ದ ಎರಡನೆಯವನಾದರೂ ತಮ್ಮ ಕಣ್ಣೆದುರು ಸುಖವಾಗಿ ಇರಲಿ ಎಂದು ಆಸೆಪಟ್ಟಿದ್ದ ತಾಯಿ, ಗಂಡನಿಂದ ಅನುಮತಿ ಪಡೆದು ಎಲ್ಲವನ್ನೂ ನಿರ್ಧರಿಸಿಕೊಂಡೇ ಬಂದಂತಿತ್ತು.

"ನಿನ್ನಲ್ಲೇನು ನಾವು ದುಡ್ಡು ಕೇಳಿದೆವಾ? ಅಥವಾ ನೂರು ಪವನು ಹಾಕು ಎಂದೆವಾ? ನಮಗೆ ಹುಡುಗಿ ಇಷ್ಟವಾಗಿದೆ. ಈ ತಿಂಗಳಲ್ಲಿ ಮದುವೆ ಮುಗಿಸಬೇಕು ಅಂತ ಇದ್ದೇವೆ" ಎಂದ ಹೆಂಗಸು ಬಾಗಿಲ ಸಂದಿಯಿಂದಲೇ ಎದುರಿನ 'ಸರಸ್ವತೀ ಪುಸ್ತಕ ಭಂಡಾರ'ದಲ್ಲಿ ಮುಕುಂದಣ್ಣನ ಜತೆ ಏನೋ ಮಾತನಾಡಿ ನಗುತ್ತಿದ್ದ ಮುಬೀನಾಳನ್ನು ಗಮನಿಸಿ, "ಇನ್ನು ಸ್ವಲ್ಪ ನಿನ್ನ ಮಗಳಿಗೆ ಬುದ್ಧಿ ಹೇಳು. ಮನೆಯಲ್ಲೇ ಒಂದು ನಾಲ್ಕು ದಿವಸ ಕುಳಿತುಕೊಳ್ಳಲಿ. ನನಗೇನೋ ಗೊತ್ತುಂಟು. ಅವಳು ಮುಕುಂದಣ್ಣನಿಗೆ ಮಗಳಿದ್ದ ಹಾಗೆ ಅಂತ. ಆದರೂ ಜನರ ಬಾಯಿಗೆ ಬೀಗ ಹಾಕಲು ನಮಗೆ ಸಾಧ್ಯ ಉಂಟಾ?" ಎಂದಿದ್ದಳು.

ತನ್ನ ಮಗಳ ಮದುವೆ ಬಗ್ಗೆ ಕನಸು ಕಾಣಲೂ ಹಿಂದೆ ಮುಂದೆ ನೋಡುತ್ತಿದ್ದ ಕುಂಞಪಾತುಮ್ಮ ಅದೇ ದಿನ ಸಂಜೆಯೇ ಮಗಳಿಗೆ ತೀರ್ಪು ನೀಡಿದ್ದಳು. "ನಾಳೆ ಬಂದ ನೀನು ಹೊರಗೆ ಹೋಗಬೇಡ. ಮೋಳೆ, ನೀನೀಗ ಚಿಕ್ಕ ಮಗುವಲ್ಲ."

"ನಾನು ಕಾಲೇಜಿಗೆ ಹೋಗುವುದು ಬೇಡವಾ ಉಮ್ಮಾ? ನೀವು ಹೇಳುತ್ತಿರುವುದಾದರೂ ಏನು? ನನಗೆ ಓದುವುದು ಇನ್ನೂ ಬಹಳ ವರ್ಷವುಂಟು. ಎಸೆಸೆಲ್ಸಿ ಆದಕೂಡಲೇ ಮದುವೆಯಾದರೆ ಯಾರಾದರೂ ನಕ್ಕಾರು." ಮುಬೀನಾಳಿಗೆ ತಾಯಿಯ ಮಾತು ತಮಾಶೆಯಂತೆ ಭಾಸವಾಗಿತ್ತು.

ಕುಂಞಿಪಾತುಮ್ಮ ಆವಾಕ್ಕಾಗಿ ಮಗಳನ್ನು ಅಳೆಯುವಂತೆ ನೋಡಿದಳು. ಉದ್ವೇಗ ಹೆಚ್ಚಾದಂತೆ ಎದೆಯೊಳಗೆ ಕಫ ಉರುಳತೊಡಗಿ ಉಸಿರು ಕಷ್ಟವಾಯಿತು.

ತಾಯಿಯ ಮೌನವನ್ನು ಸಹಿಸದ ಮುಬೀನಾ ಮತ್ತೆ ಮುಂದುವರಿಸಿದಳು; "ಹದಿನಾರು ವರ್ಷಕ್ಕೆ ಮದುವೆಯಾದರೆ ಹಿಡಿದು ಜೈಲಿಗೆ ಹಾಕುತ್ತಾರಂತೆ ಗೊತ್ತುಂಟಾ? ಕಾನೂನಿನಂತೆ ಹದಿನೆಂಟು ವರ್ಷವಾಗುವ ಮೊದಲು ಮದುವೆ ಯಾಗುವುದು ತಪ್ಪು ಗೊತ್ತುಂಟಾ...? ಹಾಂ."

ಕುಂಞಪಾತುಮ್ಮ ಕುಳಿತಲ್ಲೇ ನಡುಗತೊಡಗಿದ್ದಳು. ತನ್ನ ಮುದ್ದಿನ ಮಗಳು ತನ್ನ ತಾಯಿಗೆ ಕಾನೂನು ಹೇಳುತ್ತಿದ್ದಾಳೆ! ಮುಕುಂದಣ್ಣನ ಸಹವಾಸ ಇಷ್ಟು ದೂರಕ್ಕೆ ತಂದೀತೆಂದು ಆಕೆ ನಿರೀಕ್ಷಿಸಿರಲಿಲ್ಲ. ಬೆಳೆದ ಹುಡುಗಿಯನ್ನು ಮನೆಯೊಳಗೆ ಕೂಡಿ ಹಾಕದ್ದು ತನ್ನದೇ ತಪ್ಪು, ಶಾಲೆಗೆ ಹೋಗುವಾಗ ಬುರ್ಖಾ ಹಾಕಿಕೋ ಎಂದು ಹೇಳುವುದಾದರೂ ಹೇಗೆ? ಎಂದು ಸುಮ್ಮನಿದ್ದದ್ದೇ ತಪ್ಪಾಯಿತು.

ಮುಕುಂದಣ್ಣ ದೇವರಂತಹ ಮನುಷ್ಯ-ಎಂಬುದರಲ್ಲಿ ಕುಂಞಪಾತುಮ್ಮಳಿಗೂ ಅನುಮಾನವಿಲ್ಲ. ಅವನ ಸಹಾಯವಿಲ್ಲದೇ ಹೋಗಿದ್ದರೆ ಇದಿಷ್ಟು ವರ್ಷ ಬದುಕಲು ಕಷ್ಟವಾಗುತ್ತಿತ್ತು. ಆದರೆ ಈಗೇನು ಮಾಡುವುದು? ತನಗಿಂತ ಎತ್ತರಕ್ಕೆ ಬೆಳದಿಂಗಳ ಚೆಂಡಿನಂತೆ ಬೆಳೆದು ತನ್ನೆದುರು ಸವಾಲಿನಂತೆ ನಿಂತಿರುವ ಮಗಳನ್ನು ನೋಡುತ್ತಾ ನೋಡುತ್ತಾ ಕುಂಞಿಪಾತುಮ್ಮಳ ಕಣ್ಣುಗಳಲ್ಲಿ ಗೊಂದಲಗಳೆಲ್ಲವೂ ನೀರಾಗಿ ಮಡುಗಟ್ಟಿದವು. ಇದ್ದಕ್ಕಿದಂತೆ ಏದುಬ್ಬಸ ಜಾಸ್ತಿಯಾದಂತಾಗಿ ಎದೆ ಹಿಡಿದುಕೊಂಡು ಅಲ್ಲೇ ಗೋಡೆಗೊರಗಿದವಳಿಗೆ ಕಣ್ಣು ಕತ್ತಲಿಟ್ಟಿತ್ತು.

ಎಚ್ಚರವಾದಾಗ ಆಕೆ ಆಸ್ಪತ್ರೆಯ ಬಿಳಿ ಮಂಚದ ಮೇಲಿದ್ದಳು. ಎದುರಿಗೆ ಮುಕುಂದಣ್ಣ: ಪಕ್ಕದಲ್ಲಿ ಮುಬೀನಾ, ಕುಂಞಪಾತುಮ್ಮ ಅಸಹಾಯಕತೆಯಿಂದ ನಿಟ್ಟುಸಿರಿಟ್ಟಳು.

ಎರಡು ದಿನ ಬಿಟ್ಟು ಮಧ್ಯಾಹ್ನದ ಹೊತ್ತು ಆಸ್ಪತ್ರೆಗೆ ಬಂದಿದ್ದ ಮುಕುಂದ ಹೇಳಿದ್ದು ಹೀಗೆ: "ನೀವು ಯಾವುದಕ್ಕೂ ಯೋಚನೆ ಮಾಡಬೇಡಿ. ಬೇಬಿಯನ್ನು ಚೆನ್ನಾಗಿ ಓದಿಸಿ, ಒಳ್ಳೆಯ ಗಂಡು ನೋಡಿ ಮದುವೆ ಮಾಡಿಸುವ ಜವಾಬ್ದಾರಿ ನನ್ನದು. ಆಯ್ತಲ್ಲಾ? ಈಗವಳಿಗೆ ಇನ ಹದಿನಾರು ತುಂಬಿಲ್ಲ. ಇಷ್ಟು ಬೇಗ ಮದುವೆ ಮಾಡಿಸಿದರೆ ನಿಮ್ಮ ಹಾಗೆ ಉಬ್ಬಸದ ರೋಗಿಯಾಗುತ್ತಾಳೆ; ಅಷ್ಟೆ. ಒಳ್ಳೆಯ ಟಿಪ್‌ಟಾಪ್ ಹುಡುಗನನ್ನು ಹುಡುಕಿ ತರುತ್ತೇನೆ. ಎಷ್ಟು ಕೊಡಬೇಕಂತೆ ವರದಕ್ಷಿಣೆ? ಎಷ್ಟು ಹಾಕಬೇಕಂತೆ ಬಂಗಾರ? ನನ್ನ ಮನೆ-ಅಂಗಡಿ, ಎಲ್ಲ ಮಾರಿ ಯಾದರೂ ಬೇಬಿಯ ಮದುವೆ ಮಾಡಿಸುತ್ತೇನೆ. ಆಯ್ತಲ್ಲಾ? ನನಗಾದರೂ ಬೇರೆ ಯಾರಿದಾರೆ"

ಕುಂಞಪಾತುಮ್ಮ ನಾಲ್ಕೇ ದಿನದಲ್ಲಿ ಉಸಿರು ಸರಾಗ ಪಡಿಸಿಕೊಂಡು ಮನೆಗೆ ಮರಳಿದಳು. ಬೇಬಿ ಪಿ.ಯು.ಸಿ.ಗೆ ಸೇರಿದಳು. ಸುಲೇಮಾನ್‌ನನ್ನು ಅವನಪ್ಪ ವೀಸಾ ಮಾಡಿಸಿ ದುಬೈಗೆ ಸಾಗ ಹಾಕಿದ. ಇವರೆಲ್ಲರನ ಹೊತ್ತ ಭೂಮಿ ಸೂರ್ಯನಿಗೆ ಎರಡು ಪ್ರದಕ್ಷಿಣೆ ಹಾಕಿದ.

ಪಿ.ಯು.ಸಿ. ಫಲಿತಾಂಶ ಪ್ರಕಟವಾದ ಒಂದು ತಿಂಗಳ ಬಳಿಕ ಬೇಬಿ ತನ್ನ ಗೆಳತಿ ಸುಮತಿಗೆ ಬರೆದ ಆರು ಪುಟಗಳ ಪತ್ರದ ಮುಖ್ಯಾಂಶಗಳು ಇಷ್ಟು: ನಿನ್ನ ಪತ್ರ ಸಿಕ್ಕಿತು. ಅಮ್ಮ ಈಗ ಮೊದಲಿನಂತಿಲ್ಲ. ಅವಳು ಬಹಳ ಇಳಿದು ಹೋಗಿದ್ದಾಳೆ. ಹೆಚ್ಚು ಮಾತು ಕೂಡಾ ಆಡುವುದಿಲ್ಲ. ಮುಕುಂದನಣ್ಣನಿಗೂ ನನ್ನನ್ನು ಕಾಲೇಜಿಗೆ ಓದಿಸಲಿಕ್ಕಾಗಿ ಮಂಗಳೂರಿಗೆ ಕಳುಹಿಸಲು ಅಷ್ಟೊಂದು ಇಷ್ಟವಿದ್ದಂತಿಲ್ಲ. ಅಲ್ಲಿ ಹಾಸ್ಟೆಲಿನಲ್ಲಿ ನಾನು ಉಳಿದರೆ ಇಲ್ಲಿ ತಾಯಿಯನ್ನು ಯಾರು ನೋಡಿಕೊಳ್ಳು ವುದು? ನೀನು ನರ್ಸ್ ಟ್ರೈನಿಂಗ್ ಸೇರುವುದನ್ನು ಎಣಿಸಿದಾಗ ನನಗೂ ಆಸೆಯಾಗ್ತದೆ. ಅಮ್ಮನ ಆರೋಗ್ಯ ಸರಿಯಾಗಿರುತ್ತಿದ್ದರೆ ನಾನೂ ನಿನ್ನ ಜತೆ ಬಂದು ಬಿಡುತ್ತಿದೆ. ಮುಕುಂದಣ್ಣನನ್ನು ಹೇಗಾದರೂ ಒಪ್ಪಿಸಬಹುದಿತ್ತು. ನನಗೆ ಆ ಅದೃಷ್ಟವಿಲ್ಲ. ಮುಕುಂದಣ್ಣ ನನಗೆ ಗಂಡು ಹುಡುಕುತ್ತಿದ್ದಾರೆ. ಇನ್ನು ಯಾರನ್ನಾದರೂ ಕಟ್ಟಿಕೊಂಡು ಹೋಗುವವಳು ನಾನು. ಆಗಾಗ ಕಾಗದ ಬರೆಯುತ್ತಿರು. ಹಾಂ, ಇನ್ನೊಂದು ಸುದ್ದಿ, ಸುಲೇಮಾನ್ ಕಳೆದ ವಾರ ಊರಿಗೆ ಬಂದಿದ್ದಾನೆ. ಅವನ ಹೆಂಡತಿಗೆ ಹೆಣ್ಣು ಮಗುವಾಗಿದೆ. ನಾನೀಗ ಮುಕುಂದಣ್ಣನ ಪುಸ್ತಕದ ಅಂಗಡಿಯಲ್ಲಿ ಸೇಲ್ಸ್‌ಗರ್ಲ್ಸ್ ಆಗಿ ಅಪ್ಪಾಯಿಂಟ್ ಆಗಿದ್ದೇನೆ. ನಿನ್ನ ಮುಕುಂದಣ್ಣ ನನಗೆ ಹೊಸ ಚೂಡಿದಾರ್ ತಂದಿದ್ದಾರೆ.

ಮುಕುಂದಣ್ಣ ಬೇರೆ ಜಾತಿ

'ಕಾಲೇಜ್ ಡೇ'ಗೆ ತೋರಣ ಕಟ್ಟಲು ಬಣ್ಣ ಕಾಗದ ಕತ್ತರಿಸಿ ಗುಡ್ಡೆ ಹಾಕುತ್ತಿದಾಗ ಅಕಸ್ಮಾತ್ ಎಂಬಂತೆ ಗಂಟೆಗೆಂಟು ಬಾರಿ ಮೊಣಕೈಯನ್ನು ಎದೆಗೆ ಒತ್ತಲು ಪ್ರಯತ್ನಿಸುತ್ತಿದ್ದ ಕ್ಲಾಸ್‌ಮೇಟ್ ಶರತ್‌ರಾಜ, "ಚೆನ್ನಾಗಿ ಓದಬೇಕು ಬೇಬಿ ನೀನು" ಎನ್ನುತ್ತಲೇ ಕನಿಷ್ಟ ವಾರದಲ್ಲಿ ಮೂರು ಬಾರಿಯಾದರೂ ಬೆನ್ನು ಸವರುತ್ತಿದ್ದ ಸೈನ್ಸ್ ಲೆಕ್ಚರರ್ ಶಂಕರಭಟ್, ಹಿಂದೆಲ್ಲ ಬೀಡಿ ಬ್ರಾಂಚ್‌ಗೆ ಹೋಗುತ್ತಿದ್ದಾಗ ಕುಂಡೆಗೇ ಚಿವುಟುತ್ತಿದ್ದ – ಫೋರ್‌ಮನ್ ಖಾದರಣ್ಣ, ತನ್ನನ್ನೇ ಮದುವೆಯಾಗಬೇಕೆಂದು ಹಠ ಹಿಡಿದು ಸೋತು ದುಬಾಯಿಗೆ ಹೋದ 'ಲಕ್ಕಿ ಸ್ಟಾರ್ ಫುಟ್ವೇರ್'ನ ಸುಲೇಮಾನ್ ಇವರಲ್ಲಿ ಯಾರ ಜತೆಗಿಟ್ಟು ಹೋಲಿಸಿದರೂ ಬೇರೆಯೇ ಆಗಿ ನಿಲ್ಲುತ್ತಿದ್ದ. ಮುಕುಂದಣ್ಣ ಈಗೀಗ ಬೇಬಿಗೊಂದು ಒಗಟಿನ ಮೊಟ್ಟೆಯೇ ಆಗಿ ಕಾಣಿಸಲಾರಂಭಿಸಿದ್ದ. ತಾನೇ ಇಟ್ಟಿದ್ದ ಬೇಬಿ ಎಂಬ ಹೆಸರನ್ನು ಕೂಡಾ ಮುಕುಂದಣ್ಣ ಒಮ್ಮೆಯಾದರೂ ಪ್ರೀತಿಯಿಂದ ಉಚ್ಚರಿಸಿ ಕರೆದದ್ದು ಬೇಬಿಗೆ ನೆನಪಿಲ್ಲ.

ತಂದೆಯೊಬ್ಬನ ವಾತ್ಸಲ್ಯ, ಹಿರಿಯಣ್ಣನೊಬ್ಬನ ಅಧಿಕಾರದ ಗತ್ತು ಎರಡನ್ನೂ ತೋರಿಸುತ್ತಿದ್ದ ಮುಕುಂದಣ್ಣ. ಒಂದೇ ಒಂದು ದಿನವಾದರೂ ತನ್ನನ್ನು 'ತಂಗಿ ಎಂದು ಸಂಬೋಧಿಸಿದವನೂ ಅಲ್ಲ. ಒಂದು ದಿನ ಅವನೇ ಬಾಯಿಬಿಟ್ಟು ಹೇಳಿರಲಿಲ್ಲವೆ? "ನೋಡು ಬೇಬಿ, ನೀನೇನೂ ನನ್ನ ಮಗಳೂ ಅಲ್ಲ. ಒಡ ಹುಟ್ಟಿದ ತಂಗಿಯೂ ಅಲ್ಲ. ನಮ್ಮ ಬಗ್ಗೆ ಊರೊಳಗೆ ನೂರು ತರಹ ಆಡುತ್ತಿದ್ದಾರೆಂಬುದು ನಿನ್ನ ತಾಯಿಗೆ ದೊಡ್ಡ ಚಿಂತೆಯಾಗಿದೆ. ನನ್ನದೇನು ತಪ್ಪುಂಟು? ಅವರನ್ನು ಸರಿ ಮಾಡಿಕೊಳ್ಳುವ ಕೆಲಸ ನಿನ್ನದು. ಆ ನಿನ್ನ ಬೀಡಿ ಕಂಟ್ರಾಕ್ಟರ್ ನಿನಗೊಂದೂ ಗಂಡು ಬಾರದ ಹಾಗೆ ಮಾಡಿಬಿಟ್ಟಿದ್ದಾನೆ. ನನ್ನ ಮಾತನ್ನು ಯಾರೂ ಗಣನೆ ಮಾಡುವುದೇ ಇಲ್ಲ. ಇವರೆಲ್ಲ ಹೀಗೆಯೇ ಯಾಕೆ ಮಾಡುತ್ತಿದ್ದಾರೆ?"

ಯಾರನ್ನೂ ಸ್ನೇಹಿತರೆಂದು ಹಚ್ಚಿಕೊಳ್ಳದಿದ್ದ ಮುಕುಂದಣ್ಣ ಬೇಬಿಗೆ ಗಂಡು ಹುಡುಕಲು ಪ್ರಯತ್ನಿಸಲಾರಂಭಿಸಿದ್ದು ಮುತ್ತುಪ್ಪಾಡಿಯ ಎಲ್ಲರಿಗೂ ತಮಾಷೆಯ ಸಂಗತಿಯಾಗಿಬಿಟ್ಟಿತ್ತು. "ಜಾತಿಯಲ್ಲ, ನೆಂಟರಲ್ಲ ಹಾಗಿರುವಾಗ ಆ ಹುಡುಗಿಯ ಹೆಸರಲ್ಲಿ ಇವನು ಮನೆ-ಅಂಗಡಿ

ಬರೆದುಕೊಡುತ್ತೇನೆಂದು ಹೇಳಬೇಕಾದರೆ, ಅದರೊಳಗೆ ಏನೋ ಮಸಲತ್ತು ಉಂಟು ಅಂತಲೇ ಲೆಕ್ಕ." ಇದು ಮುತ್ತುಪ್ಪಾಡಿಯ ಬಂಧುಗಳ ಒಮ್ಮತದ ಅಭಿಪ್ರಾಯ.

ಮ್ಯೊದು ಬ್ಯಾರಿಯವರಂತೂ ಮತ್ತೆರಡು ಹೆಜ್ಜೆ ಮುಂದಕ್ಕೆ ಹೋಗಿದ್ದರು. "ಆ ಕಾಟು ಕೊಂಕಣಿ ಎಷ್ಟು ಒಳ್ಳೆಯವನೂ ಆಗಿದ್ದಿರಬಹುದು. ಉಪ್ಪು-ಖಾರ ತಿನ್ನುತ್ತಾನೋ ಇಲ್ಲೋ? ನಮ್ಮ ಸುಲೇಮಾನ್ ಎರಡು ವರ್ಷದ ಹಿಂದೆ ಆ ಹುಡುಗಿಯ ಬಣ್ಣ ಕಂಡೇ ಹುಚ್ಚಾಗಿ ಬಿಟ್ಟಿದ್ದ. ನನ್ನನ್ನು ಅಲ್ಲಾಹುವೇ ಬಚಾವು ಮಾಡಿಬಿಟ್ಟ. ಅವನನ್ನು ನಾನು ದುಬಾಯಿಗೆ ಪಾರ್ಸೆಲ್ ಮಾಡದೇ ಇದ್ದಿದ್ದರೆ ರಸ್ತೆಯಲ್ಲೇ ಅವಳ ಮೈಮೇಲೆ ಹಾರಲು ಹೊರಟಿದ್ದ. ಒಂದಂತೂ ನಾನೂ ಒಪ್ಪುವೆ; ಯಾರೂ ಹಾರುವ ಹಾಗೆ ಇದ್ದಾಳೆ ಅವಳು. ಹಾಗಿರುವಾಗ ಈ ಮುಕುಂದ ಹಾರದೇ ಇದ್ದಾನಾ? ...ಹ್ಹ....ಹ್ಹ..."

ಆದರೆ ಬೇಬಿಗೆ ಮುಕುಂದಣ್ಣನ ವರ್ತನೆಗಳೆಲ್ಲವೂ ವಿಚಿತ್ರವಾಗಿ ಕಾಣಿಸಲಾರಂಭಿಸಿವೆ. ಅವಳೇನೂ ಬೆರಳು ಚೀಪುವ ಮಗುವಲ್ಲ. ಪಿ.ಯು.ಸಿ.ಯ ಮೊದಲ ವರ್ಷದಲ್ಲಿದ್ದಾಗ ನಡೆದ ಘಟನೆಯೊಂದನ್ನು ನೆನಪಿಸಿಕೊಂಡರೆ ಈಗಲೂ ಅವಳಿಗೆ ಮೈ 'ಜುಂ'ಎನ್ನುತ್ತದೆ. ಮುಕುಂದಣ್ಣನ ಮುಖ ನೋಡಲೂ ನಾಚಿಕೆಯೆನ್ನಿಸುತ್ತದೆ. ಘಟನೆ ಬಹಳ ಸಣ್ಣದು. ಕ್ಲಾಸಿನ ಹುಡುಗಿಯೊಬ್ಬಳು ಅದೆಲ್ಲಿಂದಲೋ ಸಂಪಾದಿಸಿ ತಂದಿದ್ದ ವಿದೇಶೀ ಪೋಲಿ ಚಿತ್ರಗಳ ಪುಸ್ತಕವೊಂದನ್ನು ಹಿಂದಿ ನೋಟ್ಸಿನೊಳಗಿಟ್ಟಿದ್ದು – ಅದು ಹೇಗೋ ಮುಕುಂದಣ್ಣನ ಕೈಗೆ ಸಿಕ್ಕಿತ್ತು. ಸಂಜೆ ಶಾಲೆ ಮುಗಿಸಿಕೊಂಡು ಮರಳಿದ ಬೇಬಿ ಅಂಗಡಿಯೊಳಕ್ಕೆ ಬರುತ್ತಿರುವಂತೆಯೇ ಪುಸ್ತಕವನ್ನು ಆಕೆಯತ್ತ ಚಾಚಿದ ಮುಕುಂದಣ್ಣ "ಇಂಥದೆಲ್ಲ ಈಗ ಶಾಲೆಯಲ್ಲಿ ಸಿಗುತ್ತದೆಯಾ?" ಎಂದಷ್ಟೇ ಪ್ರಶ್ನಿಸಿ ಅದನ್ನು ಅವಳೆದುರು ಮೇಜಿನ ಮೇಲೆ ಎಸೆದುಬಿಟ್ಟಿದ್ದ. ನಡುರಸ್ತೆಯಲ್ಲಿ ಬೆತ್ತಲೆಯಾಗಿಸಿ ಚಪ್ಪಲಿಯಿಂದ ಹೊಡೆಸಿಕೊಂಡರೂ ಅವಳಿಗೆ ಅಷ್ಟೊಂದು ಸಂಕೋಚವಾಗುತ್ತಿರಲಿಲ್ಲ. ಆತನ ಎದುರು ನಿಲ್ಲಲಾರದೆ –ಅಲ್ಲಿಂದ ಎದ್ದು ಬೇರೆ ಕಡೆಗೆ ಹೋಗಲಾರದೆ, ಗಲಿಬಿಲಿಯಿಂದ ಕಲ್ಲಿನಂತೆ ನಿಂತುಬಿಟ್ಟಿದ್ದ ಆಕೆಯನ್ನು ದುರುಗುಟ್ಟಿ ನೋಡಿದ್ದ ಮುಕುಂದಣ್ಣ ಹೇಳಿದ್ದು: "ಇನ್ನು ಮುಂದೆ ಅಂಥದ್ದು ಏನಿದ್ದರೂ ಶಾಲೆಯಲ್ಲೇ ಓದಿ ಮುಗಿಸಬೇಕು. ಇಲ್ಲಿಗೆ ತರಬಾರದು ಗೊತ್ತಾಯ್ತಲ್ಲಾ?" ಬೇಬಿಗೆ ಮುಂದಿನೊಂದು ತಿಂಗಳು ಮುಕುಂದಣ್ಣನ ಮುಖ ನೋಡಲೂ ಸಂಕೋಚವಾಗುತ್ತಿತ್ತು. ಆದರೆ ಮುಕುಂದಣ್ಣ ಆ ವಿಷಯವನ್ನು ಅಂದಿಗೇ ಮರೆತುಬಿಟ್ಟಿದ್ದ. ಬೇಬಿಗೆ ನಿಜಕ್ಕೂ ಅರ್ಥವಾಗಿರಲಿಲ್ಲ. ದೇವರು ಇದ್ದರೆ ಹೀಗಿರದ್ದಿಬಹುದೇ?

ಬೇಬಿಗೊಂದು ಗಂಡು ಹುಡುಕುವುದು ಇಷ್ಟೊಂದು ಪ್ರಯಾಸದ ಕೆಲಸವಾದೀತೆಂಬ ಕಲ್ಪನೆಯು ಮುಕುಂದಣ್ಣನಿಗೆ ಇದ್ದಿರಲಿಲ್ಲ. ಯಾರ ಜತೆಗೂ ಸುಖ ದುಃಖ ವಿಚಾರಿಸಿಯ ಅಭ್ಯಾಸವಿರದಿದ್ದ ಮುಕುಂದಣ್ಣನಿಗೆ ಬೇಬಿಯ ಸಲುವಾಗಿ ಹುಡುಗನನ್ನು ವಿಚಾರಿಸಿದ ಕಡೆಗಳಲ್ಲಿ ನಿರಾಸೆಯೇ ಆಗುತ್ತಿತ್ತು. ತಾನು ಹೋಲ್ ಸೇಲ್‌ನಲ್ಲಿ ಪುಸ್ತಕ ಕೊಂಡುಕೊಳ್ಳುತ್ತಿದ್ದ ತಾಲ್ಲೂಕು ಕೇಂದ್ರದ ಸೊಸೈಟಿಯ ಗುಮಾಸ್ತನೊಬ್ಬನ ಬಗ್ಗೆ ಮುಕುಂದಣ್ಣನಿಗೆ ಬಹಳ ಆಸೆಯಿತ್ತು. ಆ ಹುಡುಗನೇನೂ ಖಡಾಖಂಡಿತವಾಗಿ ಬೇಡವೆಂದೇನೂ ಹೇಳಲಿಲ್ಲ. ಆದರೆ ಆತನ ತಾಯಿಯದ್ದೇ ತಕರಾರು. ಒಂದಕ್ಷರವೂ ಕುರಾನು ಓದದ, ಬುರ್ಕಾ ಹಾಕದ ಹುಡುಗಿಯನ್ನು ಸೊಸೆಯಾಗಿ ಸ್ವೀಕರಿಸಲು ಆಕೆ ತಯಾರಿರಲಿಲ್ಲ.

ಆರು ತಿಂಗಳ ಹುಡುಕಾಟದಲ್ಲಿ ಮುಕುಂದಣ್ಣನಿಗೆ ತನ್ನ ತಾಕತ್ತಿನ ಮಿತಿ ಅರ್ಥವಾಗಲಾರಂಭಿಸಿತ್ತು. ಬಹು ದೊಡ್ಡ ಅಪರಾಧ ಮಾಡಿದವನಂತೆ ತನ್ನೊಳಗೇ ಕೊರಗಲಾರಂಭಿಸಿದ್ದ. ಮುಕುಂದಣ್ಣ ಅಂಗಡಿ ವ್ಯಾಪಾರವನ್ನೂ ಕಡೆಗಣಿಸತೊಡಗಿದ್ದು ಬೇಬಿಗೂ ಅರಿವಾಗತೊಡಗಿತ್ತು. ಒಂದು ದಿನ ಬೇಬಿಯನ್ನು ಅನುಕಂಪದಿಂದೆಂಬಂತೆ ದಿಟ್ಟಿಸುತ್ತಾ "ನಾನು ಸೋತುಬಿಟ್ಟೆ ಬೇಬಿ". ಇನ್ನಾರು ತಿಂಗಳು ಹೇಗಾದರೂ ಸುಧಾರಿಸು. ಮುಂದಿನ ವರ್ಷದಿಂದ ನಿನ್ನನ್ನು ಮಂಗಳೂರಿನ ಹಾಸ್ಟೆಲಿನಲ್ಲಿ ಹಾಕುತ್ತೇನೆ. ನೀನು ಕಾಲೇಜಿಗೆ ಸೇರಿಬಿಡು. ನಿನ್ನ ತಾಯಿಯನ್ನು ನಾನು ನೋಡಿಕೊಳ್ಳುತ್ತೇನೆ".

ತನ್ನ ಮದುವೆಯ ಸಮಸ್ಯೆಯನ್ನು ಮೂರು ವರ್ಷ ಮುಂದೂಡುವ ಪ್ರಯತ್ನವಿದು ಎಂಬುದು ಬೇಬಿಗೂ ಅರ್ಥವಾಗಿತ್ತು. ಆಕೆಯಾದರೂ ಪಾಪ ಏನು ಮಾಡಿಯಾಳು? ಅದೇ ದಿನಗಳಲ್ಲಿ ಬೇಬಿ ಎಲ್ಲವನ್ನೂ ವಿವರಿಸಿ ಸುಮತಿಗೊಂದು ಪತ್ರ ಬರೆದಳು.

ಸುಮತಿಯಿಂದ ಬಂದ ಉತ್ತರ ಬೇಬಿಯ ನಿರೀಕ್ಷೆಯಂತೆಯೇ ಇತ್ತು. ಕೊನೆಯ ಸಾಲುಗಳಂತೂ ಬಲು ನೇರ ಮತ್ತು ಸ್ಪಷ್ಟ "ಗಂಡಸರೆಲ್ಲರೂ ಸಾಮಾನ್ಯವಾಗಿ ಒಂದೇ ಜಾತಿ ಬೇಬಿ. ನಾನಿಲ್ಲಿ ದಿನವೂ ಅನುಭವಿಸುತ್ತಿದ್ದೇನೆ. ನಾಳೆ ಸಾಯುವ ರೋಗಿಯೇ ಇರಲಿ– ನಮಗೆ ಬುದ್ದಿವಾದ ಹೇಳುವ ಡಾಕ್ಟರೇ ಇರಲಿ– ಆತನು ಗಂಡಸು ಹೌದು ಅಂತ ಆದರೆ, ನಮ್ಮ ಮುಖ ನೋಡುವ ಮೊದಲು ಕಣ್ಣಲ್ಲಿ ನಮ್ಮ ರವಿಕೆ ಕಳಚಿ ಎದೆಯ ಗಾತ್ರವನ್ನು ಅಳೆದುಬಿಟ್ಟಿರುತ್ತಾನೆ. ನೀನು ಬರೆದುದನ್ನು ನೋಡುವಾಗ ಮುಕುಂದಣ್ಣ ಈ ಜಾತಿಗೆ ಸೇರಿದವನಂತೆ ಕಾಣಿಸುವುದಿಲ್ಲ. ನಿನ್ನ ನಿರ್ಧಾರ ಸರಿಯಾದದ್ದೆ. ಇದಕ್ಕಿಂತ ಒಳ್ಳೆಯದು ನನಗೇನೂ ಹೊಳೆಯುತ್ತಿಲ್ಲ".

ಮತ್ತೆರಡು ದಿನ ಯೋಚಿಸಿದ ಬೇಬಿ ಸಂಜೆ ಅಂಗಡಿ ಮುಚ್ಚುವ ಮೊದಲು ಕಾಗದದ ತುಂಡೊಂದರಲ್ಲಿ "ನಾನು ಮುಂದಿನ ವರ್ಷ ಕಾಲೇಜಿಗೆ ಸೇರುವುದಿಲ್ಲ. ಬೇರೆಯವರನ್ನು ಮದುವೆಯಾಗುವುದೂ ಇಲ್ಲ. ಜೀವಮಾನ ಪೂರ್ತಿ ನಿಮ್ಮ ಜತೆಗೇ ಇರುತ್ತೇನೆ" ಎಂದು ಬರೆದು ಮುಕುಂದಣ್ಣನಿಗೆ ಕಾಣಿಸುವಂತೆ ಮೇಜಿನ ಮೇಲಿಟ್ಟು ಮನೆಗೆ ಧಾವಿಸಿದಳು. ಅಮ್ಮ ಆ ರಾತ್ರಿಯಿಡೀ ಭಯಾನಕವಾಗಿ ಕೆಮ್ಮುತ್ತಿದ್ದಳು. ಆಕಾಶಕ್ಕೆ ನೀಲಿ ಪರದೆ

ಮುಕುಂದಣ್ಣ ಮಾಡಿದ್ದೇ ಸರಿ–ಎಂದು ಹೇಳಬಲ್ಲ ಹುಡುಗರ ತಂಡವೊಂದು ಇದ್ದಿರುತ್ತಿದ್ದರೆ, ಆತ ಬೇಬಿಯನ್ನು ಮಂಗಳೂರಲ್ಲಿ ರಿಜಿಸ್ಟರ್ ಮದುವೆ ಮಾಡಿಕೊಂಡು ತಂದು, ತನ್ನ ಮಾಳಿಗೆ ಮನೆಯಲ್ಲೇ ಇರಿಸಿಕೊಂಡ ಸುದ್ದಿ ಮುತ್ತುಪ್ಪಾಡಿಯನ್ನು ಖಂಡಿತವಾಗಿ ನಾಲ್ಕು ದಿನಗಳ ಕಾಲ ರಣರಂಗವಾಗಿಸಬಹುದಿತ್ತು. ಬೇಬಿಯನ್ನು ಶಾಲೆ ಕಲಿಸುವ ನೆಪದಲ್ಲಿ ಬುರ್ಕಾ ಹಾಕಿಸದೆ ರಸ್ತೆಯಲ್ಲಿ ಮುಕುಂದಣ್ಣ ಮೆರವಣಿಗೆ ಮಾಡಿಸುತ್ತಿದ್ದಾನೆ ಎಂದು ದೂರಿದವರಿಗೆ ಕೂಡಾ, ಆತ ಬೇಬಿಗೊಂದು ಗಂಡು ಹುಡುಕಲು ನಡೆಸಿದ ಪ್ರಯತ್ನದ ಪ್ರಾಮಾಣಿಕತೆಯ ಬಗ್ಗೆ ಎರಡು ಮಾತು ಹೇಳಲು ನಾಲಗೆ ಬರಲಿಕ್ಕಿಲ್ಲ. ಇದೆಲ್ಲಕ್ಕಿಂತ ಹೆಚ್ಚಾಗಿ, ಸರಕಾರೀ ಅಧಿಕಾರಿಗಳ ಎದುರು ದಸ್ಕತುಹಾಕಿ ಮದುವೆಯಾದವರನ್ನು 'ತಲಾಕ್' ಹೇಳಿಸಿ ಬಿಡುಗಡೆ ಮಾಡಿಸಲು ಸಾಧ್ಯವಾಗುವುದಿಲ್ಲ ಎಂಬ 'ಲಾ ಪಾಯಿಂಟನ್ನು'

ತಾಲ್ಲೂಕಾಫೀಸಿನ ಕ್ಲಾರ್ಕು ಲತೀಫ ಹೇಳಿದ್ದು ಮುತ್ತುಪ್ಪಾಡಿಯ ಬಿಸಿ ರಕ್ತದ ಹುಡುಗರಿಗೂ ಗಲಿಬಿಲಿಯನ್ನುಂಟು ಮಾಡಿತ್ತು. ಮೊನ್ನೆ ಮೊನ್ನೆಯವರೆಗೂ ತಮ್ಮ ಕಣ್ಣೆದುರಲ್ಲೇ ಪುಟು ಪುಟು ಓಡಾಡುತ್ತಿದ ಹುಡುಗಿ. ನೋಡು ನೋಡುತ್ತಿರುವಂತೆಯೇ ಉರುಟುರುಟಾಗಿ ಬೆಳೆದು 'ಮುತ್ತುಪ್ಪಾಡಿಯ ವೈಜಯಂತಿಮಾಲಾ' ಆಗಿ ಬಿಟ್ಟವಳು, ಇದೀಗ ಇದ್ದಕ್ಕಿದ್ದ ಹಾಗೆಯೇ ಕ್ವಿಂಟಾಲು ಚೀಲದಂತಹ ಮುಕುಂದಣ್ಣ ಜತೆ ಹಗಲು–ರಾತ್ರಿ ಒಬ್ಬಳೇ ಇರುತ್ತಾಳೆ ಎನ್ನುವ ಯೋಚನೆಯೇ ಕೆಲವು ಯುವಕರ ನಿದ್ರೆಯನ್ನು ಹಾಳು ಮಾಡಿದ್ದಂತೂ ಸತ್ಯ. ಆದರೆ ಎಲ್ಲರೂ ಒಟ್ಟಾಗಿ ಹೋಗಿ ಆತನ ಅಂಗಡಿಯ ಎದುರು ನಿಂತು ಸಾವಿರ ಶಾಪ ಹಾಕಿದರೂ, ಅಂಗಡಿಯ ಮಂಡದ ಮೇಲೆ ನೀರಾನೆ ಯಂತೆ ಬಿದ್ದುಕೊಂಡಿರುವ ಆತ ಕತ್ತು ಹೊರಳಿಸಿಯೂ ನೋಡಲಾರ ಎಂಬ ಗುಟ್ಟು ಎಲ್ಲರಿಗೂ ಗೊತ್ತಿದ್ದದ್ದೆ. ಒಂದಿಬ್ಬರು ಹೆಂಗಸರು ಕುಂಞಪಾತುಮ್ಮಳನ್ನು ಈ ಬಗ್ಗೆ ವಿಚಾರಿಸಿಕೊಂಡು ಬರಲು ಹೋಗಿದ್ದರಾದರೂ ಆಕೆಯ ಏದುಬ್ಬಸದ ಯಾತನೆಯನ್ನು ಕಂಡು ಭಯದಿಂದಲೇ ಉಸಿರಡಗಿಸಿಕೊಂಡು ಮರಳಿದ್ದರು.

ಬೇಬಿಗೆ ನೆನಪಿರುವ ದಿನಗಳಿಂದಲೂ ಮುಕುಂದಣ್ಣ ರಾತ್ರಿ ಹೊತ್ತು ಮಲಗುತ್ತಿದದ್ದು ಮಾಳಿಗೆಯ ಉತ್ತರ ದಿಕ್ಕಿನಲ್ಲಿದ್ದ ಪುಟ್ಟ ಕೋಣೆಯಲ್ಲಿ. ಬೇಬಿಯ ಗುಡಿಸಲಲ್ಲಿ ವಿದ್ಯುತ್ ಸೌಕರ್ಯ ಇಲ್ಲದ್ದರಿಂದ ಆಕೆ ರಾತ್ರಿ ಹೊತ್ತು ಓದಿಕೊಳ್ಳಲು ಮಾಳಿಗೆಯ ದೊಡ್ಡ ಕೋಣೆಯನ್ನೇ ಉಪಯೋಗಿಸುತ್ತಿದ್ದಳು. ಅವಳು ಪಿ.ಯು.ಸಿ. ಸೇರಿದ ಬಳಿಕ ಹೊಸ ಮೇಜು–ಕುರ್ಚಿ ಮಾಡಿಸಿದ ಮುಕುಂದಣ್ಣ ಕೆಂಪು ಬಣ್ಣದ ಚಂದದ ಟೇಬಲ್ ಲ್ಯಾಂಪನ್ನೂ ತಂದಿರಿಸಿದ್ದ. ಪರೀಕ್ಷೆಯ ದಿನಗಳಲ್ಲಿ ಬೇಬಿ ರಾತ್ರಿ ಬಹಳ ಹೊತ್ತುಗಳವರೆಗೂ ಮಾಳಿಗೆಯಲ್ಲೇ ಓದುತ್ತಾ ಕುಳಿತಿರುತ್ತಿದ್ದರೆ, ಮುಕುಂದಣ್ಣ ರಾತ್ರಿ ಒಂಭತ್ತಕ್ಕೆ ತಮ್ಮ ಕೋಣೆ ಸೇರಿ ಗೊರಕೆ ಹೊಡೆಯಲಾರಂಭಿಸುತ್ತಿದ್ದ, ಆದರೂ ಮಗಳ ಮಾಳಿಗೆ ಮನೆಯ ದೀಪ ಆರಿಸಿ ಕೆಳಗಿಳಿದು ಹೊರಗಿನಿಂದ ಬೀಗ ಹಾಕಿಕೊಂಡು ತನ್ನ ಗುಡಿಸಲೊಳಗೆ ಕಾಲಿಡುವ ತನಕವೂ ಕುಂಞಪಾತುಮ್ಮ ತನ್ನ ಮನೆಯ ದೀಪ ಆರಿಸುತ್ತಿರಲಿಲ್ಲ. ರಾತ್ರಿಯ ಬಹುಪಾಲು ಸಮಯವನ್ನು ಕೆಮ್ಮುತ್ತಾ ಹಗಲು ಮಾಡುತ್ತಿದ್ದ ಅವಳ ಬಳಿಗೆ ಮಗಳು ಮನೆಗೆ ಬರುವವರೆಗೆ ನಿದ್ರೆ ಸುಳಿಯುತ್ತಲೂ ಇರಲಿಲ್ಲ.

ಬೇಬಿಯನ್ನು ಮುಕುಂದಣ್ಣ ಮದುವೆ ಮಾಡಿಕೊಂಡು ಕರೆದು ತಂದ ದಿನ ಕುಂಞಪಾತುಮ್ಮಳಿಗೆ ತನ್ನ ಮಗಳು ಮನೆಗೆ ಇಂದು ಬರುವುದಿಲ್ಲವೆಂದು ಗೋತ್ತಿದ್ದರೂ ಮಧ್ಯರಾತ್ರಿಯವರೆಗೂ ನಿದ್ದೆ ಬಂದಿರಲಿಲ್ಲ. ಅವಳು, ಹೀಗೂ ಕೂಡ ಮದುವೆಯಾಗುತ್ತದೆ ಎಂದು ಕನಸು ಕಂಡವಳೂ ಅಲ್ಲ. ಮಸೀದಿಯ ಖಾಜಿಯಾಗಲೀ, ಊರಿನ ಹಿರಿಯರಾಗಲೀ, ಯಾರೂ ಭಾಗವಹಿಸದೆ ಮದುವೆ ನಡೆಯುತ್ತದೆ ಎಂಬುದನ್ನು ನಂಬಲೂ ಅವಳಿಗೆ ಕಷ್ಟವಾಗುತ್ತಿತ್ತು. ತಾನು ಮುಕುಂದಣ್ಣನನ್ನೇ ಮದುವೆಯಾಗುವವಳಿದ್ದೇನೆ ಎಂದು ತಿಂಗಳೊಂದರ ಕೆಳಗೆ ಮಗಳು ಹೇಳಿದಾಗಲೂ ಕುಂಞಪಾತುಮ್ಮ ತನ್ನ ಮಗಳು ಸುಳ್ಳು ಹೇಳುತ್ತಿದ್ದಾಳೆಂದೇ ಸಮಾಧಾನ ಪಟ್ಟುಕೊಳ್ಳಲು ಯತ್ನಿಸಿದ್ದಳು. ತನ್ನ ಗಂಡನ ವಯಸ್ಸಿಗೆ ಹತ್ತಿರ ಹತ್ತಿರವಿದ್ದ ಯುವಕನೊಬ್ಬನನ್ನು ಅಳಿಯನೆಂದು ಸ್ವೀಕರಿಸಲೂ ಆಕೆಗೆ ಮುಜುಗರವಾಗುತ್ತಿತ್ತು. ಅದರಲ್ಲೂ ಬೇರೆ ಜಾತಿಯ ಯುವಕನೊಬ್ಬನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಡಲು ಆಕೆಗೆ ಎಳ್ಳಿನಷ್ಟು ಮನಸ್ಸಿರಲಿಲ್ಲ. ಕುಂಞೆಪಾತುಮ್ಮಳಿಗೆ ಗೊತ್ತಿರುವಂತೆ ಈ ಮದುವೆಯ ಪ್ರಸ್ತಾಪವನ್ನೂ ಮೊದಲು ಎತ್ತಿದವಳು ಸಬೀನಾ. ಮುಕುಂದಣ್ಣ ಆರಂಭದಲ್ಲಿ ಬೇಬಿಯ ಮಾತನ್ನು ನಿರಾಕರಿಸಲಾಗದೆ ಒಪ್ಪಿದನಂತೆ. ಇದೆಲ್ಲವನ್ನೂ ಆಕೆಗೆ ಮಗಳೇ ಹೇಳಿದ್ದು. ಈ ಶಾಲೆಗೆ ಹೋದ ಹುಡುಗಿಯರೆಲ್ಲ ಹೀಗೆಯೇ ಏನೋ; ಕುಂಞೆಪಾತುಮ್ಮಳಿಗೆ ಅರ್ಥವೇ ಆಗುತ್ತಿರಲಿಲ್ಲ. ತಮ್ಮ ಮದುವೆಯ ಬಗ್ಗೆ ತಾವೇ ಅದೆಷ್ಟು ಧೈರ್ಯದಿಂದ ನಾಚಿಕೆ ಬಿಟ್ಟು ಮಾತನಾಡುತ್ತಾರೆ! ಒಂದು ರೀತಿಯಲ್ಲಿ ಕುಂಞೆಪಾತುಮ್ಮಳಿಗೆ ತನ್ನ ಮಗಳ ಧೈರ್ಯದ ಬಗ್ಗೆ ಮೆಚ್ಚುಗೆಯೇ ಉಂಟಾಗಿತ್ತು. ಬಿಳಿಯ ಕಾಗದಕ್ಕೆ ದಸ್ಕತು ಹಾಕುವ ಮೂಲಕ ಮದುವೆಯಾಗಿ ಬಂದ ಮಗಳು ಸಂಜೆಯ ಹೊತ್ತೊಮ್ಮೆ ಮನೆಗೆ ಬಂದಿದ್ದರೂ, ಹೆಚ್ಚು ಮಾತನೂ ಆಡಿದ್ದಿರಲಿಲ್ಲ. ಕುಂಞೆಪಾತುಮ್ಮಳಿಗೂ ಮುಕುಂದಣ್ಣನ ಹೆಂಡತಿರೊಡನೆ ಮಾತನಾಡಬಹುದಾದ ವಿಷಯಗಳೂ ಇದ್ದಿರಲಿಲ್ಲ. ಅವಳ ಯೋಚನೆಯಂತೆ ಮಗಳ ಬದುಕಿನಲ್ಲಿ ಬಹುದೊಡ್ಡ ಬದಲಾವಣೆಯೇನೂ ಆದಂತಿಲ್ಲ. ಕಳೆದ ಹದಿನೈದು ವರ್ಷಗಳಿಂದಲೂ ಮಾಳಿಗೆ ಮನೆಯಲ್ಲಿ ಓಡಾಡುತ್ತಿದ್ದ ಹುಡುಗಿ ಇಂದು ರಾತ್ರಿ ಮಲಗಲು ಮನೆಗೆ ಬರಲಾರಳು– ಇಷ್ಟೇ ವ್ಯತ್ಯಾಸ.

ಮುಕುಂದಣ್ಣನ ಹಾಸಿಗೆ ಸಿದ್ದಪಡಿಸುವ ತನಕವೂ ಬೇಬಿಗೆ ತಾನೊಬ್ಬಳು ಮದುಮಗಳು ಎಂಬ ಭಾವನೆ ಬಂದಿರಲಿಲ್ಲ. ಕಳೆದ ಐದಾರು ವರ್ಷಗಳಿಂದಲೂ ಮುಕುಂದಣ್ಣನ ಬಟ್ಟೆಬರೆ ಒಗೆಯುವುದು, ಅಡುಗೆ ಕೆಲಸ ಮಾಡಿಡುವುದು, ಹಾಸಿಗೆ ಸರಿಪಡಿಸುವುದು – ಎಲ್ಲವನ್ನೂ ಯಾಂತ್ರಿಕವಾಗಿ ನಡೆಸಿಕೊಂಡು ಬರುತ್ತಿದ್ದ ಬೇಬಿಗೆ ಎಲ್ಲವೂ ಮಾಮೂಲಿ ಕೆಲಸಗಳೇ ಆಗಿದ್ದವು.

ಆಕೆಗೆ ತಾನಿಂದು ಮುಕುಂದಣ್ಣನ ಹೆಂಡತಿ– ಅವನ ಜತೆ ಒಂದೇ ಹಾಸಿಗೆಯಲ್ಲಿ ಮಲಗಬೇಕಾಗುತ್ತದೆ ಎಂಬ ಚಿಂತೆ ಏಕಾಯೇಕಿ ಎದುರಾದದ್ದು, ಮುಕುಂದಣ್ಣ ತನ್ನ ಮಲಗುವ ಮನೆಯ ಬಾಗಿಲನ್ನು ಒಳಗಡೆಯಿಂದ ಚಿಲಕ ಹಾಕಿ ಭದ್ರಪಡಿಸಿದ ಬಳಿಕವೇ. ಅದು ಅವಳಿಗೆ ತೀರಾ ಅನಿರೀಕ್ಷಿತವಾಗಿತ್ತು. ಅಡುಗೆ ಮನೆಯನ್ನು ಓರಣವಾಗಿರಿಸಿ ಮಾಳಿಗೆಗೆ ಕಾಲಿಟ್ಟವಳಿಗೆ ಮುಚ್ಚಿದ ಬಾಗಿಲನ್ನು ಕಂಡಾಗ ಸಿಡಿಲೆರಗಿದಂತಾಗಿತ್ತು. ತಾನೀಗ ಏನು ಮಾಡಬೇಕು ಬಾಗಿಲು ತೆರೆಯುವಂತೆ ಮುಕುಂದಣ್ಣನಲ್ಲಿ ವಿನಂತಿಸಬೇಕೆ? ಇದ್ದಕ್ಕಿದ್ದ ಹಾಗೆ ನಾಚಿಕೆ, ಅಪಮಾನ– ಕೋಪ ಎಲ್ಲವೂ ಮೈ ತುಂಬಿ ಗಲಿಬಿಲಿಯಾಯಿತು. ಮುಕುಂದ ತನ್ನನ್ನು ಸತಾಯಿಸಲು ಬಾಗಿಲು ಹಾಕಿದ್ದು, ತಾನು ಬಾಗಿಲು ತೆರೆಯಲು ಹೇಳುವುದನ್ನು ಕೇಳಲು ಕಾತರಿಸುತ್ತಾ ಒಳಗೆ ಕುಳಿತಿರಬಹುದೆ? ಈ ಕಲ್ಪನೆಯಿಂದಾಗಿ ಒಂದು ಕ್ಷಣ ಎದೆ 'ಜುಂ' ಅಂದಿತು. ಅಥವಾ ತಾನು ಹೊರಗೆಯೇ ರಾತ್ರಿಯಿಡೀ ನಿದ್ರೆಯಿಲ್ಲದೆ ಅಳುತ್ತಿರಬೇಕೆ? ಭಯದಿಂದ ಎದೆಯೊಳಗೆ ಯಾರೊ ಕೈಹಾಕಿ ಕದಡಿದಂತಾಯಿತು. ತಾನೀಗ ಏನು ಮಾಡುವುದು? ಕಿಟಕಿಯ ಬಳಿಗೆ ನಡೆದವಳಿಗೆ ರಸ್ತೆಯ ಎದುರು ಭಾಗದಲ್ಲಿ ಕಾಣಿಸಿದ ಅವಳ ಗುಡಿಸಲಲ್ಲಿ ದೀಪ ಆರಿಹೋಗಿತ್ತು.

ರಾತ್ರಿಯಿಡೀ ನಿದ್ರೆಗೆಟ್ಟು ಅಳುತ್ತಾ ಕಣ್ಣುಕೆಂಪು ಮಾಡಿಕೊಂಡು ಬೇಬಿ ಮರು ದಿನ ಮುಂಜಾನೆ ಚಹ ಮಾಡಿಕೊಂಡು ಮಾಳಿಗೆ ಮೆಟ್ಟಿಲು ಹತ್ತುತ್ತಿರುವಾಗ ಎದೆ ನೂರು ಬಡಿಯುತ್ತಿತ್ತು. ಮುಕುಂದಣ್ಣನನ್ನು ಎದುರಿಸುವುದು ಹೇಗೆಂಬ ಯೋಚನೆ ದೇಹವನ್ನೆಲ್ಲಾ ಹಿಂಡಿ ಹಿಪ್ಪೆ ಮಾಡುತ್ತಿತ್ತು.

ಮುಕುಂದಣ್ಣ ಹೊರಗಿನ ಕುರ್ಚಿಯಲ್ಲಿ ಕೂತು ರಸ್ತೆ ನೋಡುತ್ತಿದ್ದವನು ಬೇಬಿ ಒಳಗೆ ಕಾಲಿಟ್ಟಾಗ, ಒಂದು ಕ್ಷಣ ಕತ್ತು ತಿರುವಿದವನು ಮತ್ತೆ ಹಿಂದಿನಂತೆ ರಸ್ತೆಯ ಕಣ್ಣು ತಿರುಗಿಸಿದ್ದ. ಚಹದ ಗ್ಲಾಸನ್ನು ಅಲ್ಲಿಯೇ ಪಕ್ಕದ ಮೇಜಿನ ಮೇಲಿರಿಸಿದ ಬೇಬಿ ಮುಂದೇನು ಮಾಡಬೇಕು ಎಂದು ತೋಚದೆ ಅಲ್ಲೇ ನಿಂತುಬಿಟ್ಟಿದ್ದಳು.

ಮುಕುಂದಣ್ಣ ಚಹದ ಗ್ಲಾಸು ಎತ್ತಿಕೊಂಡದ್ದು ಕಂಡಾಗ ಸಾವರಿಸಿಕೊಂಡ ಬೇಬಿ ಏನಾದರೂ ಮಾತನಾಡಬೇಕು ಎಂದು ನಾಲಗೆ ಸವರುವಷ್ಟರಲ್ಲಿ ಮುಕುಂದಣ್ಣನೇ ಪ್ರಶ್ನಿಸಿದ್ದ.

"ನಿಜ ಹೇಳಬೇಕು ನೀನು. ರಾತ್ರಿಯೇ ಹೇಳಬೇಕೆಂದಿದ್ದೆ. ನಿನ್ನ ಶಾಲೆಯ ಹುಡುಗಿಯರು ನನ್ನನ್ನು ಆನೆಮರಿ ಎಂದು ಹಾಸ್ಯ ಮಾಡುತ್ತಿದ್ದಾಗ ನೀನೂ ಕೂಡಾ ಅದರ ಒಟ್ಟಿಗೆ ಸೇರಿ ನಗುತ್ತಿರಲಿಲ್ಲವಾ?"

ಬೇಬಿಗೆ ನಿಂತ ನೆಲ ಕುಸಿಯತೊಡಗಿದ ಅನುಭವ, ಈ ಮುಕುಂದಣ್ಣ ಹೀಗೇಕೆ ಪ್ರಶ್ನಿಸುತ್ತಿದ್ದಾರೆ? ಈ ಪ್ರಶ್ನೆಗೆ ಏನೆಂದು ಉತ್ತರ ಹೇಳುವುದು? ಇಲ್ಲವೆಂದು ಹೇಳಿ ಬಿಟ್ಟರೆ ಮುಕುಂದನಣ್ಣನಿಗೆ ಸಂತೋಷವಾಗುತ್ತದೆಯೋ?

"ಏನಾಗಿದೆ ನಿಮಗೆ? ಹೀಗೇಕೆ ಮಾಡುತ್ತಿದ್ದೀರಿ?" ಎಂಬೆರಡು ಪ್ರಶ್ನೆಗಳನ್ನು ಹೊಂದಿಸಿಕೊಳ್ಳುವಷ್ಟರಲ್ಲೇ ಬೇಬಿಗೆ ಅಳು ಉಕ್ಕಿ ಬಂತು. ಗೋಡೆಗೆ ಮುಖವಿಟ್ಟು ಅಳತೊಡಗಿದಳು. ಬಹಳ ಹೊತ್ತು ಬೇಬಿ ಅಳುತ್ತಲೇ ಇದ್ದಳಾದರೂ ಮುಕುಂದಣ್ಣ ಕುಳಿತೆ ತನ್ನ ಭಂಗಿ ಬದಲಿಸಿರಲಿಲ್ಲ. ಬೇಬಿ ತನ್ನತ್ತ ಮುಖ ತಿರುಗಿಸುವುದನ್ನೇ ಕಾದು ಕುಳಿತಂತಿದ್ದ ಆತ, ಆಕೆಯ ಕಣ್ಣುಗಳು ತನ್ನತ್ತ ಹೊರಳುತ್ತಿರುವಂತೆಯೇ ಪ್ರಶ್ನಿಸಿದ್ದ, "ನಿಜ ಹೇಳಬೇಕು ಬೇಬಿ. ಬೇಕಾದರೆ ನಿಮ್ಮ ಕಾಲು ಹಿಡಿಯುತ್ತೇನೆ. ನನ್ನನ್ನು ಕಂಡರೆ ನಿನಗೆ ಹೇಸಿಗೆಯಾಗುತ್ತದೆಯಾ?" ಮುಕುಂದಣ್ಣನ ಪ್ರಶ್ನೆಯಲ್ಲಿ ಬೆರೆತಿದ್ದ ದೈನ್ಯತೆ ಬೇಬಿಗೂ ಅಸಹ್ಯವಾಗಿತ್ತು. ಮುಂಕುದಣ್ಣ ಮೊಟ್ಟ ಮೊದಲ ಬಾರಿಗೆ ಅವಳಿಗೆ ಕುರೂಪಿಯಾಗಿ ಕಾಣಿಸಿದ್ದ! ಆತನ ಮುಖ ನೋಡಲೂ ಇಷ್ಟವಾಗದೆ ಮೆಟ್ಟಲಿಳಿದು ಕೆಳಗೆ ಹೋಗಿಬಿಟ್ಟಿದ್ದಳು ಅವಳು.

ಮುಂದಿನ ಹತ್ತು ಹದಿನೈದು ದಿನಗಳಲ್ಲಿ ಗಂಡ ಹೆಂಡಿರ ನಡುವಿನ ದಿನಚರಿಯಲ್ಲಿ ವಿಶೇಷವಾದ ಬದಲಾವಣೆಯೇನೂ ಆಗಲಿಲ್ಲ. ಬೇಬಿ ಅಂಗಡಿಗೆ ಇಳಿದು ಬರಬಾರದೆಂದು ಮುಕುಂದಣ್ಣ ಮೊದಲ ದಿನವೇ ಕಟ್ಟಪ್ಪಣೆ ಮಾಡಿದ್ದ. ಕುಂಞಪಾತುಮ್ಮ ದಿನಕ್ಕೊಮ್ಮೆ ಬಂದು ಮಗಳನ್ನು ಮಾತನಾಡಿಸಿಕೊಂಡು ಹೋಗುತ್ತಿದ್ದಳು.

ತಾಯಿಯೊಡನೆ ತನ್ನ ಅವಸ್ಥೆಯನ್ನು ಹೇಳಲೇಬಾರದು ಎಂದು ಎಷ್ಟೇ ತಡೆದುಕೊಂಡರೂ ಮಗಳ ಬಣ್ಣಗೆಟ್ಟ ಮುಖವನ್ನು ಕಂಡು ಕುಂಞಪಾತುಮ್ಮಳೆ ಎಲ್ಲವನ್ನೂ ಗ್ರಹಿಸಿದಳು.

"ಗಂಡಸರದು ತಪ್ಪಿಲ್ಲ ಮೋಳೆ, ನೀನು ಇದಿಷ್ಟು ದಿನ ಹೊರಗೆ ಓಡಾಡಿದ್ದೇ ತಪ್ಪು. ನಮ್ಮ ಜಾತಿಯ ಯಾವ ಹೆಂಗಸರು ಬುರ್ಕಾ ಹಾಕದೆ ಹೊರಗೆ ಹೋಗುತ್ತಾರೆ ಹೇಳು? ಶಾಲೆಗೆ ಹೋಗುವಾಗ ನೀನು ಅಂಗಡಿಯಲ್ಲಿ ಕೂತರೆ–ಅದು ವಿಷಯ ಬೇರೆ. ಈಗ ನೀನು ಮೊದಲಿನ ಹಾಗೆ ಅಲ್ಲವಲ್ಲಾ? ಹೆಂಡತಿಯನ್ನೂ ಅಂಗಡಿಯಲ್ಲಿ ವ್ಯಾಪಾರಕ್ಕೆ ಕುಳಿತುಕೊಳ್ಳಿಸುವುದು ಗಂಡಸರಿಗೆ ಅವಮಾನವಲ್ಲವಾ? ಹೆಣ್ಣಾಗಿ ಹುಟ್ಟಿದವಳಿಗೆ ಒಬ್ಬ ಗಂಡ : ಎರಡು ಹೊತ್ತು ಅನ್ನ ಸಿಕ್ಕಿದರೆ ಅದೇ ದೊಡ್ಡ ಪುಣ್ಯ. ನಿನ್ನ ಮುಕುಂದಣ್ಣ ಕುಡುಕನಲ್ಲ. ಹೆಂಡತಿಗೆ ಬಡಿಯುವ ಜಾತಿಯವನಲ್ಲ. ಇಷ್ಟು ಅದೃಷ್ಟ ಎಷ್ಟು ಜನರಿಗೆ ಸಿಕ್ಕಿತು?" ಕುಂಞಪಾತುಮ್ಮ ತೀರಾ ಸರಳವಾಗಿ ಸಮಸ್ಯೆಗೆ ಪರಿಹಾರ ಹೇಳಿಬಿಟ್ಟಿದ್ದಳು. ಮುಕುಂದಣ್ಣ ಬಾಗಿಲು ಹಾಕಿ ಮಲಗಿಕೊಳ್ಳುತ್ತಿರುವುದು ಅವಳಿಗಾರು ಹೇಳುತ್ತಾರೆ?

ಬೇಬಿಗೆ ಹುಚ್ಚೇ ಹಿಡಿದಂತಾಗಿತ್ತು. ಇಂದಲ್ಲ– ನಾಳೆ ಸರಿಯಾದೀತು. ಮುಕುಂದಣ್ಣ ಖಂಡಿತವಾಗಿ ಹಿಂದಿನಂತೆ ಪ್ರೀತಿಯಿಂದ ಮಾತನಾಡಿಸಬಹುದು–ಎಂದು ಆಸೆಯಿಂದ ದಿನ ಕಳೆಯುತ್ತಿದ್ದವಳಿಗೆ ದಿನದಿಂದ ದಿನಕ್ಕೆ ನಿರಾಸೆ ಹೆಚ್ಚಾಗ ತೊಡಗಿತು. ಮುಕುಂದಣ್ಣ ಅವಳ ಮುಖ ನೋಡಿ ಮಾತನಾಡಿಸುವುದನ್ನು ನಿಲ್ಲಿಸಿಬಿಟ್ಟಿದ್ದ. ಆತನಿಗೆ ಪ್ರಿಯವಾದ ಎಣ್ಣೆಯಲ್ಲಿ ಕರಿದ ತಿಂಡಿಗಳನ್ನು ಮಾಡಿ ಬಡಿಸಿದಾಗಲೂ ಕಣ್ಣರಳಿಸದ ಮುಕುಂದಣ್ಣ ಎಷ್ಟೇ ಕೆಟ್ಟದಾಗಿ ಅಡಿಗೆ ಮಾಡಿದರೂ ಚಕಾರವೆತ್ತದೆ ತಿಂದುಬಿಡುತ್ತಿದ್ದ.

ಒಂದು ದಿನ ಮಧ್ಯಾಹ್ನದ ಊಟ ಮುಗಿಸಿಕೊಂಡು ಅಂಗಡಿಗೆ ಹೊರಟು ನಿಂತ ಮುಕುಂದಣ್ಣ ಬಾಗಿಲ ಬಳಿಗೆ ಹೋದವನು ಅಲ್ಲಿಯೇ ನಿಂತು ಹೇಳಿದ್ದ, "ಒಂದು ವಾರದಿಂದ ನಿನಗೆ ಹೇಳಬೇಕು ಅಂತ ಯೋಚನೆ ಮಾಡುತ್ತಾ ಇದ್ದೇನೆ. ನೀನು ಮಾಳಿಗೆಯ ಕಿಟಿಕಿಯ ಹತ್ತಿರ ಇಡಿ ಊರು ಕಾಣುವಂತೆ ಪ್ರದರ್ಶನಕ್ಕೆ ಕೂತುಕೊಳ್ಳುವುದು ನನಗೆ ಸರಿ ಕಾಣುವುದಿಲ್ಲ. ನೀನು ಸ್ವಲ್ಪ ಮರ್ಯಾದೆಯಿಂದ ಬದುಕುವುದನ್ನು ಕಲಿಯಬೇಕು. ನಿಮ್ಮ ಜಾತಿಯವರು ನಿಮಗೆಲ್ಲಾ ಕಪ್ಪು ಬಟ್ಟೆ ಸುತ್ತಿ ಮೂಲೆಯಲ್ಲಿ ಬಚ್ಚಿಡುವುದು ಸುಮ್ಮನೆ ಏನೂ ಅಲ್ಲ. ಸಸಾರ ಕೊಟ್ಟರೆ ನೀವು ಮನೆಯ ಮಾಡು ಹತ್ತಿ ಬಟ್ಟೆ ಬಿಚ್ಚಿ ಕುಣೀಲಿಕ್ಕೂ ಹಿಂದೆ ಮುಂದೆ ನೋಡುವ ಜಾತಿಯಲ್ಲ."

ಬೇಬಿಗೆ ಅಂದು ಮುಕುಂದಣ್ಣ ಮತ್ತಷ್ಟು ಕುರೂಪಿಯಾಗಿ ಕಾಣಿಸಿದ್ದ! ಆತನನ್ನು ಕೆಕ್ಕರಿಸಿ ನೋಡಲೂ ಅಸಹ್ಯವಾಗಿತ್ತು.

ಅದೇ ದಿನ ಸಂಜೆ ಎಂದಿಗಿಂತ ಬೇಗ ಅಂಗಡಿ ಬಾಗಿಲು ಹಾಕಿಕೊಂಡು ಬಂದಿದ್ದ ಮುಕುಂದಣ್ಣ ಕಿಟಿಕಿಯಿಂದ ಕಾಣಿಸುತ್ತಿದ್ದ ಆಕಾಶವನ್ನು ನೀಲಿ ಪರದೆಯಿಂದ ಮುಚ್ಚಲು ಪ್ರಾರಂಭಿಸಿದಾಗ ಬೇಬಿಗೆ ಮೈತುಂಬ ಮುಳ್ಳು ನೆಟ್ಟಂತಾಗಿತ್ತು.

ಆ ರಾತ್ರಿ ಯಥಾಪ್ರಕಾರ ಮುಕುಂದಣ್ಣ ಬಾಗಿಲು ಮುಚ್ಚಿಕೊಂಡು ನಿದ್ರೆ ಹೋದ ಬಳಿಕ ಬೇಬಿ ತನ್ನ ಗೆಳತಿ ಸುಮತಿಗೆ ಎಲ್ಲವನ್ನೂ ಬರೆಯಲಾರಂಭಿಸಿದಳು, ಎಂಟು ಪುಟದ ಆ ಪತ್ರವನ್ನು ಬೇಬಿ ಕೊನೆಗೊಳಿಸಿದ್ದು ಹೀಗೆ : "ಈ ಮುಕುಂದಣ್ಣ ಎಲ್ಲ ಗಂಡಸರಂತೆ ಇದ್ದಿದ್ದರೇ ನಾನು ಹೆಚ್ಚು ಸಂತೋಷಪಡುತ್ತಿದ್ದೆ. ಈ ಕಾಗದವನ್ನು ನಿನಗೆ ಯಾವಾಗ ಪೋಸ್ಟ್ ಮಾಡುತ್ತೇನೋ ಗೊತ್ತಿಲ್ಲ. ನನ್ನ ಹತ್ತಿರ ಈಗ ಒಂದು ರೂಪಾಯಿಯ ಇಲ್ಲ. ಹೇಗಾದರೂ ಮಾಡಿ ಒಂದು ಹತ್ತು ರೂಪಾಯಿ ಸಿಕ್ಕಿದ ತಕ್ಷಣ ಈ ಸೆರೆಮನೆಯಿಂದ ತಪ್ಪಿಸಿಕೊಂಡು ನಿನ್ನ ಹಾಸ್ಟೆಲಿಗೆ ಬರುತ್ತೇನೆ. ನೀನು ಆವತ್ತು ಭಾಷೆ ಕೊಟ್ಟ ಹಾಗೆ ನನಗೆ ಅಲ್ಲಿ ಕೆಲಸ ಕೊಡಿಸಬೇಕು. ಅಲ್ಲಿ ಗುಡಿಸುವ ಕೆಲಸವಾದರೂ ಆದೀತು. ಆದಷ್ಟು ಬೇಗ ನನ್ನ ತಾಯಿಯನ್ನು ಈ ರಾಕ್ಷಸನ ಕಣ್ಣೆದುರಿನಿಂದ ತಪ್ಪಿಸಬೇಕಾಗಿದೆ."

* * *

ಎರಡು ದಿನಗಳಲ್ಲಿ ನನ್ನಿಂದ ಬರೆಯಲು ಸಾಧ್ಯವಾದದ್ದು ಇಷ್ಟು ಮಾತ್ರ. ಮಾರನೆಯ ದಿನ ಕಚೇರಿಯಿಂದ ನೇರವಾಗಿ ಆಸ್ಪತ್ರೆಗೆ ಹೋದವನು ಬೇಬಿಯಕ್ಕನ ಜತೆ – ಆಕೆಯನ್ನು ಉಳಿದವರೆಲ್ಲ ಬೇಬಿಯಕ್ಕ ಎಂದೇ ಕರೆಯುತ್ತಿದ್ದರು– ಅದು ಇದು ಮಾತನಾಡುತ್ತಾ ನಾನು ಬರೆದ ಕತೆಯನ್ನು ಆಕೆಯತ್ತ ಚಾಚಿ. "ನಾನೊಂದು ಕತೆ ಬರೆದ್ದಿದ್ದೇನೆ. ಓದಿ ಅಭಿಪ್ರಾಯ ಹೇಳಬೇಕು" ಎಂದೆ. ಆಕೆ ಅದನ್ನು ತೆಗೆದುಕೊಂಡು ಪುಟ ತಿರುಗಿಸುತ್ತಾ "ನನಗೆ ಗೊತ್ತಿತ್ತು" ಅಂದಾಗ ನನಗೆ ಅಚ್ಚರಿ. ತೊಡೆತನಕ ಪ್ಲಾಸ್ಟರ್ ಅಂಟಿಸಿಕೊಂಡು ಅಂಗಾತ ಮಲಗಿದ್ದ ಸ್ನೇಹಿತ ಕಣ್ಣುಗಳಲ್ಲಿ ತುಂಟ ನಗು ಚೆಲ್ಲಿದ್ದ.

ಅದರ ಮರುದಿನ ಸಂಜೆ ಹೋಗಿದ್ದಾಗ ಬೇಬಿಯಕ್ಕ ಬೇರೆ ವಾರ್ಡಿಗೆ ಹೋಗಿದ್ದರಿಂದ ಗೆಳೆಯನ ಜತೆ ಹರಟುತ್ತಾ ಕೂತೆ. ನಾನು ಬರೆದ ಕತೆಯ ಬಗ್ಗೆ ಆಕೆ ಈತನಲ್ಲೇನೂ ಪ್ರತಿಕ್ರಿಯೆ ಸೂಚಿಸಿದಂತೆ ಕಾಣಲಿಲ್ಲ.

ಸುಮಾರು ಆರು ಗಂಟೆಯ ಹೊತ್ತಿಗೆ ಕೋಣೆಯೊಳಗೆ ಬಂದ ಬೇಬಿಯಕ್ಕ ನನ್ನನ್ನು ಕಂಡು "ಓಹ್! ನೀವು ಬಂದೇ ಬಿಟ್ಟಿದ್ದೀರಿ. ಒಳ್ಳೆಯದೇ ಆಯಿತು, ಇನ್ನು ಹತ್ತು ನಿಮಿಷದಲ್ಲಿ ಡ್ಯೂಟಿ ಮುಗಿಯುತ್ತದೆ. ನಿಮ್ಮ ಕತೆ ಓದಿ ಮುಗಿಸಿದ್ದೇನೆ. ಆದರೆ ಇಲ್ಲಿಗೆ ತರುವುದನ್ನು ಮರೆತೆ. ನೀವು ನನ್ನ ಜತೆ ಮನೆತನಕ ಬಂದರೆ ಕೊಡುತ್ತೇನೆ. ಬರುತ್ತೀರಾ?" ಎಂದು ಪ್ರಶ್ನಿಸಿದರು. ನಾನು ಉತ್ತರಿಸಲು ಹಿಂದೆ ಮುಂದೆ ನೋಡ ತೊಡಗಿದ್ದನ್ನು ಗಮನಿಸಿದ ಸ್ನೇಹಿತ ಕಣ್ಣಲ್ಲೇ ಆದೇಶ ನೀಡಿದ.

ಸುಮಾರು ಹತ್ತು ನಿಮಿಷದಲ್ಲಿ ರಿಕ್ಷಾದ ದಾರಿ. ಬೇಬಿಯಕ್ಕ ರಿಕ್ಷಾದಲ್ಲಿ ಮೌನವಾಗಿಯೇ ಇದ್ದದ್ದರಿಂದ ನನ್ನ ಬರವಣಿಗೆ ಆಕೆಗೆ ಹಿಡಿಸಲಿಲ್ಲವೇನೋ ಎನ್ನುವ ಅನುಮಾನ ಕಾಡಿತು. ರಿಕ್ಷಾ ನಿಂತಾಗ ನಾನು ರಸ್ತೆಗೆ ಕಾಲಿರಿಸಿದೆ. ರಿಕ್ಷಾದ ಬಾಡಿಗೆ ಹಣವನ್ನು ನಾನು ಕೊಡಲು ಮುಂದಾದಾಗ ಆಕೆ ತಡೆಯಬಹುದೆಂದು ಭಾವಿಸಿದ್ದೆ. ಆದರೆ ಅವರಿಗೆ ಆ ಯೋಚನೆಯೇ ಇದ್ದಂತಿರಲಿಲ್ಲ. ಅವರು ತಲೆತಗ್ಗಿಸಿ ಹೆಜ್ಜೆ ಹಾಕತೊಡಗಿದರು: ಯಾವುದೋ ಭಾರವಾದ ಚಿಂತೆಯನ್ನು ಹೊತ್ತುಕೊಂಡವರಂತೆ. ನಾನು ಗಾಬರಿಯಿಂದಲೇ ಅವರ ಬೆನ್ನು ಹಿಡಿದೆ. ಪುಟ್ಟ ತಾರಸಿ ಮನೆಯೊಂದರ ಗೇಟು ತೆರೆದು, ಅವರ ಬೆನ್ನ ಹಿಂದೆ ನಿಂತಿದ್ದ ನನಗೆ ಕಾಣಿಸಿದ್ದು ಮನೆಯ ಗೋಡೆಗಂಟಿಸಿದ್ದ ಕರಿಶಿಲೆಯಲ್ಲಿ ಬರೆದಿದ್ದ ಉರುಟು ಅಕ್ಷರಗಳು : 'ಮುಕುಂದ ನಿವಾಸ'.

ಕಿರಿದಾದ ಡ್ರಾಯಿಂಗ್ ರೂಮ್. "ನೀವು ಕೂತಿರಿ. ಈಗ ಬಂದೆ" ಎಂದಷ್ಟೇ ಹೇಳಿದ ಬೇಬಿಯಕ್ಕ ಒಳಪರದೆಯ ಹಿಂದೆ ಮರೆಯಾದರು. ಸೋಫಾದಲ್ಲಿ ಕೂತ ನಾನು ಸುತ್ತಲೂ ಕಣ್ಣು ಹಾಯಿಸಿದೆ. ಎಲ್ಲಾ ಮಧ್ಯಮವರ್ಗದ ಮನೆಯಂತೆಯೇ ಇತ್ತು. ಒಂದು ಸೋಫಾ, ಎರಡು ಕುರ್ಚಿಗಳು, ಒಂದು ಟೀಪಾಯಿ, ಗೋಡೆ ಗಡಿಯಾರ –ರೇಡಿಯೋ ಎಲ್ಲ.

ಟೀಪಾಯಿ ಮೇಲಿದ್ದ ಸಿನಿಮಾ ಮ್ಯಾಗಜಿನ್ ಒಂದನ್ನು ಎತ್ತಿಕೊಳ್ಳುತ್ತಿರುವಂತೆಯೇ ಒಳಬಾಗಿಲ ಪರದೆ ಸರಿದಂತೆನಿಸಿ ತಲೆಯೆತ್ತಿದೆ : ಭೂತ ಕಂಡವನಂತೆ ಬೆಚ್ಚಿಬಿದ್ದೆ! ರಕ್ತವೆಲ್ಲ ತಣ್ಣಗಾದಂತೆ ಭಾಸವಾಯಿತು. ಗಾಭರಿಯಿಂದ ಎದ್ದು ನಿಂತುಬಿಟ್ಟಿದ್ದೆ. ಮೈತುಂಬ ಬಿಳಿ ಬಟ್ಟೆ ಹೊದ್ದುಕೊಂಡಿದ್ದ ಧಡೂತಿ ದೇಹವೊಂದು ಬಾಗಿಲು ದಾಟಿ ಹೊರಬಂದಿತ್ತು!

"ಕುಳಿತುಕೊಳ್ಳಿರಿ. ನಿಮಗೆ ನನ್ನ ಪರಿಚಯವಾಗಿರಬೇಕು. ನಿಮ್ಮ ಕತೆಯಲ್ಲಿನ ರಾಕ್ಷಸ ನಾನೇ" ಎನ್ನುತ್ತಲೇ ನನ್ನೆದುರು ಕುರ್ಚಿಯಲ್ಲಿ ಕೂತ ಮುದುಕನಿಗೆ ಏನಿಲ್ಲವೆಂದರೂ ಎಪ್ಪತ್ತು ದಾಟಿದಿರಬಹುದು. ಬೆಳ್ಳಿಯಂತೆ ಮಿರುಗುವ ತಲೆಕೂದಲ ರಾಶಿ. ಜೋತುಬಿದ್ದ ಕೆನ್ನೆ, ಬಿಳಿಗೆರೆಯಂತಹ ಹುಬ್ಬುಗಳ ಕೆಳಗೆ ಎರಡು ಸಣ್ಣ ಕಣ್ಣುಗಳು, ರೋಮಗಳೇ ಇಲ್ಲದ ಬಿಳಿ ತೋಳುಗಳು, ಮುದಿ ಹೆಂಗಸರಂತೆ ನೆರಿಗೆಗಳು, ನಾನು ನಿಂತೇ ಇದ್ದೆ. ಆ ಮುದುಕನ ಎದುರು ಕುಳಿತುಕೊಳ್ಳಲು ಯಾಕೆ ಇಷ್ಟವಾಗಲಿಲ್ಲ.

ಟ್ರೇಯೊಂದರಲ್ಲಿ ಚಹಾದ ಮೂರು ಕಪ್ಪುಗಳನ್ನಿಟ್ಟುಕೊಂಡು ಹೊರಗೆ ಬಂದ ಬೇಬಿಯಕ್ಕ, "ನೀವಿನ್ನೂ ನಿಂತೇ ಇದ್ದೀರಾ?" ಎಂದವರು ಟ್ರೇಯನ್ನು ಟೀಪಾಯಿ ಮೇಲಿರಿಸಿ, ನನ್ನ ಭುಜ ಹಿಡಿದು ಕುಳ್ಳಿರಿಸಿ ತಾನೂ ಪಕ್ಕದಲ್ಲಿ ಕೂತರು.

"ನಿಮ್ಮ ಕತೆಗೆ ಈ ರೀತಿಯ ಕೊನೆ ಬಂದೀತೆಂದು ನೀವು ಎಣಿಸಿರಲಿಕ್ಕಿಲ್ಲ ಅಲ್ವಾ" ಬೇಯಿಯಕ್ಕನ ಪ್ರಶ್ನೆ ನನ್ನ ಯೋಚನೆಯೂ ಆಗಿತ್ತು. ಏನು ಉತ್ತರಿಸಬೇಕೆಂದೇ ಹೊಳೆಯಲಿಲ್ಲ. ಹಾಗಾದರೆ ಬೇಬಿಯಕ್ಕ ತನ್ನದೇ ಕತೆ ಹೇಳಿದರೆ? ಅಥವಾ ಹೇಳಿದ್ದೆಲ್ಲ ಬರಿ ಸುಳ್ಳಿನ ಕಂತೆಯೆ? ನನ್ನೆದುರು ಭೂತದಂತೆ ಕೂತಿರುವ ಮುದುಕ ಮುಕುಂದಣ್ಣನೇ?

"ನಿಮ್ಮ ಕತೆ ನಾನೂ ಓದಿದ್ದೇನೆ" ಮುದುಕ ತುಟಿ ಬಿಚ್ಚಿದರು. ನಾನು ಆತುರದಿಂದ ಅವರತ್ತ ನೋಡಿದೆ. "ನನಗೆ ನಿಮ್ಮ ಕತೆಯ ಕೊನೆ ಇಷ್ಟವಾಗಲಿಲ್ಲ ಎಂದು ಹೇಳಿದರೆ ನೀವು ಕೋಪ ಮಾಡಬಾರದು. ಆ ಹುಡುಗಿ ಮಾಳಿಗೆ ಮನೆಯ ರಾಕ್ಷಸನನ್ನು ಕುತ್ತಿಗೆ ಹಿಸುಕಿಕೊಂಡು ತಪ್ಪಿಸಿಕೊಂಡಳು. ಎಂದು ಬರೆಯಬೇಕಿತ್ತು. ಇಲ್ಲವಾದರೆ ಅವನೇ ಅವಳನ್ನು ಕೊಂದುಬಿಡುತ್ತಿರಲಿಲ್ಲವಾ" ಎನ್ನುತ್ತಿದ್ದಂತೆ ಮುದುಕ ಗಳಗಳನೆ ಅಳಲು ಪ್ರಾರಂಭಿಸಿದ್ದ. ಮೊದಲೇ ಹಸಿಮಾಂಸದ ಮುದ್ದೆಯಂತೆ ಕಾಣಿಸುತ್ತಿದ್ದ ಮುದುಕ ಈಗ ತೀರಾ ಅಸಹ್ಯವಾಗಿ ಕಾಣಿಸಲಾರಂಭಿಸಿದ್ದ. ನಾನು ಮುಜುಗರದಿಂದ ಮುಖ ಕಿವುಚಿದೆ.

"ನೀವು ಮತ್ತೆ ನಿಮ್ಮ ಹಳೇ ರಾಗ ಸುರು ಮಾಡಿದಿರಿ!" ಎಂದು ಆಕ್ಷೇಪಿಸುವ ಸ್ವರದಲ್ಲಿ ಹೇಳಿದ ಬೇಬಿಯಕ್ಕ ಸೋಫಾದಿಂದ ಎದ್ದು ಪಕ್ಕದಲ್ಲಿದ್ದ ಕುರ್ಚಿಯಲ್ಲಿ ಕೂತು ಮುದುಕನ ಎಡದ ಅಂಗೈಯನ್ನು ಎತ್ತಿಕೊಂಡು ಮೃದುವಾಗಿ ಸವರಲಾರಂಭಿಸಿದರು. ನೋಡು ನೋಡುತ್ತಿದ್ದಂತೆಯೇ ನನ್ನ ಕಣ್ಣುಗಳು ನನ್ನ ಹತೋಟಿ ತಪ್ಪಿ ನೀರಾಗುವ ಮುನ್ಸೂಚನೆ ನೀಡಿದಾಗ ನನಗೆ ನಾಚಿಕೆಯಾಯಿತು.

ನಾನು ಬೇಬಿಯಕ್ಕನ ದೃಷ್ಟಿನೆಟ್ಟು "ನೋಡಿ ನಾನೊಂದು ಪ್ರಶ್ನೆ ಕೇಳುತ್ತೇನೆ, ಅದರು ಬೇಸರ ಪಡಬಾರದು" ಎನ್ನುತ್ತಿದ್ದಂತೆ ಬೇಬಿಯಕ್ಕ "ಖಂಡಿತಾ ಹೇಳಿ. ಇವರು ಎಲ್ಲ ಗಂಡಸರಂತಲ್ಲ. ಹಾಗಿರುತ್ತಿದ್ದರೆ ನಾನು ಈ ಊರಿಗೆ ತಲುಪಿದ ನಾಲ್ಕು ತಿಂಗಳೊಳಗೆ ಅವರ ಮನೆ–ಅಂಗಡಿ ಎಲ್ಲ ಮಾರಿಬಿಟ್ಟು ನನ್ನ ತಾಯಿಯನ್ನು ಕರೆದುಕೊಂಡು ಇಲ್ಲಿಗೆ ಬರುತ್ತಿರಲಿಲ್ಲ" ಎಂದರು.

ನನ್ನ ಗೊಂದಲಗಳು ಮತ್ತಷ್ಟು ಗೋಜಲಾದವು. ಆದರೂ ಕುತೂಹಲ ತಡೆದುಕೊಳ್ಳಲಾರದೆ ಪ್ರಶ್ನಿಸಿದ್ದೆ. "ನಿಮ್ಮನ್ನು ಇಷ್ಟೊಂದು ಪ್ರೀತಿಸುವ ಈ ಮುಕುಂದಣ್ಣ ಮದುವೆ ಮಾಡಿಕೊಂಡ ದಿನಗಳಲ್ಲಿ ನಿಮಗೆ ಅಷ್ಟೆಲ್ಲ ಹಿಂಸೆ ಕೊಟ್ಟದ್ದು ಯಾಕಂತೆ?" ನನ್ನ ಪ್ರಶ್ನೆಯ ಧಾಟಿ ಸೌಜನ್ಯದ ಗಡಿ ದಾಟಿಬಿಟ್ಟಿತೆಂಬ ಮುಜುಗರ ನನ್ನನ್ನೇ ಕಾಡಿತ್ತು. ಬೇಬಿಯಕ್ಕ ಕೂಡಾ ಗಲಿಬಿಲಿಗೊಂಡಂತಿತ್ತು. ಅವರು ಉತ್ತರಿಸಲು

ಸಾಧ್ಯವಾಗದೆ ಮೇಲೆ – ಕೆಳಗೆ ನೋಡುತ್ತಾ ತುಟಿ ಕಚ್ಚಿ ಕಣ್ಣು ಕಿರಿದು ಮಾಡುತ್ತಿದ್ದಂತೆ ಮುಕುಂದಣ್ಣ ಉಮ್ಮಳಿಸಿ ಬಂದ ಬಿಕ್ಕಳಿಕೆಯ ನಡುವೆಯೇ ಹೇಳಿದರು: "ಕಳೆದ ಮೂವತ್ತು ವರ್ಷಗಳಲ್ಲಿ ಈ ನಿಮ್ಮ ಬೇಬಿಯಕ್ಕ ಒಮ್ಮೆಯಾದರೂ ನನ್ನೊಡನೆ ಈ ಪ್ರಶ್ನೆ ಕೇಳಲಿಲ್ಲ."

ನನ್ನ ಎದೆ ಹಿಸುಕಿದಂತಾಯಿತು. ನನ್ನೆದುರು ಕೂತಿದ್ದ ದೇವತೆಯ ಕಾಲುಮುಟ್ಟಿ ನಮಸ್ಕರಿಸಬೇಕು ಅನ್ನಿಸಿತು.

**ಆಕರ :** ಆಕಾಶಕ್ಕೆ ನೀಲಿ ಪರದೆ –ಬೋಳುವಾರು ಮಹಮದ್ ಕುಂಞ, ಕಾಮಧೇನು ಪ್ರಕಾಶನ, ಬೆಂಗಳೂರು, ೧೯೯೨.

* * *

**ಪೂರಕ ಪಠ್ಯ**

### ಸೌರ ಮಂಡಳಗಳ ದಾಟೋಣ

ಎಚ್. ಎಸ್. ಮುಕ್ತಾಯಕ್ಕ

೧

ಬಾ ನನ್ನ ಚಿನ್ನ, ಚುಕ್ಕೆಗಳ ಎಡವುತ್ತ
ದೂರ ದೂರ ಹೋಗೋಣ
ಎಲ್ಲ ಸೌರಮಂಡಲಗಳ ದಾಟೋಣ
ಅನಂತದೆಡೆ ಒಂದು ತಾಣವಿದೆ
ನನಗೆ ಗೊತ್ತು ಅಲ್ಲಿ ಯಾವ ನಿರ್ಬಂಧಗಳಿಲ್ಲ
ಹುಟ್ಟು ಸಾವಿನ ಹಂಗೂ ಇಲ್ಲ
ಎದೆ ಮಿಡಿತಗಳಿಲ್ಲದಿದ್ದರೂ ನಮ್ಮಿಬ್ಬರ
ಕಣ್ಣು ನಗುತ್ತವೆ
ಬಾ, ಯಾವ ನೋವು ಸಾವಿಲ್ಲದ ಲೋಕದಲಿ
ಅಲೆಯೋಣ
ಹಾಗೆ ಹಾಗೆ ಸುಮ್ಮನೆ ಕೇವಲ ಸುಮ್ಮನೆ

೨

ನೀನು ಬರುವಾಗಲೆಲ್ಲ ನಕ್ಷತ್ರ
ಚಂದ್ರನನು ಹಿಡಿದು ಬರುವಿ
ಬೊಗಸೆ ತುಂಬ ಬೆಳದಿಂಗಳ
ತರುವಿ
ನೀನಿಲ್ಲದೆ ನನ್ನ ಮನೆ, ಮನ
ಕತ್ತಲೆಯಿಂದ ತುಳುಕುತ್ತಿದೆಯೆಂದು
ನೀನು ಬಲ್ಲೆ.
ಮತ್ತೆ ನಿನಗೆ ಗೊತ್ತು.
ನನ್ನಾತ್ಮ ಘಾಸಿಗೊಂಡಿದೆ ಎಂದು.
ಆಗ ನನ್ನ ಮೈ ತುಂಬ
ಚಂದ್ರ, ನಕ್ಷತ್ರ ಸೌರ ಮಂಡಲಗಳ
ಚಿತ್ರಿಸುವೆ
ನಿನ್ನ ನಗೆಯಿಂದ, ಮುತ್ತುಗಳಿಂದ.

೩

ವಿದಾಯ ಹೇಳುವ ಮುನ್ನ ನಾನೆಂದೆ:
ದಾರಿ ದೀರ್ಘವಿದೆ. ಮೇಲೆ ಕತ್ತಲೆ ಕೂಡಾ.
ನೀನು ಆಕಾಶಕ್ಕೆ ಕೈ ಚಾಚಿ
ನಕ್ಷತ್ರವೊಂದನ್ನು ಕಿತ್ತು ಕೈಗಿತ್ತೆ.
ನಾನು ವಿಷಾದದಿಂದ ನಕ್ಕೆ
ಏಕೆಂದರೆ ಅದೊಂದು ಕುರುಡು
ಚುಕ್ಕೆಯಾಗಿತ್ತು.

ನಾನು ಕತ್ತಲೆಯ ದಾರಿ ದಿಟ್ಟಿಸುತ್ತಿರುವಂತೆ
ಅದು ಹೇಳಿತ್ತು;
ಗೆಳತಿ, ನಿನ್ನ ಆತ್ಮದ ಬೆಳಕಿನಲ್ಲಿ ನಡೆ.
ಕ್ಷಣದಲ್ಲಿಯೆ ಶೂನ್ಯವೆಲ್ಲ ತುಂಬಿತು
ಅಗಾಧ ಮಿಂಚಿನಿಂದ ಬೆಳಕಿನಿಂದ.

೪

ರಾತ್ರಿ ಸುಂದರವಾಗಿ ನಗುತ್ತಿತ್ತು
ಸದ್ದಿಲ್ಲದೆ ಸಾಗಿ ಹೋಗುತ್ತಿತ್ತು
ಹೊಲದ ನಡುವೆ
ವಿಸ್ತಾರ ಆಗಸದ ಅಡಿಯಲ್ಲಿ
ನಿನ್ನ ತೋಳ ಮೇಲೆ ಮಲಗಿ
ಎಷ್ಟೊಂದು ಚೆಂದ ಅಲ್ಲವೆ?
ನೀನು ಕೇಳಿದೆ
ಒಮ್ಮೆಲೆ ನಕ್ಷತ್ರಗಳ ಕಂಗಳಲಿ
ನೋವ ಕಂಡೆ. ಆ ಮಿನುಗಿನ
ಹಿಂದೆ ಸಾವಿರ ದುಃಖಗಳು
ಆಹ್! ನನ್ನಾತ್ಮ ಅವುಗಳ ಸಂತೈಸಲಿ
ಕೈ ಚಾಚಿತು ಮೇಲೆ ಮೇಲೆ

೫

ಆಕಾಶಕ್ಕೆ, ಅವಧಿಗಳಿಂದ
ಬಿಡದೆ, ಅಂಟಿಕೊಂಡ ನಕ್ಷತ್ರ
ಗಳಂತೆ ನನ್ನ ನಿನ್ನ ಪ್ರೀತಿಯ
ಸಂಜೆ ಬಾನಂಗಳವನ್ನು ಅಪ್ಪಿಕೊಳ್ಳುವ
ಬಣ್ಣದಂತೆ ನಮ್ಮ ಒಲವು.
ಬದುಕು ಸಾವು ದೂರ ನಿಂತು ನೋಡುತ್ತವೆ
ಅವುಗಳ ಹಂಗಿಲ್ಲದೆ ನಗುವ
ನಮ್ಮನು.

**ಆಕರ:** ಸೌರ ಮಂಡಳಗಳ ದಾಟೋಣ –ಎಚ್.ಎಸ್. ಮುಕ್ತಾಯಕ್ಕ, ಸಂಕ್ರಮಣ ಪತ್ರಿಕೆ, ೨೦೧೬.

* * *

## ಲೇಖಕರ ಪರಿಚಯ

**ಬೋಳುವಾರು ಮಹಮದ್ ಕುಂಞ :** ಕನ್ನಡಕ್ಕೆ ಸಾಹಿತ್ಯಕ್ಕೆ ಹೊಸ ಬಗೆಯ ವಸ್ತು ವಿಚಾರಗಳೊಂದಿಗೆ ಕಥಾಲೋಕಕ್ಕೆ ಕಾಲಿಟ್ಟವರು ಬೋಳುವಾರು ಮಹಮದ್ ಕುಂಞ. ೧೯೫೧ರಲ್ಲಿ ಜನಿಸಿದ ಬೋಳುವಾರು ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮ ಕಥೆ, ಕಾದಂಬರಿ ಮಕ್ಕಳ ಸಾಹಿತ್ಯಗಳಿಂದ ತಮ್ಮದೇ ಛಾಪು ಮೂಡಿಸಿದವರು. ಮುಸ್ಲಿಮರ ಬದುಕಿನ ವಿಧಾನ ಮತ್ತು ಭಾವ ಸಂವೇದನೆಗಳನ್ನು ಮೊದಲ ಬಾರಿಗೆ ಪರಿಚಯಿಸಿ ಹೊಸ ಪರಿಕಲ್ಪನೆಗೆ ನಾಂದಿ ಹಾಡಿದವರು. ಅತ್ತ–ಇತ್ತಗಳ ಸುತ್ತಮುತ್ತ, ದೇವರುಗಳ ರಾಜ್ಯದಲ್ಲಿ, ಅಂಕ. ಆಕಾಶಕ್ಕೆ ನೀಲಿ ಪರದೆ, ಒಂದು ತುಂಡುಗೋಡೆ, ರುಖಿಯಾ (ಅನುವಾದ), ಜೆಹಾದ್ (ಕಾದಂಬರಿ), ಪಂಡಿತ ಫಕೀರ ಒಂದು ಗಝಲ್ (ನಾಟಕ) ತಟ್ಟುಚಪ್ಪಾಳೆ ಪುಟ್ಟ ಮಗು, ಪಾಪು ಗಾಂಧಿ ಬಾಪು ಆದ ಕಥೆ ಅವರ ಕೃತಿಗಳಾಗಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಆರ್ಯಭಟ ಗೌರವ ಪ್ರಶಸ್ತಿ, ಕಲ್ಕತ್ತದ ಭಾರತೀಯ ಭಾಷಾಸಂಸ್ಥಾನ ಪುರಸ್ಕಾರ, ದೆಹಲಿಯ ಕಥಾಪ್ರಶಸ್ತಿ, ಶಿವರಾಮಕಾರಂತ ಬಾಲವನ ಪ್ರಶಸ್ತಿ, ಇವರಿಗೆ ಸಂದ ಗೌರವ ಪುರಸ್ಕಾರಗಳು. ಕೇಂದ್ರ ಸಾಹಿತ್ಯ ಅಕಾಡೆಮಿ ಆರಂಭಿಸಿದ ಕೇಂದ್ರ ಸಾಹಿತ್ಯ ಅಕಾಡೆಮಿ ಬಾಲ ಸಾಹಿತ್ಯ ಪ್ರಶಸ್ತಿಯನ್ನು ಮೊದಲನೆಯವರಾಗಿ ಪಡೆದ ಹೆಗ್ಗಳಿಕೆ ಅವರದು.

**ಎಚ್.ಎಸ್. ಮುಕ್ತಾಯಕ್ಕ** : ಕೊಪ್ಪಳದಲ್ಲಿ ಜನಿಸಿದ ಎಚ್.ಎಸ್. ಮುಕ್ತಾಯಕ್ಕ ಕಾವ್ಯ ಕ್ಷೇತ್ರದಲ್ಲಿ ಗಟ್ಟಿ ಹೆಜ್ಜೆಯನ್ನು ಮೂಡಿಸಿದ್ದಾರೆ. ಸ್ತ್ರೀ ಸಂವೇದನೆಗಳ ಹಿನ್ನೆಲೆಯಲ್ಲಿ ಆಧುನಿಕ ಬದುಕಿನ ಸಂಕೀರ್ಣತೆಗಳಿಗೆಲ್ಲ ಸ್ಪಂದಿಸಿ ದಿಟ್ಟತನದಿಂದ ಕಾವ್ಯ ರಚಿಸುತ್ತಿದ್ದಾರೆ. ನಾನು ಮತ್ತು ಅವನು, ನೀವು ಕಾಣಿರೆ ನೀವು ಕಾಣಿರೆ, ಕಭೀ ಕಭೀ, ನಲವತ್ತು ಗಜಲ್‌ಗಳು, ಇವರ ಕಾವ್ಯ ಸಂಕಲನಗಳು. ಢಕ್ಕೆಯ ಬೊಮ್ಮಣ್ಣ, ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಗಳು ಇವರ ಸಂಶೋಧನಾ ಕೃತಿಗಳು. ಮದಿರೆಯ ನಾಡಿನಲ್ಲಿ, ಶಿವಶರಣೆ ಮುಕ್ತಾಯಕ್ಕ, ಇವರ ಇನ್ನೆರಡು

ಕೃತಿಗಳು. ಕನ್ನಡ ಸಾಹಿತ್ಯ ಪರಿಷತ್ತಿನ ಮಲ್ಲಿಕಾ ಪ್ರಶಸ್ತಿ, ರತ್ನಮ್ಮ ಹೆಗ್ಗಡೆ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನ ಇವರಿಗೆ ಲಭಿಸಿವೆ.

**ಅಭ್ಯಾಸ ಪ್ರಶ್ನೆಗಳು**

೧. ನಿರೂಪಕರು ಮತ್ತೆ ಮತ್ತೆ ಮಂಗಳೂರಿನ ಆಸ್ಪತ್ರೆಗೆ ಹೋಗಲು ಕಾರಣವೇನು? ವಿವರಿಸಿ.
೨. ನಿರೂಪಕರು ತಮ್ಮ ಗೆಳೆಯನನ್ನು ಭೇಟಿ ಆಗಲು ಆಸ್ಪತ್ರೆಗೆ ಹೋದಾಗ ಅನುಭವವೇನು? ವಿವರಿಸಿ.
೩. ಮುಕುಂದಣ್ಣ ಯಾರೊಂದಿಗೆ ಸಲುಗೆಯಿಂದ ಇರುತ್ತಿದ್ದ ಹಾಗೂ ಏಕೆ?
೪. ಕಾಲೇಜಿನ "ಬ್ಯೂಟಿಕ್ವೀನ್" ಸುಂದರಿ ಮುಕುಂದಣ್ಣನ ಗರ್ಲ್ ಫ್ರೆಂಡ್ ಆದದ್ದು ಹೇಗೆ?
೫. ಮುಕುಂದಣ್ಣನಿಗೆ ಮುಬೀನಾ ಬೇಬಿಯಕ್ಕ ಆದದ್ದು ಹೇಗೆ?
೬. ಕುಂಞಪಾತುಮ್ಮಳ ಬದುಕಿಗೆ ಆಸರೆಯಾಗಿದ್ದು ಯಾರು ಹೇಗೆ?
೭. ಸುಲೇಮಾನೊಂದಿಗಿನ ಮುಬೀನಾಳ ಮದುವೆ ಮುರಿದು ಬೀಳಲು ಕಾರಣವೇನು?
೮. ಕಾಲೇಜಿನ ಬ್ಯೂಟಿಕ್ವಿನ್ ಮುಬೀನಾ ಸೇಲ್ಸ್ ಗರ್ಲ್ ಬೇಬಿಯಕ್ಕ ಆದದ್ದು ಹೇಗೆ ವಿವರಿಸಿ.
೯. ಮಗಳಂತಿದ್ದ ಮುಬೀನಾ ಮುಕುಂದಣ್ಣನ ಹೆಂಡತಿಯಾದದ್ದು ಹೇಗೆ ಮತ್ತು ಯಾಕೆ? ಚರ್ಚಿಸಿ.
೧೦. ಆಕಾಶಕ್ಕೆ ನೀಲಿ ಪರದೆ ಈ ಶೀರ್ಷಿಕೆ ಕತೆಗೆ ಎಷ್ಟರ ಮಟ್ಟಿಗೆ ಒಪ್ಪುತ್ತದೆ? ಚರ್ಚಿಸಿ.

**ಚಟುವಟಿಕೆಗಳು**

೧. ಗಾಳಿಮಾತು ಸಿನಿಮಾ ನೋಡಿ ತರಗತಿಯಲ್ಲಿ ಚರ್ಚಿಸಿ.
೨. ಗುಲಾಬಿ ಟಾಕೀಸ್– ವೈದೇಹಿ ಅವರ ಕಾದಂಬರಿಯನ್ನು ಮತ್ತು ಅದೇ ಹೆಸರಿನ ಸಿನೆಮಾವನ್ನು ತೌಲನಿಕವಾಗಿ ಚರ್ಚಿಸಿ.

**ಹೆಚ್ಚಿನ ಓದು**

೧. ಬಾನು ಮುಷ್ತಾಕ್ ಹಸೀನಾ ಸಿನಿಮಾ
೨. ನಿರಂಜನರ ಕೊನೆಯ ಗಿರಾಕಿ ಕಥೆ

* * *

**ಅಧ್ಯಾಯ– ೩.೨**
**ಪಠ್ಯ**

## ಗಂಡಸರು

ಡಾ. ವೀಣಾಶಾಂತೇಶ್ವರ

**ಪ್ರವೇಶಿಕೆ**

ಮನುಷ್ಯ ಭಾವ ಜೀವಿ. ಆಧುನಿಕತೆಗೆ ಅಧೀನವಾಗುತ್ತಾ ಸಾಗುತ್ತಿದ್ದಂತೆ, ಮನಸ್ಸು ಸಂಕುಚತಗೊಳ್ಳುತ್ತಾ ಹೋಗುತ್ತದೆ. ಎಳೆಯ ವಯಸ್ಸಿನ ಭಾವವು ಸ್ವಾರಸ್ಯವಿಲ್ಲದಾಗುತ್ತದೆ. ಮುಗ್ಧತೆಯ ಸವಿ ಕಾಣದಾಗುತ್ತಿದೆ. ತಾರುಣ್ಯದ ತಿಳಿ ಭಾವವು ಮಾಸಿಹೋಗುತ್ತಿದೆ. ಸ್ನೇಹದಿಂದ ಉದಿಸುವ ವಿಶ್ವಾಸವು ಪ್ರೇಮಕ್ಕೆ ತಿರುಗುವ ಎಷ್ಟೋ ಕತೆಗಳು ಅಳಿಸಿಹೋಗುವ ಆತಂಕದಲ್ಲಿದೆ. ಕಾಯುವಿಕೆ ತಪಸ್ಸಿನಂತೆ. ಅಂತಹ ಪ್ರಸಂಗ ದೀರ್ಘಕಾಲ ದೀರ್ಘಕಾಲ... ದೀಢೀರನೆ ಒಕ್ಕುವ ಭಾವಕ್ಕೆ ಅಭಿವ್ಯಕ್ತ ರೂಪ ಕೊಡಲು ನೂರಾರು ಹೊಸದಾರಿಗಳನ್ನು ಹುಟ್ಟುಹಾಕಿದೆ. ತಾರುಣ್ಯದ ನವಿರುಭಾವ ಕ್ಷಿಪ್ರ ಗತಿಯಲ್ಲೇ ರವಾನೆಯಾಗಿ ತುರ್ತಾಗಿಯೇ ಪೂರ್ಣವಿರಾಮದ ಕಡೆಗೆ ಸಾಗುತ್ತಿದೆ. ಈ ಹೊತ್ತಿನಲ್ಲಿ ಒಮ್ಮೆ ಮನುಷ್ಯ ತನ್ನ ಅಭಿವ್ಯಕ್ತಿ ಆಲೋಚನೆಗಳನ್ನು ಯಾವ ಸ್ವರೂಪದಲ್ಲಿ ಕೊಂಡೊಯ್ಯಬಹುದೆಂಬ ಚಿಂತನೆ ನಡೆಸಬೇಕಾದ ಅಗತ್ಯವಿದೆ. ತಾರುಣ್ಯದ ಹೆಣ್ಣಿನ ಬಯಕೆ, ಮುಗ್ಧತೆ, ಪ್ರೀತಿಯ ಹುಡುಕಾಟವನ್ನು ಲೇಖಕಿ ಚಿತ್ರಿಸಿದ್ದಾರೆ. 'ಗಂಡಸರು' ಕಾದಂಬರಿ ೧೯೭೫ರಲ್ಲಿ ಪ್ರಜಾವಾಣಿ ವಿಶೇಷಾಂಕದಲ್ಲಿ ಪ್ರಕಟಗೊಂಡಿತ್ತು. 'ಶಾಂತಿ' ಪಾತ್ರದ ಮೂಲಕ ಅನೇಕ ತೆರನಾದ ಪ್ರೀತಿ ತೋರುವ ಪುರುಷನನ್ನು ಕಾದಂಬರಿಯುದ್ದಕ್ಕೂ ಪರಿಚಯಿಸುತ್ತಾರೆ. ಪ್ರಸ್ತುತ ಪಠ್ಯ ತಾರುಣ್ಯದ ನಾಜೂಕು ಸ್ವಭಾವವನ್ನು ತೆರೆದಿಡುತ್ತದೆ.

ಸಂಜೆ ಎಂದಿನಂತೆ ಶಾಲೆಯಿಂದ ಬಂದು ಕೈಕಾಲು ಮುಖ ತೊಳದುಕೊಂಡು ತಿಂಡಿ ತಿಂದು ಕುಣಿತದ ನಡಿಗೆಯಲ್ಲಿ ಆಕೆ ಅಟ್ಟದ ಮೇಲಿನ ತನ್ನ ರೂಮಿಗೆ ಬರುತ್ತಿದೆ, ರೂಮಿನಲ್ಲಿ ಯಾರೂ ಪ್ರಸ್ತಕಗಳನ್ನು ಕಿತ್ತಾಡುತ್ತಿದ್ದ ಸದ್ದು ಕೇಳಿಸಿ ಆಕೆಗೆ ವಿಪರೀತ ಸಬ್ಬ ಬಂತು. ಗೋಷಿಯೇ ಇರಬೇಕು. ಎಷ್ಟು ಸಲ ಹೇಳಿಲ್ಲ ಅವನಿಗೆ ತನ್ನ ತುಟಿನಲ್ಲಿನ ಸಹ ಮುಟ್ಟಬೇಡ, ನಿನಗೆ ಸ್ವಾಂಪ್ ಅಥವಾ ಪುಸ್ತಕದ

ಹಾಳೆಯಲ್ಲಿಟ್ಟ ನವಿಲುಗರಿ ಬೇಕಾಗಿದ್ದರೆ ನನ್ನನ್ನು ಕೇಳು. ಕೊಡುತ್ತೇನೆ, ಅಂತ? ಇವತ್ತು ಚೆನ್ನಾಗಿ ಎರಡೇ ರಾತಿಯ ಆಗಬೇಕು. ಹೋಗಿ ಅಮ್ಮನಿಗೆ ಹೇಳಲಿ ಬೇಕಾದರೆ, ಅಮ್ಮನೇನೂ ನನಗೆ ಬೈಯುವದಿಲ್ಲ.

ಹಾಗೆಂದುಕೊಳ್ಳುತ್ತಾ ಆಕೆ ಸದ್ದಾಗದಂತೆ ರೂಮು ಪ್ರವೇಶಿಸಿ, ಅಲ್ಲಿ ಇದು ರೂಲುಕಟ್ಟಿಗೆ ತೆಗೆದುಕೊಂಡು ಮೆಲ್ಲನೆ ಹೋಗಿ ಹೆಜ್ಜೆ ಹಿಡುತ್ತಾ ಕಪಾಟಿನ ಬಾಗಿಲ ಹಿಂದೆ ಅರೆಮರೆಯಾಗಿ ಕೂತಿದ್ದ ನೀಲಿ ಷರ್ಟಿನ ಬೆನ್ನ ಮೇಲೆ ರಪ್ ಎಂದು ಬಾರಿಸಿಬಿಡಲು ಕೈ ಎತ್ತುತ್ತಿರುವಂತೆಯೇ– ಸರ್ರನೆ ಹೊರಳಿ ನೋಡಿ ರೂಲುಕಟ್ಟಿಗೆಯೊಂದಿಗೆ ಅವಳ ಕೈಯನ್ನೂ ಬಿಗಿಯಾಗಿ ಹಿಡಿದುಕೊಂಡು ಎದ್ದು ನಿಂತ ಶಂಕರ.

"ಓಹ್ ನೀನಾ? ಯಾಕ ನಿನ್ನ ಕಪಾಟುತಗದೀ? ನೀ ಯಾವಾಗ ಬಂದಿ ಇಲ್ಲೆ ಕಳ್ಳನ್ಹಾಂಗ? ನಾ ಗೋಪಿ ಅಂತ ತಿಳಿದಿದ್ದೆ." –ಕೈ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತ ಆಕೆ ಅಂದಳು. ಗೋಪಿ ಅಲ್ಲವಲ್ಲ ಸದ್ಯ. ಸಾಮಾನಿಗೇನೂ ಧಕ್ಕೆಯಿಲ್ಲ. ಅಂತ ಸಮಾಧಾನಾದೊಂದಿಗೆ. ಅವಳ ಕೈ ಬಿಡದೆಯೆ ಬಾಗಿ ಅವಳ ಕಣ್ಣುಗಳನ್ನೇ ನೋಡುತ್ತ ನಗುತ್ತ ಅಂದ ಶಂಕರ. "ಕಳ್ಳ ಯಾಕ? ನಾಯೇನ ಹೊರಗಿನಾಂವೇನು? ಕಳ್ಳತನ ಮಾಡೂವಂಥಾ ಕಿಮ್ಮತ್ತಿನ ಸಾಮಾನು ಬ್ಯಾರೇ ಅವಾ ಅಂಥಾಗಾತು ನಿನ್ನ ಹತ್ತಿರ."

"ಕೈಬಿಡು, ನೀ ಹೊರಗಿನಂವಾ ಅರೇ ಇರ್‍ಲಿ, ಒಳಗಿನಂವಾ ಅರೇ ಇರ್‍ಲಿ. ನನ್ನ ಕಪಾಟು –ನನ್ನ ಸಾಮಾನು ಮುಟ್ಟಬ್ಯಾಡ ನೋಡು" ಅಸಮಾಧಾನದಿಂದ ಹೇಳುತ್ತಿದ್ದಂತೆ ಆತನ ಇನ್ನೊಂದು ಕೈಯ ಕಡೆ ಆಕೆಯ ಗಮನ ಹೋಗಿ ಒಮ್ಮೆಲೆ ಕಿರಿಚುವ ಧ್ವನಿಯಲ್ಲಿ ಕೇಳಿದಳು– "ಏನದು? ಏನ ತಗೊಂಡೀ? ತೋರಿಸು."

"ಹಿಂಗ್ಯಾಕ ಚೀರತೀ ಶಾಂತಿ? ನಾ ಬಂದಾಗ ನೀ ಒಳಗಿದ್ದಿ ಅಂತ ನಿನ್ನ ಕರೀಲಿಲ್ಲ. ಊರಿಂದ ಅಕ್ಕ ಬಂದಾಳ. ಓದ್ಲಿಕ್ಕೆ ಏನರೆ ಕನ್ನಡ ಕಾದಂಬರಿ ಕೊಡು ಅಂದಳು. ನೀ ಇಟ್ಟರ್ತೀಯಲಾ ಅಂಥವೆಲ್ಲಾ ಕಚಡಾ, ಅದಕ್ಕ ನಿನ್ನ ಕಪಾಟನ್ಯಾಗಿನಗೊಂಡ್ರಾತು ಅಂತ ಬಂದೆ, ಹಂಗಾ ನಿನ್ನ ಆರು ತಿಂಗಳ ಪರೀಕ್ಷಾದ್ದು ಸಯನ್ಸ್ ಪೆಪರು ಸಿಕ್ತು. ನೋಡಿಕೊಂತ ಕೂತೆ. ಅಷ್ಟರಾಗ ನೀ ನನ್ನ ಕಟಗೀ ತಗೊಂಡು ಹೊಡೀಲಿಕ್ಕೇ ಬಂದಿ."

"ಕೊಡೂ ನನ್ನ ಪೇಪರು–ಕೊಡು, ಕೊಡು, ಕೊಡು"– ಶಾಂತಿಯ ದನಿಯಲ್ಲಿ ಅಳು ಇಣುಕಿತು.

ಅವಳ ಕೈಬಿಟ್ಟು ಪೇಪರನ್ನು ಕೊಟ್ಟು ಒಂದುಗಳಿಗೆ ಅವಳನ್ನೇ ನೋಡಿ ಶಂಕರ ಅಂದ. "ಶಾಂತಿ ನೀ ಇಷ್ಟ ಹುಶಾರ ಇದ್ದೀ ಅಂತ ನನಗೆಗೊತ್ತಾ ಇದ್ದಿದ್ದಿಲ್ಲ ನೋಡು,. ಎಷ್ಟು ಚಂದ ಬರದೀಯ ಪೇಪರು. ಅದಕ್ಕ ನಿನಗ ನೂರಕ್ಕ ತೊಂಬತ್ತೆರಡು ಮಾರ್ಕ್ಸ್ ಕೊಟ್ಟಾರ ನಿಮ್ಮ ಮಾಸ್ತರು. ನಾ ಆಗಿದ್ರ ನೂರಕ್ಕ ನೂರು ಕೊಡ್ತಿದ್ದೆ."

ಗಡಿಗಿಡಿಯಿಂದ ಕಪಾಟಿನ ಬಾಗಿಲು ಭದ್ರಪಡಿಸುತ್ತ ಆಕೆ ಅಂದಳು. "ಹೋಗಹೋಗು. ನಿನ್ನ ಮಾರ್ಕ್ಸ್ ಯಾರಿಗೆ ಬೇಕು? ನಿಂದು ನನಗ ಏನೂ ಬ್ಯಾಡ?"

"ಬ್ಯಾಡ? ಆದರ ಶಾಂತೀ, ನಾ ನಿಂದು ಏನಾರೆ ಕೇಳಿದ್ರಾ? ಕೊಡಿತ್ತೀ ಏನು?"

"ಏನರೆ ಅಂದ್ರ? ಏನು? – ಅವಳಿಗೆ ಅಚ್ಚರಿ ಇವನಿಗೂ ತನ್ನ ಸ್ಟಾಂಪ್‌ಗಳ, ನವಿಲು ಗರಿಗಳ ಸಂಗ್ರಹದ ಮೇಲೆ ಕಣ್ಣೋ ಏನೋ, ಏನರೆ ಅಂದ್ರ ಏನೋ, ಕೊಡ್ತೀ ಇಲ್ಲೋ ಹೇಳು ಮೊದಲು" –ಆತನ ಕಣ್ಣುಗಳಲ್ಲಿ ತುಂಟ ನಗು.

"ನೀ ಕೇಳಲಾ ಮೊದಲು" ಹಟದಿಂದ ಅಂದಳು ಆಕೆ. ಮೊದಲೇ ಹೂ ಅಂದು ಆಮೇಲೆ ಪೇಚಾಡುವ ಪೆದ್ದಿ ತಾನಾಗಬಾರದಲ್ಲ.

"ಕೇಳ್ತೀನಿ. ಆದರೆ ಈಗಲ್ಲ. ನಾ ದಿಲ್ಲೀಗೆ ಹೋದಮ್ಯಾಲ ಪತ್ರಾ ಬರೀತೀನಿ. ಪತ್ರದಾಗ ಕೇಳ್ತೀನಿ. ಕೊಡ್ತೀಯೋ ಇಲ್ಲೋ ನೋಡೋಣ."

"ನೀ ಊರಿಗೆ ಹೋಗ್ತೀಯಾ? ಸೂಟಿ ಮುಗೀತೇನು ನಿಂದು?" –ಆಕೆಗೆ ಬೇಸರ. ಸಂಜೆ ಇನ್ನುಯಾರೊಂದಿಗೆ ಬ್ಯಾಡ್ಮಿಂಟನ್ ಆಡುವುದು?

"ಮುಗೀತದ ಇನ್ನೊಂದ ಎರಡದಿನಕ್ಕ. ನಾ ನಾಳೇ ಹೋಗ್ಬೇಕು. ನಾ ಹೇಳಿದ್ದು ಮರೀಬ್ಯಾಡ ಹ್ಞಾ ಮತ್ತ. ನಾ ಪತ್ರಾ ಬರೀಲಿ ಹೌದಲ್ಲೋ ನಿನಗ?"

"ಛಿ, ಗಂಡು ಹುಡುಗ್ರು ಪತ್ರಾ ಬರದರ ಸೇರೂದಿಲ್ಲ ನನಗ."

ಆತ ನಕ್ಕ. "ಇಂಗ್ಲೀಶಿನ್ಯಾಗ ಬರೀತೀನಿ ಮತ್ತ. ನಿನಗ ಬರ್‍ತದ ಇಲ್ಲೋ ಇಂಗ್ಲೀಶು?"

ಕೆಣಕಿದಂತಾಯಿತು ಆಕೆಗೆ "ಬರಲಾರದ ಏನು? ನಮಗೆ ಲೆಟರ್ ರೈಟಿಂಗ್ ಕಲಿಸ್ಯಾರಲಾ ಪಾಟೀಲ್ ಸರ್."

ಆತ ಮತ್ತೆ ನಕ್ಕ.

ಆಕೆಗೆ ಒಮ್ಮೆಲೆ ಅನಿಸಿತು– ಶಂಕರನಕ್ಕಾಗ ಎಷ್ಟು ಚೆನ್ನಾಗಿ ಕಾಣುತ್ತಾನೆ. ಅವನ ಮೂಗು–ಹಣೆ ಎಲ್ಲ ಇತಿಹಾಸ ಪುಸ್ತಕದಲ್ಲಿನ ವಿಕ್ರಮಾದಿತ್ಯ ರಾಜನ ಹಾಗೆ. ಇವನ ಕೈಯಲ್ಲೊಂದು ಖಡ್ಗ ಕೊಟ್ಟರೆ ಇವನು ಎಲ್ಲರನ್ನೂ ಸೋಲಿಸಬಹುದು–ದೇಶದ ಎಲ್ಲ ವೈರಿಗಳನ್ನೂ ಇದನನ್ನೇಕೆ ಇಂಡಿಯಾದ ರಾಜನನ್ನಾಗಿ ಮಾಡಬಾರದು?

ಶಂಕರನ ತಲೆಯ ಮೇಲೊಂದು ಕಿರೀಟವಿಟ್ಟ ದೃಶ್ಯ ನೆನಸಿದಾಗ ಆಕೆಗೆ ಫಕ್ಕನೆ ನಗು ಬಂತು

* * *

"ಪೋಸ್ಟ್‌ಮನ್, ನನಗೆ ಪತ್ರ ಅದ ಏನ್ರೋ?"

"ಇಲ್ಲ ತಂಗೀ. ಹಿಂಗ್ಯಾಕ ದಿನಾ ಕೇಳ್ತಿ? ಪತ್ರ ಬಂದರೆ ನಾ ಇಟಗೊಂದು ಕೂಡ್ತೀನೇನು?"

ಶಾಂತಿಗೆ ಅವನ ಮೇಲೆ ತುಂಬ ಸಿಟ್ಟು ಬಂತು. ಪತ್ರ ಬಂದೀತು ಅಂತ ದಾರಿ ಕಾಯುತ್ತ ಕೂತು ಮೊದಲನೆಯ ಪೀರಿಯಡ್ ಸಹ ತಪ್ಪಿಹೋಯಿತು. ತಡವಾಗಿ ಹೋದರೆ ಮಾಸ್ತರು ಬೈಯುವುದಿಲ್ಲವೇ?

ಶಂಕರ ಸುಳ್ಳೇ ಹೇಳಿದನೆ ಹಾಗಾದರೆ? ಹೋಗಿ ಎಂಟು ದಿನವಾಯಿತು. ಇನ್ನೂ ಪತ್ರ ಬರೆದಿಲ್ಲ. ತನಗೆ ಎಂದೂ ಯಾರೂ ಪತ್ರ ಬರೆದಿಲ್ಲ. ಅದಕ್ಕೇ ಪತ್ರದ ಬಗ್ಗೆ ಇಷ್ಟು ಕುತೂಹಲವೇನೂ ಅಥವಾ ಶಂಕರ ಏನೋ ಕೇಳುತ್ತೇನೆ ಅಂದಿದ್ದನಲ್ಲ, ಏನಿರಬಹುದು ಅಂತಲೋ– ಇನ್ನೇನಿದ್ದೀತು? ಛ್ಚ– ಇಲ್ಲ. ಸುಮ್ಮನೇ ಹೀಗೇ ಗೆಸ್ ಮಾಡುತ್ತ ವೇಳೆ ಕಳೆಯುವುದು ಸರಿಯಲ್ಲ. ಓದಬೇಕು. ಪ್ರಿಲಿಮಿನರಿ ಪರೀಕ್ಷೆ ಬಂತು. ರ್‍ಯಾಂಕ್ ತಪ್ಪಿಹೋದರೆ? ಏನಾದರೂ ರ್‍ಯಾಂಕ್ ಬಿಡಬಾರದು. ಶಂಕರನ ಅಮ್ಮ ಹೇಳುತ್ತಿರುತ್ತಾಳಲ್ಲ– ನಮ್ಮ ಶಂಕರ ಹೈಸ್ಕೂಲಿನಿಂದ ಕಾಲೇಜಿನ ತನಕಾ ಒಂದುಸಲಾನೂ ಫಸ್ಟ್‌ಕ್ಲಾಸ್ ಬಿಡ್ಲಿಲ್ಲ. ಅದಕ್ಕಾ ದಿಲ್ಲೀಯಂಥಾ ದೊಡ್ಡ ಊರಾಗಿನ ದೊಡ್ಡ ಕಾಲೇಜಿನ್ಯಾಗ ತಗೊಂಡ್ರು ಅವನ್ನ."

ಶಂಕರನ ಅಮ್ಮನಿಗೆ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅನ್ನಲಿಕ್ಕೆ ಬರುವುದಿಲ್ಲ. ಅದು ದೊಡ್ಡ ಕಾಲೇಜು ಅವಳ ಪ್ರಕಾರ, ಆದರೂ ಜಂಭವೆಷ್ಟು ಆ ಮುದುಕನಿಗೆ ಬರೇ ಸೊಕ್ಕಿನ ಮಾತೇ. ಶಂಕರ ಮಾತ್ರ ಹಾಗಲ್ಲ....

ತಾನೂ ರ್‍ಯಾಂಕ್ ಪಡೆದು ಟೆಕ್ನಾಲಜಿ ಕಲಿಯಬೇಕು. ಆಗ ಶಂಕರನ ಅಮ್ಮನ ಸೊಕ್ಕು ಮುರಿಯುತ್ತದೆ.

ಥೀ, ಈ ಶಂಕರ ಇಷ್ಟು ಕೆಟ್ಟವನು ಅಂತ ಗೊತ್ತಿದ್ದರೆ...

* * *

ಶನಿವಾರ ಬೆಳಗಿನ ಸ್ಕೂಲು ಮುಗಿಸಿ ಮನೆಗೆ ಬಂದಾಗ ಪಡಸಾಲೆಯಲ್ಲಿನ ದೊಡ್ಡ ಟೇಬಲ್ ಮೇಲೆ ಆಕೆಗೆ ತನ್ನ ಹೆಸರು ಹೊತ್ತ ನೀಲಿಬಣ್ಣದ ಕವರೊಂದು ಕಾಣಿಸಿತು. ಪಟಕ್ಕನೆ ಅದರ ಮೇಲೆ ಹಾರಿಹಿಡಿದು ಕೊಂಡು ಆಕೆ ಒಂದೇ ಓಟಕ್ಕೆ ಮಹಡಿ ಏರಿದಳು. 'ಏ ಶಾಂತೀ, ಚಹಾ ತಗೊಂಡು ಹೋಗ' ಅಂತ ಅಮ್ಮ ಕೂಗುತ್ತಿದ್ದರೂ ಲಕ್ಷಸದೇ.

ರೂಮಿನ ಬಾಗಿಲು ಹಾಕಿಕೊಂಡು ಪುಸ್ತಕಗಳನ್ನು ಬೀಸಾಡಿ ಮಂಚದ ಮೇಲೆ ಕುಳಿತು ಕವ್ಹರನ್ನು ಬಿಡಿಸಲೆತ್ನಿಸಿದಾಗ ಆಕೆಗೆ ತನ್ನ ಕೈಗಳು ನಡುಗುತ್ತಿದ್ದುದು ಗಮನಕ್ಕೆ ಬಂದಿತು. ಯಾಕೋ ಏನೋ ಆಗಬಾರದ್ದು ಆಗುತ್ತಿದೆ ಅನಿಸಿತು. ಯಾಕಾದರೂ ತಾನು ಈ ಶಂಕರನಿಗೆ ಪತ್ರ ಬರೆಯಲು ಬೇಡವೇ ಬೇಡ ಅಂತ ತಾಕೀತು ಮಾಡಲಿಲ್ಲವೋ ಅನಿಸಿತು. ಪತ್ರ ಒಡೆಯುವ ಮುನ್ನ ಆಕೆ ದೇವರಿಗೆ ಕೈಮುಗಿದಳು. ಇದರಲ್ಲಿ 'ಕೆಟ್ಟದ್ದು' ಏನೂ ಇರದಿರಲಿ ಅಂತ ಪ್ರಾರ್ಥಿಸಿದಳು. ನಂತರ ಧೈರ್ಯವಾಗಿ ಕವ್ಹರು ಹರಿದು ಒಳಗಿನ ಕಾಗದ ತೆರೆದಳು. ಓ, ಶಂಕರನ ಕೈಬರಹ ಎಷ್ಟು ದುಂಡಗಿದೆ! ಅವನು 'ಋ' ಬರೆಯುವ ರೀತಿ ಎಷ್ಟು ಮೋಹಕ! ಇಷ್ಟು ಛೆಂದ ಇಂಗ್ಲೀಶ್ ಅಕ್ಷರ ಬಹುಶಃ ಶೇಕ್ಸ್‌ಪಿಯರ್‌ನೂ ಬರೆಯುತ್ತಿರಲಾರ. "My dearest Shanthi" ... ಅಂತ ಸುರುವಾಗಿತ್ತು ಪತ್ರ. 'Dearest'? Dear, Dearer! Dearest! ಅಂದರೆ ಎಲ್ಲರಿಗಿಂತ, ಎಲ್ಲಕ್ಕಿಂತ ಹೆಚ್ಚು ಪ್ರೀತಿಯ! ಎಲಾ ಇವನ ....'

ಏನೇನೂ ಬರೆದಿದ್ದಾನೆ ಶಂಕರ. ಆದರೆ ಓದಿ ಖುಶಿಯಾಗುತ್ತಿದೆ– 'ನಿನ್ನ ಕಣ್ಣು ಎಷ್ಟು ಚೆಂದ.; ನನ್ನ ಕನಸಿನ ತುಂಬ ಬರೀ ನಿನ್ನ ನಗುಮುಖ. ನನಗೆ ನಿದ್ರೆಯೇ ಬರುವುದಿಲ್ಲ. ಅಭ್ಯಾಸ ಮಾಡಲು ಆಗುವುದಿಲ್ಲ. ಬರೇ ನಿನ್ನ ನೆನಪು. ನಾನು ನಿನ್ನನ್ನು ಪ್ರೀತಿಸುತ್ತೇನೆ ಶಾಂತೀ'

ಆಕೆ ಒಮ್ಮೆಲೇ ಬೆಚ್ಚಿಬಿದ್ದಳು. 'I love you Shanthi' ... ಓ, ಎಂಥ ಶಕ್ತಿಯಿದೆ ಈ ಇಂಗ್ಲೀಶು ಭಾಷೆಯಲ್ಲಿ, ಕನ್ನಡದ 'ಪ್ರೀತಿ' ಗಿಂತ ಈ ಐಲಂಜ ಎಷ್ಟು ಬೇರೆಯಾಗಿದೆ. ಭಯಂಕರವಾಗಿದೆ...

ಆಕೆ ಪತ್ರವನ್ನು ಇನ್ನೊಮ್ಮೆ ಓದಿದಳು. ಮತ್ತೊಮ್ಮೆ ಮೂರನೆಯ ಸಲ ಓದುವುದರಲ್ಲಿ ಅವಳಿಗೆ ಅದು ಬಾಯಿಪಾಠವಾಗಿ ಹೋಯಿತು.

ಆ ರಾತ್ರಿ ಮಲಗುವ ಮುನ್ನ ಆಕೆ ತನಗೆ ತಾನೇ ಹಲವು ಬಾರಿ ಹೇಳಿಕೊಂಡಳು. 'I Love you Shanthi' ಎಷ್ಟು ಚೆಂದದ ವಾಕ್ಯ!

* * *

'ಗಂಡು ಹುಡುಗರಿಗೆ ಸಣ್ಣ ವಯಸ್ಸಿನಲ್ಲಿ ಬುದ್ಧಿಯಿರುವುದಿಲ್ಲ, ಹೀಗೇ ಮಂಗನಾಟ ಆಡುತ್ತಾರೆ. ನಂತರ ಆಟದಂತೆಯೇ ಎಲ್ಲವನ್ನೂ ಲೈಟಾಗಿ ತೆಗೆದುಕೊಂಡು ಇರುವುದಿಲ್ಲ. ಆದ್ದರಿಂದ ಅವರ ಇಂಥ ಆಟಗಳಿಗೆ ಹುಡುಗಯರಿಗೇ, ನಮ್ಮ ಸಮಾಜವೇ ಹೀಗೆ ಗಂಡಸರು ಏನು ಮಾಡಿದರೂ ತಪ್ಪಲ್ಲ ಹೆಂಗಸಿಗೇ ಎಲ್ಲ ರೂಲ್ಸು, ಕಟ್ಟು, ಮಣ್ಣು'

ಆ ರಾತ್ರಿ ಶಾಂತಿ ಡೈರಿಯಲ್ಲಿ ಬರೆದಳು. ಮರುದಿನ ಮುಂಜಾನೆ ಎದ್ದು ಡೈರಿಯಲ್ಲಿ ಬರೆದುದನ್ನು ಓದಿದಾಗ ಅವಳಿಗೆ ಸಮಾಧಾನವಾಯಿತು. ಮಧ್ಯಾಹ್ನ ಶಾಲೆಗೆ ಹೋಗುವ ಮುನ್ನ ಮತ್ತೊಮ್ಮೆ ಅದನ್ನೇ ಓದಿ ಅವಸರದಲ್ಲಿ ಕೆಳಗೆ ಇನ್ನೆರಡು ಸಾಲು ಸೇರಿಸಿದಳು.

'ನಮ್ಮ ಹಿಂದೂ ಹೆಂಗಸರು ಈ ಅನ್ಯಾಯ ಅತ್ಯಾಚಾರಗಳನ್ನು ಇನ್ನು ಸಹಿಸಬಾರದು. ಅವರಿನ್ನು ಈ ಕಟ್ಟುಪಾಡುಗಳ ವಿರುದ್ಧ ಬಂಡಳಬೇಕು. ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕು. ಸ್ವಾತಂತ್ರ್ಯ ಸಿಗುವವರೆಗೂ ಹೋರಾಟ ನಿಲ್ಲಿಸಬಾರದು.'

**ಆಕರ :** ನಡೆದದ್ದೇ ದಾರಿ (ಸಮಗ್ರ ಕಥಾಸಂಕಲನ– ವೀಣಾ ಶಾಂತೇಶ್ವರ) ಪ್ರ.ಮನೋಹರ ಮುದ್ರಾಣಾಲಯ, ಧಾರವಾಡ–೨೦೦೬

## ಗೋಸುಂಬೆಗಳು

ಚೆನ್ನವೀರ ಕಣವಿ

ಗಿಡಗಂಟಿ ಬೇಲಿಗಳಲ್ಲಿ ಸರಕ್ಕನೋಡುವ ಓತಿಕಾಟ:
ರಕ್ತಗೆಂಪಿನ ಕೊರಳನುಬ್ಬಿಸಿ ಬಿಡುವ ದುರುದುರು ನೋಟ.
(ಮನುಷ್ಯನ ರಕ್ತ ಹೀರುವದೆಂಬ ಮಾತು ದಿಟ್ಟವಲ್ಲವಂತೆ)
ಬೆದೆಗಾಲದಲ್ಲಿ ಗಂಡಿಗೆ ವಿಲಕ್ಷಣ ಬಣ್ಣ;
ತುದಿಗಾಲು ಕಪ್ಪು, ಮೇಲ್ಪದಿಗೆ ಎದ್ದು ಬಡಿಯುವ ಕೆಂಪು, ಹಳದಿ.
ಗರಗಸದಂತೆ ಬೆನ್ನು, ತಲೆಯ ಮೇಲೆದ್ದ ಶಿಖೆ.
ಅಂದವಿಲ್ಲದ ತಮ್ಮ ಹೆಣ್ಣುಗಳ ಮುಂದೆ ಒಂದಿಷ್ಟು
ದೊಂಬರಾಟವನಾಡಿ ಮೆರೆಯುವ ಹುಂಬತನ.
ಇರಬಹುದು ಉಳಿದ ಸ್ಪರ್ಧಿಗಳಿಗೂ ಒಂದು ಎಚ್ಚರಿಕೆ.

ನಿಜವಾದ ಗೋಸುಂಬೆಗಳೆ ಇವು? – ಇರಲಿಕ್ಕಿಲ್ಲ, ಅವು
ಸಿಕ್ಕ ಸಿಕ್ಕಾಗ ಕಣ್ಣಿಗೆ ಬೀಳುವ ಜಾತಿಯಲ್ಲ.
ಹುಲುಸಾದ ತೋಟ, ತೋಪುಗಳಲ್ಲಿ ವಾಸ.
ತಪ್ಪಿ ರಸ್ತೆಗಿಳಿದಾಗ ಮಾತ್ರ ನಿಸ್ಸಹಾಯಕವಾಗಿ ಕಂಡಾವು.
ಒಮ್ಮೆಲೆ ಓಡಲಾರದೆ, ಚಲಿಸಲಾರದೆ ಯಾವ ಬದಿಗೂ
ನಿಧಾನ ಹೆಜ್ಜೆಯಿಟ್ಟು, ಹಿಂಬದಿಗೆ ಹೊರಳಿ ನೋಡುತ್ತ
ಹೊರಟಾಗ ಸಿಕ್ಕಿ ಬೀಳುತ್ತವೆ ಅಕಸ್ಮಾತ್ತಾಗಿ.
ಒಯ್ದು ಗಿಡದಲ್ಲಿ ಬಿಟ್ಟರೆ ಅರೆಕ್ಷಣದಲ್ಲಿ
ತೀಕ್ಷ್ಣ ಕಣ್ಣಿಗೂ ಮಣ್ಣೆರಚಿ ಮಾಯ.
ಬಣ್ಣ ಬದಲಾಯಿಸಲು ಪರದೆಯೂ ಬೇಕಿಲ್ಲ.
ದೇಹ ಚಪ್ಪಟೆಗೊಳಿಸಿ ಎಲೆ ತೊಗಟೆ–
ಗಂಟಿ ಬಿಡುತ್ತವೆ ಕಂಡರೂ ಕಾಣದಂತೆ.

ಸಾಮಾನ್ಯವಾಗಿ ಎಲ್ಲ ಪ್ರಾಣಿಗಳ ಕಣ್ಣಿನ ದೃಷ್ಟಿ,
ನಮ್ಮ ಹಾಗೇ, ಒಂದೆ ವೇಳೆಗೆ, ಒಂದೆ ದಿಕ್ಕಿಗೆ ನೋಟ
ಹರಿಸುವ ಧಾಟಿ. ಗೋಸುಂಬೆ ಹಾಗಲ್ಲ:
ನಿಮ್ಮ ಮೇಲೊಂದು ಕಣ್ಣು, ತಿರುಗನಿಯಂತೆ ಹೊರಳಿ
ಇನ್ನೊಂದು ಹಿಂಬದಿಗೆ ನೋಟ. ನೊಣವೊ, ಕೀಟವೊ
ಹಾರಾಡುತ್ತ ಬಂದು ಕುಳಿತರೆ ಸಮೀಪ–
ಎರಡೂ ಕಣ್ಣು ಗರಕ್ಕನೆ ತಿರುಗಿ, ದುರ್ಬೀನು ಹಚ್ಚಿ
ನೋಡಿದ ಹಾಗೆ ಅಂತರವಳೆದು, ದೇಹದಷ್ಟೇ
ಉದ್ದವಾಗಿರುವ ನಾಲಗೆಯ ಚಾಚಿ ಬಾಚುವುದು.

ಬಣ್ಣ ಬದಲಿಸುವ ಹಾಗೇ ಇದು ಕೂಡ ಅದ್ವಿತೀಯ.
ಮೂರನೆಯದೂ ಒಂದಿದೆ ಮುಖ್ಯ ವೈಶಿಷ್ಟ್ಯ:
ದೇಹದ ಕೆಳಗೇ ಬಾಲ ಸುರುಳಿಸುತ್ತಿ, ಕುಳಿತ
ಟೊಂಗೆಗೆ ಬಿಗಿದು, ತನ್ನ ಸ್ಥಾನಕ್ಕೆ ಚ್ಯುತಿ ಬರದಂತೆ ಭದ್ರ.
ಇವು ಅಂಥ ವಿಷಕಾರಿ ಪ್ರಾಣಿಗಳಲ್ಲ–
ಎಂದು ಒಂದುಪಕ್ಷ ಹೇಳುವದುಂಟು.
ಗೊತ್ತಿರಬೇಕಲ್ಲ ನಿಮಗೂ
ವೇದಾಂತಕ್ಕೂ ವ್ಯವಹಾರಕ್ಕೂ ಸಾಕಷ್ಟು ಅಂತರವುಂಟು.
ಒಂದು ವೇಳೆ ಇವನ್ನೆಲ್ಲ ಹುಡುಕಿ, ಹಿಡಿದು
ಬಂಧನದಲ್ಲಿಟ್ಟರೂ ಹೊಟ್ಟೆಗೆ ಹಾಕುವದು ಕಷ್ಟ
ಏಕೆನ್ನುವಿರಾ? ಇವುಗಳ ಆಹಾರ
ಜೀವಂತವಾಗಿ ಹಾರಾಡುತ್ತಿರುವ ನಿಷ್ಪಾಪಿ ಕ್ರಿಮಿ–ಕೀಟ.

**ಆಕರ :** ಸಮಗ್ರ ಕಾವ್ಯ –ಕಣವಿ, ಸಂವಹನ ಪ್ರಕಾಶನ, ಮೈಸೂರು, ೧೯೮೯.

* * *

**ಲೇಖಕರ ಪರಿಚಯ**

**ಡಾ. ವೀಣಾಶಾಂತೇಶ್ವರ (೧೯೪೫–):** ಧಾರವಾಡದಲ್ಲಿ ಜನನ. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಇಂಗ್ಲಿಶ್ ಅಧ್ಯಾಪಕಿಯಾಗಿ, ಪ್ರಾಚಾರ್ಯೆಯಾಗಿ ಸೇವೆ. ಕರ್ನಾಟಕ ವಿಶ್ವವಿದ್ಯಾಲಯದ ಪಠ್ಯಪುಸ್ತಕ ಸಮಿತಿ, ಮಹಿಳಾ ಸಲಹಾ ಸಮಿತಿ, ಅಕ್ಯಾಡೆಮಿಕ್ ಕೌನ್ಸಿಲ್, ಉದ್ಯೋಗ ಮಾಹಿತಿ ಕೇಂದ್ರ, ಪರೀಕ್ಷಾ ಸಮಿತಿ ಸದಸ್ಯರಾಗಿ; ಇಂದಿರಾ ಗಾಂಧಿ ಮುಕ್ತ ವಿಶ್ವವಿದ್ಯಾಲಯದ ಮಾರ್ಗದರ್ಶಿಯಾಗಿ, ದ.ರಾ.ಬೇಂದ್ರೆ ರಾಷ್ಟ್ರೀಯ ಟ್ರಸ್ಟಿನ ಸದಸ್ಯರಾಗಿ, ಉತ್ತರ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆಯಾಗಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ, ಮಹಿಳಾ ಅಧ್ಯಯನ ಸಮಿತಿಯ ಅಧ್ಯಕ್ಷರಾಗಿ ಕೆಲಸ ನಿರ್ವಹಣೆ. ಮುಳ್ಳುಗಳು, ಹಸಿವು, ಕವಲು, ಕೊನೆಯ ದಾರಿ ಮೊದಲಾದುವು ಇವರ ಕಥಾಸಂಕಲನಗಳು. ಗಂಡಸರು ಇವರ ಕಾದಂಬರಿ. ಮಹಿಳಾ ಸಾಹಿತ್ಯದಲ್ಲಿ ವೈಚಾರಿಕತೆ, ಲೇಖಕಿಯ ಸಮಸ್ಯೆಗಳು, ಕನ್ನಡ ಲೇಖಕಿಯರ ಸಾಧನೆ, ಸಣ್ಣ ಕತೆಗೆ ಮಹಿಳೆಯರ ಕೊಡುಗೆ, ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಣ್ಣ ಕತೆ, ಮಹಿಳೆಯರು ಮತ್ತು ಪೋಲೀಸರು ಮೊದಲಾದವು ಇವರ ವಿಮರ್ಶಾ ಕೃತಿಗಳು. ನದಿದ್ವೀಪಗಳು, ಕುರಿಗಾಹಿ, ಬಿಲ್ಲೇಸುರ ಇವರ ಅನುವಾದಗಳು. ಇವರಿಗೆ ಅನುಪಮಾ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ, ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ, ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಅನುವಾದಕ್ಕಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಲಭಿಸಿವೆ.

**ಚನ್ನವೀರ ಕಣವಿ (೧೯೨೮–):** ಧಾರವಾಡದಲ್ಲಿ ಜನನ. ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಧಾರವಾಡ ವಿವಿ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗದ ಕಾರ್ಯದರ್ಶಿಯಾಗಿ, ನಿರ್ದೇಶಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಆಕಾಶಬುಟ್ಟಿ, ಮಣ್ಣಿನ ಮೆರವಣಿಗೆ, ನೆಲಮುಗಿಲು, ಎರಡು ದಡ, ಶಿಶಿರದಲ್ಲಿ ಬಂದ ಸ್ನೇಹಿತ, ಜೀವಧ್ವನಿ, ಹೊಂಬೆಳಕು ಮೊದಲಾದ ಹದಿನಾರು ಕವನಸಂಕಲನಗಳನ್ನು ಪ್ರಕಟಿಸಿದ್ದಾರೆ. ಸಾಹಿತ್ಯಚಿಂತನ, ಕಾವ್ಯಾನುಸಂಧಾನ. ಸಮಾಹಿತ, ಸಮತೋಲನ ಮೊದಲಾದುವು ಇವರ ಪ್ರಬಂಧ ಸಂಕಲನಗಳು. ಅರವತ್ತೈದನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕಣವಿಯವರು ಅಧ್ಯಕ್ಷರಾಗಿದ್ದರು. ಹಾಗೆಯೇ ಇವರು ಆಳ್ವಾಸ್ ನುಡಿಸಿರಿ ೨೦೦೮ರ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ಬಸವ ಗುರು ಕಾರುಣ್ಯ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಪಂಪ ಪ್ರಶಸ್ತಿ ಹೀಗೆ ಹಲವಾರು ಪ್ರಶಸ್ತಿಗಳು ಸಂದಿವೆ. ಇವರಿಗೆ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಕೂಡ ದೊರೆತಿದೆ.

**ಅಭ್ಯಾಸ ಪ್ರಶ್ನೆಗಳು :**

೧. ಲೆಟರ್ ರೈಟಿಂಗ್ ಕಲಿಸಿದ ಮೇಷ್ಟ್ರು ಯಾರು?

೨. ಶಾಂತಿ ಶಂಕರನನ್ನು ಯಾವ ರಾಜನಿಗೆ ಹೋಲಿಸಿದಳು?

೩. ಶಂಕರ ಕಪಾಟಿನ ಹತ್ತಿರ ಬರಲು ಕಾರಣವೇನು?

೪. ಶಾಂತಿಯ ಸಾಯನ್ಸ್ ಪೇಪರ್ ನೋಡಿ ಶಂಕರ ಆಡಿದ ಮಾತುಗಳಾವುವು?

೫. ಶಂಕರನ ಪತ್ರಕ್ಕಾಗಿ ಶಾಂತಿ ಕಾಯಲು ಕಾರಣವೇನು?

೬. ಶಾಂತಿ ಪತ್ರವನ್ನು ಓದಿ ತೆಗೆದುಕೊಂಡ ತೀರ್ಮಾನಗಳಾವುವು?

೭. ಗಂಡಸರು ಏನು ಮಾಡಿದರೂ ತಪ್ಪಲ್ಲ. ಹೆಂಗಸಿಗೇ ಎಲ್ಲವೂ ರೂಲ್ಸು, ಕಟ್ಟು, ಮಣ್ಣು ಎಂಬ ಹೇಳಿಕೆಯನ್ನು 'ಗಂಡಸರು' ಪಠ್ಯದ ಹಿನ್ನೆಲೆಯಲಿ ಚರ್ಚಿಸಿ?

೮. ಗಂಡಸರು ಪಠ್ಯಭಾಗದ ಆಶಯವೇನು?

**ಚಟುವಟಿಕೆಗಳು**

೧. ಈ ಪಠ್ಯಭಾಗವನ್ನು ನಾಲ್ಕೈದು ಸಾಲುಗಳಲ್ಲಿ ಬರೆದು ಶೀರ್ಷಿಕೆಯನ್ನು ಕೊಡಿ.

೨. ಈ ಪಠ್ಯಭಾಗವನ್ನು ಓದಿದ ನಂತರ ಸಿನಿಮೀಯ ರೀತಿಯ ವಿಶ್ಲೇಷಣೆ ಮಾಡಿ.

* * *

**ಅಧ್ಯಾಯ–೪.೩**

**ಪಠ್ಯ**

**ಕಂಪ್ಯೂಟರಿನಲ್ಲಿ ಕನ್ನಡದ ಬಳಕೆ**

ಡಾ.ಎ.ಸತ್ಯನಾರಾಯಣ

**ಪ್ರವೇಶಿಕೆ**

ಕಂಪ್ಯೂಟರಿನ ಭಾಷ ಕೇವಲ ಇಂಗ್ಲಿಷ್ ಎಂಬುದು ಸಾಮಾನ್ಯವಾದ ನಂಬಿಕೆಯಾಗಿದೆ. ಕನ್ನಡ ಬಳಸಬಹುದು ಎಂದು ತಿಳಿದಿರುವವರಲ್ಲಿ ಬಹುತೇಕರು ಕನ್ನಡವನ್ನು ಕೇವಲ ಟೈಪಿಂಗ್ ಮಾಡಲಷ್ಟೇ ಸೀಮಿತ ಎಂದುಕೊಂಡಿದ್ದಾರೆ. ಆದರೆ, ಕಂಪ್ಯೂಟರಿಗೆ ಯಾವುದೇ ಭಾಷೆಯ ಹಂಗು ಇಲ್ಲ. ಕಂಪ್ಯೂಟರಿನ ಭಾಷೆ ಯಂತ್ರಭಾಷೆ, ಇದಕ್ಕೆ ಸಹಜಭಾಷೆಗಳು ಅರ್ಥವೂ ಆಗುವುದಿಲ್ಲ, ಪ್ರೋಗ್ರಾಮಿಂಗ್ ಮೂಲಕ ಯಾವುದೇ ಸಹಜ ಭಾಷೆಯನ್ನು ಅದರಲ್ಲಿ ಸುಲಭವಾಗಿ ಅಳವಡಿಸಿ ಬಳಸಬಹುದು. ಪ್ರಸ್ತುತ ಕನ್ನಡ ಭಾಷೆಯನ್ನು ಬಳಸುವಲ್ಲಿ ಇರುವ ಸೌಲಭ್ಯಗಳು ಮತ್ತು ಸಾಧನ–ಸಲಕರಣೆಗಳು, ಆಧುನಿಕ ಕಂಪ್ಯೂಟರ್ ತಂತ್ರಜ್ಞಾನದ ಸಂದರ್ಭದಲ್ಲಿ ಕನ್ನಡ ಬಳಕೆಗಾಗಿ ಲಭ್ಯವಿರುವ ತಂತ್ರಾಂಶಗಳ ಪರಿಚಯ ಮತ್ತು ಅವುಗಳ ಕುರಿತಾದ ಪ್ರಾಥಮಿಕ ಮಾಹಿತಿ ನೀಡುವುದು ಈ ಪಾಠಭಾಗದ ಉದ್ದೇಶವಾಗಿದೆ.

ಕಂಪ್ಯೂಟರ್ ಮತ್ತು ಭಾಷೆ

ಕಂಪೂಟರ್ ಒಂದು ಪ್ರತಿಸ್ಪಂದನಾತ್ಮಕವಾದ ವಿದ್ಯುನ್ಮಾನ ಯಂತ್ರ, ಮಾನವನ ದಿನನಿತ್ಯದ ಬಹುತೇಕ ಕೆಲಸಕಾರ್ಯಗಳಿಗೆ ಬಳಸಲಾಗುತ್ತಿರುವ ಈ ಕಂಪ್ಯೂಟರುಗಳು ಭಾಷೆಯನ್ನು ಬಳಸಿ, ಬಳಕೆದಾರನ ಜೊತೆ ಸಂವಾದವನ್ನು ನಡೆಸುತ್ತವೆ. ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವಂತೆ ಕಂಪ್ಯೂಟರುಗಳ ಭಾಷೆ ಇಂಗ್ಲೀಷ್ ಮಾತ್ರ. ಆದರೆ, ಕಂಪೂಟರು ಒಂದು ವಿಧಾನ ಯಂತ್ರವಾದರಿಂದ ಇದಕ್ಕೆ ಇಂಗ್ಲೀಷ್, ಕನ್ನಡ, ಹಿಂದಿ ಇಂಥ ಯಾವುದೇ ಸಹಜ ಭಾಷೆಯು ಅರ್ಥವಾಗುವುದಿಲ್ಲ. ಕಂಪ್ಯೂಟರಿಗೆ ಅರ್ಥವಾಗುವ ಭಾಷೆ ಎಂದರೆ ಅದು ವಿದ್ಯುತ್ ಸಂಕೇತಗಳ ಭಾಷೆ ಮಾತ್ರ. ಇದೇ ಯಂತ್ರಭಾಷೆ, ಪ್ರಪಂಚದ ಇತರೆ ಸಹಜ ಭಾಷೆಗಳು ನೇರವಾಗಿ ಇದಕ್ಕೆ ಅರ್ಥವಾಗುವುದಿಲ್ಲ. ಸಹಜ ಭಾಷೆಗಳನ್ನು ಯಂತ್ರಭಾಷೆಯಾಗಿ ಪರಿವರ್ತಿಸಿದರೆ ಮಾತ್ರ ಯಂತ್ರಕ್ಕೆ ಅರ್ಥವಾಗುತ್ತದೆ. ಕಂಪ್ಯೂಟರ್ ಕಾರ್ಯನಿರ್ವಹಣಾ ಮೂಲತತ್ತ್ವಗಳನ್ನು ತಿಳಿದರೆ ಕಂಪ್ಯೂಟರಿಗೆ ಭಾಷೆಯ ಮಿತಿ ಇಲ್ಲ ಎಂದು ಖಚಿತವಾಗುತ್ತದೆ.

ಕಂಪ್ಯೂಟರು ವಿದ್ಯುತ್ ಸಂಕೇತಗಳನ್ನು ಗ್ರಹಿಸಿ, ನೆನಪಿನ ಕೋಶದಲಿರಿಸಿಕೊಂಡು ಸಂದರ್ಭನುಸಾರ ಸಂಸ್ಕರಿಸಿ ಮತ್ತೆ ವಿದ್ಯುತ್ ಸಂಕೇತಗಳ ರೂಪದಲ್ಲಿ ಉತ್ತರಿಸುತ್ತದೆ ಅಥವಾ ಸಂಸ್ಕರಿತ ಮಾಹಿತಿಯನ್ನು ಹೊರಹಾಕುತ್ತದೆ. ಈ ವಿದ್ಯುತ್ ಸಂಕೇತಗಳ ಒಂದು ಸೆಟ್‌ನ್ನು 'ಕಂಪ್ಯೂಟರ್ ಸಂಕೇತಗಳು' (ಕೊಡ್ಸ್) ಎಂದು ಕರೆಯಲಾಗಿದೆ.

ಸಹಜವಾದ ಅಂಕಿಗಳನ್ನು (ನಂಬರ್‌ಗಳನ್ನು) '೧' (ಒಂದು) ಮತ್ತು '೦' (ಸೊನ್ನೆ)ಗಳ ಸಂಯೋಜನೆಯನ್ನಾಗಿ ನಿರೂಪಿಸುವ ಗಣಿತದ ದ್ವಿಮಾನ ಅಂಕಿ ಪದ್ಧತಿಯು (ಬೈನರಿ ನಂಬರ್ ಸಿಸ್ಟಂ) ಇಂದಿನ ಡಿಜಿಟಲ್ ಕಂಪ್ಯೂಟರಿನ ಆವಿಷ್ಕಾರಕ್ಕೆ ನಾಂದಿ ಹಾಡಿದೆ. ಈ ಆಂಕಿಪದ್ಧತಿಯ ವಿದ್ಯುನ್ಮಾನ ನಿರೂಪಣೆಯೇ ಕಂಪ್ಯೂಟರಿನ ಕಾರ್ಯನಿರ್ವಹಣೆಗೆ ಮೂಲಾಧಾರ ಕಂಪೂಟರ್ ಸಂಕೇತಗಳಲ್ಲಿ 'ಒಂದು' ಎಂಬುದು ವಿದ್ಯುತ್ ಇರುವಿಕೆಯನ್ನು ಸೂಚಿಸಿದರೆ 'ಸೊನ್ನೆ' ಎಂದು ವಿದ್ಯುತ್ ಇಲ್ಲದಿರುವಿಕೆಯನ್ನು ಸೂಚಿಸುತ್ತದೆ. ಇವುಗಳನ್ನು 'ಆಫ್' ಮತ್ತು 'ಆನ್ ಸಿಗ್ನಲ್‌ಗಳು ಎಂದೂ ಸಹ ಕರೆಯಲಾಗುತ್ತದೆ. ಇಂಥ ಸಂಕೇತಗಳು ವಿದ್ಯುತ್ತಿನ ಮಿಲಿವೋಲ್ಟುಗಳ ರೂಪದಲ್ಲಿ ಕಂಪ್ಯೂಟರಿನ ಒಳಗೆ ಹರಿದಾಡುತ್ತವೆ, ಈ ಸಂಕೇತ ಭಾಷೆಯನ್ನೇ ಯಂತ್ರಭಾಷೆ (ಮೆಶಿನ್ ಲಾಂಗ್ವೇಜ್ ಅಥವಾ ಲೋ ಲೆವೆಲ್ ಲಾಂಗ್ವೇಜ್) ಎಂದು ಕರೆದಿದ್ದಾರೆ,

ಸಂಕೇತ ರೂಪಗಳಾದ ೦ ಮತ್ತು ೧ ರ ಸಂಯೋಜನೆಗಳ ಈ 'ಯಂತ್ರಭಾಷೆ' ಕಂಪ್ಯೂಟರ್ ಬಳಕೆದಾರನಿಗೆ ಅರ್ಥವಾಗುವುದಿಲ್ಲ ಕಂಪೂಟರುಗಳ ಬಳಕೆಯಲ್ಲಿ ಯಂತ್ರಭಾಷೆ ಮತ್ತು ಸಹಜ ಭಾಷೆಗಳ ನಡುವೆ ಭಾಷಾಂತರ ಕೆಲಸ ನಡೆಯುದಿದ್ದರೆ ಬಳಕೆದಾರನ ನಿರ್ದೇಶನ ಕಂಪ್ಯೂಟರಿಗೆ ತಿಳಿಯುವುದಿಲ.. ಕಂಪ್ಯೂಟರು ಸಂಸ್ಕರಿಸಿ ನೀಡಿದ ಮಾಹಿತಿ ಬಳಕೆದಾರರಾದ ನಮಗೆ ಅರ್ಥವಾಗುವುದಿಲ್ಲ, ಆದ್ದರಿಂದ, ಬಳಕೆದಾರ ಮತ್ತು ಯಂತ್ರದ ಮಧ್ಯೆ ಇಬ್ಬರಿಗೂ ಅರ್ಥವಾಗುವ ಒಂದು ಭಾಷೆ ಇದ್ದರೆ ಅದು ಉಪಯುಕ್ತವಾಗುತ್ತದೆ ಇದೇ ಉದ್ದೇಶದಿಂದ 'ಹೈ ಲೆವೆಲ್ ಲಾಂಗ್ವೇಜ್'ನ್ನು ಅಭಿವೃದ್ಧಿಪಡಿಸಲಾಗಿದೆ.

ಸಿ, ಸಿ ++ ಇತ್ಯಾದಿ ಹೆಸರುಗಳಿಂದ ಕರೆಯಲಾಗುವ ಹೈಲೆವೆಲ್ ಲಾಂಗ್ವೇಜ್‌ಗಳು ಇಂಗ್ಲೀಷ್ ಭಾಷೆಯ ಅಕ್ಷರಗಳನ್ನೊಳಗೊಂಡ ಕೆಲವು 'ಪದಗಳು' ಅಥವಾ 'ಪದಪುಂಜ'ಗಳಾಗಿರುತ್ತವೆ. ಹೀಗಾಗಿ, ಇಂದಿಗೂ ಕಂಪ್ಯೂಟರಿನ ಭಾಷೆ ಇಂಗ್ಲೀಷ್ ಮಾತ್ರ ಎಂಬುದು ರಚಲಿತದಲ್ಲಿದೆ. ಕಂಪ್ಯೂಟರಿನ ಕಾರ್ಯಾಚರಣೆ ವ್ಯವಸ್ಥೆಯಲಿರುವ (ಆಪರೇಟಿಂಗ್ ಸಿಸ್ಟಂ) 'ಟ್ರಾನ್ ಲೇಟರ್ ಅಥವಾ ಇಂಟರ್‌ಪ್ರಿಂಟರ್' ಎಂಬ ಉಪತಂತ್ರಾಂಶಗಳು ಈ ಇಂಗ್ಲಿಷ್‌ನ ಪದಗಳನ್ನು ಮತ್ತು ಪದಪುರಜಗಳನ್ನು ಯಂತ್ರಭಾಷೆಗೆ ಪರಿವರ್ತಿಸಿ (ಅನುವಾದಿಸಿ) ಕಂಪ್ಯೂಟರಿಗೆ ಅರ್ಥವಾಗುವಂತೆ ಮಾಡುತ್ತದೆ, ಮಾಹಿತಿ ಸಂಸ್ಕರಣೆ ನಂತರ ಮತ್ತೆ ಯಂತ್ರಭಾಷೆಂರುಲಿ..ರಸವ ಮಾಹಿತಿಯನ್ನು ಮರುಪರಿವರ್ತಿಸಿ ಇಂಗ್ಲಿಷ್ ಭಾಷೆಯಲ್ಲಿ ಮಾನಿಟರ್‌ನ ಮೇಲೆ ಪ್ರದರ್ಶಿಸುತ್ತವೆ.

ಕಂಪ್ಯೂಟರ್ ಆದೇಶಗಳನ್ನು ನೀಡುವುದು ಮತ್ತು ಕಂಪ್ಯೂಟರ್ ತನ್ನ ಬಳಕೆದಾರನಿಗೆ ಸಂದೇಶವನ್ನು ಪ್ರಕಟಿಸುವುದು ಎರಡೂ ಕೆಲಸಗಳಲ್ಲಿ. ಒಂದು ಸಹಜ ಭಾಷೆಯು ತನ್ನ ಪಾತ್ರವನ್ನು ಸದಾ ನಿರ್ವಹಿಸುತ್ತದೆ. ಇದನ್ನೇ ಕಂಪ್ಯೂಟರ್ ಸಂವಹನ ಭಾಷೆ ಎಂದು ಹೇಳಲಾಗಿದೆ. ಇಂದು, ಇಂಗ್ಲಿಷ್ ಭಾಷೆಯ ಕಂಪ್ಯೂಟರ್ ಸಂವಹನ ಭಾಷೆಯಾಗಿರುವುದು ಸಾಮಾನ್ಯವಾಗಿದೆ, ಕಾರಣವೇನೆಂದರೆ,

ತಂತ್ರಾಂಶಗಳನ್ನು ತಯಾರಿಸುವಾಗ ಸಂವಹನವು ಇಂಗ್ಲಿಷ್ ಭಾಷೆಯಲ್ಲಿರುವಂತೆ ಪ್ರೋಗ್ರಾಮಿಂಗ್‌ನ್ನು ಮಾಡಿರುವುದರಿಂದ ಕಂಪ್ಯೂಟರುಗಳ ಸಂವಹನ ಭಾಷೆಯು ಇಂಗ್ಲಿಷ್ ಆಗಿದೆ. ಹಾಗೆಂದು ಇಂಗ್ಲಿಷ್ ಮಾತ್ರವೇ ಕಂಪ್ಯೂಟರಿನ ಭಾಷೆಯಾಗಿರುತ್ತದೆ ಎನುವಂತಿಲ್ಲ, ಪ್ರೋಗ್ರಾಮಿಂಗ್ ಮಾಡುವಾಗಲೇ ನಮಗೆ ಬೇಕಾದ ಭಾಷೆಯಲ್ಲಿ ಸಂವಹನ ನಡೆಸುವಂತೆ ಪ್ರೋಗ್ರಾಮಿಂಗ್ ಮಾಡಿದರ ಆದ ಭಾಷಯಲ್ಲಿ ಕಂಪ್ಯೂಟರ್ ಸಂವಹನ ನಡೆಸುತ್ತದೆ.

ಕೆಲಸಕಾರ್ಯಗಳನ್ನು ನಿರ್ವಹಿಸಲು ಕಂಪ್ಯೂಟರ್‌ಗೆ ತನ್ನದೇ ಸ್ವಂತ ಬುದ್ಧಿ ಇಲ್ಲ ಎಂಬುದೊಂದು ವಾಸ್ತವ ಸತ್ಯ. ಅದೊಂದು ಸತ್ರ ವಿದ್ಯುನ್ಮಾನ ಯಂತ್ರ ತಂತ್ರಾಂಶವೇ (ಸಾಫ್ಟ್‌ವೇರ್) ಕಂಪ್ಯೂಟರಿನ ಸೂತ್ರ. ಎರಡು ವಿಧದ ಪ್ರಮುಖ ತಂತ್ರಾಂಶಗಳು ಕಂಪ್ಯೂಟರಿನ ಜೀವನಾಡಿ, ಒಂದು 'ಕಂಪ್ಯೂಟರಿನ ಕಾರ್ಯಾಚರಣೆ ವ್ಯವಸ್ಥೆ' (ಆಪರೇಟಿಂಗ್ ಸಿಟಿ) ಮತ್ತೊಂದು 'ಆನ್ವಯಿಕ ತಂತ್ರಾಂಶ' (ಆಪ್ಲಿಕೇಷನ್ ಸಾಫ್ಟ್ ವೇರ್), ಆನ್ವಯಿಕ ತಂತ್ರಾಂಶ ಮತ್ತು ಬಳಕೆದಾರರ ನಡುವೆ ಎರಡೂ ಕಡೆಯಲಿ. ಸಮಯವನ್ನು ಕಾಯುಕೊಳ್ಳುವುದು 'ಕಾರ್ಯಾಚರಣೆ ವ್ಯವಸ್ಥೆ' ಎಂಬ ಮೂಲ ತಂತ್ರಾಂಶದ ಕೆಲಸ, ಬಳಕೆದಾರನ ನಿರ್ದೇಶನದಂತೆ 'ಅನ್ವಯಿಕ ತಂತ್ರಾಂಶ' ಕೆಲಸ ನಿರ್ವಹಿಸುತ್ತದೆ, ಅಂದರೆ, ಕೆಲಸಕಾರ್ಯಗಳನ್ನು ಅಗತ್ಯಕ್ಕೆ ತಕ್ಕಂತೆ ನಿರ್ವಹಿಸಲು ಕಂಪ್ಯೂಟರಿನಲ್ಲಿ ಕಾರ್ಯಾಚರಣೆ ವ್ಯವಸ್ಥೆ, ಅನ್ವಯಿಕ ತಂತ್ರಾಂಶ ಮತ್ತು ಬಳಕೆದಾರ ಈ ಮೂವರಲ್ಲಿ, ಪರಸರ ನಡುವೆ, ಸಂವಾದ, ಸಂಪರ್ಕ ಸ್ಪಂದನೆ ಮತ್ತು ವ್ಯವಹಾರಗಳು ನಡೆಯುತ್ತವೆ.

ಬಳಕೆದಾರನು ಬಯಸುವ ಕೆಲಸಕಾರ್ಯಗಳನ್ನು ನಿರ್ವಹಿಸಲು ಕಂಪೂಟರು ತನ್ನ ಬಳಕೆದಾರನೊಂದಿಗೆ ಸಂವಾದಿಸುತ್ತದೆ, ಸಂಪರ್ಕಿಸುತ್ತದೆ, ಸ್ಪಂದಿಸುತ್ತದೆ ಮತ್ತು ವ್ಯವಹರಿಸುತ್ತದೆ. ಇದನ್ನೆಲ್ಲಾ ಬಳಕೆದಾರ ವ್ಯಕ್ತಿಗಳೊಂದಿಗೆ ನಿರ್ವಹಿಸಲು ಕಂಪ್ಯೂಟರು ಸಹ ಬಳಕೆದಾರರ ಭಾಷೆಯನ್ನು ಉಪಯೋಗಿಸುತ್ತದೆ. ಅಂದರೆ, ಕಂಪ್ಯೂಟರು ಮತ್ತು ಬಳಕೆದಾರ ವ್ಯಕ್ತಿಗಳ ನಡುವೆ ಸಹಜ ಭಾಷೆಯೊಂದು ತನ್ನ ಪ್ರಾಮುಖ್ಯವನ್ನು ಸದಾಕಾಲ ಮೆರೆಯುತ್ತದೆ ಎಂಬುದು ಇಲ್ಲಿ ಗಮನಾರ್ಹ ವಿಷಯ.

ಕಂಪ್ಯೂಟರ್‌ನ ಬಳಕೆಯ ಭಾಷೆ

ಕಂಪ್ಯೂಟರ್ ತನ್ನ ಬಳಕೆದಾರರೊಂದಿಗೆ ಇಂಗಿಷ್‌ನಲ್ಲೇ ಸಂವಹನ ನಡೆಸಿದರೂ ಸಹ ಬಳಕೆದಾರನು ತನ್ನ ಭಾಷೆಯ ಪಠವನ್ನು ಬೆರಳಚ್ಚಿಸುವ ಮೂಲಕ ಲೇಖನಗಳು, ಮುದ್ರಣ ಕಾರ್ಯಕ್ಕಾಗಿ ಡಿಟಿಪಿ ಮಾಡಬಹುದು, ಇಂಥ ಕೆಲಸಗಳನ್ನು ತನ್ನದೇ ಭಾಷೆಯಲ್ಲಿ ಅಂದರೆ ಕನ್ನಡದಲ್ಲಿಯೂ ನಿರ್ವಹಿಸುವಂತೆ ಸೂಕ್ತ ತಂತ್ರಾಂಶಗಳನ್ನು ಅನುಸ್ಥಾಪಿಸಿಕೊಂಡು ಬಳಸಬಹುದು. ಇಂಥ ಬಳಕೆಯ ಕಂಪ್ಯೂಟರಿನ ಬಳಕೆಯ ಭಾಷೆ ಎಂದು ಕರೆಯಲಾಗಿದೆ, ಆಪ್ಲಿ ಕೇಷನ್ ತಂತ್ರಾಂಶಗಳ ಸಂವಹನ ಭಾಷೆಯು ಇಂಗ್ಲಿಷ್ ಆಗಿದ್ದರೂ, ಕನ್ನಡವನ್ನು ಬಳಕೆಯ ಭಾಷೆಯನ್ನಾಗಿಸಿ ಕೆಲಸಕಾರ್ಯಗಳನ್ನು ನಿರ್ವಹಿಸಬಹುದು. ಇದಕ್ಕಾಗಿ ಭಾಷಾ ಲಿಪಿತಂತ್ರಾಂಶಗಳು ಅಗತ್ಯವಿದೆ.

ಅಂತಾರಾಷ್ಟ್ರೀಯ ಮಟ್ಟದ ತಂತ್ರಾಂಶ ತಯಾರಕರು ಆರಂಭದಿಂದಲೇ ಅವರ ತಂತ್ರಾಂಶಗಳಲ್ಲಿ ಕನ್ನಡ ಭಾಷಾ ಲಿಪಿಯನ್ನು ಅಳವಡಿಸಿ ನೀಡಿರಲಿಲ್ಲ. ಆ ಕಾರಣದಿಂದಾಗಿ, ಭಾರತೀಯ ಭಾಷೆಗಳಿಗಾಗಿ ನಮ್ಮ ದೇಶದ ತಂತ್ರಾಂಶ ತಯಾರಕರು ಅಪಿತಂತ್ರಾಂಶಗಳನ್ನು ಸಿದ್ಧಪಡಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡಿದರು, ಡಿ.ಟಿ.ಪಿ.ಉದ್ದೇಶಕ್ಕಾಗಿ ಬಳಕೆಗೆ ಬಂದ ಈ 'ಭಾಷಾ ಲಿಪಿತಂತ್ರಾಂಶಗಳನ್ನು ವಿಂಡೋಸ್‌ನಂಥ ಮೇಲೆ ಅಳವಡಿಸಿಕೊಂಡು ಬಳಸುವುದು ಆರಂಭವಾಯಿತು.

ಕಂಪ್ಯೂಟರಿನ ಬಳಕೆಯ ಭಾಷೆಯಾಗಿ ಕನ್ನಡ

ಎಂಭತ್ತರ ದಶಕದ ಕೊನೆಯಲ್ಲಿ 'ಡಾಸ್ ಎಡಿಟರ್‌ಗಳು' ಬಳಕೆಗೆ ಬಂದವು. 'ಸೇಡಿಯಾಪು' ತಂತ್ರಾಂಶವು ಉಚಿತವಾಗಿ ವಿತರಿಸಲಾದ ಕನ್ನಡದ ಮೊಟ್ಟ ಮೊದಲ 'ಡಾಸ್ ಎಡಿಟರ್'. ಇದನ್ನು ನಾಡೋಜ ಕೆ.ಪಿ.ರಾವ್‌ವರು ಸಿದ್ಧಪಡಿಸಿದ್ದರು, ಎಸ್.ಆರ್.ಜಿ. ರವರ 'ಶಬ್ದರತ್ನ' ಎಂಬುದು ಬಹುತೇಕ ಸರಕಾರಿ ಕಚೇರಿಗಳಲ್ಲಿ ಬಳಕೆಯಲ್ಲಿದ್ದ ಜನಪ್ರಿಯ 'ಕನ್ನಡದ ಡಾಸ್ ಎಡಿಟರ್' ಆಗಿತ್ತು.

ನಂತರೆ, ವಿಂಡೋಸ್ ಕಾರ್ಯಾಚರಣೆ ಅವರ ಮೇಲೆ ಕಾರ್ಯ ನಿರ್ವಹಿಸುವ, ಫಾಂಟುಗಳು ಎಂದು ಕರೆಯಲಾಗುವ ಕನ್ನಡದ ಪ್ರತ್ಯೇಕ ಲಿಪಿತಂತ್ರಾಂಶಗಳು' ಬಳಕೆಗೆ ಬಂದವು. ಮಾರುಕಟ್ಟೆಯಲ್ಲಿ ಲಭ್ಯವಿದ ಲಿಪಿತಂತ್ರಾಂಶಗಳೆಂದರೆ ಪ್ರಕಾಶಕ (ಸೋನಾಟ ಕಂಪನಿ, ಬೆಂಗಳೂರು), ಶ್ರೀಲಿಪಿ (ಮಾಡ್ಯುಲರ್ ಸಿಸ್ಟಿಂಸ್, ಪುಣೆ), ಆಕೃತಿ (ಸೈಬರ್‌ಸ್ಕೇಪ್ ಮಲ್ಟಿಮೀಡಿಯಾ ಲಿ. ಬೆಂಗಳೂರು) ವಿನ್‌ಕೀ (ಎಸ್.ಆರ್. ಜಿ.), ಸುರಭಿ (ಆಪಲ್ ಸಾಫ್ಟ್, ಬೆಂಗಳೂರು), ಕೈರಳಿ (ಬಿಯಾನ್ ಕಂಪ್ಯೂಟರ್ಸ್), ಪುಣೆಯ ಸಿಡ್ಯಾಕ್‌ಸ್ ಐಲಿಪ್ ಇತ್ಯಾದಿಗಳು.

ಪ್ರಸ್ತುತ, ಲಭ್ಯವಿರುವ ಉಚಿತ ಕನ್ನಡ ಲಿಪಿತಂತ್ರಾಂಶಗಳೆಂದರೆ: ಕನ್ನಡ ಗಣಕ ಪರಿಷತ್ತು ತಯಾರಿಸಿರುವ 'ನುಡಿ' ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದ 'ಕುವೆಂಪು ತಂತ್ರಾಂಶ' ಮತ್ತು ಲೋಹಿತ್ ಡಿ.ಶಿವಮೂರ್ತಿ ಅಭಿಪಡಿಸಿರುವ ಯುನಿಕೋಡ್ ಫಾಂಟ್ ಬೆಂಬಲಿತ 'ಪದ' ಲಿಪಿತಂತ್ರಾಂಶ 'ಬರಹ'– ವಿಂಡೋಸ್ ವೇದಿಕೆಯ ಮೇಲೆ ಕಾರ್ಯನಿರ್ವಹಿಸುವ ಕನ್ನಡದ ಪ್ರಥಮ ಉಚಿತ ಲಿಪಿತಂತ್ರಾಂಶವಾಗಿತ್ತು. ಅದು ಈಗ ಪಾವತಿಸಿ ಬಳಸುವ ತಂತ್ರಾಂಶವಾಗಿದೆ,

'ಬರಹ' ಅಮೆರಿಕಾ ವಾಸಿಯಾಗಿರುವ ಶ್ರೀ ಶೇಷಾದ್ರಿ ವಾಸುರವರ ಪರಿಶ್ರಮದ ಫಲವಾಗಿದೆ. 'ನುಡಿ' ಕರ್ನಾಟಕ ಸರಕಾರದ ಅನುದಾನದಿಂದ ಕನ್ನಡ ಗಣಕ ಪರಿಷತ್ತು ಸಿದ್ಧಪಡಿಸಿದ ಕನ್ನಡ ಲಿಪಿತಂತ್ರಾಂಶವಾಗಿದೆ. ಕುವೆಂಪು ಕನ್ನಡ ಲಿಪಿತಂತ್ರಾಂಶ'ವನ್ನು ಹಂಪಿಯ ಕನ್ನಡ ವಿಶ್ವವಿದಾಲಯವು ಸಿದ್ಧಪಡಿಸಿದೆ. 'ನುಡಿ' ಮತ್ತು 'ಕುವೆಂಪು' ತಂತ್ರಾಂಶಗಳನ್ನು ಆಯಾಯ ಅಂತರಜಾಲ ತಾಣದಿಂದ ಉಚಿತವಾಗಿ ಡೌನ್‌ಲೋಡ್ ಮಾಡಿಕೊಂಡು ಬಳಸಬಹುದು.

ಈ ಪೈಕಿ 'ನುಡಿ' ತಂತ್ರಾಂಶ ಉಚಿತ ತಂತ್ರಾಂಶ ಮಾತ್ರವೇ ಹೊರತು ಮುಕ್ತ ತಂತ್ರಾಂಶ ಅಲ್ಲ ಅದರ ಆಕರ ಕ್ರಮವಿಧಿ ಅಂದರೆ, ಸೋರ್ಸ್‌ಕೋಡ್ ಮುಕ್ತವಾಗಿ ದೊರೆಯುವುದಿಲ್ಲ ಆದರೆ, 'ಕುವೆಂಪು ಕನ್ನಡ ತಂತ್ರಾಂಶ'ವು ಉಚಿತ ಮಾತ್ರವಲ. ಮುಕ್ತ ತಂತ್ರಾಂಶವೂ ಹೌದು, ಇದರ ಆಕರ ಕ್ರಮವಿಧಿಯನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಜಿಯನ್ನು ಸಲ್ಲಿಸುವ ಮೂಲಕ ಪಡೆದುಕೊಳ್ಳಬಹುದು, ಪ್ರಸ್ತುತ, 'ಬರಹ ತಂತ್ರಾಂಶ'ವು ಈಗ ಮುಕ್ತವೂ ಅಲ್ಲ, ಉಚಿತವೂ ಅಲ್ಲ 'ಪದ' ಎಂಬ ಹೆಸರಿನ ಯುನಿಕೋಡ್ ಬೆಂಬಲಿತ ಕನ್ನಡದ

ಉಚಿತ ಲಿಪಿತಂತ್ರಾಂಶ ಲಭ್ಯವಿದೆ, ಲೋಹಿತ್ ಡಿ.ಶಿವಮೂರ್ತಿ ಇದನ್ನು ಅಭಿವೃದ್ಧಿಪಡಿಸಿ ಪ್ರಸುತ ಉಚಿತವಾಗಿ ಬಳಕೆಗೆ ನೀಡಿದ್ದಾರೆ. ಕೇಂದ್ರ ಸರಕಾರವು ಭಾರತೀಯ ಭಾಷೆಗಳಿಗಾಗಿ ಹಲವು ತಂತ್ರಾಂಶ ಸಲಕರಣೆಗಳನ್ನು ಚಿತವಾಗಿ ಒದಗಿಸಿದೆ, ಅಲ್ಲಿ ಕನ್ನಡ ಭಾಷೆಗೂ ಸಲಕರಣೆಗಳು ಲಭ್ಯ.

**ಆಕರ :** ಕಂಪ್ಯೂಟರಿನಲ್ಲಿ ಕನ್ನಡದ ಬಳಕೆ–'ಕಂಪ್ಯೂಟರ್ ಮತ್ತು ಕನ್ನಡ' ಕೃತಿಯಿಂದ ಆಯ್ದ ಭಾಗ, ಪ್ರ : ಸುರಾನಾ ಕಾಲೇಜು ಮತ್ತು ಮಿತ್ರಮಾಧ್ಯಮ –೨೦೧೪

* * *

**ಪೂರಕ ಪಠ್ಯ**

## ಕನ್ನಡದಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರ ಬೆಳೆದ ಬಗೆ

ಜಿ.ಎನ್. ನರಸಿಂಹಮೂರ್ತಿ

೧೯೮೦ರ ದಶಕದಲ್ಲಿ ಕರ್ನಾಟಕ ಗಣಕಗಳು ಬಂದಿವೆ. ಆದರೆ ಆಗ ಇನ್ನೂ ಅವುಗಳಲ್ಲಿ ಬಳಸಲು ಸಾಧ್ಯವಿರಲಿಲ್ಲ. ಇಂಗ್ಲಿಷಿನಲ್ಲಿ ಮಾತ್ರ ಸಾಧ್ಯವಿತ್ತು. ಅದೊಂದು ಬಗೆಯ ವಿಸ್ಮಯದ ಸಾಧನವಾಗಿ ತೋರುತ್ತಿತ್ತು. ಎಲ್ಲೋ ಕೆಲವರು ಶ್ರೀಮಂತ ಉದ್ಯಮಿಗಳು, ಬ್ಯಾಂಕ್‌ಗಳು, ಜೀಮವಿಮಾ ಕಂಪನಿಯಲ್ಲಿರುವವರು ಮುಂತಾದವರು ಪಾಕ ಬಳಸುತ್ತಿದ್ದರು. ಕನ್ನಡವನ್ನು ಬಳಸಲು ಅನುಕೂಲವಾಗುವಂತೆ ಸಾಧನವನ್ನು ಯಾರಾದರೂ ರೂಪಿಸಬಹುದು ಎಂಬ ನಿರೀಕ್ಷೆ ಗಣಕಗಳನ್ನು ಬಳಸು ಎಲ್ಲರಲ್ಲಿಯೂ ಮೋಳೆತಿತ್ತು ಈಗ ಎಲ್ಲರಿಗೂ ಅರುವ ಹಾಗೆ ಗಣಕಗಳಿಗೆ ಸ್ವತಃ ಯಾವ ಭಾಷೆಯೂ ಗೊತ್ತಿರುವುದಿಲ್ಲ. ಗಣಕಗಳು ಅಮೆರಿಕೆಯ ತುಂಬ ಮುಂಚೆಯೇ ಬಂದಿದ್ದವು. ಸಹಜವಾಗಿಯೇ ಅಲ್ಲಿದ್ದ ಕನ್ನಡಗರಿಗೆ ಅವುಗಳನ್ನು ಬಳಸುವ ಅವಕಾಶಗಳು ಬೇಗನೇ ದೊರೆತಿದ್ದವು. ಅವರ ಅನೇಕರು ಗಣಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದರು. ಆ ಪೈಕಿ ಹಲವರು ಕನ್ನಡವನ್ನು ಗಣಕಗಳಲ್ಲಿ ಬಳಕೆ ಮಾಡುವತ್ತ ತಮ್ಮ ಗಮನವನ್ನು ಹರಿಸಿದ್ದರು. ಶ್ರೀ ಶಿಕಾರಿಪುರ ಹರಿಹರೇಶ್ವರ ಅವರು ಅಮೆರಿಕ ಪತ್ರಿಕೆಯನ್ನು ೧೯೮೪ರಲ್ಲಿ ಪ್ರಾರಂಭಿಸಿದರು. ೧೯೮೫ರ ಫೆಬ್ರವರಿ ಸಂಚಿಕೆಯ ಸಂಪಾದಕೀಯದಲ್ಲಿ ಹರಿಹರೇಶ್ವರ ಅವರು ಈ ಕುರಿತ ಬೆಳವಣಿಗೆಯನ್ನು ಗುರುತಿಸಿದ್ದಾರೆ: 'ಊಹಿಸಿದಷ್ಟೂ ಬೆಳೆಯುತ್ತ ಹೋಗುವ ಪ್ರಭಾವವಲ್ಲ ಕಂಪ್ಯೂಟರಿನದು. 'ಪದಸಂಸ್ಕಾರಕ'ವೇ ಮೊದಲಾದ ವೈಶಿಷ್ಟ್ಯ ಹೊಂದಿ, ಎಲ್ಲ ಸಮರ್ಪಕವಾದ ಮಜಲು ಮುಟ್ಟಿ ಶ್ರೀಸಾಮಾನ್ಯ ಕನ್ನಡಿಗನ ಕೈಗೆಟಕುವಂತೆ ಕಂಪ್ಯೂಟರ್ ಈ ಸಾಫ್‌ವೇರ್ ಸಿದ್ಧವಾಗುವ ದಿನ ದೂರವಿಲ್ಲ. ಭಾರತದಲ್ಲೂ ವಿದೇಶದಲ್ಲೂ ಈ ದಿಶೆಯಲ್ಲಿ ಪ್ರಯತ್ನಗಳು ನಡೆದಿವೆ. ಹಲವು ಹಂತಗಳಲ್ಲಿವೆ 'ಅಮೆರಿಕನ್ನಡ'ಕ್ಕೆ ತಿಳಿದಂತೆ, ಉತ್ತರ ಅಮೆರಿಕಾದಲ್ಲಿ ಕನ್ನಡದ ಕಂಪ್ಯೂಟರೀಕರಣದ ಕುರಿತು ಗಂಭೀ ಪ್ರಯತ್ನ ನಡೆಸುತ್ತಿರುವವರಲ್ಲಿ ವಿಸ್ಕಾನ್ಸಿನ್ನ ಪ್ರೊ. ರೊನಾಲ್ಡ್ ಬೇಕರ್, ಪೆನ್ಸಿಲ್ವೇನಿಯಾದ ಪ್ರೊ. ಟಿ. ಮಹದೇವರಾವ್ ಪೆನ್ಸಿಲ್ವೇನಿಯಾದ ಪ್ರೊ. ಕಸ್ತೂರಿರಂಗಾಚಾರ್, ಕ್ಯಾಲಿಫೋರ್ನಿಯಾದ ವಿಶ್ವೇಶ್ವರ ದೀಕ್ಷಿತ್ ಇವರ ಮುಖ್ಯರು. ಇಷ್ಟು ತಿಳಿಸುವುದಲ್ಲದೆ ಆ ಸಮಯದಲ್ಲಿ ಆಗಲೇ ಲಭ್ಯವಿದ್ದ ಎರಡು ತಂತ್ರಾಂಶಗ ಮಾಹಿತಿಯನ್ನೂ ನೀಡುತ್ತಾರೆ. ಒಂದು ವಿಶ್ವೇಶ್ವರ ದೀಕ್ಷಿತ್ ಅವರದ್ದು. ಎರಡನೆಯದು ಪ್ರೊ ಕಸ್ತೂರಿ ರಂಗಾಚಾರರದು. ಎರಡರಲ್ಲಿ ಅವರು ಕಸ್ತೂರಿ ರಂಗಾಚಾರ್ ಅವರ ತಂತ್ರಾಂಶದ ಬಳಕೆ ಹೆಚ್ಚ ಸುಲಭವಾಗಿದೆ ಎಂದು ತಿಳಿಸಿದ್ದಾರೆ. ಪ್ರೊ. ಕಸ್ತೂರಿ ರಂಗಾಚಾರ್ಯರು ತಮ್ಮ ತಂತ್ರಾಂಶದ ಕುರಿತ 'ಅಮೆರಿಕನ್ನಡ ದ ೧೯೮೪–೧೯೮೫ರ ಫೆಬ್ರವರಿ ಸಂಚಿಕೆಯಲ್ಲಿ ಒಂದು ಲೇಖನ ಬರೆದು ತಾವು ರೂಪಿಸಿದ ಕಸ್ತೂರಿ ಕನ್ನಡ ತಂತ್ರಾಂಶದ ಬಗೆಗೆ ಮಾಹಿತಿ ನೀಡಿದ್ದಾರೆ. ಅದರ ಕೊನೆಯಲ್ಲಿ ಅವರು ಹೀಗೆ ಹೇಳುತ್ತಾರೆ ಕರ್ನಾಟಕದಲ್ಲಿ ಕನ್ನಡದ ಆಡಳಿತ ಭಾಷೆಯಾಗಿರುವ ಇಂದು ಇಂತಹ ಯಂತ್ರದ ಉಪಯುಕ್ತತೆ ಸರ್ವವಿದಿತ ದಿನನಿತ್ಯದ ವ್ಯವಹಾರ ಪತ್ರಗಳಲ್ಲಿ ಕನ್ನಡದ ಬಳಕೆ ಹೆಚ್ಚಿನ ಪ್ರಮಾಣದಲ್ಲಿ ನಡೆಯಬೇಕಾದಲ್ಲಿ ಸುಲಭವಾಗಿ ಉಪಯೋಗಿಸಬಹುದಾದ ಇಂತಹ ಯಂತ್ರ ಅವಶ್ಯಕ, ಕರ್ನಾಟಕ ಸರ್ಕಾರ, ಕನ್ನಡ ಸಾಹಿತ್ಯ ಪರಿಷತ್ ಮತ್ತು ಭಾರತದ ಉದ್ಯಮಿಗಳು ಆಸಕ್ತಿ ವಹಿಸಿದಲ್ಲಿ ಇಂತಹ ಯಂತ್ರವನ್ನು ಭಾರತದಲ್ಲಿಯೇ ಸುಲಭ ಬೆಲೆಗೆ ಶೀಘ್ರದಲ್ಲಿಯೇ ತಯಾರಿಸುವುದು ಸುಲಭ ಸಾಧ್ಯ"

ಆದರೆ ಕರ್ನಾಟಕದಲ್ಲಿ ಹಾಗೇನೂ ಆಗಲಿಲ್ಲ. ಭಾರತ ಮತ್ತು ಕರ್ನಾಟಕಗಳು ಆಗಿನ್ನೂ ಗಣಕಗಳಿಗೆ ವ್ಯಾಪಕವಾಗಿ ತೆರೆದುಕೊಂಡಿರಲಿಲ್ಲ. ಕೇಂದ್ರ ಸರ್ಕಾರ ಮಾಹಿತಿ ತಂತ್ರಜ್ಞಾನದಲ್ಲಿ ತೊಡಗಿಕೊಳ್ಳಲು ಸಿ ಡಾಕ್ ಎಂಬ ಸಂಸ್ಥೆಯನ್ನು ಆಗ ಸ್ಥಾಪನೆ ಮಾಡಿತು. ಇದರ ಬೆಳವಣಿಗೆಯನ್ನು ಅನಂತರ ನೋಡಬಹುದು.

ಅಮೆರಿಕದಲ್ಲಿದ್ದ ಡಾ. ವಿಶ್ವೇಶ್ವರದೀಕ್ಷಿತ್ ೧೯೮೪ರಲ್ಲಿ ಚಿತ್ರಗುಪ್ತ ಎಂಬ ತಂತ್ರಾಂಶವೊಂದನ್ನು ರೂಪಿಸಿದರು. ಇದನ್ನು ಕುರಿತು ಅವರು ಅಮೆರಿಕನ್ನಡ ಪತ್ರಿಕೆಯ ಏಪ್ರಿಲ್ ಮೇ ೧೯೮೫ರ ಸಂಚಿಕೆಯಲ್ಲಿ ಸಚಿತ್ರ ಲೇಖನವೊಂದನ್ನು ಬರೆದು ತಾವು ರೂಪಿಸಿದ ತಂತ್ರಾಂಶದ ವಿವರಗಳನ್ನೂ ಕೀಲಿಮಣೆಯ ವಿಧಾನವನ್ನೂ ತಿಳಿಸಿದ್ದಾರೆ. (amerikannada.org ತಾಣದಲ್ಲಿ ಕಸ್ತೂರಿ ರಂಗಾಚಾರ್ ಮತ್ತು ದೀಕ್ಷಿತ್ ಅವರ ಎರಡೂ ಲೇಖನಗಳಿರುವ ಮತ್ತು ಇತರ ಎಲ್ಲಾ ಸಂಚಿಕೆಗಳೂ ಲಭ್ಯವಿವೆ.) ಇವರೆಲ್ಲರಿಗೆ ಕನ್ನಡಿಗರ ಕೃತಜ್ಞತೆಗಳು ಸಲ್ಲುತ್ತವೆ. ಗಣಕಗಳಲ್ಲಿ ಕನ್ನಡ ಭಾಷೆ ತೆರೆದುಕೊಂಡಿದ್ದು ಕನ್ನಡ ಭಾಷೆಗೆ ಒಂದು ಹೊಸ ಮಜಲು ದೊರೆತಂತಾಯಿತು.

ಅನಂತರ ನಮಗೆ ದೊರಕಿದ ಕನ್ನಡ ತಂತ್ರಾಂಶವೆಂದರೆ ಕೆ ಪಿ. ರಾವ್ ಅವರ 'ಸೇಡಿಯಾಪು' ಟಾಟಾ ಪ್ರೆಸ್ನಲ್ಲಿ ಇಂಜಿನಿಯರ್ ಆಗಿದ್ದ ಶ್ರೀ ಕೆ. ಪಿ. ರಾವ್ ಅವರು ಹಿರಿಯ ವಿದ್ವಾಂಸರಾದ ಸೇಡಿಯಾಪು ಕೃಷ್ಣಭಟ್ ಅವರ ಗೌರವಾರ್ಥ ಸೇಡಿಯಾಪು ಎಂಬ ಹೆಸರಿನಲ್ಲಿ ತಂತ್ರಾಂಶವನ್ನು ೧೯೮೬ರಲ್ಲಿ ರೂಪಿಸಿದರು. ೧೯೮೮ರ ವೇಳೆಗೆ ಇದು ಹೆಚ್ಚು ಪ್ರಚಾರಕ್ಕೆ ಬಂತು. ಸೇಡಿಯಾಪು ಮತ್ತು ಉಲ್ಲೇಖಿತ ಇತರ ತಂತ್ರಾಂಶಗಳು ಡಾಸ್ ಎಂಬ ಕಾರ್ಯಾಚರಣೆ ವ್ಯವಸ್ಥೆಯಲ್ಲಿ ಕೆಲಸಮಾಡುತ್ತಿದ್ದವು. ಕನ್ನಡ ವಿಶ್ವವಿದ್ಯಾಲಯ ಇದನ್ನು ಯಶಸ್ವಿಯಗಿ ಬಳಸಿಕೊಂಡಿತು. ಆದರೆ ಮುಂದುವರೆಸಲಿಲ್ಲ. ಮುಂದುವರೆಸಿ ಕೆ. ಪಿ. ರಾವ್ ಅವರಿಗೆ ಇನ್ನಷ್ಟು ಕೆಲಸಗಳನ್ನು ವಹಿಸಿಕೊಟ್ಟಿದ್ದರೆ

ಸಮಗ್ರವಾಗಿರುವ ತಂತ್ರಾಂಶವನ್ನು ಸಿದ್ಧಪಡಿಸಿ ಸಾರ್ವಜನಿಕರಿಗೆ ಒದಗಿಸಿದ್ದರೆ ಇತರ ಯಾವುದೇ ಕನ್ನಡ ತಂತ್ರಾಂಶದ ಅಗತ್ಯ ಕನ್ನಡಿಗರಿಗೆ ಇರುತ್ತಲೇ ಇರಅಲ್ಲ. ಈ ತಂತ್ರಾಂಶದ ವಿಶೇಷವೆಂದರೆ ಕನ್ನಡದ ಉಚ್ಚಾರಣಾ ಕ್ರಮದಲ್ಲಿ ಸಿದ್ಧವಾಗಿರುವ ಬಳಕೆದಾರ ಸ್ನೇಹಿ ಕೀಲಿಮಣೆ ವಿನ್ಯಾಸ ಇದು ಮುಂದೆ ಅನೇಕ ತಂತ್ರಾಂಶಗಳಲ್ಲಿ ಬಳಕೆಗೆ ಬಂದಿತು. ಈಗ ನುಡಿ ತಂತ್ರಾಶದಲ್ಲಿಯೂ ಇದೇ ವಿನ್ಯಾಸವನ್ನು ಅನುಸರಿಸಲಾಗಿದೆ.

ಇವೆಲ್ಲ ಡಾಸ್ ಎಂಬ ಕಾರ್ಯಾಚರಣೆ ವ್ಯವಸ್ಥೆಯಲ್ಲಿ ಕೆಲಸ ಮಾಡುವ ತಂತ್ರಾಂಶಗಳು ಇವುಗಳಂತೆಯೇ ಕಾರ್ಯ ನಿರ್ವಹಿಸುವ ಶಬ್ದರತ್ನವೆಂಬ ತಂತ್ರಾಂಶವನ್ನು ೧೯೮೭ರಲ್ಲಿ ಪ್ರಾರಂಭಿಸಿದ ಎಸ್ ಆರ್ ಜಿ ಎಂಬ ಸಂಸ್ಥೆಯ ಟಿ. ಎಸ್. ಮುತ್ತುಕೃಷ್ಣನ್ ಅವರು ರೂಪಿಸಿದರು.

೧೯೯೦ರ ವೇಳೆಗೆ ಭಾರತ ಜಾಗತೀಕರಣಕ್ಕೆ ತನ್ನ ಒಪ್ಪಿಗೆಯನ್ನು ಸೂಚಿಸಿಯಾಗಿತ್ತು. ಅನೇಕ ಗಣಕ ನಿರ್ಮಾಣದ ಕಂಪನಿಗಳು ಗಣಕಗಳನ್ನು ತಯಾರಿಸಲು ಪ್ರಾರಂಭಿಸಿದವು. ಆ ದಶಕದಲ್ಲಿಯೇ ಮೈಕ್ರೋಸಾಫ್ಟ್ ಸಂಸ್ಥೆ ವಿಂಡೋಸ್ ಕಾರ್ಯಾಚರಣೆ ವ್ಯವಸ್ಥೆಯನ್ನು ಹೊರತಂದಿತು. ಇದು ಚಿತ್ರಾತ್ಮಕ ಮುನ್ನೆಲೆಯನ್ನು ಹೊಂದಿದ್ದು ಬಳಕೆದಾರ ಸ್ನೇಹಿ ವ್ಯವಸ್ಥೆಯಾಗಿದ್ದುರಿಂದ ಬಹಳ ಬೇಗ ಜನಪ್ರಿಯವಾಯಿತು ಇಂದಿಗೂ ಮಾರುಕಟ್ಟೆಯಲ್ಲಿ ಪ್ರಾಬಲ್ಯವನ್ನು ಮುಂದುವರೆಸಿದೆ.

ವಿಂಡೋಸ್ ಬಂದ ಅನಂತರದಲ್ಲಿ ಕನ್ನಡದ ಬಳಕೆಗೆ ಅನೇಕ ತಂತ್ರಾಂಶಗಳು ಮಾರುಕಟ್ಟೆಯನ್ನು ಪ್ರವೇಶಿಸಿದವು. ಸೊನಾಟಾ ಕಂಪನಿಯ ಪ್ರಕಾಶಕ್, ಎಸ್.ಆರ್.ಜಿ. ಸಂಸ್ಥೆಯ ವಿನಿಕೀ (ಶಬ್ದರತ್ನದ ವಿಂಡೋಸ್ ಆವೃತ್ತಿ), ಮಣಿ ಮೂಲದ ಮಾಡ್ಯುಲಾರ್ ಸಿಸ್ಟಮ್ಸ್ ಅವರ ಶ್ರೀಲಿಪಿ, ಸೈಬರ್‌ಸ್ಕೋಪ್ 'ಸಂಸ್ಥೆಯ ಆಕೃತಿ, ಆಪಲ್ ಸಾಫ್ಟ್ ಸಂಸ್ಥೆಯ ಸುರಭಿ, ಬಯಾನ್ ಕಂಪ್ಯೂಟರ್ ಸಂಸ್ಥೆಯ ಕೈರಳಿ, ಮುಂತಾದ ಅನೇಕ ತಂತ್ರಾಂಶಗಳು ಲಭ್ಯವಾದವು ಈ ಮಧ್ಯೆ ಪಜವಾಣಿ ಪತ್ರಿಕೆ ತನ್ನ ಆಂತರಂಗಿಕ ಬಳಕೆಗಾಗಿ ಮಾನೋಟೈಪ್ ಮುಂತಾದ ಸಂಸ್ಥೆಗಳ ಜೊತೆಗೆ ವ್ಯವಹರಿಸಿ ಉತ್ತಮ ಅಕ್ಷರಶೈಲಿಗಳನ್ನು ರೂಪಿಸಿಕೊಂಡಿತು. ಕೇಂದ್ರ ಸರ್ಕಾರದ ಸಿ ಡಾಕ್ ಸಂಸ್ಥೆಯು ಐ ಎಸ್ ಎಂ ಎಂಬ ಒಂದು ತಂತ್ರಾಂಶವನ್ನು ಬಿಡುಗಡೆ ಮಾಡಿತು. ಅದರಲ್ಲಿ ಆಗ ಭಾರತದ ಅಧಿಕೃತ ಭಾಷೆಗಳಾಗಿದ್ದ ಎಲ್ಲಾ ಹದಿನಾಲ್ಕು ಭಾಷೆಗಳಲ್ಲಿ ಬೆರಳಚ್ಚು ಮಾಡಿಕೊಳ್ಳಬಹುದಾದ ಸೌಲಭ್ಯವಿತ್ತು. ಹೀಗೆ ತೊಂಬತ್ತರ ದಶಕದಲ್ಲಿ ಅನೇಕ ಬಗೆಯಲ್ಲಿ ಗಣಕಗಳಲ್ಲಿ ಕನ್ನಡಕ್ಕೆ ಪ್ರವೇಶ ದೊರೆಯಿತು. ಕರ್ನಾಟಕ ಸರ್ಕಾರ ತೊಂಬತ್ತರ ದಶಕದಲ್ಲಿ ಗಣಕೀಕರಣದ ವ್ಯವಹಾರಗಳನ್ನು ನೋಡಿಕೊಳ್ಳಲು 'ಕರ್ನಾಟಕ ರಾಜ್ಯ ಗಣಕ ಕೇಂದ್ರ' ಎಂಬ ಒಂದು ಸಣ್ಣ ಘಟಕವನ್ನು ಹೊಂದಿತ್ತು. ಗಣಕಗಳ ಜನಪ್ರಿಯತೆ ಮತ್ತು ಸರ್ಕಾರದಲ್ಲಿ ಅವುಗಳ ಬಳಕೆ ಹೆಚ್ಚಾಗುತ್ತಿದ್ದಂತೆ ಅದು ಮಾಹಿತಿ ತಂತ್ರಜ್ಞಾನ ನಿರ್ದೇಶನಾಲಯ ಎಂದು ವಿಸ್ತಾರಗೊಂಡಿತು. ಕಾಲಕ್ರಮೇಣ ಆ ವಿಸ್ತಾರ ಮತ್ತಷ್ಟು ಹೆಚ್ಚಿ, ಈಗ ವಿದ್ಯುನ್ಮಾನ ಆಡಳಿತ ಇಲಾಖೆ ಮತ್ತು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಎಂಬ ಎರಡು ಪ್ರತ್ಯೇಕವಾದ ಇಲಾಖೆಗಳಾಗಿವೆ.

ಈ ಪೈಕಿ ಹಲವು ತಂತ್ರಾಂಶಗಳು ಇನ್ನೂ ಬಳಕೆಯಲ್ಲಿವೆ. ಈ ಎಲ್ಲ ತಂತ್ರಾಂಶಗಳಲ್ಲಿ ಕನ್ನಡ ಬಳಕೆಗೆ ಆಧಾರವಾಗಿ ಂಖಅಖಣ ಎಂಬ ಶಿಷ್ಟತೆಯನ್ನು ಬಳಕೆಯಾಗಿದೆ. ಮೂಲತಃ ಇಂಗ್ಲೀಷಿನ ಅಕ್ಷರಗಳಿಗಾಗಿ ರೂಪಿತವಾದ ಈ ಶಿಷ್ಟತೆಯನ್ನು ಯಾವುದೇ ಭಾಷೆಗಳು ಅನ್ವಯಿಸಿಕೊಳ್ಳಬಹುದಾಗಿದೆ. ಇಂಗ್ಲೀಷ್ ಭಾಷೆಗಾಗಿ ರೂಪುಗೊಂಡ ಈ ಶಿಷ್ಟತೆಯಲ್ಲಿ ಇಂಗ್ಲಿಷಿನ ಅಕ್ಷರ ಮತ್ತು ಅಕ್ಷರಭಾಗಗಳು, ಅಂಕಿಗಳು, ವ್ಯಾಕರಣ ಚಿಹ್ನೆಗಳು ಮುಂತಾದವಕ್ಕೆಲ್ಲ ಸಂಕೇತಗಳನ್ನು ನಿಗಧಿ ಮಾಡಲಾಗಿರುತ್ತದೆ. ಈ ಗುಂಪಿನಲ್ಲಿ ವ್ಯಾಕರಣ ಚಿಹ್ನೆಗಳು ಅಂಕಿಗಳನ್ನು (ಇಂಡೋ ಅರೆಬಿಕ್ ನ್ಯುಮರಿ) ಕನ್ನಡಕ್ಕೂ ಬಳಸುವುದರಿಂದ ಅವನ್ನು ಬಿಟ್ಟು ಮಿಕ್ಕ ಅಕ್ಷರ, ಅಕ್ಷರ ಭಾಗಗಳ ಸಂಕೇತಗಳನ್ನು ಕನ್ನಡದ ಯಾವುದೇ ಭಾಷೆಯ ಅಕ್ಷರ ಮತ್ತು ಅಕ್ಷರ ಭಾಗಗಳ ಸಂಕೇತಗಳಗೆ ನಿಗದಿಸಿಕೊಳ್ಳಬಹುದು. ಹೀಗಾಗಿ ಎಲ್ಲಾ ತಂತ್ರಾಂಶ ತಯಾರಕರೂ ಇದನ್ನೇ ಅನುಸರಿಸಿದ್ದಾರೆ. ಹೀಗೆ ಅನುಸರಿಸಿದಾಗ ಕನ್ನಡದ ಅಕ್ಷರ ಮತ್ತು ಅಕ್ಷರಭಾಗಗಳಿಗೆ ವಿಭಿನ್ನ ತಯಾರಕರು ವಿಭಿನ್ನ ಸಂಕೇತಗಳನ್ನು ಇರಿಸಿಕೊಂಡರು. ಇದಕ್ಕೆ ಎರಡು ಕಾರಣಗಳನ್ನು ಉಲ್ಲೇಖಿಸಬಹುದು. ಮೊದಲನೆಯದು ಸಮನ್ವಯದ ಕೊರತೆ, ಅಂದರೆ ಬೇರೆ ಬೇರೆ ಜಾಗಗಳಲ್ಲಿ ಕೆಲಸ ಮಾಡುತ್ತಿದ್ದವರಿಗೆ ಇತರರು ಈ ಬಗೆಯ ಕೆಲಸ ಮಾಡುತ್ತಿದ್ದಾರೆ ಎನ್ನುವದು ತಿಳಿದಿರಲಿಲ್ಲ ಎನ್ನುವುದು. ಎರಡನೆಯದು ಅವು ಆಯಾ ಸಂಸ್ಥೆಗಳ ಉತ್ಪನ್ನಗಳಾದುದರಿಂದ ಅನನ್ಯತೆಯನ್ನು ಕಾಯ್ದುಕೊಳ್ಳುವುದರ ಅಗತ್ಯ. ಎರಡು ಕಾರಣಗಳೂ ಆಯಾ ಹಿನ್ನೆಲೆಯಲ್ಲಿ ನೋಡಿದರೆ ಸರಿಯಾಗಿಯೇ ಇವೆ. ಆದರೆ ಒಟ್ಟಾರೆಯಾಗಿ ನೋಡಿದಾಗ ಈ ತಂತ್ರಾಂಶಗಳು ಒಂದು ಶಿಷ್ಟತೆಯನ್ನು ಅನುಸರಿಸಿದ್ದರೆ ಅವುಗಳ ದೊಡ್ಡ ಬಳಕೆದಾರ ಸಂಸ್ಥೆಯಾದ ಸರ್ಕಾರಕ್ಕೆ ಹೆಚ್ಚು ಅನುಕೂಲವಾಗುತ್ತಿತ್ತು ಎನಿಸುತ್ತದೆ.

ಆದರೆ ಈ ತಂತ್ರಾಂಶಗಳು ಅನೇಕ ಬಗೆಯಲ್ಲಿ ಕನ್ನಡದ ಬೇರೆ ಬೇರೆ ಕೆಲಸಗಳಿಗೆ ಹೊಸ ರೂಪವನ್ನು ನೀಡಿವೆ. ಮುಖ್ಯವಾಗಿ ಮೊಳೆಗಳನ್ನು ಜೋಡಿಸಿ ಮುದ್ರಣ ಮಾಡಬೇಕಾಗಿದ್ದ ಮುದ್ರಣ ಸಂಸ್ಥೆಗಳಿಗೆ ಇದು ವರದಾನವಾಗಿ ಪರಿಣಮಿಸಿದವು. ಮುದ್ರಣ ಅಚ್ಚುಕಟ್ಟಾಗಿ ಮತ್ತು ಕನಿಷ್ಠ ದೈಹಿಕ ಶ್ರಮದೊಂದಿಗೆ ನಡೆಯುವಂತಾದವು. ಪತ್ರಿಕೆಗಳು ಸಂಚಿಕೆಗಳನ್ನು ಉತ್ತಮ ಮಟ್ಟದಲ್ಲಿ ವಿನ್ಯಾಸದಲ್ಲಿ ಹೊರತರಲು ಈ ತಂತ್ರಾಂಶಗಳು ನೆರವಾದವು. ವಿಶ್ವವಿದ್ಯಾನಿಲಯಗಳು, ಸರ್ಕಾರ ಖಾಸಗೀ ಪ್ರಕಾಶನ ಸಂಸ್ಥೆಗಳು ಎಲ್ಲವೂ ತಮ್ಮ ಪ್ರಕಾಶನ ಕಾರ್ಯಗಳಲ್ಲಿ ಏರುಗತಿಯನ್ನು ಕಂಡವು. ಹಾಗೆಯೇ ಮುದ್ರಣ ಯಂತ್ರಗಳಲ್ಲಿ ಆದ ಬೆಳವಣಿಗೆಯೂ ಈ ಕಾರ್ಯಗಳಿಗೆ ಕೂಡಿ ಬಂದು ಮುದ್ರಣಕ್ಕೆ ಇನ್ನಿಲ್ಲದ ವೇಗವನ್ನು ತಂದುಕೊಟ್ಟಿತು. ದತ್ತ ನಮೂದುಕಾರ (ಡಿ.ಟಿ.ಪಿ ಅಪರೇಟರ್) ಎಂಬ ಹೊಸ ವೃತ್ತಿಯನ್ನು ಈ ತಂತ್ರಾಂಶಗಳು ಸೃಜಿಸಿದವು. ಇದು ಹಳೆಯ ಅಚ್ಚಿನ ಮೊಳೆ ಜೋಡಿಸುವ ಉದ್ಯೋಗಿಗಳನ್ನು ಕಾಡಿತೆಂಬುದು ಬೇರೆಯ ವಿಚಾರ. ಅದು ಜಾಗತಿಕವಾಗಿ ಅನೇಕ ಉದ್ಯೋಗ ಪ್ರಕಾರಗಳಿಗೆ ತಟ್ಟದ ಬಿಸಿ. ಅಲ್ಲದೆ ಗ್ರಂಥಾಲಯದ ಪರಿಕಲ್ಪನೆಯನ್ನೂ ಇವು ಕೊಂಚ ಮಟ್ಟಿಗೆ ಬೇರೆ ರೀತಿಯಲ್ಲಿ ನೋಡುವಂತೆ ಮಾಡಿದವು ಈಗ ಡಿಜಿಟಲ್ ಲೈಬ್ರರಿ ಎಂಬುದು ಸಾಮಾನ್ಯವಾದ ಸಂಗತಿಯಾಗಿದೆ. ಕನ್ನಡದ ತಂತ್ರಾಂಶಗಳು ಮಾಹಿತಿಯನ್ನು ಕಾಪಿಡುವ ಸೌಲಭ್ಯವನ್ನು ಒದಗಿಸಿ ಇಂತಹ ವ್ಯವಸ್ಥೆಗೆ ಮುನ್ನುಡಿಯನ್ನು ಹಾಡಿದವು.

೧೯೯೭ರಲ್ಲಿ ಗಣಕಗಳಲ್ಲಿ ಬೇರೆ ಭಾಷೆಗಳನ್ನು ದುಡಿಸಿಕೊಳ್ಳುವ ಹಾಗೆಯೇ ಕನ್ನಡವನ್ನೂ ದುಡಿಸಿಕೊಳ್ಳುವ ಹಾಗಾಗುವಂತೆ ಮಾಡುವ ಉದ್ದೇಶಗಳೊಂದಿಗೆ ಕನ್ನಡ ಗಣಕ ಪರಿಷತ್ತು ಎಂಬ ಸಂಸ್ಥೆ ರೂಪುಗೊಂಡಿತು.

ಶ್ರೀ ಎಸ್. ಎಂ. ಕೃಷ್ಣ ಅವರು ಮುಖ್ಯಮಂತ್ರಿಗಳಾಗಿದ್ದಾಗ ಸರ್ಕಾರ ಎಲ್ಲ ಕನ್ನಡದ ತಂತ್ರಾಂಶಗಳೂ ಹೊಂದಿರಬೇಕಾದ ಂಖಅಖ! ಶಿಷ್ಟತೆಯಲ್ಲಿಯೇ ಕನ್ನಡಕ್ಕಾಗಿ ರೂಪಿಸಿದ ಒಂದು ಶಿಷ್ಟ ಸಂಕೇತ ವ್ಯವಸ್ಥೆಯನ್ನು ಪ್ರಕಟಿಸಿತು.

ಅನಂತರದಲ್ಲಿ ಕನ್ನಡ ಗಣಕ ಪರಿಷತ್ತಿಗೆ ಆ ಸಂಕೇತ ವ್ಯವಸ್ಥೆಗೆ ಅನುಗುಣವಾದ ಒಂದು ತಂತ್ರಾಂಶವನ್ನು ಅಭಿವೃದ್ಧಿಗೊಳಿಸಲು ಮಾಹಿತಿ ತಂತ್ರಜ್ಞಾನ ನಿರ್ದೇಶನಾಲಯ ತಿಳಿಸಿತು. ಕನ್ನಡ ಗಣಕ ಪರಿಷತ್ತು 'ಕಲಿತ' (ಕನ್ನಡ ಅಪಿ ತಂತ್ರಾಂಶ) ಎಂಬ ಹೆಸರಿನಲ್ಲಿ ಒಂದು ತಂತ್ರಾಂಶವನ್ನು ಸಿದ್ಧಪಡಿಸಿತು "ಅತ ಕ್ಕೆ ಬಂದ ಪ್ರತಿಕ್ರಿಯೆಗಳು ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಂದಿನ ಅಧ್ಯಕ್ಷರಾಗಿದ್ದ ಬರಗೂರು ರಾಮಚಂದ್ರಪ್ಪನವರ ಸಲಹೆಗೆ ಅನುಗುಣವಾಗಿ ಸುಧಾರಿತ ಆವೃತ್ತಿಯನ್ನು ಕ್ರಿ. ಶ. ೨೦೦೦ದಲ್ಲಿ ನುಡಿ ೨.೦ ಎಂದು ಹೆಸರಿಸಿ ಬಿಡುಗಡೆ ಮಾಡಲಾಯಿತು. ಈಗ ನುಡಿ ೬.೦ ಆವೃತ್ತಿ ಎಲ್ಲರಿಗೂ ಲಭ್ಯವಾಗುತ್ತಿದೆ. ನುಡಿ ೬.೦ ಯೂನಿಕೋಡ್ ಶಿಷ್ಟತೆಯನ್ನು ಮಾತ್ರ ಬೆಂಬಲಿಸುವ ತಂತ್ರಾಂಶವಾಗಿದೆ. ಯೂನಿಕೋಡ್ ಎನ್ನುವುದು ಜಗತ್ತಿನ ಎಲ್ಲಾ ಭಾಷೆಗಳೂ ಬಳಸಿಕೊಳ್ಳಬಹುದಾದ ಶಿಷ್ಟತೆ, ಆಸ್ತಿಯ ತರಹ ಗೊಂದಲಗಳು ಇಲ್ಲಿ ಉಂಟಾಗಲು ಸಾಧ್ಯವೇ ಇಲ್ಲ. ಈ ಶಿಷ್ಟತೆಯಲ್ಲಿ ಹಲವಾರು ಅನುಕೂಲಗಳಿವೆ. ಇಂಟರ್ನೆಟ್ ಎಕ್ಸ್ ಪ್ಲೋರರ್, ಗೂಗಲ್ ಕ್ರೋಮ್, ಮೋಜಿಲ್ಲಾ ಫೈರ್ ಫಾಕ್ಸ್ ಮುಂತಾದ ಎಲ್ಲಾ ವೀಕ್ಷಕ ತಂತ್ರಾಂಶಗಳೂ ಯೂನಿಕೋಡ್ ಶಿಷ್ಟತೆಯನ್ನು ಬೆಂಬಲಿಸುತ್ತವೆ. ಯಾವುದೇ ಕೀಲಿಮಣೆ ತಂತ್ರಾಂಶವಿರುವ ಗಣಕದಿಂದ ಯೂನಿಕೋಡ್ ಶಿಷ್ಟತೆಯಲ್ಲಿ ಮಾಹಿತಿಯನ್ನು ನೀಡಿದರೂ ಅದು ಎಲ್ಲ ಗಣಕಗಳಲ್ಲಿ ಮತ್ತು ವೀಕ್ಷಕ ತಂತ್ರಾಂಶಗಳಲ್ಲಿ ಸಮರ್ಪಕವಾಗಿ ಕನ್ನಡದಲ್ಲಿಯೇ ದೊರೆಯುತ್ತದೆ. ಅಂದರೆ ಬ್ಲಾಗುಗಳು, ಅಂತರಜಾಲ ಪುಟಗಳು, ಶೋಧಕ ಸೌಲಭ್ಯಗಳಲ್ಲಿನ ಹುಡುಕಾಟ, ಅಂಚೆಯಲ್ಲಿ ಕಳಿಸಬಹುದಾದ, ಊಡಬಹುದಾದ ಮಾಹಿತಿ ಎಲ್ಲವೂ ಕಳಿಸಿದ ರೀತಿಯಲ್ಲಿಯೇ ಯಾವುದೇ ನಿಗದಿತ ತಂತ್ರಾಂಶದ ಅಗತ್ಯವಿಲ್ಲದೇ ಸ್ವೀಕರ್ತರ ಗಣಕದಲ್ಲಿ ದೊರೆಯುತ್ತದೆ ಎಂದೇ ಯೂನಿಕೋಡ್ ಜಗತ್ತಿನ ಬಹುತೇಕ ಭಾಷೆಗಳು ಒಪ್ಪಿಕೊಂಡಿರುವ ಶಿಷ್ಟತೆಯಾಗಿದೆ.

ಕನ್ನಡದಲ್ಲಿ ಲಭ್ಯವಿರುವ ಮತ್ತೂ ಮೂರು ತಂತ್ರಾಂಶಗಳನ್ನು ಹೆಸರಿಸಬೇಕು. ೨೦೧೧ರಲ್ಲ ಕನ್ನಡ ವಿಶ್ವವಿದ್ಯಾಲಯ ಕುವೆಂಪು ಎಂಬ ತಂತ್ರಾಂಶವನ್ನು ಬಿಡುಗಡೆ ಮಾಡಿ ಕನ್ನಡಿಗರಿಗೆ ಲಭ್ಯವಾಗಿಸಿದೆ ೨೦೧೨ರಲ್ಲಿ ಲೋಹಿತ್ ಶಿವಮೂರ್ತಿಯವರು ಪದ ಎಂಬ ಹೆಸರಿನ ತಂತ್ರಾಂಶವನ್ನು ಬಿಡುಗಡೆ ಮಾಡಿದ್ದಾರೆ ೨೦೧೪ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕ್ಷೇಮ ಎಂಬ ಹೆಸರಿನ ತಂತ್ರಾಂಶವನ್ನು ಬಿಡಗಡೆ ಮಾಡಿತು. ಇವಷ್ಟಲ್ಲದೆಯೂ ಆರಂಭದ ೮೦–೯೦ರ ದಶಕದಲ್ಲಿ ಮತ್ತು ಅನಂತರದಲ್ಲಿ ಹಲವರು ಈ ಬಗೆಯ ಪ್ರಯತ್ನಗಳನ್ನು ಮಾಡಿದ್ದಾರೆ. ರಸ್ತೆ ಸಾರಿಗೆ ಸಂಸ್ಥೆಯವರು ಬಳಸುತ್ತಿದ್ದ ಧರ್ಮ, ಮೈಸೂರಿನ ಗಣಿತದ ಪ್ರಾಧ್ಯಾಪಕರೊಬ್ಬರು ಮಾಡಿದ್ದ ಒಂದು ತಂತ್ರಾಂಶವನ್ನು ಇಲ್ಲಿ ಉಲ್ಲೇಖಿಸಬೇಕು.

ಈ ಎಲ್ಲಾ ತಂತ್ರಾಂಶಗಳು ಕನ್ನಡದಲ್ಲಿ ಪದ ಸಂಸ್ಕರಣೆಯನ್ನು ಸುಲಭವಾಗಿಸಿದವು. ಕೆಲವು ತಂತ್ರಾಂಶಗಳು ದತ್ತ ಸಂಸ್ಕರಣೆಗೂ ಅವಕಾಶ ನೀಡಿದವು. ಆದರೆ ಗಣಕದ ಅನೇಕ ಸಾಧ್ಯತೆಗಳು ಹಾಗೆಯೇ ಉಳಿದಿದ್ದವು. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ಕನ್ನಡದ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಆಗಬೇಕಾಗಿರುವ ಕೆಲಸಗಳನ್ನು ಗುರುತಿಸಿ ಅವನ್ನು ಕಾರ್ಯರೂಪಕ್ಕೆ ತರಲು ಕನ್ನಡ ತಂತ್ರಾಂಶ ಅಭಿವೃದ್ಧಿ ಸಮಿತಿ ಎಂಬ ಉನ್ನತ ಮಟ್ಟದ ಸಮಿತಿಯನ್ನು ಡಾ. ಚಿದಾನಂದಗೌಡರ ಅಧ್ಯಕ್ಷತೆಯಲ್ಲಿ ೨೦೧೨ರಲ್ಲಿ ರಚಿಸಿತು ಸಮಿತಿ ೨೦೧೪ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಈ ವರದಿಯಲ್ಲಿ ಸೂಚಿತವಾದ ಕೆಲವು ಯೋಜನೆಗಳು ಕಾರ್ಯರೂಪಕ್ಕೆ ಬಂದಿವೆ.

ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡದ ಬಳಕೆಯ ಅದ್ಭುತವಾದ ಬೆಳವಣಿಗೆ ಈಗ ಹತ್ತು ವರ್ಷಗಳಿಂದೀಚೆಗೆ ಆಗಿರುವುದನ್ನು ಗಮನಿಸಬಹುದು. ಅಂತರರ್ಜಾಲ ಸೌಲಭ್ಯ ದೊರೆಯುವ ಹಾಗಾದ ನಂತರ ಜಾಲತಾಣಗಳು ಕನ್ನಡದಲ್ಲಿ ಕಾಣಿಸಿಕೊಳ್ಳತೊಡಗಿದವು. ಈಗ ಕನ್ನಡದ ಎಲ್ಲ ಪತ್ರಿಕೆಗಳೂ, ವಾಹಿನಿಗಳೂ ಎಫ್.ಎಂ ಮೊದಲಾದ ಬಾನುಲಿ ಕೇಂದ್ರಗಳೂ ತಮ್ಮದೇ ಆದ ಅಂತರ ಜಾಲತಾಣಗಳನ್ನು ಹೊಂದಿವೆ. ಆ ಮೂಲಕ ಕ್ಷಿಪ್ರವಾಗಿ ಮತ್ತು ವ್ಯಾಪಕವಾಗಿ ಜನರನ್ನು ತಲಪುತ್ತಿವೆ. ಕರ್ನಾಟಕ ಸರ್ಕಾರದ ಬಹುತೇಕ ಇಲಾಖೆಗಳು. ಅಕಾಡೆಮಿಗಳು ತಮ್ಮ ತಮ್ಮ ಅಂತರ ಜಾಲತಾಣವನ್ನು ಹೊಂದಿವೆ. ಮಾಹಿತಿ ತಂತ್ರಜ್ಞಾನದ ಇನ್ನೊಂದು ಮುಖವಾದ ಸಂಗ್ರಹಣೆಯ ಶಕ್ತಿಯೂ ಈಗ ಕನ್ನಡಕ್ಕೂ ಬಳಕೆಯಾಗುತ್ತಿದೆ. ಕರ್ನಾಟಕ ಸರ್ಕಾರ ಎರಡು ಪ್ರಮುಖ ಯೋಜನೆಗಳನ್ನು ಈ ನಿಟ್ಟಿನಲ್ಲಿ ಕೈಗೊಂಡಿತು. ದಾಸ ಸಾಹಿತ್ಯ ಮತ್ತು ವಚನ ಸಾಹಿತ್ಯದ ಸಮಗ್ರ ಮಾಹಿತಿಯನ್ನು ಸರ್ಕಾರ ಅಂತರ ಜಾಲತಾಣದಲ್ಲಿ ಇರಿಸಿ ಜನತೆಗೆ ಒದಗಿಸಿತು. (ಈಗ ವಚನ ಸಾಹಿತ್ಯ ಸಂಚಯ ಎಂಬ ಸಂಸ್ಥೆಯವರು ರೂಪಿಸಿರುವ ಸಂಚಯ ಜಾಲತಾಣದಲ್ಲಿಯೂ ದೊರೆಯುತ್ತಿದೆ.) ಕಣಜ ಎನ್ನುವ ಜಾಲತಾಣವನ್ನು ರೂಪಿಸಿ ವಿಪುಲವಾದ ಮಾಹಿತಿಯನ್ನು ಅದರಲ್ಲಿ ಇರಿಸಿತು. ಈಗ ಕರ್ನಾಟಕ ಸರ್ಕಾರದ ಗ್ರಂಥಾಲಯವೂ ಅಂಕಿಕ ಗ್ರಂಥ ಭಂಡಾರವನ್ನು ಚಾಲ್ತಿಗೆ ತಂದಿದೆ. ಗ್ರಂಥಾಲಯಕ್ಕೆ ಹೋಗದೆಯೂ ಅಲ್ಲಿರಿಸಿರುವ ಕೃತಿಗಳ ಪೈಕಿ ತಮಗೆ ಬೇಕಾದ ಕೃತಿಗಳನ್ನು ಪಡೆದುಕೊಳ್ಳಲು ಇದು ಅನುವು ಮಾಡಿಕೊಟ್ಟಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ ತನ್ನ ಜಾಲತಾಣದಲ್ಲಿ ತನ್ನ ಅನೇಕ ಪ್ರಕಟಣೆಗಳನ್ನು ಇರಿಸಿದೆ.

ಮೈಸೂರು ವಿಶ್ವವಿದ್ಯಾನಿಲಯ ತನ್ನ ವಿಶ್ವಕೋಶದ ಮತ್ತು ನಿಘಂಟಿನ ಸಂಪುಟಗಳನ್ನು ಅಡಕ ಮುದ್ರಿಕೆ ಮತ್ತು ಡಿವಿಡಿಗಳ ರೂಪದಲ್ಲಿ ತಂದು ತಂತ್ರಜ್ಞಾನದ ಬಳಕೆಗೆ ನಿದರ್ಶನವನ್ನು ಒದಗಿಸಿತು ಕನ್ನಡ ಸಾಹಿತ್ಯ ಪರಿಷತ್ತು ತನ್ನು ಸಂಕ್ಷಿಪ್ತ ನಿಘಂಟು ಮತ್ತು ಪಂಪನ ಕಾವ್ಯಗಳನ್ನು ಅಡಕ ಮುದ್ರಿಕೆಯ ರೂಪದಲ್ಲಿ ಹೊರ ತಂದಿತು.

ಖಾಸಗಿ ಕ್ಷೇತ್ರದಲ್ಲಿ ಈ ಬಗೆಯ ಬೆಳವಣಿಗೆಯನ್ನು ವಿದ್ಯುನ್ಮಾನ ಪುಸ್ತಕಗಳ ಪ್ರಕಟಣೆಯಲ್ಲಿ ಕಾಣಬಹುದು ವಿಶೇಷವಾಗಿ ವಸುಧೇಂದ್ರ ಅವರ ಪ್ರಯತ್ನ ಉಲ್ಲೇಖನೀಯವಾದುದು. ಅವರು ತಮ್ಮ ಎಲ್ಲಿ ಕೃತಿಗಳನ್ನೂ ವಿ–ಪುಸ್ತಕಗಳನ್ನಾಗಿ ಮಾಡಿ ಜನರಿಗೆ ಲಭ್ಯವಾಗಿಸಿದ್ದಾರೆ. ಅನೇಕ ಖಾಸಗಿ ಸಂಸ್ಥೆಗಳೂ ಇದರಲ್ಲಿ ತೊಡಗಿಕೊಂಡಿವೆ. ಮೈಸೂರಿನ ಡಾ. ಯೋಗಾನಂದ ಅವರು ನುಡಿಸಿರಿ ಎಂಬ ಅಂತರ ಜಾಲತಾಣದಲ್ಲಿ ಅನೇಕ ಕನ್ನಡ ಕೃತಿಗಳನ್ನೂ ಸಾಕ್ಷಿ ಮುಂತಾದ ಮಊಕ ಪತ್ರಿಕೆಗಳ ಪ್ರತಿಗಳನ್ನೂ ಅಂಕೀಕರಿ ಲಭ್ಯವಾಗಿಸಿದ್ದಾರೆ. ಕನ್ನಡದ ಹಲವು ಪ್ರಕಾಶಕರು ಈಗ ತಮ್ಮ ಅಂತರ ಜಾಲತಾಣಗಳನ್ನು ತೆರೆದು ತವ ಪ್ರಕಟಣೆಯ ಪುಸ್ತಕಗಳ ವಿವರಗಳನ್ನು ಒದಗಿಸುವುದಲ್ಲದೇ

ಅಲ್ಲಿಂದಲೇ ಮಾರಾಟ ಮಾಡುವ ಸೌಲಭ್ಯವನ್ನು ನೀಡುತ್ತಿದ್ದಾರೆ. ಕೇಂದ್ರ ಸರ್ಕಾರದ ಯೋಜನೆಯಾದ ಕೃತಿಗಳ ಅಂಕೀಕರಣ ಕರ್ನಾಟಕದಲ್ಲಿಯೂ ಮುನ್ನಡೆಯಿತು. ಕಾರ್ನಿಗಿ ಮೆಲ್ಲಾನ್ ವಿಶ್ವವಿದ್ಯಾಲಯದ ಮಿಲಿಯನ್ ಬುಕ್ ಪ್ರಾಜೆಕ್ಟ್ ಎಂಬ ಯೋಜನೆಯಲ್ಲಿ ಭಾರತದ ಪ್ರಮುಖ ಒಂದು ಲಕ್ಷ ಕೃತಿಗಳನ್ನು ಅಂಕೀಕರಿಸುವುದನ್ನೂ ಸೇರಿತ್ತು. ಈ ಯೋಜನೆಯ ಅಡಿಯಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ (ಐ.ಐ.ಎಸ್.ಸಿ.) ಕನ್ನಡದ ಅನೇಕ ಕೃತಿಗಳನು ಅಂಕೀಕರಿಸಿದ್ದಲ್ಲದೆ ಅನೇಕ ಸಂಸ್ಥೆಗಳಿಗೆ ಈ ಕೆಲಸವನ್ನು ವಹಿಸಿತು. ಆಗ ಹೈದರಾಬಾದಿನ ಉಸ್ಮಾನಿಯ ವಿಶ್ವದ್ಯಾನಿಲಯ ತನ್ನ ಗ್ರಂಥ ಭಂಡಾರದಲ್ಲಿದ್ದ ಅಮೂಲ್ಯ ಕನ್ನಡದ ಕೃತಿಗಳನ್ನು ಅಂತೀಕರಿಸಿತು. ಅವೆಲ್ಲ ಈಗ ಂಡಿಛಿಖಿತಿಫ.ಂಡಿಡಿ ಎಂಬ ತಾಣದಲ್ಲಿ ದೊರೆಯುತ್ತಿದೆ. ಹಲವು ವಿದ್ವಾಂಸರುಗಳ ಮುಂದಿನ ತಲೆಮಾರುಗಳವರು ಜಾಲತಾಣಗಳನ್ನು ನಿರ್ಮಿಸಿ ಅಲ್ಲಿ ಆಯಾ ವಿದ್ವಾಂಸರ ಕೃತಿಗಳನ್ನು ಅಂಕೀಕರಿಸಿ ಇರಿಸಿದ್ದಾರೆ. ಕನ್ನಡದ ಅಶ್ವಿನೀ ದೇವತೆಗಳಲ್ಲಿ ಒಬ್ಬರು ಎಂದು ಪ್ರಸಿದ್ಧರಾದ ಡಾ. ಎ.ಆರ್. ಕೃಷ್ಣಶಾಸ್ತ್ರಿಗಳು, ಹಿರಿಯ ಸಂಸ್ಕೃತ ವಿದ್ವಾಂಸ ಡಾ. ರಂಗನಾಥಶರ್ಮ, ಹಿರಿಯ ಸಂಶೋಧಕ ಡಾ. ಎಸ್. ಶ್ರೀಕಂಠಶಾಸ್ತ್ರಿಗಳು ಮತ್ತು ಡಾ. ಮರುಳಯ್ಯನವರ ಕುರಿತು ಇರುವ ಅಂತರ ಜಾಲತಾಣಗಳನ್ನು ಗಮನಿಸಬಹುದು. ಹಾಗೆಯೇ ಸಂಘ ಸಂಸ್ಥೆಗಳೂ ಈ ಬಗೆಯ ಇದೇ ರೀತಿಯ ತಾಣಗಳನ್ನು ರಚಿಸಿವೆ. ಕನ್ನಡ ಸಾಹಿತ್ಯ ಪರಿಷತ್ತು ತನ್ನ ತಾಣವನು ಹೊಂದಿದೆ ಮತ್ತು ಕೆಲವು ಪ್ರಕಟಣೆಗಳನ್ನು ಅದರಲ್ಲಿ ಇರಿಸಿದೆ. ಬಿ ಎಂ ಶ್ರೀ. ಪ್ರತಿಷ್ಠಾನ ತನ್ನ ಜಾಲತಾಣದ ಬಿಎಂಶ್ರೀಯವರ ಎಲ್ಲಾ ಕೃತಿಗಳನ್ನೂ ತನ್ನ ಹಲವು ಪ್ರಕಟಣೆಗಳನ್ನೂ ಇರಿಸಿದೆ. ಕರ್ನಾಟಕ ಇತಿಹಾ ಅಕಾಡೆಮಿ ತನ್ನ ಅಂತರ ಜಾಲತಾಣದಲ್ಲಿ ತನ್ನ ಬಹುತೇಕ ಪ್ರಕಟಣೆಗಳನ್ನು ಇರಿಸಿದೆ. ವೈಯಕ್ತಿಕವಾಗಿಯೂ ಅನೇಕರು ಜಾಲತಾಣಗಳನ್ನು ನಿರ್ಮಿಸಿಕೊಂಡು ವಿಪುಲವಾದ ಮಾಹಿತಿಯನ್ನು ಅಂತರ ಜಾಲತಾಣದಲ್ಲಿ ಇರಿಸಿದ್ದಾರೆ. (ಸಂಪದ, ಸಂಚಯ, ಇತ್ಯಾದಿ). ಇತ್ತೀಚೆಗೆ ಜರೋಧ ಎನ್ನುವ ಖಾಸಗಿ ಷೇರು ದಲ್ಲಾಳ ಸಂಸ್ಥೆ ವಿದ್ವಾಂಸ ಶ್ರೀ ವಿ. ಕೃಷ್ಣ ಅವರ ಸುಮಾರು ಐದು ಸಾವಿರ ಪುಟಗಳುಳ್ಳ ಕನ್ನಡ – ಇಂಗ್ಲಿಷ್ ನಿಘಂಟನ್ನು ಅಂತ ಜಾಲತಾಣದಲ್ಲಿ ಇರಿಸಿ ಉಪಕರಿಸಿದ್ದಾರೆ. ಇಂತಹ ಅನೇಕ ಕೆಲಸಗಳು ನಡೆದಿವೆ. ಅವುಗಳ ವಿವರಗಳನ್ನು ಇ ದಾಖಲಿಸುವುದು ಸಾಧ್ಯವಾಗಿಲ್ಲ ಎಂಬುದನ್ನು ಗಮನಿಸಬೇಕು.

ನಿಜವಾದ ಅರ್ಥದಲ್ಲಿ ಮಾಹಿತಿ ತಂತ್ರಜ್ಞಾನ ಸಾಮಾನ್ಯರನ್ನು ವ್ಯಾಪಕವಾಗಿ ತಲಪಿದ ೨೦೨೦ರಲ್ಲಿಯೇ ಎಂದರೆ ತಪ್ಪಾಗಲಾರದು. ಜಾಣಫೋನುಗಳು ನಿತ್ಯದ ಅಗತ್ಯವಾಗಿರುವ ಸಮಯದಲ್ಲಿ ಅವುಗಳ ಮೂಲಕ ಪ್ರಾಥಮಿಕ ಶಾಲೆಯಿಂದ ಉನ್ನತ ವ್ಯಾಸಂಗದವರೆಗೆ ಅಂತರಜಾಲ ತರಗತಿಗಳ ನಡೆದದ್ದು ಇದಕ್ಕೆ ಜ್ವಲಂತ ನಿದರ್ಶನವಾಗಿದೆ. ಪತ್ರಿಕೆಗಳು ತಮ್ಮ ತಾಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಉಪನ್ಯಾಸಗಳನ್ನೂ ಏರ್ಪಡಿಸಿದ್ದೂ ಈ ಅವಧಿಯಲ್ಲಿಯೇ. ಅನೇಕ ಸಂಘಸಂಸ್ಥೆ, ಕಾಲೇಜು ಮತ ಅಕಾಡೆಮಿಗಳು ಅಂತರಜಾಲದ ಮೂಲಕವೇ ಗೋಷ್ಠಿಗಳನ್ನೂ ಉಪನ್ಯಾಸಗಳನ್ನೂ ನಡೆಸಿದವು. ಕಾರ್ಯಕ್ರಮಗಳು ಜನಪ್ರಿಯವೂ ಆದವು. ಈ ಪೈಕಿ ಕನ್ನಡವೇ ಸತ್ಯ ಮತ್ತು ಸಮನ್ವಯ ಸಮಿತಿ ಎಂ ವಾಟ್ಸಪ್ ಗುಂಪು ಖ್ಯಾತ ಅಂಕಣಕಾರ ಎಚ್ಚೆಸ್ವೆಯರ ಜನ್ಮಶತಮಾನೋತ್ಸವವನ್ನು ಆಚರಿಸಿದ ಒಂದ. ಕಾರ್ಯಕ್ರಮದಲ್ಲಿ ಐವತ್ತಕ್ಕೂ ಹೆಚ್ಚು ಜನ ತಮ್ಮ ತಮ್ಮ ಸೃಜನಶೀಲ ಕೃತಿಗಳನ್ನು ಅಲಿಕೀಕರಿಸಿ ಅಡುಗರ ಮಾಡಿದರು. ಹಿಂದೆಂದೂ ಈ ರೀತಿಯಲ್ಲಿ ಕಾರ್ಯಕ್ರಮ ನಡೆದದ್ದು ಇಲ್ಲವೇ ಇಲ್ಲ. ಕೋವಿಡ್ ಎಂಬ ಪಿಡುಗ ಸಮಾಜವನ್ನು ಕಾಡಿದ ಸಮಯದಲ್ಲಿ ಕನ್ನಡದ ಜನ ತಂತ್ರಜ್ಞಾನವನ್ನು ಆರಿತುಕೊಂಡು ತಮ್ಮ ಕೆಲಸಗಳನ್ನು ನಿರ್ವಹಿಸಿದ ಬಗೆ ಅನನ್ಯವಾದುದು. ಈ ಎಲ್ಲವೂ ಒಟ್ಟಾರೆ ದೃಷ್ಟಿಯಿಂದ ಆರೋಗ್ಯಕರವೇ ಅದು ಹೀಗೆಯೇ ಮುಂದುವರೆಯಬೇಕೆ ಎನ್ನುವುದನ್ನು ಬೇರೆಯಗಿ ಚರ್ಚಿಸಬಹುದು. ಆದರೆ ತಂತ್ರಜ್ಞಾನದ ಹೊರತಾಗಿ ಕನ್ನಂ ಮುಂದುವರೆಯುವುದು ಕಷ್ಟ ಎಂದು ಯಾರಿಗಾದರೂ ಅನಿಸದಿರದು.

**ಆಕರ :** ಕನ್ನಡದಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರ ಬೆಳೆದ ಬಗೆ –ಜಿ.ಎನ್. ನರಸಿಂಹಮೂರ್ತಿ, ಕನ್ನಡ ಜಾಗೃತಿ ಪತ್ರಿಕೆ, ಜುಲೈ–ಸೆಪ್ಟಂಬರ್೨೦೨೦. ಕನ್ನಡ ಅಭಿವೃದ್ಧಿ ಪ್ರಾಧಿಕಾರ.

**ಲೇಖಕರ ಪರಿಚಯ**

**ಡಾ.ಎ.ಸತ್ಯನಾರಾಯಣ:** ಡಾ. ಎ. ಸತ್ಯನಾರಾಯಣ ಕನ್ನಡದಲ್ಲಿ ಮಾಹಿತಿ ತಂತ್ರಜ್ಞಾನ ಕುರಿತು ಸತತವಾಗಿ ಬರೆಯುತ್ತಿರುವ ಲೇಖಕರು ಹಾಗೂ ಅಂಕಣಕಾರರು. ಇದೇ ವಿಷಯದ ಕುರಿತು ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಡಿ. ಲಿಟ್. ಪದವಿ ಪಡೆದಿದ್ದಾರೆ. ಹಂಪಿ ಕನ್ನಡ ವಿವಿ ದೂರಶಿಕ್ಷಣ ಕೇಂದ್ರದ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಡಿಪ್ಲೊಮಾ ಕಾರ್ಯಕ್ರಮದ ಬೋರ್ಡ್ ಆಫ್ ಸ್ಟಡೀಸ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಮಾಹಿತಿ ತಂತ್ರಜ್ಞಾನ ಕುರಿತ ಕನ್ನಡ ಪಠ್ಯ ಪುಸ್ತಕಗಳನ್ನು ರಚಿಸಿದ್ದಾರೆ. ಸದ್ಯ ಇವರು ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿ ಶಾಖಾಧಿಕಾರಿಯಾಗಿ ಸೇವೆಸಲ್ಲಿಸುತ್ತಿದ್ದಾರೆ.

**ಜಿ.ಎನ್. ನರಸಿಂಹ ಮೂರ್ತಿ:** ಭಾರತೀಯ ಸ್ಟೇಟ್ ಬ್ಯಾಂಕಿನ ಅಧಿಕಾರಿ, ಅಲ್ಲಿ ಕನ್ನಡ ವಾತಾವರಣವನ್ನು ಸೃಷ್ಟಿಸುವುದರ ಜೊತೆಗೆ, 'ಬ್ಯಾಂಕಿಂಗ್ ನಿಘಂಟು' ಹೊರತರುವಲ್ಲಿ ಸಕ್ರಿಯ ಸದಸ್ಯರಾಗಿ ದುಡಿದವರು. ಅಲ್ಲಿನ ಕನ್ನಡ ಸಂಘದ 'ಮಂದಾರ' ಪತ್ರಿಕೆಯ ಸಂಪಾದಕರಾಗಿದ್ದರು. ಕನ್ನಡ 'ನುಡಿ' ತಂತ್ರಾಂಶ ಕಂಪ್ಯೂಟರ್ ಬಳಸುವ ಕನ್ನಡಿಗರ ಮನೆಮಾತಾಗಿದೆ. ಈ ತಂತ್ರಾಂಶವನ್ನು ಕನ್ನಡ ಗಣಕಪರಿಷತ್‌ನ ಮೂಲಕ ಹೊರತರುವಲ್ಲಿ ಸ್ಥಾಪಕ ಕಾರ್ಯದರ್ಶಿಗಳಾದ ಇವರದ್ದು ಪ್ರಮುಖ ಪಾತ್ರ; ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹೊರತಂದಿರುವ ಕಂಪ್ಯೂಟರ್ ಪದವಿವರಣ ಕೋಶದ ಸಂಪಾದಕ ಮಂಡಳಿ ಸದಸ್ಯ. ಕರ್ನಾಟಕ ಸರ್ಕಾರ, ೨೦೦೯ರಲ್ಲಿ ರಚಿಸಿದ ಕನ್ನಡ ತಂತ್ರಾಂಶ ಅಭಿವೃದ್ಧಿ ಸಮಿತಿಯ ಸದಸ್ಯ, ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಶ್ವಕೋಶದ ಹದಿನಾಲ್ಕು ಸಂಪುಟಗಳನ್ನು ಅಡಕ ಮುದ್ರಿಕೆಯಲ್ಲಿ ತಂದು ವಿದ್ಯುನ್ಮಾನ ಮಾಧ್ಯಮದ ಸಾಧ್ಯತೆಗಳನ್ನು ಕನ್ನಡ ಅಭಿವೃದ್ಧಿಗೆ ಬಳಸಿಕೊಂಡವರು.

**ಅಭ್ಯಾಸ ಪ್ರಶ್ನೆಗಳು**

೧. ಇಂಗ್ಲೀಷ್ ಭಾಷೆಯೇ ಕಂಪ್ಯೂಟರ್‌ನ ಸಂವಹಾರ ಭಾಷೆಯಾಗಿದೆ ಯಾಕೆ? ತಿಳಿಸಿ.
೨. ಮಾರುಕಟ್ಟೆಯಲ್ಲಿ ಲಭ್ಯವಿರುವ ಕನ್ನಡ ತಂತ್ರಾಶಗಳು ಯಾವುವು? ಅವುಗಳ ಬಗೆಗೆ ಕೆಲವು ಮಾತು ಬರೆಯಿರಿ.
೩. ಕಂಪ್ಯೂಟರಿನ ಬಳಕೆಯ ಭಾಷೆಯಲ್ಲಿ ಕನ್ನಡ ಹೇಗಿದೆ? ಚರ್ಚಿಸಿ
೪. ಅನ್ವಯಿಕ ತಂತ್ರಾಂಶಗಳು ಯಾವುವು? ವಿವರಿಸಿ.
೫. ಓ.ಎಸ್. ಎಂದರೇನು? ವಿವರಿಸಿ.

**ಚಟುವಟಿಕೆಗಳು**

೧. ವೇಗದ ಬೆರಳಚ್ಚು ಕ್ರಮಗಳನ್ನು ಆಭ್ಯಾಸ ಮಾಡಿ, ಕನ್ನಡ ಕೀಲಿಮಣೆಯ ಬಗ್ಗೆ ತಿಳಿಯಿರಿ.
೨. ಬರಹ, ನುಡಿ, ಕುವೆಂಪು ತಂತ್ರಾಶದ ಬಗ್ಗೆ ಮಾಹಿತಿ ಪಡೆದು ಪ್ರಬಂಧ ಬರೆಯಿರಿ.
೩. ತಂತ್ರಜ್ಞಾನದಲ್ಲಿ ಕನ್ನಡ ಬಳಕೆಯ ಸಾಮರ್ಥ್ಯದ ಬಗ್ಗೆ ಒಂದು ಲೇಖನ ಬರೆಯಿರಿ.

**ಹೆಚ್ಚಿನ ಪರಾಮರ್ಶನೆಕ್ಕಾಗಿ**

೧. www.vishvakannada.com (ಆನ್‌ಲೈನ್ ಪತ್ರಿಕೆ)

* * *